₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಭಾನುವಾರ 05.04.2026 ಸಂಪುಟ: 11 ಸಂಚಿಕೆ:79 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಲೇಖನಾ ಹೆಗ್ಡೆ ಮಿಸ್ ಯೂನಿವರ್ಸ್ ಕರ್ನಾಟಕ-2026

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಮಿಸ್ ಯೂನಿವರ್ಸ್ ಕರ್ನಾಟಕ-2026 ಪೇಜೆಂಟ್‌ನ ಫಿನಾಲೆಯಲ್ಲಿ ಲೇಖನಾ ಹೆಗ್ಡೆ ವಿಜೇತರಾದರು. ಸ್ಫೂರ್ತಿ ಶೆಟ್ಟಿ ಮೊದಲ ರನ್ನರ್ ಅಪ್ ಸ್ಥಾನ ಪಡೆದರೆ, ಜಾಗೃತಿ ಚೋಪ್ರಾ ಎರಡನೇ ರನ್ನರ್ ಅಪ್ ಸ್ಥಾನ ಪಡೆದರು. ಕಳೆದ ಸಾಲಿನ ವಿಜೇತೆ ವಂಶಿ ಉದಯ್ ಅವರು ಲೇಖನಾ ಅವರಿಗೆ ಕಿರೀಟ ಮುಡಿಗೇರಿಸಿದರು. ವಿಶೇಷವೆಂದರೆ, ಸತತವಾಗಿ ಎರಡನೇ ಬಾರಿಯೂ ವಿಶ್ವವಾಣಿ ಟಿವಿ ಸ್ಪೆಷಲ್ ಮಿಸ್ ಯೂನಿವರ್ಸ್ ಕರ್ನಾಟಕ ಬ್ಯೂಟಿ ಪೇಜೆಂಟ್‌ಗೆ ಡಿಜಿಟಲ್ ಪಾರ್ಟ್ನರ್ ಆಗಿ ಕೈ ಜೋಡಿಸಿತ್ತು.

ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ

"ದೇಶದ ಪ್ರಗತಿಯಲ್ಲಿ ನಮ್ಮ ಪ್ರಗತಿಯಿದೆ; **ಅದರ ಉದ್ಧಾರದಲ್ಲೇ** ನಮ್ಮ ಉದ್ಧಾರವಿದೆ; **ಅದರ ವಿಮೋಚನೆಯಲ್ಲೇ** ನಮ್ಮ ವಿಮೋಚನೆಯಿದೆ."

- ಡಾ. ಬಾಬು ಜಗಜೀವನ ರಾಂ

ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರನಾಯಕ ಹಾಗೂ ಭಾರತದ ಮಾಜಿ ಉಪ ಪ್ರಧಾನಮಂತ್ರಿಗಳು

ಡಾ. ಬಾಬು ಜಗಜೀವನ ರಾಂ ರವರ

119ನೇ ಜನ್ಮದಿನಾಚರಣೆ

ಪ್ರತಿಮೆಗೆ ಮಾಲಾರ್ಪಣೆ

ಏಪ್ರಿಲ್ 05, 2026, ಭಾನುವಾರ ಬೆಳಿಗ್ಗೆ 10.00 ಗಂಟೆಗೆ

ವಿಧಾನಸೌಧದ ಪಶ್ಚಿಮ ದ್ವಾರ, ಬೆಂಗಳೂರು

ವೇದಿಕೆ ಕಾರ್ಯಕ್ರಮ

ಸಮಯ - 10.30 ಗಂಟೆಗೆ ಸ್ಥಳ - ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ

``ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

ಸರ್ಕಾರದ ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಇಲಾಖೆ

@SWDGok

ಬೈಕ್‌ಗೆ ಕಾರು ಡಿಕ್ಕಿ: ಬ್ಯಾಂಕ್ ಉದ್ಯೋಗಿ ಸಾವು

ಬೆಂಗಳೂರು: ಸರ್ವಿಸ್ ರಸ್ತೆಯಿಂದ ಹೆದ್ದಾರಿಗೆ ಬೈಕ್ ತೆಗೆದು ಕೊಳ್ಳುತ್ತಿದ್ದಂತೆ ವೇಗವಾಗಿ ಬರುತ್ತಿದ್ದ ಕಾರು ಡಿಕ್ಕಿ ಹೊಡೆದ ಪರಿಣಾಮ ಬ್ಯಾಂಕ್ ಉದ್ಯೋಗಿ ಮೃತಪಟ್ಟಿರುವ ಘಟನೆ ಚಿಕ್ಕಜಾಲ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ರಾತ್ರಿ ನಡೆದಿದೆ. ಹೂಡಿಯ ತಿಗಳರ ಪಾಳ್ಯ ನಿವಾಸಿ ಪ್ರಶಾಂತ್ (31) ಮೃತಪಟ್ಟ ಬೈಕ್ ಸವಾರ. ಇವರು ಖಾಸಗಿ ಬ್ಯಾಂಕ್‌ವೊಂದರ ಉದ್ಯೋಗಿ. ಪ್ರಶಾಂತ್ ಅವರು ಬೈಕ್‌ನಲ್ಲಿ ರಾತ್ರಿ 11.45ರ ಸುಮಾರಿನಲ್ಲಿ ಏರ್ಪೋರ್ಟ್ ಸರ್ವಿಸ್ ರಸ್ತೆಯಲ್ಲಿ ಬಂದು ಏರ್‌ಪೋರ್ಟ್ ಟೋಲ್ ಬಳಿ ಹೆದ್ದಾರಿ ರಸ್ತೆಗೆ ತಿರುವು ಪಡೆದುಕೊಳ್ಳುತ್ತಿದ್ದಂತೆ ಕಾರು ಡಿಕ್ಕಿ ಹೊಡೆದ ಪರಿಣಾಮ ಗಂಭೀರ ಗಾಯಗೊಂಡು ಮೃತ ಪಟ್ಟಿದ್ದಾರೆ. ಸುದ್ದಿ ತಿಳಿದು ಚಿಕ್ಕಜಾಲ ಸಂಚಾರಿ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ, ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

272 ಅಕ್ರಮ ಬಾಂಗ್ಲಾ ವಲಸಿಗರು ಗಡಿಪಾರು

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನೆಲೆಸಿದ್ದ ಬಾಂಗ್ಲಾ ವಲಸಿಗರನ್ನು ಪತ್ತೆ ಹಚ್ಚಿ ಗಡಿಪಾರು ಮಾಡುವ ಪ್ರಕ್ರಿಯೆಯನ್ನು ಪೊಲೀಸರು ಚುರುಕುಗೊಳಿಸಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಇಲ್ಲಿಯವರೆಗೂ 178 ಪುರುಷರು, 94 ಮಹಿಳೆಯರ ಸಹಿತ ಒಟ್ಟು 272 ಜನ ಅಕ್ರಮ ವಲಸಿಗರನ್ನು ಗುರುತಿಸಿ ಗಡಿಪಾರು ಮಾಡಲಾಗಿದೆ. ಪತ್ತೆ ಹಚ್ಚಲಾದ ಅಕ್ರಮ ವಲಸಿಗರನ್ನು ಬಿಗಿ ಭದ್ರತೆಯೊಂದಿಗೆ ತ್ರಿಪುರಾದ ಗಡಿಯವರೆಗೆ ಕರೆದೊಯ್ದು, ಭದ್ರತಾ ಪಡೆಯ ಸಹಕಾರದೊಂದಿಗೆ ಗಡಿ ದಾಟಿಸುವ ಕಾರ್ಯ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇದಲ್ಲದೆ ಬಾಂಗ್ಲಾದೇಶದ ಪ್ರಜೆಗಳನ್ನು ಭಾರತಕ್ಕೆ ಅಕ್ರಮವಾಗಿ ಕರೆತರುತ್ತಿದ್ದ ಜಾಲದ ಇಬ್ಬರು ಏಜೆಂಟ್‌ಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಅಕ್ರಮ ವಲಸಿಗರ ಹಿಂದೆ ವ್ಯವಸ್ಥಿತವಾದ ಮೂರು ಹಂತದ ಜಾಲ ಕೆಲಸ ಮಾಡುತ್ತಿರುವುದು ಪೊಲೀಸರ ತನಿಖೆಯಿಂದ ಬಯಲಾಗಿದೆ. ಮೊದಲು ಬಾಂಗ್ಲಾದೇಶದ ಪ್ರಜೆಗಳನ್ನು ಒಬ್ಬ ಏಜೆಂಟ್ ಭಾರತದ ಗಡಿಯವರೆಗೆ ಕರೆತಂದರೆ, ಗಡಿ ಭಾಗದಲ್ಲಿರುವ ಎರಡನೇ ಏಜೆಂಟ್ ಕಾನೂನುಬಾಹಿರವಾಗಿ ಗಡಿ ದಾಟಿಸಿ ಭಾರತದ ಒಳಕ್ಕೆ ತಂದು ಬಿಡುತ್ತಿದ್ದನು.

ಆ ನಂತರ ಅವರಿಗೆ ಇಲ್ಲಿನ ಸ್ಥಳೀಯ ಭಾಷೆಯ ಬೇಸಿಕ್ಸ್ ಕಲಿಸಿ, ನಕಲಿ ಐಡಿ ಕಾರ್ಡ್‌ಗಳನ್ನು ಸಿದ್ಧಪಡಿಸಲಾಗುತ್ತಿತ್ತು. ಬಳಿಕ ದೇಶದ ಬೇರೆ ಬೇರೆ ಭಾಗಗಳಲ್ಲಿ ಉದ್ಯೋಗ ಕೊಡಿಸಲಾಗುತ್ತಿತ್ತು. ಈ ವ್ಯವಸ್ಥಿತ ಜಾಲದ ಮೂಲಕ ವಲಸಿಗರು ನಗರದ ಹೋಟೆಲ್, ಗ್ಯಾರೇಜ್ ಹಾಗೂ ಕಟ್ಟಡ ನಿರ್ಮಾಣದಂತಹ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು ಎಂದು ಪೊಲೀಸರ ತನಿಖೆಯಿಂದ ಬಯಲಾಗಿದೆ. ಸದ್ಯ ಬಂಧಿತ ಏಜೆಂಟ್‌ಗಳಿಂದ ಹೆಚ್ಚಿನ ಮಾಹಿತಿ ಕಲೆಹಾಕಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ ಬಾಂಗ್ಲಾದೇಶ, ಪಾಕಿಸ್ತಾನ ಸೇರಿದಂತೆ ವಿವಿಧ ದೇಶಗಳಿಂದ ಅಕ್ರಮವಾಗಿ ರಾಜ್ಯದಲ್ಲಿ ನೆಲೆಯೂರಿದ್ದ 432 ಮಂದಿ ಅಕ್ರಮ ವಲಸಿಗರನ್ನು ಪತ್ತೆ ಹಚ್ಚಲಾಗಿತ್ತು. ಈ ಪೈಕಿ 255 ಮಂದಿಯನ್ನು ಪೊಲೀಸ್ ಇಲಾಖೆ ಗಡಿಪಾರು ಮಾಡಿತ್ತು. ನಗರದ ಹೊರವಲಯದಲ್ಲಿ ಅಕ್ರಮವಾಗಿ ನೆಲೆಸಿದ್ದ 53 ಮಂದಿ ಬಾಂಗ್ಲಾದೇಶಿಯರನ್ನು ಕೆಲ ತಿಂಗಳ ಹಿಂದೆ ಪೊಲೀಸರು ಪತ್ತೆ ಹಚ್ಚಿದ್ದರು. ಅನಧಿಕೃತವಾಗಿ ರಾಜಧಾನಿಯಲ್ಲಿ ಬಾಂಗ್ಲಾ ನುಸುಳುಕೋರರ ವಿರುದ್ಧ ವಿಳಂಬವಾಗಿ ಕ್ರಮ ಕೈಗೊಂಡಿರುವ ಬಗ್ಗೆ ಸರಕಾರದ ವಿರುದ್ಧ ರಾಜ್ಯ ಬಿಜೆಪಿ ಕಿಡಿಕಾರಿತ್ತು. ಈ ಬೆನ್ನಲ್ಲೇ, ಬಾಂಗ್ಲಾದೇಶ ಸೇರಿ ವಿವಿಧ ದೇಶಗಳಿಂದ ಬಂದು ರಾಜ್ಯದಲ್ಲಿ ಬೀಡುಬಿಟ್ಟಿದ್ದ ಅಕ್ರಮ ವಲಸಿಗರ ಪತ್ತೆ, ಗಡಿಪಾರು ಹಾಗೂ ಈ ಬಗ್ಗೆ ಕೈಗೊಂಡಿರುವ ಕ್ರಮಗಳ ಕುರಿತು ಪೊಲೀಸ್ ಇಲಾಖೆ ಮಾಹಿತಿ ನೀಡಿತ್ತು.

ಲುಕ್ ಔಟ್ ನೋಟಿಸ್

ಕಳೆದ ಮೂರು ವರ್ಷಗಳಲ್ಲಿ 432 ಅಕ್ರಮ ವಲಸಿಗರನ್ನು ಪತ್ತೆ ಮಾಡಲಾಗಿದೆ. ಇದರ ಪೈಕಿ 370 ಮಂದಿ ಬಾಂಗ್ಲಾದೇಶದವರಾಗಿದ್ದಾರೆ. ಅಲ್ಲದೆ, ಪಾಕಿಸ್ತಾನದ 16 ಹಾಗೂ ಶ್ರೀಲಂಕಾದ 42 ಮಂದಿ ಇದ್ದಾರೆ. ಮೂರು ವರ್ಷಗಳಲ್ಲಿ 255 ಮಂದಿ ಅಕ್ರಮ ವಲಸಿಗರನ್ನು ಗಡಿಪಾರು ಮಾಡಲಾಗಿತ್ತು.

ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿದರೆ ದಂಡ

ಬೆಂಗಳೂರು: ಹಳೆ ಮದ್ರಾಸ್ ರಸ್ತೆಯಲ್ಲಿ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿರುವವರ ವಿರುದ್ಧ ದಂಡ ವಿಧಿಸಿ ತೆರವು ಕಾರ್ಯಾಚರಣೆ ನಡೆಸುವುದರ ಜತೆಗೆ, ಸುಗಮ ಪಾದಚಾರಿ ಮಾರ್ಗವನ್ನು ನಿರ್ಮಿಸಿ ಎಂದು ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದರು. ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಹಳೆ ಮದ್ರಾಸ್ ರಸ್ತೆಯ ಸ್ವಾಮಿ ವಿವೇಕಾನಂದ ಮೆಟ್ರೋ ನಿಲ್ದಾಣದಿಂದ ಹಲಸೂರು ಕೆರೆವರೆಗೆ ಅಧಿಕಾರಿಗಳೊಂದಿಗೆ ನಡಿಗೆ ಮೂಲಕ ಪರಿಶೀಲನೆ ನಡೆಸಿ ಮಾತನಾಡಿ, ಪಾದಚಾರಿ ಮಾರ್ಗಗಳಲ್ಲಿ ತಂಡಗಳನ್ನು ನಿಯೋಜಿಸಿ ಸಾಮೂಹಿಕ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಬೇಕು. ಪಾದಚಾರಿ ಮಾರ್ಗಗಳನ್ನು ಧೂಳು ಸೇರಿ ಸಂಪೂರ್ಣ ಸ್ವಚ್ಛಗೊಳಿಸಿ, ಸುಂದರವಾಗಿ ಕಾಣುವಂತೆ ಮಾಡಬೇಕು. ಎಲ್ಲೆಲ್ಲಿ ತ್ಯಾಜ್ಯ ಹಾಗೂ ಭಗ್ನಾವಶೇಷಗಳಿದ್ದರೂ ಕೂಡಲೇ ಅವನ್ನು ತೆರವುಗೊಳಿಸಿ ಸ್ವಚ್ಛತೆ ಕಾಪಾಡಬೇಕು. ಪಾದಚಾರಿ ಮಾರ್ಗಗಳಲ್ಲಿ ಹಾನಿಗೊಳಗಾದ ಸ್ಲ್ಯಾಬ್‌ಗಳು ಮತ್ತು ಕರ್ಬ್ ಸ್ಟೋನ್‌ಗಳನ್ನು ದುರಸ್ತಿಗೊಳಿಸಿ. ಪಾದಚಾರಿಗಳ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಬೇಕು. ಹಲಸೂರು ಕೆರೆ 106 ಎಕರೆ ಪ್ರದೇಶದಲ್ಲಿದ್ದು, 33.50 ಕೋಟಿ ರು.ವೆಚ್ಚದಲ್ಲಿ ಸಮಗ್ರ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ ಎಂದರು.

ನಗರದಲ್ಲಿ 1.2 ಕೋಟಿ ಮೀರಿದ ವಾಹನಗಳ ಸಂಖ್ಯೆ

ಬೆಂಗಳೂರು: ವರ್ಷದಿಂದ ವರ್ಷಕ್ಕೆ ಹೊಸ ವಾಹನಗಳ ನೋಂದಣಿ ಗಣನೀಯವಾಗಿ ಏರಿಕೆಯಾಗುತ್ತಿದ್ದು, ನಗರದಲ್ಲಿ ಪ್ರತಿನಿತ್ಯ ಸರಾಸರಿ 1200ಕ್ಕೂ ಅಧಿಕ ವಾಹನಗಳು ರಸ್ತೆಗಿಳಿಯುತ್ತಿವೆ.

2025-26ನೇ ವರ್ಷದಲ್ಲಿ 7.9 ಲಕ್ಷ ಹೊಸ ವಾಹನಗಳು ರಸ್ತೆಗಿಳಿದಿದ್ದು, ನಗರದಲ್ಲಿ ವಾಹನಗಳ ಸಂಖ್ಯೆ 1.2 ಕೋಟಿಯನ್ನೂ ದಾಟಿದೆ. ಕಳೆದ ವರ್ಷ 7.2 ಲಕ್ಷ ವಾಹನಗಳು ನೋಂದಣಿಯಾಗಿದ್ದರೆ, ಈ ವರ್ಷ ಬರೋಬ್ಬರಿ 7.9 ಲಕ್ಷ ವಾಹನಗಳು ನೋಂದಣಿಯಾಗಿವೆ. ನಗರದ ವಾಹನಗಳ ಸಂಖ್ಯೆಯಲ್ಲಿ ವಿಪರೀತ ಹೆಚ್ಚಳವು ಸಂಚಾರ ವ್ಯವಸ್ಥೆಯನ್ನು ಹದಗೆಡುವಂತೆ ಮಾಡಿದ್ದು, ಜಿಬಿಎ ಅಡಿಯಲ್ಲಿ ಬರುವ ಐದು ಕಾರ್ಪೊರೇಷನ್‌ಗಳ ಒಟ್ಟು ರಸ್ತೆ ಉದ್ದ 14,063 ಕಿಮೀ ಆಗಿದೆ. ಸದ್ಯ ನಗರದ ಪ್ರತೀ ಒಂದು ಕಿ.ಮೀ ರಸ್ತೆಗೆ ಸರಿಸುಮಾರು 900 ವಾಹನಗಳು ಸಂಚರಿಸುವಂತಾಗಿದೆ.

ಯಾವ ವಾಹನಗಳು ಎಷ್ಟೆಷ್ಟಿವೆ?

- ದ್ವಿಚಕ್ರ ವಾಹನಗಳು: 86 ಲಕ್ಷ
- ಕಾರುಗಳು: 24.8 ಲಕ್ಷ
- ಕ್ಯಾಬ್ ಮತ್ತು ಟ್ಯಾಕ್ಸಿಗಳು: 2.9 ಲಕ್ಷ
- ಆಟೋ ರಿಕ್ಷಾಗಳು: 3.8 ಲಕ್ಷ

ಸಾರ್ವಜನಿಕ ವಾಹನಗಳಿಗೆ ಕಡಿಮೆ ಒಲವು: ನಗರದಲ್ಲಿ ಸಂಚಾರ ದಟ್ಟಣೆಯಿಂದಾಗಿ ಹೆಚ್ಚು ಜನ ದ್ವಿಚಕ್ರ ಅವಲಂಬಿಸಿದ್ದು, ಸಮಯಕ್ಕೆ ಸರಿಯಾಗಿ ತಲುಪದ ಜನರು 86 ಲಕ್ಷದಷ್ಟು ಬೈಕ್, ಸ್ಕೂಟರ್‌ಗಳನ್ನು ಬಳಕೆ ಮಾಡುತ್ತಿದ್ದಾರೆ. ಆದರೆ ಬಸ್‌ನಲ್ಲಿ ತೆರಳಿದರೆ ಸಂಚಾರ ದಟ್ಟಣೆಯಲ್ಲಿ ಸಿಲುಕಿಕೊಳ್ಳಬಹುದು ಮೆಟ್ರೋದ ಲಭ್ಯತೆ ಎಲ್ಲಾ ಕಡೆಗಿಲ್ಲ ಜತೆಗೆ ಟಿಕೆಟ್ ದರವೂ ಹೆಚ್ಚು ಎನ್ನುವ ಕಾರಣಕ್ಕೆ ಜನರು ಸಾರ್ವಜನಿಕ ವಾಹನಗಳ ಬದಲಾಗಿ ಸ್ವಂತ ವಾಹನ ಬಳಸುವಂತಾಗಿದೆ. ಐಟಿ ಕಂಪನಿ ಉದ್ಯೋಗಿಗಳು ಹೆಚ್ಚಿರುವ ಎಚ್‌ಎಸ್‌ಆರ್ ಲೇಔಟ್‌ನ ಆರ್‌ಟಿಒ ಆದಾಯದಲ್ಲಿ ಪ್ರಥಮ ಸ್ಥಾನದಲ್ಲಿದ್ದು, ಕೆಎ-01 ಎಚ್ ಎಸ್‌ಆರ್ ಲೇಔಟ್‌ನ ಆರ್‌ಟಿಒ 2025-26 ನೇ ಸಾಲಿನಲ್ಲಿ 1273 ಕೋಟಿ ರುಪಾಯಿ ಆದಾಯ ಸಂಗ್ರಹಿಸುವ ಮೂಲಕ ರಾಜ್ಯದಲೇ ಪ್ರಥಮ ಸ್ಥಾನದಲ್ಲಿದೆ.

ಕಳೆದ ಮೂರು ವರ್ಷದಿಂದಲೂ ಈ ಆರ್‌ಟಿಒ ಪ್ರಮುಖ ಸ್ಥಾನದಲ್ಲಿದೆ. ಕಸ್ತೂರಿ ನಗರ ಆರ್‌ಟಿಒ 1098 ಕೋಟಿರು ಆದಾಯ ಹೊಂದಿದ್ದು, ಜಯನಗರ ಆರ್‌ಟಿಒ 969 ಕೋಟಿ ರು. ಆದಾಯ ಹೊಂದಿದೆ.

ಮೊಬೈಲ್ ಕದಿಯುತ್ತಿದ್ದ 13 ಮಂದಿ ಸೆರೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಾರ್ಚ್ 28 ರಂದು ನಡೆದ ಐಪಿಎಲ್ ಪಂದ್ಯದ ವೇಳೆ ಮೊಬೈಲ್‌ಗೆ ಕನ್ನ ಹಾಕಿದ್ದ ಜಾರ್ಖಂಡ್ ಖದೀಮರು ಮತ್ತಷ್ಟು ಮಂದಿ ಸಿಕ್ಕಿದ್ದಾರೆ.

9 ಮಂದಿ ಅಪ್ರಾಪ್ತರನ್ನು ಬಳಸಿಕೊಂಡು ಮೊಬೈಲ್ ಕದಿಯುತ್ತಿದ್ದ ನಾಲ್ವರು ಬಂಧನವಾಗಿದ್ದು, 75 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ. ಆರ್‌ಸಿಬಿ ಹಾಗೂ ಎಸ್‌ಎಚ್‌ಆರ್ ನಡುವಿನ ಐಪಿಎಲ್ ಮ್ಯಾಚ್ ವೇಳೆ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಅಭಿಮಾನಿಗಳ ಮೊಬೈಲ್ ಕದ್ದವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ.

ಮೊಬೈಲ್ ಕಳೆದುಕೊಂಡವರ ದೂರಿನ ಅನ್ವಯ ತನಿಖೆ ನಡೆಸಿ ಈವರೆಗೆ ಒಟ್ಟು 75 ಮೊಬೈಲ್ ವಶಕ್ಕೆ ಪಡೆಯಲಾಗಿದೆ. ಜಾರ್ಖಂಡ್ ನಿಂದ ಅಪ್ರಾಪ್ತರ ಗ್ಯಾಂಗ್ ಕಟ್ಟಿಕೊಂಡು ಬಂದಿದ್ದ ಸೋಹನ್ ಕುಮಾರ್, ಸಂಜೀತ್ ಕುಮಾರ್, ಇಶಾಲ್‌ಕುಮಾರ್ ಮತ್ತು ಶುಭಮನ್ ಕುಮಾರ್‌ನ ಗ್ಯಾಂಗ್ ಕೃತ್ಯ ಎಸಗಿತ್ತು. ಈ ನಾಲ್ವರು ಆರೋಪಿಗಳು 9 ಮಂದಿ ಅಪ್ರಾಪ್ತರನ್ನ ಕರೆತಂದು ಮೊಬೈಲ್ ಕಳ್ಳತನಕ್ಕೆ ಬಿಟ್ಟಿರುವುದು ಗೊತ್ತಾಗಿದೆ. ಬೆಂಗಳೂರಲ್ಲದೇ ಚೆನ್ನೈ, ಮುಂಬೈ, ಕೋಲ್ಕತ್ತಾಗೆ ಹೋಗಿ ಸಾಕಷ್ಟು ಕಡೆಗಳಲ್ಲಿ ಈ ಗ್ಯಾಂಗ್ ಕೈಚಳಕ ತೋರಿದೆ. ಇದೀಗ ಬಂಧಿತರ ಸಂಖ್ಯೆ ಅಪ್ರಾಪ್ತರು ಸೇರಿದಂತೆ 13 ಕ್ಕೆ ಏರಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ನಡುವೆ ಭಾನುವಾರ ಎಂ.ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿರುವ ಹೈ-ವೋಲ್ಟೇಜ್ ಐಪಿಎಲ್ ಪಂದ್ಯಕ್ಕೆ ಭದ್ರತೆ ವಹಿಸುವ ಕುರಿತು ಅಧಿಕಾರಿಗಳ ಸಭೆ ನಡೆಸಿ, ಅಗತ್ಯವಿರುವ ಕಡೆಗಳಲ್ಲಿ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ನಮ್ಮ ಮೆಟ್ರೋ ಸೇವೆಯಿಂದ ಸಹಕಾರಿಯಾಗಿದ್ದು, ಕಬ್ಬನ್ ಪಾರ್ಕ್ ಮತ್ತು ಎಂ.ಜಿ.ರೋಡ್ ನಿಲ್ದಾಣಗಳಲ್ಲಿ ಜನಸಂದಣಿ ನಿರ್ವಹಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಬಿಎಂಟಿಸಿ ವತಿಯಿಂದ ಶಟಲ್ ಬಸ್ ಮತ್ತು ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡುವಂತೆ ವಿನಂತಿಸಲಾಗಿದೆ. ಕ್ವೀನ್ಸ್ ರೋಡ್, ಕಬ್ಬನ್ ರೋಡ್, ಲಿಂಕ್ ರೋಡ್ ಮತ್ತು ಎಂ.ಜಿ. ರೋಡ್‌ಗಳಲ್ಲಿ ಸಂಚಾರ ದಟ್ಟಣೆ ತಪ್ಪಿಸಲು ಸಾರ್ವಜನಿಕರು ಸಹಕರಿಸಬೇಕು. ಟಿಕೆಟ್ ಇದ್ದವರು ಮಾತ್ರ ಕ್ರೀಡಾಂಗಣದತ್ತ ಬರಬೇಕು ಮತ್ತು ನಿಗದಿತ ಸಮಯಕ್ಕೆ ಮುಂಚಿತವಾಗಿ ಬಂದು 'ಹೋಲ್ಡಿಂಗ್ ಏರಿಯಾ' ಬಳಸಿಕೊಳ್ಳಬೇಕು. ಟಿಕೆಟ್ ಇಲ್ಲದವರು ರಸ್ತೆಯಲ್ಲಿ ನಿಂತು ಸಂಚಾರಕ್ಕೆ ಅಡ್ಡಿಪಡಿಸಬಾರದು. ಅಂತಹವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

ಒಂದು ತಂಡವಾಗಿ ಜನಗಣತಿ ನಿರ್ವಹಿಸಿ

ಬೆಂಗಳೂರು: ರಾಷ್ಟ್ರೀಯ ಜನಗಣತಿ-2027 ರ ಕಾರ್ಯವನ್ನು ಅಧಿಕಾರಿಗಳು ಹಾಗೂ ಸಿಬ್ಬಂದಿ ಒಂದು ತಂಡವಾಗಿ ಕಾರ್ಯ ನಿರ್ವಹಿಸಿ ಎಂದು ಅಧಿಕಾರಿಗಳಿಗೆ ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಸೂಚನೆ ನೀಡಿದರು.

ಜನಗಣತಿ ಕಾರ್ಯಕ್ಕೆ ನೇಮಿಸಲಾದ ಸಿಬ್ಬಂದಿಗೆ ಆಯೋಜಿಸಿದ್ದ ಸಭೆಯನ್ನು ಉದ್ದೇಶಿಸಿ ಮಾತನಾಡಿ, ಎಲ್ಲಾ ವಿಭಾಗಗಳ ಅಧಿಕಾರಿ/ಸಿಬ್ಬಂದಿ ಜನಗಣತಿ ಕಾರ್ಯವನ್ನು ಒಂದು ತಂಡವಾಗಿ ಕಾರ್ಯ ನಿರ್ವಹಿಸಿ, ಯಾವುದೇ ಲೋಪದೋಷಗಳಿಗೆ ಅವಕಾಶ ನೀಡದಂತೆ ಕರ್ತವ್ಯ ನಿರ್ವಹಿಸಬೇಕು ಎಂದು ಸೂಚನೆ ನೀಡಿದರು.

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ರಾಷ್ಟ್ರೀಯ ಜನಗಣತಿ-2027 ಕ್ಕೆ ಗಣತಿಗೆ ನೇಮಿಸಲು ತರಬೇತಿಗೆ ಹಾಜರಾಗುವ ವಿವಿಧ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗೆ ತರಬೇತಿ ನೀಡಲು 6 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 6 ಕೇಂದ್ರಗಳನ್ನು ಗುರುತಿಸಿಲಾಗಿದೆ ಎಂದರು.

ಬೈಕ್ ಟಚ್ ನೆಪ: ಬರ್ಬರ ಕೊಲೆ

ಬೆಂಗಳೂರು: ಕ್ಷುಲ್ಲಕ ಕಾರಣಕ್ಕೆ ಯುವಕನ ಬರ್ಬರ ಹತ್ಯೆ ಮಾಡಿರುವ ಆಘಾತಕಾರಿ ಘಟನೆ ಜೆ.ಸಿ.ನಗರದ ಮುಖ್ಯರಸ್ತೆಯಲ್ಲಿ ನಡೆದಿದೆ. 22 ವರ್ಷದ ವಿಜಯ್ ಕೊಲೆಯಾದ ವ್ಯಕ್ತಿಯಾಗಿದ್ದು, ಮಧ್ಯಾಹ್ನ 12 ಗಂಟೆ ಸುಮಾರಿಗೆ ವಿಜಯ್‌ಗೆ ಚಾಕು ಇರಿದು ದುಷ್ಕರ್ಮಿಗಳು ಹತ್ಯೆ ಮಾಡಿದ್ದಾರೆ. ಆರೋಪಿಗಳಾದ ಕಿರಣ್ ಮತ್ತು ವಿನೋದ್ ಎಂಬವರನ್ನು ಪೊಲೀಸರು ವಶಕ್ಕೆ ಪಡೆದಿದ್ದು, ತನಿಖೆ ಮುಂದುವರಿದಿದೆ.

ಶುಕ್ರವಾರ ರಾತ್ರಿ ಕುಡಿದು ಹೋಗುವಾಗ ವಿಜಯ್ ಬೈಕ್‌ಗೆ ವಿನೋದ್ ಗಾಡಿ ಟಚ್ ಆಗಿತ್ತು. ಇದೇ ವಿಚಾರವಾಗಿ ಗಲಾಟೆ ಕೂಡ ನಡೆದಿತ್ತು. ವಿಷಯ ಅಲ್ಲಿಗೆ ಬಿಡದೆ ಶನಿವಾರ ಬೆಳಗ್ಗೆ ವಿಜಯ್ ಹುಡುಕಿಕೊಂಡು ಆರೋಪಿಗಳಾದ ಕಿರಣ್ ಮತ್ತು ವಿನೋದ್ ಹೋಗಿದ್ದರು. ಮನೆ ಬಳಿ ತೆರಳಿದ್ದಾಗ ವಿಜಯ್ ಸಿಗದಿದ್ದರಿಂದ ಫೋನ್ ಮಾಡಿ ಆತನನ್ನು ಮತ್ತೆ ಬಾರ್ ಬಳಿಗೆ ಕರೆಸಿಕೊಂಡಿದ್ದರು. ವಿಜಯ್ ಸ್ಥಳಕ್ಕೆ ಬರುತ್ತಿದ್ದಂತೆ ಗಲಾಟೆ ಶುರುಮಾಡಿದ್ದು, ಈ ವೇಳೆ ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ವಿಜಯ್ ಹೊಟ್ಟೆಗೆ ಚಾಕು ಇರಿಯಲಾಗಿದ್ದು, ತೀವ್ರ ರಕ್ತಸ್ರಾವವಾಗಿ ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಇನ್ನು ಘಟನಾ ಸ್ಥಳಕ್ಕೆ ಜೆ.ಸಿ.ನಗರ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಹಿಂದಿನಿಂದಲೂ ಇತ್ತು ದ್ವೇಷ: ಪ್ರಕರಣ ಸಂಬಂಧ ಸ್ಫೋಟಕ ಮಾಹಿತಿ ಬೆಳಕಿಗೆ ಬಂದಿದ್ದು, ಬೈಕ್ ಟಚ್ ಆದ ವಿಚಾರ ಕೊಲೆಗೆ ಕೇವಲ ಪ್ರಚೋದನೆ ಮಾತ್ರ. ಹುಡುಗಿ ವಿಚಾರಕ್ಕೆ ಸಂಬಂಧಿಸಿ ಆರೋಪಿ ಕಿರಣ್ ಮತ್ತು ವಿಜಯ್ ನಡುವೆ ಹಿಂದಿನಿಂದಲೂ ದ್ವೇಷವಿತ್ತು. ವಿಜಯ್‌ಗೆ ಅದಾಗಲೇ ಮದುವೆಯಾಗಿದ್ದರೂ ಮಾಜಿ ಪ್ರೇಯಸಿಗೆ ಕಾಟ ನೀಡುತ್ತಿದ್ದ. ಆಕೆ ಈಗ ಕಿರಣ್ ಪ್ರಿಯತಮೆ ಆಗಿದ್ದು, ಇದೇ ಕಾರಣಕ್ಕೆ ವಿಜಯ್ ಮೇಲೆ ಕಿರಣ್‌ಗೆ ಕೋಪ ಇತ್ತು. ಹೀಗಾಗಿ ನಿನ್ನೆ ರಾತ್ರಿಯ ಗಲಾಟೆ ನೆಪದಲ್ಲಿ ಅಟ್ಟಾಡಿಸಿ ವಿಜಯ್‌ನ ಆರೋಪಿಗಳು ಕೊಲೆ ಮಾಡಿದ್ದಾರೆ ಎಂಬ ಮಾತುಗಳು ಕೇಳಿಬಂದಿವೆ.

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಷೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 24.04.2026, ಬೆಳಿಗ್ಗೆ 10.00 ರಿಂದ ಬೆಳಿಗ್ಗೆ 11.00 ರವರೆಗೆ** [ಮಾರಾಟ ಮುಗಿಯುವವರೆಗೆ ತಲಾ 5 ನಿಮಿಷಗಳ ಅವಧಿಯನ್ನು ಅನಿಯಮಿತವಾಗಿ ವಿಸ್ತರಿಸಲಾಗಿದೆ.] ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 91,96,604.66 (ರೂಪಾಯಿ ತ್ತೊಂಭತ್ತು ಲಕ್ಷದ ತೊಂಭತ್ತಾರು ಸಾವಿರದ ಆರುನೂರ ನಾಲ್ಕು ಮತ್ತು ಅರವತ್ತಾರು ಪೈಸೆ ಮಾತ್ರ) ಜೊತೆಗೆ ದಿನಾಂಕ: 03.04.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) ಕುಮಾರಿ ಸುಸ್ಮಿತಾ ಕಾಶಿಮಲ್ಲ ಎಂ** D/o ವೀರ ಬ್ರಹ್ಮ, ನಂ.36, 2ನೇ ಕ್ರಾಸ್, ಅಂಬೇಡ್ಕರ್ ಪ್ರತಿಮೆ ಹತ್ತಿರ, ಹೊಸ ತಿಪ್ಪಸಂದ್ರ, ಬೆಂಗಳೂರು ಉತ್ತರ, ಬೆಂಗಳೂರು-560075, **(2) ಶ್ರೀಮತಿ. ಲಿದ್ಯ ಕರೆನ್ ಕೆ** D/o ವೀರ ಬ್ರಹ್ಮ, ನಂ.36, 2ನೇ ಕ್ರಾಸ್, ಆನಂದ ಪುರಂ, ಕಲ್ಯಾಣ ಮಂಡಪಜೀವನ ಭೀಮಾ ನಗರ, ಹೊಸ ತಿಪ್ಪಸಂದ್ರ, ಬೆಂಗಳೂರು-560075, ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 23.04.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು. (₹. ಲಕ್ಷಗಳಲ್ಲಿ)

ಕ್ರ ಸಂ	ಸ್ಥಿರಾಸ್ತಿ/ಚರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	**ಷೆಡ್ಯೂಲ್ ಆಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ವಾಸಯೋಗ್ಯ ಫ್ಲಾಟ್‌ನ ನಂ. ಎಫ್‌ಎಫ್-1, 1ನೇ ಮಹಡಿ, "ಅರಿಹಂತ್ ಎಂಎಸ್‌ಆರ್ ನೀಪಾ" ಎಂದು ಕರೆಯಲ್ಪಡುವ ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಸೂಪರ್ ಬಿಲ್ಟ್ ಅಪ್ ಪ್ರದೇಶ 1400 ಚದರ ಅಡಿ ಜೊತೆಗೆ 240 ಚದರ ಅಡಿ ಅವಿಭಾಜಿತ ಭಾಗವನ್ನೊಳಗೊಂಡಿರುವ ಭೂಮಿಯಾಗಿದ್ದು ಜೊತೆಗೆ ಪಾರ್ಕಿಂಗ್‌ನ್ನು ಒಳಗೊಂಡಿದೆ, ಈ ಆಸ್ತಿಯು ರಾಮಯ್ಯ ಗಾರ್ಡನ್, ಬಿಗ್ ಮಾರ್ಕೆಟ್ ಹತ್ತಿರ, ಜೆ ಪಿ ನಗರ, 7ನೇ ಹಂತ, ಬೆಂಗಳೂರು-560078, ಹೊಸ ಪಿಐಡಿ ನಂ.187/W0157-5,6, ಪುಟ್ಟೇನಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣದಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ : ಸ್ವತ್ತಿನ ನಿವೇಶನ ನಂ. 41 & 42, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸ್ವತ್ತಿನ ನಂ. 33, ದಕ್ಷಿಣಕ್ಕೆ : ನಿವೇಶನ ನಂ. 36. **Coordinates of the described property; - 12.897098 N, 77.585003 E**	₹. 50.00	₹. 5.00	₹. 1.00	18.04.2026 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧರಿತದಂತೆ

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-I ಶಾಖೆ, ಬೆಂಗಳೂರು (ಮೊಬೈಲ್ ಸಂಖ್ಯೆ: 9439058121 ಮತ್ತು 9483544116))** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 04.04.2026
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಷೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 23.04.2026 (ಬೆಳಿಗ್ಗೆ 10.00 ರಿಂದ ಬೆಳಿಗ್ಗೆ 11.00 ರವರೆಗೆ)** ರಂದು ಸ್ವತ್ತನ್ನು **"ಹೇಗಿದೆಯೋ ಹಾಗೆ", "ಏನಿದೆಯೊ ಹಾಗೆ", ಏನೇ ಇದ್ದರೂ",** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 28,26,55,996.82 (ರೂಪಾಯಿ ಇಪ್ಪತ್ತೆಂಟು ಕೋಟಿ ಇಪ್ಪತ್ತಾರು ಲಕ್ಷದ ಐವತ್ತೈದು ಸಾವಿರದ ಒಂಭೈನೂರ ತೊಂಭತ್ತಾರು ಮತ್ತು ಎಂಭತ್ತೆರಡು ಪೈಸೆ ಮಾತ್ರ)** ಜೊತೆಗೆ ಹೆಚ್ಚಿನ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) ಮೆ॥ ಬಯೋಪಾಯಿಂಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, (2) ಶ್ರೀ ಅನಿಕೇತನ ಯುಪಿ ವ್ಯವಸ್ಥಾಪಕ ನಿರ್ದೇಶಕರು, (3) ಶ್ರೀಮತಿ ಅಮೂಲ್ಯ ಎನ್ ಎಸ್ ನಿರ್ದೇಶಕರು, (4) ಶ್ರೀಮತಿ ಆರ್ ಮಂಜುಳಾ, ಇವರೆಲ್ಲರ ವಿಳಾಸ :** # 502, 12ನೇ ಮುಖ್ಯ ರಸ್ತೆ, ಎಂ ಎಸ್ ಆರ್ ಎನ್‌ಕ್ಲೇವ್, ನಾಗಸಂದ್ರ ಮೆಟ್ರೋ ನಿಲ್ದಾಣದ ಹತ್ತಿರ, ನಾಗಸಂದ್ರ, ಬೆಂಗಳೂರು-560073. **(5) ಶ್ರೀಮತಿ ಅನನ್ಯ ಯು ಪಿ,** ನಂ. ಎಸ್ 3, 2ನೇ ಮಹಡಿ, ಡೆಕ್ಕನ್ ಟೆರೇಸ್ 8ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-5600036. **(6) ಶ್ರೀ ಬಿ ಆರ್ ಸಿದ್ದೇಶ್,** ನಂ.3163, 10ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆ, ಎಂಸಿಸಿ ಬ್ಲಾಕ್, ದಕ್ಷಿಣ ವಿಭಾಗ, ದಾವಣಗೆರೆ-577004. **(7) ಶ್ರೀ ಕೆ ಎನ್ ಉಮೇಶ್,** # 502, 12ನೇ ಮುಖ್ಯ ರಸ್ತೆ, ಎಂ ಎಸ್ ಆರ್ ಎನ್‌ಕ್ಲೇವ್, ನಾಗಸಂದ್ರ ಮೆಟ್ರೋ ನಿಲ್ದಾಣದ ಹತ್ತಿರ, ನಾಗಸಂದ್ರ, ಬೆಂಗಳೂರು-560073. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 22.04.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು. (₹. ಲಕ್ಷಗಳಲ್ಲಿ)

ಕ್ರ ಸಂ	ಸ್ಥಿರಾಸ್ತಿ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಪರಿವರ್ತಿತ ಭೂಮಿಯ ಸರ್ವೆ ನಂ.26/8, ವಿಸ್ತೀರ್ಣ 2 ಎಕರೆಗಳು 35 ಗುಂಟೆಗಳು, ಈ ಆಸ್ತಿಯು ಮೇಟಿಕುರ್ಕೆ ಗ್ರಾಮ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆಯಲ್ಲಿದ್ದು, ಮೆ॥ ಬಯೋಪಾಯಿಂಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಅವರ ಹೆಸರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಎಲ್‌ಎ ನಂ.31, ಪಶ್ಚಿಮಕ್ಕೆ: ಬಿ ತಿಪ್ಪಮ್ಮ ರವರ ಭೂಮಿ, ಉತ್ತರಕ್ಕೆ: ಎಲ್‌ಎ ನಂ.276ರ ಭೂಮಿ, ದಕ್ಷಿಣಕ್ಕೆ: ಎಲ್‌ಎ-ಹೆಚ್‌ಐ 2ರ ಭೂಮಿ.	ರೂ. 3080.00	ರೂ. 308.00	ರೂ. 10.00	10.03.2026 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧರಿತದಂತೆ
2	Hypothecated Plant & Machinery, Furniture & Fixtures and DG set				

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-I ಶಾಖೆ, ಬೆಂಗಳೂರು** ಮೊಬೈಲ್ ಸಂಖ್ಯೆ: **080-25310066 ಮತ್ತು 9483544116, e-mail: cb2366@canarabank.com** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 04.04.2026
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್

बैंक ऑफ़ Bank of Baroda
ROSARB
ಪ್ರಾದೇಶಿಕ ಕಚೇರಿ, ಬೆಂಗಳೂರು ಉತ್ತರ
ನಂ.41/2, 4ನೇ ಮಹಡಿ, ವಿಜಯ ಟವರ್ಸ್, ಟ್ರಿನಿಟಿ ಸರ್ಕಲ್, ಎಂ ಜಿ ರಸ್ತೆ, ಬೆಂಗಳೂರು, ಕರ್ನಾಟಕ-560001.
ದೂರವಾಣಿ ಸಂಖ್ಯೆ: 080-25011567, ಇ-ಮೇಲ್: sarben@bankofbaroda.com, Web: www.bankofbaroda.com

ಸಂಕ್ಷಿಪ್ತ ವಾಹನದ ಇ-ಹರಾಜು ಸೂಚನೆ

ಚಲನಶೀಲ ಆಸ್ತಿಗಳು/ವಾಹನಗಳ ಮಾರಾಟಕ್ಕಾಗಿ ಇ-ಹರಾಜಿಗಾಗಿ ಸಾರ್ವಜನಿಕ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ/ ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಹೈಪೋಥಕೇಶನ್/ಸಾಲ ಒಪ್ಪಂದದ ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸಿ, ಕೆಳಗೆ ತಿಳಿಸಲಾದ ಹೈಪೋಥೆಕೇಟೆಡ್ ಮೋಟಾರು ವಾಹನವನ್ನು ಬ್ಯಾಂಕ್ ಮರು ಸ್ವಾಧೀನಪಡಿಸಿಕೊಂಡಿದೆ/ ವಶಪಡಿಸಿಕೊಂಡಿದೆ ಮತ್ತು ವಾಹನವನ್ನು "ಎಲ್ಲಿ ಹೇಗಿದೆಯೋ ಹಾಗೆ" **"ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ"** ಮಾರಾಟ ಮಾಡಲಾಗುವುದು. ಸಾಲಗಾರರ / ಜಾಮೀನುದಾರರ /ಅಡಮಾನದಾರರ ವಾಹನ/ಬಾಕಿ ಮೊತ್ತ / ಮೀಸಲು ಬೆಲೆ / ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

ಕ್ರ ಸಂ	ಸಾಲಗಾರ/ ಜಾಮೀನುದಾರರ ಹೆಸರು ಮತ್ತು ವಿಳಾಸ ಸಾಲದ ಖಾತೆ ಸಂಖ್ಯೆ, ಒಟ್ಟು ಮೊತ್ತ	ವಾಹನ ಮೆಕ್ ಮತ್ತು ಮಾದರಿ ಆರ್‌ಟಿಒ ನೋಂದಣಿ ನಂ./ಎಂಜಿನ್ ನಂ./ಚಾಸಿಸ್ ನಂ.	1 ಮೀಸಲು ಬೆಲೆ, 2. ಇ.ಎಂ.ಡಿ 3. ಕನಿಷ್ಠ ಇನ್ಕ್ರಿಮೆಂಟ್ ಮೌಲ್ಯ	1. ಇ-ಹರಾಜಿನ ದಿನಾಂಕ ಇ-ಹರಾಜಿನ ಪ್ರಾರಂಭದ ಸಮಯದಿಂದ ಕೊನೆಯ ಸಮಯ 2. ಬಿಡ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ. 3.ವಾಹನ / ಚರಾಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ
1	**ಸಿ ಗಂಗಾಧರ್** ಸಂಖ್ಯೆ 5 ಎಲ್ಲುಮಾಡ ಲೇಔಟ್, ರಾಮಚಂದ್ರ ಪುರಂ, ಜಾಲಹಳ್ಳಿ, ಬೆಂಗಳೂರು 560013 89590600003610 ರೂ 23,74,670.04	2021/TATA ULTRA 1918 T 5L BSVI TEMP REG NO. T0422KA7311X/ MAT790213N7B03949/ 5LNGDICR21BXX504565	1.ರೂ.7,40,000/- 2.ರೂ.74,000/- 3.ರೂ.5,000/-	1. Date of e-Auction 21.04.2026 Time of E-auction - Start Time 02:00 PM to End Time 06:00 PM. 2. Last date and time of submission of Bid. 21.04.2026 02:00 PM. 3. Inspection : With prior permission from authorised officer (All vehicles are at Bhiwadi, Rajasthan)
2	**ಸುರೇಶ್ ಎಂ** ನಂ 5 ಎಲ್ಲುಮಾಡ ಲೇಔಟ್, ನಳಂದ ಥಿಯೇಟರ್ ಹತ್ತಿರ, ರಾಮಚಂದ್ರ ಪುರಂ, ಜಾಲಹಳ್ಳಿ ಬೆಂಗಳೂರು-560013 89590600003605 ರೂ 26,04,679.84	2021/TATA ULTRA 1918 T 5L BSVI TEMP REG NO. T0222KA33002/MAT790213M 7K17147/5LNGDICR21KYX 520358	1.ರೂ.7,40,000/- 2.ರೂ.74,000/- 3.ರೂ.5,000/-	
3	**ವಸಂತ್.ಎಸ್** ಸಂಖ್ಯೆ 63 ಸಿ ಲೇನ್, ಅಂಜನಪ್ಪ ಗಾರ್ಡನ್, ಮೈಸೂರು ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018 89590600003432 ರೂ 25,27,911.61	2021TATA ULTRA 1918 T 5L BSVI TEMP REG NO/ MAT790213M7J16050/5LNGD ICR21JYX518867	1.ರೂ.7,40,000/- 2.ರೂ.74,000/- 3.ರೂ.5,000/-	
4	**ರವೀಂದ್ರ ಎ** ನಂ.43, 2ನೇ ಮಹಡಿ, 4ನೇ ಕ್ರಾಸ್, ನಂದಿನಿ ಥಿಯೇಟರ್ ಹತ್ತಿರ, ಹೂವಿನ ಉದ್ಯಾನ, ಮೈಸೂರು ರಸ್ತೆ, ಬೆಂಗಳೂರು 560018 89590600003713 ರೂ 26,14,558.78	2021/TATA ULTRA 1918 T 5L BSVI TEMP REG NO/ MAT790213N7C07240/5JNGD ICR21CXX508514	1.ರೂ.7,40,000/- 2.ರೂ.74,000/- 3.ರೂ.5,000/-	
5	**ವೆಂಕಟೇಶ್** ಸಂಖ್ಯೆ 38/3, ಮುನೇಶ್ವರ ಬ್ಲಾಕ್, 1 ನೇ ಮುಖ್ಯ ರಸ್ತೆ, ನಾಗಶೆಟ್ಟಿಹಳ್ಳಿ, ಬೆಂಗಳೂರು-560094 89590600003714 ರೂ 26,36,830.49	2021/TATA ULTRA 1918 T 5L BSVI TEMP REG NO. T0422KA7309X/ MAT790213N7C07711/5LNGD ICR21CXY507693	1.ರೂ.7,40,000/- 2.ರೂ.74,000/- 3.ರೂ.5,000/-	
6	**ಲೋಕನಾಥ್ ಸಿ** ಸಂಖ್ಯೆ 8, ಕ್ವೀನ್ಸ್ ರಸ್ತೆ, ರಾಜೀವ್ ಗಾಂಧಿ ಕಾಲೋನಿ, ಪಶುವೈದ್ಯಕೀಯ ಆಸ್ಪತ್ರೆ ಹತ್ತಿರ, ಶಿವಾಜಿನಗರ, ಬೆಂಗಳೂರು 560051 89590600003519 ರೂ 25,26,857.43	2021/TATA ULTRA 1918 T 5L BSVI TEMP REG NO/ MAT790213M7J16044/ 5LNGDICR21JYX519196	1.ರೂ.7,40,000/- 2.ರೂ.74,000/- 3.ರೂ.5,000/-	

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು **https://baanknet.com** ವೆಬ್‌ಸೈಟ್ ಲಿಂಕ್‌ಗಳನ್ನು ನೋಡಿ/ಭೇಟಿ ನೀಡಿ. ನಿರೀಕ್ಷಿತ ಬಿಡ್‌ದಾರರು **ಶ್ರೀ ಪ್ರಬೀಷ್ ಎನ್ ಕೆ** ಟೆಲಿಫೋನ್ ನಂ.**08025584066** ದೂರವಾಣಿ ಸಂಖ್ಯೆ **8866556911** ನಲ್ಲಿ ಸಂಪರ್ಕಿಸಬಹುದು.

ದಿನಾಂಕ : 04.04.2026
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿಗಳು ಬ್ಯಾಂಕ್ ಆಫ್ ಬರೋಡ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ **ಶ್ರೀ. ಮಹೇಂದ್ರ ರೆಡ್ಡಿ ಮತ್ತು ಅವರ ಪತ್ನಿ ಶ್ರೀಮತಿ ಲೀಲಾವತಿ** ಇವರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ಥಿರಾಸ್ತಿಯ ಮಾಲೀಕರಾಗಿದ್ದು ಇವರು ಮೂಲ ಮಾರಾಟ ಪತ್ರ ದಿನಾಂಕ: 4.3.2004 ದಾಖಲೆ ಸಂಖ್ಯೆ.25018/03-04, ಪುಸ್ತಕ-1, ಶ್ರೀ. ರಾಮಚಂದ್ರಯ್ಯ.ಪಿ.ಎಂ ಅವರ ಪರವಾಗಿ ಶ್ರೀಮತಿ ಪದ್ಮಾವತಿ ಅಲಿಯಾಸ್ ಪದ್ಮಾವತಮ್ಮ ಅವರು ಬರೆದಿದ್ದಾರೆ ಮತ್ತು ಮಾರಾಟ ಪತ್ರ ದಿನಾಂಕ: 21/2/2005 ದಾಖಲೆ ಸಂಖ್ಯೆ.29574/04-05, ಪುಸ್ತಕ-1, ಶ್ರೀ. ರಾಮಚಂದ್ರಯ್ಯ.ಪಿ.ಎಂ ಅವರು ಶ್ರೀ.ವಿ.ಶ್ರೀನಿವಾಸ ರೆಡ್ಡಿ ಅವರ ಪರವಾಗಿ ಬರೆದಿದ್ದಾರೆ, ಇವೆರಡೂ ಬೆಂಗಳೂರು ದಕ್ಷಿಣ ತಾಲ್ಲೂಕಿನ SRO, ನಲ್ಲಿ ನೋಂದಾಯಿಸಲಾಗಿದೆ ಮತ್ತು ಡಿಸ್ಚಾರ್ಜ್ ಪತ್ರ ದಿನಾಂಕ: 6/8/2018 ದಾಖಲೆ ಸಂಖ್ಯೆ.2670 /18-19, ಶ್ರೀ. ಮಹೇಂದ್ರ ರೆಡ್ಡಿ ಮತ್ತು ಶ್ರೀಮತಿ.ಲೀಲಾವತಿ ಅವರ ಪರವಾಗಿ ರಾಷ್ಟ್ರೀಯ ಸಹಕಾರ ಬ್ಯಾಂಕ್‌ನಿಂದ ಬರೆದಿದ್ದಾರೆ, SRO ವರ್ತೂರು ಬೆಂಗಳೂರಿನಲ್ಲಿ ನೋಂದಾಯಿಸಲಾಗಿದೆ. ಮತ್ತು ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸ್ ಪ್ರಕಟವಾದ **ಏಳು ದಿನಗಳ** ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಮುನೇಕೊಳಲ ಗ್ರಾಮದ ಎಸ್‌ಜೆಆರ್ ಕಾಲೇಜಿನ ಪಕ್ಕದ ರಸ್ತೆಯಲ್ಲಿರುವ ಸ್ಥಿರ ಆಸ್ತಿ ನಿವೇಶನ ಸಂಖ್ಯೆ.116/5ಎ, ಹಳೆಯ ಮಹದೇವಪುರ ಸಿಎಂಸಿ ಖಾತಾ ಸಂಖ್ಯೆ.116/5ಎ, ಈಗ ಹೊಸ ಬಿಬಿಎಂಪಿ ಫಾರ್ಮ್-ಬಿ ಕ್ರಮ ಸಂಖ್ಯೆ.202,ರ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 55 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 56 ಅಡಿ, ಒಟ್ಟು 3080 ಚದರ ಅಡಿ. ಈ ಸ್ವತ್ತಿಗೆ ಚಕ್ಕುಬಂದಿ:- ಪೂರ್ವಕ್ಕೆ : ಪಾಪಯ್ಯ ರೆಡ್ಡಿ ಅವರಿಗೆ ಸೇರಿದ ಆಸ್ತಿ, ಪಶ್ಚಿಮಕ್ಕೆ : ವೆಂಕಟಮ್ಮ ಅವರಿಗೆ ಸೇರಿದ ದಾರಿ ಮತ್ತು ಆಸ್ತಿ, ಉತ್ತರಕ್ಕೆ : ಜಯರಾಮ ರೆಡ್ಡಿ ಅವರಿಗೆ ಸೇರಿದ ಆಸ್ತಿ, ದಕ್ಷಿಣಕ್ಕೆ : ಎ.ನಾರಾಯಣ ರೆಡ್ಡಿ ಅವರಿಗೆ ಸೇರಿದ ಆಸ್ತಿ.

ಎನ್. ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್,
ಎನ್.ಆರ್. ಕಾಲೋನಿ ಹತ್ತಿರ ಬಸ್ ನಿಲ್ದಾಣ,
ಹೋಟೆಲ್ ದ್ವಾರಕ ಎದುರು, ಬೆಂಗಳೂರು-560019.

ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 196/2026

ಅರ್ಜಿದಾರರು : ಶ್ರೀ ಸಾಬುಲಾಲ್ ಬಿನ್ ಲೇಟ್ ಬಾಜಿಸಾಬ್ @ ಮೊಹಮದ್ ಉಸ್ಮಾನ್ ವಯಸ್ಸು 87 ವರ್ಷ, ವಾಸ: ಕುರುಪೇಟೆ ಕನಕಪುರ ಟೌನ್, ಬೆಂಗಳುರು ದಕ್ಷಿಣ ಜಿಲ್ಲೆ. ಹಾಲಿ ವಾಸ: # 1988, 3ನೇ ತಿರುವು, 20ನೇ ಮುಖ್ಯ ರಸ್ತೆ, ಜೆ.ಪಿ. ನಗರ, 2ನೇ ಹಂತ, ಬೆಂಗಳೂರು ದಕ್ಷಿಣ ಬೆಂಗಳೂರು -560078.

ವಿರುದ್ಧ

ಪ್ರತಿ ಅರ್ಜಿದಾರರು : ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ಪ್ರತಿನಿಧಿಸುವವರು, ಪೌರಾಯುಕ್ತರು ನಗರಸಭೆ ಕನಕಪುರ ಟೌನ್ ಬೆಂಗಳೂರು ದಕ್ಷಿಣ

ಪ್ರಕಟಣೆ

ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ಅಕ್ಕ ರವರು ಆದ ರಾಮಿಜಾಬಿ ಕೋಂ ಲೇಟ್ ಅಹಮದ್ ಷರೀಫ್ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ಟೌನ್, ಕುರುಪೇಟೆಯಲ್ಲಿ ದಿನಾಂಕ : 03-01-1950 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿ ಪಡಿಸಿದ ದಿನಾಂಕದಂದು ಅಂದರೆ, 16/05/2026 ರ ಬೆಳಿಗ್ಗೆ 11:00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2026ರ ಏಪ್ರಿಲ್ 02ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ದೀಪಕ್.ಕೆ., ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 02/04/2026

ಮಾನ್ಯ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ [illegible] ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ.879/2025

[illegible]

ದಿನಾಂಕ: 26/03/2026

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)

ಮೈಸೂರು ಬ್ಯಾಂಕ್ ಸರ್ಕಲ್ ಶಾಖೆ
ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ರಸ್ತೆ,
ರಾಜ್‌ದೂತ್ ಕಾಂಪ್ಲೆಕ್ಸ್, ಮೈಸೂರು ಬ್ಯಾಂಕ್ ವೃತ್ತ,
ಬೆಂಗಳೂರು-560002, ಇ-ಮೇಲ್: cb10446@canarabank.com

ಸ್ವಾಧೀನ ಸೂಚನೆ ಸ್ಥಿರಾಸ್ತಿ ಸೆಕ್ಷನ್ 13(4)

ಕೆಳಸಹಿದಾರರು **ಕೆನರಾ ಬ್ಯಾಂಕ್, ಮೈಸೂರು ಬ್ಯಾಂಕ್ ಸರ್ಕಲ್ ಶಾಖೆ** ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಪೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್, 2002 (2002 ಕಾಯಿದೆ 54)(ಇನ್ನು ಮುಂದೆ "ಕಾಯ್ದೆ" ಎಂದು ಉಲ್ಲೇಖಿಸಲಾಗಿದೆ) ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ **60 ದಿನಗಳ 12,72,60,215.99 (ರೂಪಾಯಿಗಳು ಹನ್ನೆರಡು ಕೋಟಿ ಎಪ್ಪತ್ತೆರಡು ಲಕ್ಷ ಅರವತ್ತು ಸಾವಿರದ ಇನ್ನೂರ ಹದಿನೈದು ಮತ್ತು ಪೈಸಾ ತೊಂಭತ್ತೊಂಭತ್ತು ಮಾತ್ರ)** ಮತ್ತು ಬಡ್ಡಿ ಮತ್ತು ಇತರೆ ಖರ್ಚುಗಳು ಸೇರಿದಂತೆ ಪಾವತಿ ಮಾಡಲು **ಸಾಲಗಾರರಾದ : 1.M/S ಮಿಲನ್ ಕ್ಲಾತಿಂಗ್** ನಂ 86/13G , ಸರ್ವೆ ನಂ 107, ದೊಡ್ಡಬಳಾಪುರ ಕೈಗಾರಿಕಾ ಪ್ರದೇಶ, ಬಾಶೆಟ್ಟಿಹಳ್ಳಿ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು-561203. **2. ಶ್ರೀ ಕಾಲಿದಾಸ್ ರಾಜು (ಪಾಲುದಾರರು)** ಬಿನ್ ಶ್ರೀ ಟಿ ರಾಜು, ಇದನ್ನು ಪತ್ರಿನಿಧಿಸುವವರು ಜಿಪಿಎ ಹೋಲ್ಡರ್ **ಶ್ರೀ.ರಾಜು ಹರಿದಾಸ್** ನಂ.787, 19 ನೇ ಮುಖ್ಯ ರಸ್ತೆ, 23 ನೇ ಕ್ರಾಸ್, ಎಚ್‌ಎಸ್‌ಆರ್ ಲೇಔಟ್, 2 ನೇ ಸೆಕ್ಟರ್, ಬೆಂಗಳೂರು-560102. **ಮತ್ತೊಂದು ವಿಳಾಸ: ಶ್ರೀ ಕಾಲಿದಾಸ್ ರಾಜು** ಬಿನ್ ಟಿ ರಾಜು, 5339 ಬಿರ್ಚ್ ಗ್ರೋವ್ ಡಾ. ಸಂಜೋಸ್ ಸಿಎ ಕ್ಯಾಲಿಫೋರ್ನಿಯಾ ಯುನೈಟೆಡ್ ಸ್ಟೇಟ್ಸ್-095123. **ಮತ್ತೊಂದು ವಿಳಾಸ:ಶ್ರೀ ಕಾಳಿದಾಸ್ ರಾಜು** ಬಿನ್ ಶ್ರೀ ಟಿ ರಾಜು ಪ್ಲಾಟ್ ನಂ.1351, ಕೊಹಿನೂರ್ ರೆಸಿಡೆನ್ಸಿ 16 ನೇ ಮುಖ್ಯ ಬ್ಲಾಕ್, ಎಇಸಿಎಸ್ ಲೇಔಟ್, ಬೇಗೂರು, ಸಿಂಗಸಂದ್ರ ಗ್ರಾಮ, ಬೆಂಗಳೂರು-560068 **3. ಹರಿ ದಾಸ್ ಆರ್** (ಪಾಲುದಾರರು) ಬಿನ್ ಶ್ರೀ ಟಿ ರಾಜು, ನಂ.787, 23 ನೇ ಕ್ರಾಸ್, 19 ನೇ ಮುಖ್ಯ ರಸ್ತೆ, ಸೆಕ್ಟರ್ 2, ಎಚ್‌ಎಸ್‌ಆರ್ ಲೇಔಟ್, ಬೆಂಗಳೂರು, ಕರ್ನಾಟಕ-560102. ಮತ್ತೊಂದು ವಿಳಾಸ: **ಶ್ರೀ ಹರಿದಾಸ್ ಆರ್** ಬಿನ್ ಟಿ ರಾಜು ಪ್ಲಾಟ್ ಸಂಖ್ಯೆ 1351, ಕೊಹಿನೂರ್ ರೆಸಿಡೆನ್ಸಿ, 16 ನೇ ಮುಖ್ಯ ಬ್ಲಾಕ್, ಎಇಸಿಎಸ್ ಲೇಔಟ್, ಬೇಗೂರು ಸಿಂಗಸಂದ್ರ ಗ್ರಾಮ, ಬೆಂಗಳೂರು-560068 ಇವರಿಗೆ **ದಿನಾಂಕ:27.01.2026** ರಂದು ಡಿಮ್ಯಾಂಡ್ ನೋಟೀಸ್‌ನ್ನು ನೀಡಲಾಗಿತ್ತು.

ಸಾಲಗಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಮತ್ತು ಈ ಕೆಳಗೆ ತಿಳಿಸಲಾದ ಸಾಲಗಾರರು ಮತ್ತು ಸಾರ್ವಜನಿಕರಿಗೆ ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆಯ ಕಲಂ 13 ಸೆಕ್ಷನ್ (4) ರೊಂದಿಗೆ ನಿಯಮ 8 &9 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅವನು/ಅವಳು ಈ ಕೆಳಗೆ ವಿವರಿಸಲಾದ ಆಸ್ತಿಯನ್ನು **ದಿನಾಂಕ:01.04.2026** ರಂದು ಸ್ವಾಧೀನಪಡಿಸಿಕೊಂಡಿರುತ್ತಾರೆ.

ಸಾಲಗಾರರು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಸ್ವತ್ತಿನ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ **ಕೆನರಾ ಬ್ಯಾಂಕ್, ಮೈಸೂರು ಬ್ಯಾಂಕ್ ಸರ್ಕಲ್ ಶಾಖೆ** ಬರಬೇಕಾದ ಬಾಕಿ ಮೊತ್ತ **ರೂ.13,09,78,201.78 (ಹದಿಮೂರು ಕೋಟಿ ಒಂಬತ್ತು ಲಕ್ಷದ ಎಪ್ಪತ್ತೆಂಟು ಸಾವಿರದ ಇನ್ನೂರ ಒಂದು ಮತ್ತು ಎಪ್ಪತ್ತೆಂಟು ಪೈಸೆ ಮಾತ್ರ),** ಮತ್ತು ಬಡ್ಡಿ ಮತ್ತು ಅದರ ಖರ್ಚು-ವೆಚ್ಚಗಳು.

ಸಾಲಗಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ ಕಾಯಿದೆಯ ಸೆಕ್ಷನ್ 13(8) ನಿಯಮದ ಅನ್ವಯ ಇರುತ್ತದೆ.

ಭದ್ರತಾ ಆಸ್ತಿಯ ವಿವರ

ಶೀರ್ಷಿಕೆದಾರರ ಹೆಸರು: ಶ್ರೀ .ರಾಜು ಕಾಳಿದಾಸ್ ಮತ್ತು ಶ್ರೀ.ಆರ್.ಹರಿದಾಸ್

1. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡ ಸ್ಥಿರಾಸ್ತಿಯ ಫ್ಲಾಟ್ ನಂ, 13ಜಿ, ಬಾಶೆಟ್ಟಿಹಳ್ಳಿ ಪಂಚಾಯಿತಿ ಆಸ್ತಿ ನಂ, 86/13ಜಿ, ಇ-ಖಾತಾ ನಂ.150300301500620424 ದೊಡ್ಡಬಳ್ಳಾಪುರ ಇಂಡಸ್ಟ್ರಿಯಲ್ ಏರಿಯಾ ಈ ಆಸ್ತಿಯು ಸರ್ವೆ ನಂ 107, ಬಾಶೆಟ್ಟಿಹಳ್ಳಿ ಗ್ರಾಮ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-561203ರಲ್ಲಿದೆ., ಒಟ್ಟು ವಿಸ್ತೀರ್ಣ 2016 ಚದರ ಮೀಟರ್ಸ್ ಜೊತೆಗೆ 3660 ಚದರ ಅಡಿ ವಿಸ್ತೀರ್ಣದ ಶೆಡ್, ಆಸ್ಬೆಸ್ಟೋಸ್ ಶೀಟ್, ರೆಡ್ ಆಕ್ಸೈಡ್ ನೆಲಹಾಸು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ.12ಬಿ, ಉತ್ತರಕ್ಕೆ: ಪ್ಲಾಟ್ ನಂ.13ಎಫ್, ದಕ್ಷಿಣಕ್ಕೆ: ಪ್ಲಾಟ್ ನಂ.13ಹೆಚ್.

ಶೀರ್ಷಿಕೆದಾರರ ಹೆಸರು: ಶ್ರೀ .ರಾಜು ಕಾಳಿದಾಸ್

2.ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡ ವಾಸಯೋಗ್ಯ ಆಸ್ತಿಯ ನಂ 1351ರ ಎ ಬ್ಲಾಕ್, ಬಿಬಿಎಂಪಿ ಖಾತಾ ನಂ.873/1351, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 50 ಅಡಿ(15.243 ಮೀಟರ್ಸ್) ಮತ್ತು ಉತ್ತರದಿಂದ ದಕ್ಷಿಣಕ್ಕೆ: 100 ಅಡಿ(30.480 ಮೀಟರ್ಸ್) ಒಟ್ಟು ವಿಸ್ತೀರ್ಣ 5,000 ಚದರ ಅಡಿ, ಅಥವಾ 555.55 ಚದರ ಯಾರ್ಡ್ಸ್‌ಅಥವಾ 464.75 ಚದರ ಮೀಟರ್ಸ್, ಏರ್‌ಕ್ರಾಫ್ಟ್ ಎಂಪ್ಲಾಯೀಸ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್‌ನಿಂದ ರಚಿಸಲಾದ ಸರ್ವೆ ನಂ 6/1, 6/2, 8/1, 8/2, 8/3, 8/4, 8/5, 8/6, 10/1, 10/3, 15/1P, 17P, 18, 19, 21/1, 21/3, 22/1, 22/2, 23/1, 23/2, 23/3, 23/4, 23/5, 23/6, 23/7, 23/8, 23/9, 23/10, 23/11, 23/12, 23/13, 25/1, 25/2, 25/3, 25/4, 25/5, 25/6, 26/1P, 26/3, 27/1A, 27/1B, 27/2, 28/1A, 28/1B, 28/2, 28/3, 28/4, 28/5, 29/2, 30/1, [illegible] ಸಿಂಗಸಂದ್ರ ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, [illegible]

ದಿನಾಂಕ : 01.04.2026
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ ಕೆನರಾ ಬ್ಯಾಂಕ್

ಮಾನ್ಯ ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕನಕಪುರ
ಸಿ.ಮಿಸ್ ನಂ. 194/2026

ಅರ್ಜಿದಾರರು : ಶ್ರೀಮತಿ ಮಹದೇವಮ್ಮ ಮತ್ತು ಇತರರು ವಾಸ: ನಲ್ಲಹಳ್ಳಿ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ವಿರುದ್ಧ

ಎದುರುದಾರರು : 1) ಜನನ ಮತ್ತು ಮರಣ [illegible]

[illegible]

ದಿನಾಂಕ: 01/04/2026

ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 197/2026

ಅರ್ಜಿದಾರರು : ಶ್ರೀ ಸಾಬುಲಾಲ್ ಬಿನ್ ಲೇಟ್ ಬಾಜಿಸಾಬ್ @ ಮೊಹಮದ್ ಉಸ್ಮಾನ್ ವಯಸ್ಸು 87 ವರ್ಷ, ವಾಸ: ಕುರುಪೇಟೆ ಕನಕಪುರ ಟೌನ್, ಬೆಂಗಳುರು ದಕ್ಷಿಣ ಜಿಲ್ಲೆ. ಹಾಲಿ ವಾಸ: # 1988, 3ನೇ ತಿರುವು, 20ನೇ ಮುಖ್ಯ ರಸ್ತೆ, ಜೆ.ಪಿ. ನಗರ, 2ನೇ ಹಂತ, ಬೆಂಗಳೂರು ದಕ್ಷಿಣ ಬೆಂಗಳೂರು -560078.

ವಿರುದ್ಧ

[illegible]

ಸ್ಥಳ : ಕನಕಪುರ
ದಿನಾಂಕ: 02/04/2026

₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಭಾನುವಾರ 05.04.2026 ಸಂಪುಟ: 11 ಸಂಚಿಕೆ: 79 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಇಂದು ಚಿನ್ನಸ್ವಾಮಿಯಲ್ಲಿ ಹೈವೋಲ್ಟೇಜ್ ಪಂದ್ಯ

ಇಂದು ಐಪಿಎಲ್ 11ನೇ ಪಂದ್ಯದಲ್ಲಿ ಆರ್‌ಸಿಬಿ ಹಾಗೂ ಚೆನ್ನೈ ತಂಡಗಳು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮುಖಾಮುಖಿ ಆಗಲಿವೆ. ಆಡಿದ 2 ಪಂದ್ಯಗಳನ್ನು ಕೈಚೆಲ್ಲಿರುವ ಚೆನ್ನೈ ಗೆಲುವಿನ ವಿಶ್ವಾಸದಲ್ಲಿ ಕಣಕ್ಕಿಳಿಯಲಿದೆ. ತವರಿನ ಅಂಗಳದಲ್ಲಿ 2ನೇ ಪಂದ್ಯ ಗೆಲ್ಲುವ ನಿರೀಕ್ಷೆಯಲ್ಲಿ ರಜತ್ ಪಾಟೀದಾರ್ ಹುಡುಗರಿದ್ದಾರೆ.

ಸೊಂಪಾದ ಪುಟಗಳು

ಫ್ರಾಂಜ್ ಕಾಫ್ಕಾ ಮತ್ತು ಒಂದು ಗೊಂಬೆಯ ಕಥೆ

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6

ಕೈಚೀಲ ಈಗ ಪ್ರಕೃತಿಯಷ್ಟೇ ಸಹಜ, ಸಾಂಕೇತಿಕ

ಹೊರಸೂಸುವ ಮನ
ಸುಸಾನ್ ಥಾಮಸ್ 7

ದಾರಿದೀಪೋಕ್ತಿ

ಸೂರ್ಯ ಮುಳುಗಿದ ಮೇಲೆ ಕತ್ತಲೆಯಾಯಿತು ಎಂದು ಬೇಸರದಿಂದ ಕೂರಬೇಡಿ, ಏಕೆಂದರೆ ಆ ಕತ್ತಲೆಯೇ ನಿಮಗೆ ಚಂದ್ರ ಮತ್ತು ನಕ್ಷತ್ರಗಳ ಸೌಂದರ್ಯವನ್ನು ತೋರಿಸಿಕೊಡುತ್ತದೆ. ಪ್ರತಿಯೊಂದು ಕಳೆದುಕೊಂಡ ವಸ್ತುವಿನ ಹಿಂದೆ ಹೊಸದನ್ನು ಪಡೆಯುವ ಅವಕಾಶವಿರುತ್ತದೆ.

ವಕ್ರತುಂಡೋಕ್ತಿ

ಇಲ್ಲದ ಸುಖವನ್ನು ಫೋಟೋದಲ್ಲಿ ತೋರಿಸಿ, ಇರುವ ನೆಮ್ಮದಿಯನ್ನು ಕಾಮೆಂಟ್ ಬಾಕ್ಸ್‌ನಲ್ಲಿ ಕಳೆದುಕೊಳ್ಳುವ ಆಧುನಿಕ ಕುರುಕ್ಷೇತ್ರವನ್ನು ಸಾಮಾಜಿಕ ಜಾಲತಾಣ ಎನ್ನಬಹುದು.

ಕಂಬಿ ಹಿಂದೆ ಒಂದು ವರ್ಷ ಕಳೆದ ದರ್ಶನ್

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಜೈಲಿನಲ್ಲಿ ಕಳೆದಿರುವ ದಿನಗಳನ್ನು ಲೆಕ್ಕ ಹಾಕಿದರೆ ಒಂದು ವರ್ಷಕ್ಕೆ ಸಮೀಪಿಸುತ್ತಿದೆ. ಮೊದಲ ಬಾರಿ 2024 ಜೂನ್ 11 ರಂದು ಬಂಧನವಾಗಿ, 2024 ಅಕ್ಟೋಬರ್ 30ರ ತನಕ (131 ದಿನ) ಜೈಲು ವಾಸ ಅನುಭವಿಸಿದ್ದರು. ನಂತರ ಜಾಮೀನು ಪಡೆದು ಹೊರಬಂದಿದ್ದರು. ಬಳಿಕ ಸುಪ್ರೀಂಕೋರ್ಟ್ ಜಾಮೀನು ರದ್ದು ಮಾಡಿ ಬಂಧನಕ್ಕೆ ಸೂಚಿಸಿತ್ತು. ಪೊಲೀಸರು ನಟ ದರ್ಶನನ್ನು 14 ಆಗಸ್ಟ್ 2025ರಂದು ಬಂಧನ ಮಾಡಿ ಪರಪ್ಪನ ಅಗ್ರಹಾರಕ್ಕೆ ಬಿಟ್ಟಿದ್ದರು. ಇದೀಗ ದರ್ಶನ್ ಎರಡನೇ ಬಾರಿ ಬಂಧನಕ್ಕೆ ಒಳಗಾಗಿ 226 ದಿನಗಳು ಕಳೆದಿವೆ. ಮೊದಲ ಬಾರಿ ಮತ್ತು ಎರಡನೇ ಬಾರಿ ಬಂಧನವಾಗಿದ್ದು ಸೇರಿದರೆ 357 ದಿನ ಜೈಲಿನಲ್ಲಿ ಕಳೆದಿದ್ದಾರೆ. ಇನ್ನು 8 ದಿನ ಕಳೆದರೆ ದರ್ಶನ್ ಜೈಲುವಾಸ ಒಂದು ವರ್ಷವಾಗಲಿದೆ.

ಅತ್ತ ನರೇಗಾವೂ ಇಲ್ಲ, ಇತ್ತ ವಿಬಿ ಜಿ ರಾಮ್‌ಜಿಯೂ ಇಲ್ಲ
ವಾಸ್ತವವಾಗಿ ಬೇಸಿಗೆಯಲ್ಲೇ ಅಗತ್ಯವಿದ್ದ ಉದ್ಯೋಗಕ್ಕೆ ಕತ್ತರಿ

ಉದ್ಯೋಗಕ್ಕಿಲ್ಲ ಖಾತರಿ

ವಿಶ್ವವಾಣಿ ವಿಶೇಷ ಬೆಂಗಳೂರು

ಸಂಪೂರ್ಣವಾಗಿ ಕೇಂದ್ರ ಪ್ರಾಯೋಜಿತ ಯೋಜನೆಯಾಗಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಮನರೇಗಾ) ಕಾಯ್ದೆಯನ್ನು ಮಾರ್ಪಾಡು ಮಾಡುವ ಮೂಲಕ ಹೊಸದಾಗಿ ವಿಕಸಿತ ಭಾರತ-ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಗ್ರಾಮೀಣ (ವಿಬಿ- ಜಿ ರಾಮ್ ಜಿ) ಕಾಯ್ದೆಯನ್ನು ಕೇಂದ್ರ ಸರಕಾರ ಪರಿಚಯಿಸಿದೆ. ಆದರೆ ಈ ಕಾಯಿದೆಯನ್ನು ರಾಜ್ಯ ಸರಕಾರವು ಇನ್ನೂ ಅಳವಡಿಸಿಕೊಳ್ಳದೇ ಇರುವುದರಿಂದ ಉದ್ಯೋಗ ಖಾತ್ರಿಯನ್ನೇ ನಂಬಿಕೊಂಡಿದ್ದ ಲಕ್ಷಾಂತರ ಕೂಲಿ ಕಾರ್ಮಿಕರು ಅತ್ತ ಕೂಲಿಯೂ ಇಲ್ಲದೇ, ಇತ್ತ ಕಾಳಿಗೂ ಪರಿತಪಿಸುವ ಪರಿಸ್ಥಿತಿಗೆ ಸಿಲುಕಿದ್ದಾರೆ.

ಯುಪಿಎ ಸರಕಾರ ಜಾರಿಗೊಳಿಸಿದ್ದ ಮನರೇಗಾವನ್ನು ಬದಿಗಿಟ್ಟು, ಅದೇ ಉದ್ಯೋಗ ಖಾತ್ರಿಗೆ ವಿಬಿ ರಾಮ್ ಜಿ ಕಾಯಿದೆ ಎಂದು ಹೆಸರಿಟ್ಟು ಯೋಜನೆಯನ್ನು ಕೇಂದ್ರ ಸರಕಾರ ಇತ್ತೀಚೆಗೆ ಜಾರಿಗೊಳಿಸಿದೆ. ಆದರೆ ಈ ಯೋಜನೆಯನ್ನು ಕರ್ನಾಟಕದಲ್ಲಿ ಯಾವ ರೀತಿಯಲ್ಲಿ ಜಾರಿಯಾಗಲಿದೆ ಎನ್ನುವ ಗೊಂದಲ ಶುರುವಾಗಿದೆ.

ಕೇಂದ್ರ ಸರಕಾರ ನರೇಗಾ ಕಾಯಿದೆಯ ಬದಲಿಗೆ ವಿಬಿರಾಮ್‌ಜಿ ಕಾಯಿದೆಯ ಮೂಲಕ ಉದ್ಯೋಗ ಖಾತ್ರಿಯನ್ನು ಜಾರಿಗೊಳಿಸಲು ಮುಂದಾಗಿದೆ. ನರೇಗಾದಲ್ಲಿದ್ದ ಅಂಶಗಳಿಗೆ ತಿದ್ದುಪಡಿಗೊಳಿಸಲಾಗಿದೆ. ಆದರೆ ಕೇಂದ್ರದ ಈ ತೀರ್ಮಾನವನ್ನು ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ವಿರೋಧಿಸುತ್ತಿದ್ದು, ರಾಜ್ಯದಲ್ಲಿ ಸರಕಾರ ವಿಬಿ ರಾಮ್ ಜಿ ಕಾಯಿದೆಯನ್ನು ಜಾರಿಗೊಳಿಸುವ ವಿಷಯದಲ್ಲಿ ಈಗಲೂ ಕರ್ನಾಟಕ ಸರಕಾರ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ಇದರಿಂದಾಗಿ, ನರೇಗಾ ಯೋಜನೆಯಲ್ಲಿ ಇಷ್ಟು ದಿನ ಕೆಲಸ ಪಡೆಯುತ್ತಿದ್ದ ಲಕ್ಷಾಂತರ ಜನರಿಗೆ ಈ ವರ್ಷ ಕೆಲಸ ಸಿಗುವುದೋ ಇಲ್ಲವೋ ಎನ್ನುವ ಆತಂಕ ಶುರುವಾಗಿದೆ.

ವಿಬಿ ರಾಮ್‌ಜಿ ಕಾಯಿದೆಯನ್ನು ಈಗಾಗಲೇ ಕೇಂದ್ರ ಸರಕಾರ ಅನುಮೋದನೆ ನೀಡಿ, ಬಜೆಟ್‌ನಲ್ಲಿ ಅನುದಾನವನ್ನೂ ಮೀಸಲಿಟ್ಟಿದೆ. ಆದರೆ ಕರ್ನಾಟಕ ಸರಕಾರ ತನ್ನ ಬಜೆಟ್‌ನಲ್ಲಿ ವಿಬಿ ರಾಮ್ ಜಿ ಯೋಜನೆಯನ್ನು ವಿರೋಧಿಸಿರುವುದು ಮಾತ್ರವಲ್ಲದೇ, ನರೇಗಾ ಯೋಜನೆಗೆ ಎರಡು ಸಾವಿರ ಕೋಟಿ ರು. ಮೀಸಲಿಡುವ ಪ್ರಸ್ತಾಪ ಮಾಡಿದೆ.

→ 4

ನರೇಗಾ ಮುಕ್ತಾಯವಾದರೂ ದುರುಪಯೋಗದ ಚರ್ಚೆಯಿಲ್ಲ

ಈ ನಡುವೆ 2025ನೇ ಸಾಲಿನ ಸಿಎಜಿ ವರದಿಯಲ್ಲಿ ಸುಮಾರು 187 ಕೋಟಿ ರು. ಅನುಚಿತವಾಗಿ ಬಳಸಿಕೊಂಡಿರುವ ವಿಷಯವನ್ನು ಪ್ರಸ್ತಾಪಿಸಲಾಗಿದೆ. 2019-20ರಿಂದ 2025ರವರೆಗೆ ಸುಮಾರು 79,284 ದುರಪಯೋಗವಾಗಿರುವ ಪ್ರಕರಣಗಳಿವೆ ಎನ್ನುವ ವಿಷಯವನ್ನು ಉಲ್ಲೇಖಿಸಲಾಗಿದೆ. ಆದರೀಗ, ನರೇಗಾ ಯೋಜನೆಯೇ ಕೊನೆಯಾಗಿರುವುದರಿಂದ ಸಿಎಜಿ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಈ ಹಿಂದೆ ದುರುಪಯೋಗವಾಗಿರುವ ಕಾಮಗಾರಿಗಳಿಂದ ವಸೂಲಿ ಮಾಡಲಾಗಿದೆ ಎಂದು ಸರಕಾರ ಹೇಳಿದ್ದರೂ, ಇದನ್ನು ಪೂರ್ಣ ಪ್ರಮಾಣದಲ್ಲಿ ಸಿಎಜಿ ಒಪ್ಪಿಲ್ಲ. ಆದ್ದರಿಂದ ಇದೀಗ ಈ ವಿಷಯದಲ್ಲಿ ಸರಕಾರದ ನಡೆಯೇನಾಗಿರಲಿದೆ ಎನ್ನುವ ಕುತೂಹಲ ಅನೇಕರಲ್ಲಿದೆ.

ಆಗುತ್ತಿರುವ ಸಮಸ್ಯೆಯೇನು?

- ಕೇಂದ್ರದಿಂದ ಮನರೇಗಾ ಯೋಜನೆ ಸ್ಥಗಿತಗೊಂಡು, ವಿಬಿ ರಾಮ್‌ಜಿ ಕಾಯಿದೆ ಜಾರಿಯಾಗಿದೆ
- ವಿಬಿ ರಾಮ್ ಕರ್ನಾಟಕದಲ್ಲಿ ಜಾರಿಯಾಗಬೇಕಾದರೆ ವಿಧೇಯಕವನ್ನು ಮಂಡಿಸಬೇಕು
- ನರೇಗಾ ಪರವಾಗಿ ಬ್ಯಾಟ್ ಮಾಡುತ್ತಿರುವುದರಿಂದ ವಿಬಿ ರಾಮ್ ಜಿ ಕಾಯಿದೆ ಅಳವಡಿಸಿಕೊಂಡಿಲ್ಲ
- ಅಳವಡಿಕೆ ಮಾಡಿಕೊಳ್ಳದ ಹೊರತು ಈ ಯೋಜನೆಯಲ್ಲಿ ಅನುದಾನ ಬಿಡುಗಡೆ ಮಾಡಲು ಸಾಧ್ಯವಿಲ್ಲ

ಮುಂದಿನ ಸಮಸ್ಯೆಯೇನು?

- ಮಳೆಗಾಲದ ಅಧಿವೇಶನದಲ್ಲಿ ಅಳವಡಿಸಿಕೊಂಡರೂ ಅಕ್ಟೋಬರ್‌ವರೆಗೆ ಕೆಲಸ ಕೊಡಲು ಅವಕಾಶವಿಲ್ಲ
- ನರೇಗಾ ರೀತಿಯಲ್ಲಿ ಸ್ಥಳೀಯ ಮಟ್ಟದಲ್ಲಿ ಅನುಮೋದನೆ ಪಡೆಯುವುದಕ್ಕೆ ವಿಬಿ ರಾಮ್‌ಜಿಯಲ್ಲಿ ಅವಕಾಶವಿಲ್ಲ
- ವಿಬಿ ರಾಮ್‌ಜಿ ಕಾಯಿದೆಯಲ್ಲಿ ಉದ್ಯೋಗ ನೀಡಲು ಬಜೆಟ್‌ನಲ್ಲಿ ಅನುದಾನ ಎತ್ತಿಟ್ಟಿಲ್ಲ
- ಪೂರ್ಣ ಪ್ರಮಾಣದಲ್ಲಿ ನರೇಗಾ ಜಾರಿಗೊಳಿಸಲು ಮುಂದಾದರೆ ಭಾರಿ ಪ್ರಮಾಣದ ಅನುದಾನ ಮೀಸಲಿಡಬೇಕಾಗುತ್ತದೆ

272 ಅಕ್ರಮ ಬಾಂಗ್ಲಾ ವಲಸಿಗರು ಗಡಿಪಾರು

ಬೆಂಗಳೂರು: ಅಕ್ರಮವಾಗಿ ನೆಲೆಸಿದ್ದ ಬಾಂಗ್ಲಾ ವಲಸಿಗರನ್ನು ಪತ್ತೆ ಹಚ್ಚಿ ಗಡಿಪಾರು ಮಾಡುವ ಪ್ರಕ್ರಿಯೆಯನ್ನು ಪೊಲೀಸರು ಚುರುಕುಗೊಳಿಸಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಇಲ್ಲಿಯವರೆಗೂ 178 ಪುರುಷರು, 94 ಮಹಿಳೆಯರ ಸಹಿತ ಒಟ್ಟು 272 ಜನ ಅಕ್ರಮ ವಲಸಿಗರನ್ನು ಗುರುತಿಸಿ ಗಡಿಪಾರು ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾಳೆ ಲೋಕಭವನಕ್ಕೆ ಮುತ್ತಿಗೆಗೆ ಕರವೇ ಕರೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆಗೆ ಅಂಕಗಳ ಬದಲು ಗ್ರೇಡ್ ನೀಡುವ ರಾಜ್ಯ ಸರಕಾರದ ನಿರ್ಧಾರವನ್ನು ಮರುಪರಿಶೀಲಿಸುವಂತೆ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿಗೆ ರಾಜ್ಯಪಾಲರು ಪತ್ರ ಬರೆದಿರುವುದನ್ನು ಖಂಡಿಸಿ ಸೋಮವಾರ ಬೆಳಗ್ಗೆ 11 ಗಂಟೆಗೆ ಲೋಕಭವನಕ್ಕೆ ಮುತ್ತಿಗೆ ಹಾಕಲು ಕರ್ನಾಟಕ ರಕ್ಷಣಾ ವೇದಿಕೆ ನಿರ್ಧರಿಸಿದೆ.

ಪಾಕಿಸ್ತಾನ ಸಂಪರ್ಕದ ಉಗ್ರ ಜಾಲ ಬಯಲು

ಲಖನೌ: ಪಾಕಿಸ್ತಾನದ ನಿರ್ದೇಶನದ ಮೇರೆಗೆ ಭಾರತದ ಪ್ರಮುಖ ಸ್ಥಳಗಳನ್ನು ಸ್ಫೋಟಿಸಿ ದೇಶದಲ್ಲಿ ತಲ್ಲಣ ಮೂಡಿಸಲು ಸಂಚು ಹೂಡಿದ್ದ ಭಯೋತ್ಪಾದಕರ ಜಾಲವೊಂದನ್ನು ಉತ್ತರ ಪ್ರದೇಶದ 'ಭಯೋತ್ಪಾದನಾ ನಿಗ್ರಹ ಪಡೆ'(ಎಟಿಎಸ್) ಭೇದಿಸಿದೆ. ಸಾಕಿಬ್ (ಡೇವಿಡ್), ಅರ್ಬಾಬ್, ವಿಕಾಸ್ ಮತ್ತು ಲೋಕೇಶ್ ಎಂಬುವವರನ್ನು ಬಂಧಿಸಲಾಗಿದೆ.

ಇರಾನ್ ಮೇಲೆ ಮುಗಿಬಿದ್ದ ಅಮೆರಿಕ-ಇಸ್ರೇಲ್‌ನ ಸೇನಾಪಡೆ

ಬುಶೆಹರ್ ಅಣುಸ್ಥಾವರದ ಮೇಲೆ ದಾಳಿ: ಒಬ್ಬ ಸಾವು

ಟೆಹರಾನ್: ಅಮೆರಿಕದ ಮಿತ್ರರಾಷ್ಟ್ರಗಳಲ್ಲಿನ ಸೇನಾ ನೆಲೆಗಳ ಮೇಲೆ ಇರಾನ್ ಕ್ಷಿಪಣಿ ದಾಳಿ ಮುಂದುವರಿದಿರುವಂತೆಯೇ ಇತ್ತ ಇರಾನ್ ಮೇಲೆ ಮುಗಿಬಿದ್ದಿರುವ ಅಮೆರಿಕ ಮತ್ತು ಇಸ್ರೇಲ್‌ನ ಸೇನಾ ಪಡೆಗಳು ಅಣುಸ್ಥಾವರಗಳ ಮೇಲೆ ಗಂಭೀರ ದಾಳಿ ಮಾಡಿದೆ.

ಇರಾನ್‌ನ ಬುಶೆಹರ್ ಪರಮಾಣು ಸ್ಥಾವರದ ಮೇಲೆ ಅಮೆರಿಕ-ಇಸ್ರೇಲ್ ಕ್ಷಿಪಣಿ ದಾಳಿ ನಡೆಸಿದ್ದು, ಈ ದಾಳಿಯಲ್ಲಿ ಒಬ್ಬ ವ್ಯಕ್ತಿ ಸಾವನ್ನಪ್ಪಿದ್ದಾನೆ ಎಂದು ತಿಳಿದುಬಂದಿದೆ.

ದಕ್ಷಿಣ ಇರಾನ್‌ನ ಬುಶೆಹರ್ ಪರಮಾಣು ವಿದ್ಯುತ್ ಸ್ಥಾವರದ ಬಳಿ ಶನಿವಾರ ಅಮೆರಿಕ-ಇಸ್ರೇಲ್ ದಾಳಿ ನಡೆಸಿದೆ. ಇದಕ್ಕೂ ಮೊದಲು, ಇರಾನ್‌ನ ನೈಋತ್ಯ ಖುಜೆಸ್ತಾನ್ ಪ್ರಾಂತ್ಯದ ಮಹ್‌ಶಹರ್ ಪೆಟ್ರೋಕೆಮಿಕಲ್ ವಲಯದ ಮೇಲೆ ನಡೆದಿದ್ದ ದಾಳಿಯಲ್ಲಿ ಐವರು ಗಾಯಗೊಂಡಿದ್ದರು. ಯುದ್ಧ ಪಶ್ಚಿಮ ಏಷ್ಯಾದಾದ್ಯಂತ ಹರಡಿದ್ದು, ಜಾಗತಿಕ ಆರ್ಥಿಕತೆ ಮತ್ತು ಲಕ್ಷಾಂತರ ಜನರ ಮೇಲೆ ಪರಿಣಾಮ ಬೀರಿದೆ.

ವಿಕಿರಣ ಸೋರಿಕೆ ಇಲ್ಲ ಎಂದ ಐಎಇಎ:

ಬುಶೆಹರ್ ಪರಮಾಣು ವಿದ್ಯುತ್ ಸ್ಥಾವರದ ಆವರಣದ ಬಳಿ ಒಂದು ಕ್ಷಿಪಣಿ ಅಪ್ಪಳಿಸಿದ ಬಗ್ಗೆ ಇರಾನ್‌ನಿಂದ ಮಾಹಿತಿ ಪಡೆಯಲಾಗಿದೆ. ಸೈಟ್‌ನ ಭೌತಿಕ ರಕ್ಷಣಾ ಸಿಬ್ಬಂದಿಯಲ್ಲಿ ಒಬ್ಬರು ಪ್ರೊಜೆಕ್ಟೈಲ್ ತುಣುಕಿನಿಂದ ಸಾವನ್ನಪ್ಪಿದ್ದಾರೆ. ಘಟನಾ ಸ್ಥಳದಲ್ಲಿ ಯಾವುದೇ ರೀತಿಯ ವಿಕಿರಣ ಸೋರಿಕೆಯಾಗಿಲ್ಲ. ಅಲ್ಲದೆ ಈ ಘಟನೆಯು ಸ್ಥಾವರದ ಮುಖ್ಯ ಭಾಗಗಳಿಗೆ ಹಾನಿಯಾಗಿಲ್ಲ. ಉತ್ಪಾದನೆಯ ಮೇಲೆ ಯಾವುದೇ ಪರಿಣಾಮ ಬೀರಿಲ್ಲ ಎಂದು ಅಂತಾರಾಷ್ಟ್ರೀಯ ಪರಮಾಣು ಇಂಧನ ಸಂಸ್ಥೆ (ಐಎಇಎ) ಶನಿವಾರ ತಿಳಿಸಿದೆ.

ಭಾರತದತ್ತ ಮತ್ತೊಂದು ಹಡಗು

ಭಾರತದ ಧ್ವಜವಿರುವ ಮತ್ತೊಂದು ಎಲ್‌ಪಿಜಿ ನೌಕೆ ಶನಿವಾರ ಅರಬ್ಬೀ ಸಮುದ್ರದಲ್ಲಿ ಸಂಚಾರ ನಡೆಸುತ್ತಿದ್ದು, ಭಾನುವಾರ ಅಥವಾ ಸೋಮವಾರ ಭಾರತದ ಬಂದರನ್ನು ತಲುಪಲಿದೆ. ಹೊರ್ಮುಜ್ ಬಂದ್ ಬಳಿಕ ಜಲಸಂಧಿ ದಾಟಿ ಬಂದ 8ನೇ ಇಂಧನ ನೌಕೆ ಇದಾಗಲಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ರಾಜ್ಯದಲ್ಲಿ 40 ದಾಟಿದವರಿಗೆ ಸರ್ಕಾರದಿಂದ ಉಚಿತವಾಗಿ ಸಿಗಲಿದೆ 'ಓದುವ ಕನ್ನಡಕ' ಸುದ್ದಿ



ಏ.10 ರಿಂದ ನಗದು ಪಾವತಿ ಇಲ್ಲ | ಕೇಂದ್ರ ರಸ್ತೆ ಸಾರಿಗೆ ಸಚಿವಾಲಯ ಅಧಿಸೂಚನೆ

ಇನ್ಮುಂದೆ ಟೋಲ್‌ಗಳಲ್ಲಿ ಸಂಚಾರ ಸರಾಗ

ದೆಹಲಿ: ಟೋಲ್ ಬೂತ್‌ಗಳಲ್ಲಿ ವಾಹನಗಳ ಸಾಲನ್ನು ತಪ್ಪಿಸುವುದಕ್ಕಾಗಿ ಈ ತಿಂಗಳ 10ರಿಂದ ನಗದು ಪಾವತಿಯನ್ನು ಸ್ಥಗಿತಗೊಳಿಸುವ ಸಂಬಂಧ ಕೇಂದ್ರ ರಸ್ತೆ ಸಾರಿಗೆ ಸಚಿವಾಲಯ ಮಹತ್ವದ ಅಧಿಸೂಚನೆ ಹೊರಡಿಸಿದೆ. ಇದರಿಂದ ರಾಷ್ಟ್ರೀಯ ಹೆದ್ದಾರಿ ಮತ್ತು ಎಕ್ಸ್‌ಪ್ರೆಸ್ ವೇ ಪ್ರಯಾಣಿಕರು ತಮ್ಮ ಗುರುತಿನ ಚೀಟಿಯನ್ನು ತೋರಿಸಿ, ಶುಲ್ಕ ವಿನಾಯ್ತಿ ಕೋರುವ ಸಂಪ್ರದಾಯ ಕೂಡ ಅಂತ್ಯವಾಗಲಿದೆ.

ಸಾರಿಗೆ ಸಚಿವಾಲಯ ಈಗಾಗಲೇ ಸರಕಾರಿ ಸಂಸ್ಥೆಗಳು ಮತ್ತು ಕಚೇರಿಗಳು ಶುಲ್ಕ ವಿನಾಯ್ತಿ ಫಾಸ್ಟ್ಯಾಗ್‌ಗಳನ್ನು ಪಡೆಯಲು ಅಥವಾ ವಾರ್ಷಿಕ ಫಾಸ್ಟ್ಯಾಗ್ ಪಾಸ್‌ಗಳನ್ನು ಪಡೆಯುವಂತೆ ಸೂಚಿಸಿದೆ. ವಿನಾಯ್ತಿ ವರ್ಗದ ಅಡಿಯಲ್ಲಿ ಬರುವ ಎಲ್ಲ ವಾಹನಗಳು ಈ ಕ್ರಮವನ್ನು ಅನುಸರಿಸಬೇಕಾಗುತ್ತದೆ. ಎಲ್ಲ ಖಾಸಗಿ ಕಾರುಗಳಿಗೆ ವಾರ್ಷಿಕ ಪಾಸ್ ದರ 3,075 ರುಪಾಯಿ ಆಗಿರುತ್ತದೆ ಹಾಗೂ 200 ಟೋಲ್ ಪ್ಲಾಜಾಗಳನ್ನು ದಾಟಲು ಅವಕಾಶ ಇರುತ್ತದೆ. ಒಂದು ವೇಳೆ ವಾಹನಕ್ಕೆ ಅಧಿಕೃತ ಫಾಸ್ಟ್ಯಾಗ್ ಇಲ್ಲದಿದ್ದರೆ, ಚಾಲಕ ಅಥವಾ ಮಾಲೀಕ ಟೋಲ್ ಶುಲ್ಕವನ್ನು ಯುಪಿಐ ಮೂಲಕ ಪಾವತಿಸಲು ಅವಕಾಶವಿದೆ. ಇದು ಸಾಮಾನ್ಯ ಬಳಕೆದಾರರ ಶುಲ್ಕದ 1.25 ಪಟ್ಟು ಆಗಿರುತ್ತದೆ. ಒಂದು ವೇಳೆ ಯುಪಿಐ ಮೂಲಕವೂ ಪಾವತಿಸಲು ನಿರಾಕರಿಸಿದರೆ, ಅಂಥ ವಾಹನಗಳ ವಿರುದ್ಧ ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮಾವಳಿಯ 14ನೇ ನಿಯಮದ ಮೂಲಕ ಕ್ರಮ ಕೈಗೊಳ್ಳಲಾಗುತ್ತದೆ. ಅಂಥ ವಾಹನಗಳಿಗೆ ಟೋಲ್ ಪ್ಲಾಜಾ ಪ್ರವೇಶವನ್ನು ನಿರ್ಬಂಧಿಸಲು ಹಾಗೂ ರಾಷ್ಟ್ರೀಯ ಹೆದ್ದಾರಿ ಸೆಕ್ಷನ್‌ನಿಂದ ಅದನ್ನು ತೆರವುಗೊಳಿಸಲು ಅವಕಾಶ ಇರುತ್ತದೆ.

ಇದು ಟೋಲ್ ಪ್ಲಾಜಾಗಳಲ್ಲಿ ಪ್ರಯಾಣಿಕರು ಮತ್ತು ಸಿಬ್ಬಂದಿಯ ನಡುವಿನ ಸಂಘರ್ಷವನ್ನು ಕೂಡ ತಪ್ಪಿಸಲಿದೆ. ಅಲ್ಲದೆ ಸರಾಗ ಪ್ರಯಾಣಕ್ಕೆ ತಡೆಯಾಗುವ ರೀತಿಯಲ್ಲಿ ಟೋಲ್ ಬೂತ್‌ಗಳಲ್ಲಿ ವಾಹನಗಳ ಸರದಿ ಸಾಲು ನಿರ್ಮಾಣವಾಗುವುದನ್ನು ತಡೆಯಲಿದೆ.

- ಸರಕಾರಿ ವಾಹನಗಳು ಶುಲ್ಕ ವಿನಾಯಿತಿ ಫಾಸ್ಟ್ಯಾಗ್‌ಗಳನ್ನು ಪಡೆಯಬೇಕು ಅಥವಾ ವಾರ್ಷಿಕ ಫಾಸ್ಟ್ಯಾಗ್ ಪಾಸ್‌ಗಳನ್ನು ಪಡೆಯಬೇಕು
- ಒಂದು ವೇಳೆ ವಾಹನಕ್ಕೆ ಅಧಿಕೃತ ಫಾಸ್ಟ್ಯಾಗ್ ಇಲ್ಲದಿದ್ದರೆ ಚಾಲಕ ಅಥವಾ ಮಾಲೀಕ ಯುಪಿಐ ಮೂಲಕ ಟೋಲ್ ಶುಲ್ಕ ಪಾವತಿಸಬಹುದು
- ಯುಪಿಐ ಮೂಲಕವೂ ಪಾವತಿಸದಿದ್ದರೆ ಆ ವಾಹನದ ವಿರುದ್ಧ ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮಾವಳಿಯ 14ನೇ ನಿಯಮದ ಮೂಲಕ ಕ್ರಮ

ಈ ಸಮಸ್ಯೆಗೆ ಕೇಂದ್ರವೇ ಕಾರಣ: ಸಿಎಂ | ಆಟೋ ಚಾಲಕರಿಗೆ ಮಾಸಿಕ 15 ಸಾವಿರ ರು. ಕೊಡಲಿ: ಎಚ್‌ಡಿಕೆ

ಗ್ಯಾಸ್ ಗ್ಯಾರಂಟಿ ಕೇಳಿದ ಚಾಲಕರು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗ್ಯಾಸ್ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಆಟೋ ಚಾಲಕರು ರಾಜ್ಯ ಹಾಗೂ ಕೇಂದ್ರ ಸರಕಾರದ ವಿರುದ್ಧ ತಿರುಗಿಬಿದ್ದಿದ್ದು, ಗ್ಯಾಸ್ ಸಮಸ್ಯೆ ಬಗೆಹರಿಯುವ ತನಕ ಪರಿಹಾರ ನೀಡುವಂತೆ ಆಗ್ರಹಿಸಿದ್ದಾರೆ.

ಯುದ್ಧದಿಂದಾಗಿ ಗ್ಯಾಸ್ ಕೊರತೆಯ ಜತೆಗೆ ಭಾರಿ ಪ್ರಮಾಣದಲ್ಲಿ ಬೆಲೆ ಏರಿಕೆಯಾಗುತ್ತಿರುವುದು ಚಾಲಕರಿಗೆ ನುಂಗಲಾರದ ತುತ್ತಾಗಿದೆ. ಆದ್ದರಿಂದ ಇದೀಗ ಆಟೋ ಚಾಲಕರು, ಆರನೇ ಗ್ಯಾರಂಟಿಯಾಗಿ ನಮಗೆ ಉಚಿತ ಗ್ಯಾಸ್ ಅಥವಾ ಪೆಟ್ರೋಲ್ ನೀಡಬೇಕು. ಇಲ್ಲವೇ, ಮಾಸಿಕ ನಿರ್ವಹಣೆಗೆ ಪರಿಹಾರ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಸದ್ಯ ಬೆಂಗಳೂರಿನಲ್ಲಿ ಗ್ಯಾಸ್ ದರ ಕೆಜಿಗೆ 65 ರಿಂದ 70 ರು.ಗಳ ಆಸುಪಾಸಿನಲ್ಲಿದೆ. ಆದರೆ ಕೆಜಿಗೆ 100 ರು.ಗಿಂತಲೂ ಹೆಚ್ಚಿನ ದರಕ್ಕೆ ಮಾರಾಟವಾಗುತ್ತಿದೆ. ಇನ್ನೂ ಕೆಲವು ಕಡೆ ಕಾಳಸಂತೆಯಲ್ಲಿ ಪ್ರತಿ ಕೆಜಿ ಗ್ಯಾಸ್ ಅನ್ನು 500 ರು.ಗಳವರೆಗೂ ಮಾರಾಟ ಮಾಡಲಾಗುತ್ತಿದೆ. ಆದರೆ ಪ್ರಯಾಣಿಕರು ಹೆಚ್ಚು ಹಣ ಕೇಳಿದರೆ ಕೊಡುವುದಿಲ್ಲ. ನಮಗೆ ದೈನಂದಿನ ಖರ್ಚುಗಳನ್ನು ನಿಭಾಯಿಸಲಾಗುತ್ತಿಲ್ಲ. ಹೀಗಾಗಿ ಸರಕಾರ ಆಟೋ ಚಾಲಕರಿಗೆ ದಿನಕ್ಕೆ ಕನಿಷ್ಠ ಎರಡು ಕೆಜಿ ಗ್ಯಾಸ್ ಅಥವಾ ಎರಡು ಲೀಟರ್ ಪೆಟ್ರೋಲ್ ಉಚಿತವಾಗಿ ನೀಡಬೇಕು. ಇಲ್ಲವಾದರೆ 200 ರು.ಯಿಂದ 300 ರು. ಆರ್ಥಿಕ ನೆರವು ನೀಡಬೇಕು ಎಂದು ಆಗ್ರಹಿಸಿದ್ದಾರೆ.



ಕೇಂದ್ರದ ವಿರುದ್ಧ ಟೀಕಿಸುವ ರಾಜ್ಯ ಸರಕಾರವು ಆಟೋ ಚಾಲಕರು ಬಳಸುವ ಇಂಧನದ ಮೇಲೆ ತೆರಿಗೆ ವಿಧಿಸಿದೆ. ಈ ತೆರಿಗೆಯನ್ನು ಹಿಂಪಡೆಯಬೇಕು. ಇದರೊಂದಿಗೆ ಈಗಾಗಲೇ ಪಂಚಗ್ಯಾರಂಟಿ ನೀಡಿರುವ ರಾಜ್ಯ ಸರಕಾರ ಪರಿಸ್ಥಿತಿ ಸರಿಹೋಗುವ ತನಕ ಆಟೋ ಚಾಲಕರಿಗೆ ಆರನೇ ಗ್ಯಾರಂಟಿಯಾಗಿ ಮಾಸಿಕ 15,000 ರು. ಕೊಟ್ಟು ಚಾಲಕರ ಕುಟುಂಬಗಳನ್ನು ಉಳಿಸಬೇಕು.

-ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಎಲ್‌ಪಿಜಿ, ಆಟೋ ಗ್ಯಾಸ್ ಸೇರಿದಂತೆ ಪೆಟ್ರೋಲ್-ಡಿಸೇಲ್ ಸೂಕ್ತ ರೀತಿಯಲ್ಲಿ ಸರಬರಾಜು ಮಾಡುವುದು ಕೇಂದ್ರ ಸರಕಾರದ ಹೊಣೆಗಾರಿಕೆ. ಕೇಂದ್ರ ನೀಡುವ ಗ್ಯಾಸ್ ಅನ್ನು ವಿತರಿಸುವುದು ಮಾತ್ರ ರಾಜ್ಯ ಸರಕಾರದ ಜವಾಬ್ದಾರಿ. ಆದರೆ ಕೇಂದ್ರ ಸರಕಾರದ ಧೋರಣೆಯಿಂದ ಇಂದು ಗ್ಯಾಸ್ ಸಮಸ್ಯೆಯಾಗಿದೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಆಟೋ ಚಾಲಕರಿಗೆ ಗ್ಯಾಸ್ ಸಮಸ್ಯೆಯಿಂದ ಬಹಳ ತೊಂದರೆಯಾಗುತ್ತಿದೆ. ಅನಿಲ ಪೂರೈಕೆಯ ವಿಷಯದಲ್ಲಿ ಕೇಂದ್ರ ಸರಕಾರ ಸರಿಯಾಗಿ ಮುಂಜಾಗ್ರತೆ, ನೀತಿ ರೂಪಿಸಬೇಕಿತ್ತು. ಈ ವಿಚಾರವಾಗಿ ಬಿಜೆಪಿಯವರು ಏಕೆ ಮಾತಾಡುತ್ತಿಲ್ಲ? ನಮ್ಮಿಂದ (ಬಿಜೆಪಿ) ತೊಂದರೆಯಾಗಿದೆ ಎಂದು ಒಪ್ಪಿಕೊಂಡು ಜನರ ಬಳಿ ಕ್ಷಮೆ ಕೋರಬೇಕು.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಮುಚ್ಚುತ್ತಲೇ ಇರುವ ಆಟೋ ಗ್ಯಾಸ್ ಸ್ಟೇಷನ್

ಈ ನಡುವೆ ದಿನದಿಂದ ದಿನಕ್ಕೆ ಆಟೋ ಎಲ್‌ಪಿಜಿ ಸಮಸ್ಯೆ ಉಲ್ಬಣಿಸುತ್ತಿದ್ದ ನೂರಾರು ಸ್ಟೇಷನ್‌ಗಳು ಮುಚ್ಚಿವೆ. ರಾಜಧಾನಿ ಬೆಂಗಳೂರಿನಲ್ಲಿ 35 ಸರಕಾರಿ ಸ್ವಾಮ್ಯದ ಸಂಸ್ಥೆಗಳಿದ್ದು, ಖಾಸಗಿ ಸ್ಟೇಷನ್‌ಗಳ ಸಂಖ್ಯೆ 300ರ ಆಸುಪಾಲಿನಲ್ಲಿದೆ. ಆದರೆ ಖಾಸಗಿ ಸ್ಟೇಷನ್‌ಗಳಲ್ಲಿ 10ಕ್ಕಿಂತ ಕಡಿಮೆ ಕಾರ್ಯನಿರ್ವಹಿಸುತ್ತಿದ್ದು, ಸರಕಾರಿ ಸ್ವಾಮ್ಯದ 25ರಿಂದ 30 ಸ್ಟೇಷನ್‌ಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ದಿನದಿಂದ ದಿನಕ್ಕೆ ಸ್ಥಗಿತಗೊಳ್ಳುವ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ, ಮುಂದಿನ ದಿನದಲ್ಲಿ ಆಟೋ ಚಾಲಕರ ಸಮಸ್ಯೆ ಇನ್ನಷ್ಟು ಉಲ್ಬಣವಾಗುವುದು ಬಹುತೇಕ ನಿಶ್ಚಿತ ಎನ್ನಲಾಗಿದೆ.

ಸಿದ್ದರಾಮಯ್ಯಗೆ ಶೀಘ್ರ ಗೇಟ್ ಪಾಸ್

ದಾವಣಗೆರೆ: ಮುಂದಿನ 2028ರೊಳಗೆ ಆಯ್ತದೋ, ಇಲ್ಲ ಇನ್ನು ಎರಡು ತಿಂಗಳಿಗೋ, ಆರು ತಿಂಗಳಿಗೋ ಸಿದ್ದರಾಮಯ್ಯನವರು ಗೇಟ್ ಪಾಸ್ ಆಗ್ತಾರೆ. ಅದಾದ ಒಂದೆರಡು ತಿಂಗಳಿಗೆ ಎಲೆಕ್ಷನ್ ಬರ್ತದೆ. ಮತ್ತೆ ಕರ್ನಾಟಕಕ್ಕೆ ಹೊಸ ಯುಗ ಪ್ರಾರಂಭವಾಗುವ ಸನ್ನಿವೇಶ ಸೃಷ್ಟಿಯಾಗುತ್ತದೆ ಎಂದು ಕೇಂದ್ರದ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಭವಿಷ್ಯ ನುಡಿದರು. ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ನನಗೆ ತಿಳಿದ ಮಟ್ಟಿಗೆ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರವನ್ನು ಜನರೇ ಪ್ರತಿಷ್ಠೆಯಾಗಿ ತಗೊಂಡಿದ್ದಾರೆ. ಅಲ್ಪಸಂಖ್ಯಾತರು ಅಂತ ಕಾಂಗ್ರೆಸ್ ಕಡೆಗಣಿಸಿತು... ಅವರೇನು ದಡ್ಡರಾ?. ಇವತ್ತು ಮತ ಕೊಡ್ತಾ ಇರೋದು ಮೂರನೇ ತಲೆಮಾರು. ಮೂರನೇ ತಲೆಮಾರು ಅಂದ್ರೆ ಇನ್ನು ಎಷ್ಟು ತಲೆಮಾರು ಇರ್ತದೆ ಅನ್ನೋದು ಅವರಿಗೂ ಗೊತ್ತಿರುತ್ತದೆ. ಹಾಗಿರೋದ್ರಿಂದ ಈ ಚುನಾವಣೆ ಅಲ್ಪಸಂಖ್ಯಾತರ ಸ್ವಾಭಿಮಾನ, ಅಲ್ಪಸಂಖ್ಯಾತರ ರಾಜಕೀಯ ಭವಿಷ್ಯ. ಅಲ್ಪಸಂಖ್ಯಾತರು ಏನು ಕಾಂಗ್ರೆಸ್ಸನ್ನು ನಂಬಿಕೊಂಡು ಇದೆ ನಮ್ಮ ಜೀವನಾಡಿ ಅಂತ ಅಂದಿದ್ರೋ ಅದಕ್ಕೆ ಮುಕ್ತಿ ಕೊಡುವ ಕೊನೆಗಾಲ ಅಂತ ಕಾಣಿಸ್ತಿದೆ ಎಂದು ತಿಳಿಸಿದರು. ಇಡೀ ರಾಷ್ಟ್ರದಲ್ಲಿ ದಾವಣಗೆರೆ ಉಪಚುನಾವಣೆ ಒಂದು ಮುನ್ನೋಟ ಆಗಿದೆ. ಆ ಮುನ್ನೋಟದಲ್ಲಿ ಅಲ್ಪಸಂಖ್ಯಾತರು ಎಚ್ಚೆತ್ತುಕೊಂಡು, ಎಷ್ಟೇ ನೀವು ದೊಡ್ಡವರಾದರೂ ನಮಗೆ, ನಮ್ಮ ಸಮಾಜಕ್ಕೆ ಅನ್ಯಾಯ ಮಾಡಿದರೆ ನಾವು ನಿಮ್ಮನ್ನು ಸಹಿಸೋದಿಲ್ಲ ಅನ್ನೋದಕ್ಕೆ ದಾವಣಗೆರೆ ಉಪಚುನಾವಣೆ ಒಂದು ದಿಕ್ಸೂಚಿ ಆಗಿದೆ. ಈ ಚುನಾವಣೆಯಲ್ಲಿ ನೂರಕ್ಕೆ ನೂರು ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ಗೆಲುವು ಸಾಧಿಸುತ್ತಾನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಮೌಲಾನಾ ಆಜಾದ್ ಅಲ್ಪಸಂಖ್ಯಾತರ ಭವನ, ಕೆ.ಎಸ್.ಸಿ.ಎ ಕ್ರಿಕೇಟ್ ಕ್ರೀಡಾಂಗಣ ಎದುರುಗಡೆ, ರಾಮತೀರ್ಥ ನಗರ, ಬೆಳಗಾವಿ – 590016. ದೂರವಾಣಿ ಸಂಖ್ಯೆ: 0831–2950349
ಇ–ಮೇಲ್: dombelagavi1@gmail.com
ಸಂಖ್ಯೆ: ಅಸಂಕಇಬೆ/ಚಿ.ವಿ/ಹೊ.ಸಿ/ಟೆಂಡರ್/ಸಿಆರ್–78/2025–26 ದಿನಾಂಕ: 02–04–2026

ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ **ಬೈಲಹೊಂಗಲ ಉಪ ವಿಭಾಗದಲ್ಲಿ** ಕಾರ್ಯ ನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ / ಕಾಲೇಜು, ವಿದ್ಯಾರ್ಥಿ ನಿಲಯ ಹಾಗೂ ತಾಲ್ಲೂಕು ಮಾಹಿತಿ ಕೇಂದ್ರಗಳಿಗೆ, ಡಾಟಾ ಎಂಟ್ರಿ ಆಪರೇಟರ್, ಸ್ಟಾಫ್ ನರ್ಸ್, ವಾಹನ ಚಾಲಕರು, ಅಡುಗೆಯವರು, ಅಡುಗೆ ಸಹಾಯಕರು, ಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ ಮತ್ತು ಗ್ರೂಪ್–ಡಿ ಒಟ್ಟು 80 ಜನ ಸಿಬ್ಬಂದಿಗಳ ಸೇವೆಯನ್ನು ಹೊರ ಮಾನವ ಸಂಪನ್ಮೂಲ ಸಂಸ್ಥೆಯಿಂದ ಆರ್ಥಿಕ ವರ್ಷ 2026–27 ನೇ ಸಾಲಿಗೆ ಅಥವಾ ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಸಿಬ್ಬಂದಿ ಸೇವೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999, ನಿಯಮಗಳು 2000 ರ ಪ್ರಕಾರ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್‌ನ ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)	ಸೆಕ್ಯೂರಿಟಿ ಡಿಪಾಜಿಟ್ (ಅನುಮೋದನೆಗೊಂಡ ಟೆಂಡರ್‌ದಾರರು ಮಾತ್ರ)	ಟೆಂಡರ್ ಸಲ್ಲಿಸುವ ಆರಂಭ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
176.56	2.65	ಬಿಡ್ ಮೊತ್ತದ ಶೇ.5 ರಷ್ಟು	02–04–2026	04–05–2026 ರ ಸಂಜೆ 5.30 ರವರೆಗೆ

ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ: **0831–2950349** ನ್ನು ಸಂಪರ್ಕಿಸಬಹುದು.
ಸಹಿ/– ಜಿಲ್ಲಾ ಅಧಿಕಾರಿಗಳು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಳಗಾವಿ.
ವಾಸಾಸಂಇ/ಬೆಳಗಾವಿ/29/ಅಡ್ವರ್ಟೈಸ್/2026–27

ಕರ್ನಾಟಕ ಸರ್ಕಾರ (ಕೃಷಿ ಇಲಾಖೆ)
ಜಂಟಿ ಕೃಷಿ ನಿರ್ದೇಶಕ ಕಾರ್ಯಾಲಯ, ವಿಜಯನಗರ
ಸೆಂಟರ್ ಆಫ್ ಎಕ್ಸ್‌ಲೆನ್ಸ್ ಕಟ್ಟಡ, ನ್ಯಾಷನಲ್ ಕಾಲೇಜ್ ಹಿಂಭಾಗ, ಎನ್.ಸಿ.ಕಾಲೋನಿ, ಹರಿಹರ ರಸ್ತೆ, ಹೊಸಪೇಟೆ–583 203.ದೂ.ಸಂ.: 08394–200240 ಇ–ಮೇಲ್:jdavijayanagar@gmail.com
ಸಂ: ಜಕೃನಿ.ವಿನ/ಸಿ/10/2026–27/11 ದಿನಾಂಕ: 02.04.2026

ಇ–ಟೆಂಡರ್ ಪ್ರಕಟಣೆ

ಕರ್ನಾಟಕರಾಜ್ಯಪಾಲರ ಪರವಾಗಿಜಂಟಿ ಕೃಷಿ ನಿರ್ದೇಶಕರು, ವಿಜಯನಗರ ಮತ್ತುಅಧೀನ ಕಛೇರಿಗಳಿಗೆ ಹೊರಗುತ್ತಿಗೆಆಧಾರದ ಮೇರೆಗೆಕೃಷಿ ಸಂಜೀವಿನಿ ಯೋಜನೆಯಡಿಯಲ್ಲಿ ಕೃಷಿ ಸಂಜೀವಿನಿ ತಾಂತ್ರಿಕ ಸಹಾಯಕ ಹಾಗೂ ಕೃಷಿ ಸಂಜೀವಿನಿ ವಾಹನ ಚಾಲಕ ಸಿಬ್ಬಂದಿಗಳನ್ನು ಒದಗಿಸಲು ಅರ್ಹ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಸ್ಥೆಯವರಿಂದ ಇ–ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ **kppp.karnataka.gov.in** ವೆಬ್‌ಸೈಟನ್ನು ಸಂಪರ್ಕಿಸಲು ಕೋರಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.04.2026 ರಂದು ಸಂಜೆ: 4.00 ಘಂಟೆಗೆ ನಿಗದಿಪಡಿಸಲಾಗಿದೆ.
ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದು.
Tender No. AD/2026-27/SE0490
ಸಹಿ/– ಜಂಟಿ ಕೃಷಿ ನಿರ್ದೇಶಕರು, ವಿಜಯನಗರ.
ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/09

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
Karnataka One State, Many worlds
(ಕರ್ನಾಟಕ ಸರ್ಕಾರದ ಒಂದು ಅಂಗ ಸಂಸ್ಥೆ)
ಕಾರ್ಯನಿರ್ವಾಹಕ ಕಛೇರಿ, 5ನೇ ಮಹಡಿ, ಇಂಧನ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560009 ದೂರವಾಣಿ: 080–42775575 ಫ್ಯಾಕ್ಸ್: (080) 42775589,
ವೆಬ್‌ಸೈಟ್:www.kstdc.co
ಸಂಖ್ಯೆ: KSTDC/PROC/01/2026-27/24 ದಿನಾಂಕ:04.04.2026

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ, **ಬೆಂಗಳೂರು ಸಂಸ್ಥೆಯು ನಿಗಮದ ವಿವಿಧ ಹೋಟೆಲ್ ಘಟಕಗಳಿಗೆ ಒದಗಿಸಲು ಅವಶ್ಯಕವಿರುವ Kitchen Equipment's and Other Items** ಗಳನ್ನು ಸರಬರಾಜು ಮಾಡುವ **ಸಂಬಂಧ** ಆಸಕ್ತ ಬಿಡ್‌ದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

ಟೆಂಡರ್ ಸಂಖ್ಯೆ	ವಿವರಣೆ	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ
KSTDC/ 2026-27/ IND0038	ನಿಗಮದ ವಿವಿಧ ಹೋಟೆಲ್ ಘಟಕಗಳಿಗೆ ಒದಗಿಸಲು ಅವಶ್ಯಕವಿರುವ Kitchen Equipment's and Other Items ಗಳನ್ನು ಸರಬರಾಜು ಮಾಡುವುದು.	16.04.2026 at 17.30 Hrs.

ವಿವರವಾದ ಟೆಂಡರ್ ದಾಖಲೆಗಳು ಇ–ಪ್ರೊಕ್ಯೂರ್‌ಮೆಂಟ್ ಜಾಲತಾಣ: www.kppp.karnataka.gov.inನಲ್ಲಿ ಲಭ್ಯವಿರುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9240214000/9240214001, ಇ–ಮೇಲ್:support@eprochelpdesk.com ನ್ನು ಸಂಪರ್ಕಿಸುವುದು.
ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ), ಕ.ರಾ.ಪ್ರ.ಅ.ನಿ

ನಂದಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಬೋಧನಾ ಆಸ್ಪತ್ರೆ, ಚಿಕ್ಕಬಳ್ಳಾಪುರ
E-mail:cimschikkaballapura@gmail.com,
ಫೋನ್ ಮತ್ತು ಫ್ಯಾಕ್ಸ್:08156–272388
ಸಂಖ್ಯೆ:ಎನ್‌ಎಂಸಿ&ಆರ್‌ಐ/ಸಿಕೆಬಿ/ಇ–ಟೆಂಡರ್/01/2026–27
ದಿನಾಂಕ:01.04.2026

ಟೆಂಡರ್ ಪ್ರಕಟಣೆ

ನಂದಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೋಧನಾ ಆಸ್ಪತ್ರೆ (ಜಿಲ್ಲಾ ಆಸ್ಪತ್ರೆ ಆವರಣ) ಚಿಕ್ಕಬಳ್ಳಾಪುರ ಇಲ್ಲಿಗೆ ಈ ಕೆಳಗೆ ನಮೂದಿಸಿರುವ ವಿಷಯುಗಳಿಗೆ ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರಗಳು ಕೆಳಕಂಡಂತಿವೆ. (1) STP/WTP AMC (College) (2) AC AMC Call-2 (3) CCTV, Computer, Printer AMC Call-2 (4) STP AMC (District Hospital) (5) Printing (6) Stationary & Cartridge Refilling for Various Printers (7) Medical Kits/SCSP/TSP (8) Tabs (9) Diet (10) Staff Nurse-50 (11) Service Contract-40 (12) Technicians-27 (13) Purchase of Batteries for UPS (14) Solar High Mask Lamp for Teaching Hospital ಟೆಂಡರ್‌ಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಅಂತರ್‌ಜಾಲ ತಾಣ **https://kppp.karnataka.gov.in** ದಲ್ಲಿ ಪಡೆದುಕೊಳ್ಳಬಹುದು. **ಸೂಚನೆ:** ಈ ಟೆಂಡರ್‌ಗೆ ಸಂಬಂಧಪಟ್ಟಂತೆ, ಮುಂದಿನ ಪ್ರಕ್ರಿಯೆಗಳ ಬಗ್ಗೆ **(further information and announcements)** ತಿಳಿದುಕೊಳ್ಳಲು ನಮ್ಮ ಸಂಸ್ಥೆಯ ಅಂತರ್ಜಾಲ ತಾಣ **https://cimschikkaballapura.karnataka.gov.in** ದಲ್ಲಿ ವೀಕ್ಷಿಸಬಹುದು.
ಸಹಿ/– ನಿರ್ದೇಶಕರು, ಎನ್‌ಎಂಸಿ&ಆರ್‌ಐ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:01/ಕೆಎಸ್‌ಎಂಸಿಎ/2026–27

ವಿಧಾನಸೌಧದ ಸ್ಪೀಕರ್ ಕಚೇರಿಯಲ್ಲಿ ಸರತಿ ಸಾಲಿನಲ್ಲಿ ನಿಂತು ಟಿಕೆಟ್ ಪಡೆದ ಶಾಸಕರ ಆಪ್ತರು

ಅತ್ತ ಗ್ಯಾಸ್‌ಗಾಗಿ ಜನರ ಪರದಾಟ: ಇತ್ತ ಉಚಿತ ಟಿಕೆಟ್‌ಗೆ ಶಾಸಕರ ಧಾವಂತ!

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭಾನುವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಸಿಎಸ್‌ಕೆ ನಡುವಿನ ಐಪಿಎಲ್ ಪಂದ್ಯದ ಉಚಿತ ಟಿಕೆಟ್‌ಗಾಗಿ ಶಾಸಕರ ಆಪ್ತ ಸಹಾಯಕರು (ಪಿಎ) ವಿಧಾನಸೌಧದ ಸ್ಪೀಕರ್ ಕಚೇರಿಯಲ್ಲಿ ಸರತಿ ಸಾಲಿನಲ್ಲಿ ನಿಂತು ಟಿಕೆಟ್ ಪಡೆದುಕೊಂಡಿದ್ದಾರೆ.

ಜನಸಾಮಾನ್ಯರು ಎಲ್‌ಪಿಜಿ ಗ್ಯಾಸ್‌ಗಾಗಿ ಬಿಸಿಲಿನಲ್ಲಿ ಏಜೆನ್ಸಿಗಳ ಮುಂದೆ ಕ್ಯೂ ನಿಂತು ಹರಸಾಹಸ ಪಡುತ್ತಿದ್ದರೆ, ಇತ್ತ ಶಾಸಕರಿಗೆ ಐಪಿಎಲ್ ಪಂದ್ಯ ನೋಡುವ ಧಾವಂತ. ಶನಿವಾರ ಉಚಿತ ಐಪಿಎಲ್ ಟಿಕೆಟ್‌ಗಾಗಿ ಶಾಸಕರ ಪಿಎಗಳು ವಿಧಾನಸೌಧದ ಸ್ಪೀಕರ್ ಕಚೇರಿ ಮುಂದೆ ಕ್ಯೂ ನಿಂತಿರುವ ದೃಶ್ಯ ಕಂಡು ಬಂದಿದ್ದು, ಜನರ ಸಮಸ್ಯೆ ಕೇಳದ ಜನಪ್ರತಿನಿಧಿಗಳು ಐಪಿಎಲ್ ಟಿಕೆಟ್‌ಗೆ ಹೀಗೆ ವರ್ತನೆ ತೋರಿರುವುದಕ್ಕೆ ಸಾರ್ವಜನಿಕ ವಲಯದಲ್ಲಿ ತೀವ್ರ ವಿರೋಧಕ್ಕೆ ಕಾರಣವಾಗಿದೆ.

ಇತ್ತೀಚಿಗೆ ವಿಧಾನಸಭೆಯಲ್ಲಿ ಉಚಿತ ಐಪಿಎಲ್ ಟಿಕೆಟ್ ನೀಡುವಂತೆ ಶಾಸಕರು ಆಗ್ರಹಿಸಿದ್ದರು. ಅದರಂತೆ ಸ್ಪೀಕರ್ ಉಚಿತ ಟಿಕೆಟ್ ಕೊಡಲು ವ್ಯವಸ್ಥೆ ಮಾಡುವಂತೆ ಸ್ಪೀಕರ್ ಸೂಚಿಸಿದ್ದರು. ಬಳಿಕ ಕೆಎಸ್‌ಸಿಎ ಪದಾಧಿಕಾರಿಗಳ ಜತೆ ಡಿಸಿಎಂ ಡಿ.ಕೆ. ಶಿವಕುಮಾರ್ ಜೊತೆ ಸಭೆ ನಡೆಸಿ, ಶಾಸಕರಿಗೆ ಮೂರು ಉಚಿತ ಐಪಿಎಲ್ ಟಿಕೆಟ್ ತೀರ್ಮಾನಿಸಲಾಯಿತು. ಕೆಎಸ್‌ಸಿಎ ಎಲ್ಲಾ ಶಾಸಕರುಗಳಿಗೆ ತಲಾ 3ರಂತೆ ಸುಮಾರು 670 ಉಚಿತ ಐಪಿಎಲ್ ಟಿಕೆಟ್‌ಗಳನ್ನು ಸ್ಪೀಕರ್ ಕಚೇರಿಗೆ ಕಳುಹಿಸಿಕೊಟ್ಟಿದೆ.

ಟಿಕೆಟ್ ಜತೆ ಫುಡ್ ಕೂಪನ್: ಭಾನುವಾರ ಆರ್‌ಸಿಬಿ ಮತ್ತು ಸಿಎಸ್‌ಕೆ ಮಧ್ಯೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಐಪಿಎಲ್ ಪಂದ್ಯ ನಡೆಯಲಿದೆ. ಈ ಹಿನ್ನೆಲೆ ಇದೀಗ ಶಾಸಕರು ಉಚಿತ ಐಪಿಎಲ್ ಟಿಕೆಟ್ ಪಡೆಯಲು ತಮ್ಮ ಪಿಎಗಳನ್ನು ವಿಧಾನಸೌಧದ ಸ್ಪೀಕರ್ ಕಚೇರಿಗೆ ಕಳುಹಿಸಿದ್ದಾರೆ. ಹೀಗಾಗಿ ಶಾಸಕರ ಆಪ್ತ ಸಹಾಯಕರು 3 ಉಚಿತ ಐಪಿಎಲ್ ಟಿಕೆಟ್ ಪಡೆಯಲು ಸ್ಪೀಕರ್ ಕಚೇರಿ ಮುಂದೆ ಜಮಾಯಿಸಿದ್ದರು. ಸರತಿ ಸಾಲಿನಲ್ಲಿ ನಿಂತು ಶಾಸಕರಿಗೆ ಕೊಡಮಾಡಲಾಗಿರುವ ಉಚಿತ ಐಪಿಎಲ್ ಟಿಕೆಟ್‌ಗಳನ್ನು ಸಂಗ್ರಹಿಸಿದರು. ಈ ಉಚಿತ ಐಪಿಎಲ್ ಟಿಕೆಟ್ ಫುಡ್ ಕೂಪನ್ ಕೂಡ ಹೊಂದಿದೆ. ಸಾರ್ವಜನಿಕರು ದುಡ್ಡು ಕೊಟ್ಟರೂ ಐಪಿಎಲ್ ಟಿಕೆಟ್ ಪಡೆಯಲು ಹರಸಾಹಸ ಪಡುತ್ತಿದ್ದರೆ, ಇತ್ತ ಜನಪ್ರತಿನಿಧಿಗಳು ಉಚಿತ ಐಪಿಎಲ್ ಟಿಕೆಟ್ ಪಡೆದು, ನಿರಾಯಾಸವಾಗಿ ಕ್ರಿಕೆಟ್ ಪಂದ್ಯ ವೀಕ್ಷಿಸಲು ಮುಂದಾಗಿದ್ದಾರೆ. ಈಗಾಗಲೇ ಬಿಜೆಪಿ ಶಾಸಕರಾದ ರವಿ ಸುಬ್ರಮಣ್ಯ, ಸುರೇಶ್ ಕುಮಾರ್ ಸ್ಪೀಕರ್ ಕಚೇರಿಗೆ ಪತ್ರ ಬರೆದು ತಮಗೆ ಉಚಿತ ಟಿಕೆಟ್ ಬೇಡ ಎಂದು ತಿಳಿಸಿದ್ದಾರೆ. ಉಳಿದಂತೆ ಬಹುತೇಕ ಎಲ್ಲಾ ಶಾಸಕರ ಪಿಎಗಳು ಸ್ಪೀಕರ್ ಕಚೇರಿಗೆ ಆಗಮಿಸಿ, ಶಾಸಕರ ಪರವಾಗಿ ಐಪಿಎಲ್ ಟಿಕೆಟ್ ಸಂಗ್ರಹಿಸಿಕೊಂಡು ಹೋಗಿದ್ದಾರೆ. ಸ್ಪೀಕರ್ ಕಚೇರಿಗೆ ಕಳುಹಿಸ ಲಾದ ಸುಮಾರು 670 ಉಚಿತ ಐಪಿಎಲ್ ಟಿಕೆಟ್‌ನಲ್ಲಿ ಬಹುತೇಕ ಎಲ್ಲವನ್ನೂ ಹಂಚಿಕೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಟಿಕೆಟ್‌ಗೆ ಶಾಸಕರು ಕೈಚಾಚುವುದು ನಾಚಿಕೆಗೇಡಿನ ಸಂಗತಿ: ಡಿವಿಎಸ್

ಐಪಿಎಲ್ ಟಿಕೆಟ್‌ಗಾಗಿ ಯಾವುದೇ ಶಾಸಕರು ಭಿಕ್ಷೆ ಬೇಡಬಾರದು. ಚುನಾವಣೆಯಲ್ಲಿ ನೂರಾರು ಕೋಟಿ ರೂಪಾಯಿ ಸುರಿದು ಶಾಸಕರಾದವರು, ಈಗ ಒಂದು ಐಪಿಎಲ್ ಟಿಕೆಟ್‌ಗಾಗಿ ಹೀಗೆ ಕೈಚಾಚುತ್ತಿರುವುದು ನಾಚಿಕೆಗೇಡಿನ ಸಂಗತಿ. ಯಾವುದೇ ಜನಪ್ರತಿನಿಧಿ ಇಂತಹ ಕೆಲಸಕ್ಕೆ ಕೈಹಾಕಬಾರದು. ನಿಮ್ಮ ಕ್ಷೇತ್ರಕ್ಕೆ ಏನಾದರೂ ಅಭಿವೃದ್ಧಿ ಕೆಲಸಗಳು ಬೇಕಾದಾಗ, ಜನರಿಗೆ ಸಹಕಾರ ಬೇಕಾದಾಗ ಸರಕಾರದ ಮುಂದೆ ಬೇಕಿದ್ದರೆ ಭಿಕ್ಷೆ ಬೇಡಿ, ಅದರಲ್ಲಿ ತಪ್ಪಿಲ್ಲ. ಆದರೆ ವೈಯಕ್ತಿಕ ಮೋಜು – ಮಸ್ತಿಗಾಗಿ, ಐಪಿಎಲ್ ಪಂದ್ಯ ನೋಡಲು ಈ ರೀತಿ ವರ್ತಿಸುವುದು ಸರಿಯಲ್ಲ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಉದ್ಯೋಗಕ್ಕಿಲ್ಲ ಖಾತರಿ

← ಮೊದಲಪುಟದಿಂದ

ಆದರೆ ನರೇಗಾ ಯೋಜನೆಯನ್ನು ಕೇಂದ್ರ ಸಂಪೂರ್ಣವಾಗಿ ಕೈಬಿಟ್ಟಿರುವುದರಿಂದ, ಈ ಯೋಜನೆಯಡಿ ಯಾವುದೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ. ಎರಡು ಸರಕಾರಗಳು ಭಿನ್ನ ಆಲೋಚನೆಯಲ್ಲಿರುವುದರಿಂದ ಎರಡೂ ಯೋಜನೆ ಯಿಂದ ಉದ್ಯೋಗ ಖಾತ್ರಿ ಹಂಚಿಕೆ ಮಾಡಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಬೇಸಿಗೆಯೇ ನಿರ್ಣಾಯಕ: ಮಳೆಗಾಲದ ಸಮಯದಲ್ಲಿ ರೈತರು ಹಾಗೂ ಕೂಲಿ ಕಾರ್ಮಿಕರು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದರಿಂದ ನಿರುದ್ಯೋಗ ಸಮಸ್ಯೆ, ಗುಳೆ ಹೋಗುವ ಸಮಸ್ಯೆ ಹೆಚ್ಚಾಗುತ್ತಿರಲಿಲ್ಲ. ಆದ್ದರಿಂದ ಬೇಸಿಗೆ ಕಾಲದಲ್ಲಿ ರೈತರಿಗೆ, ಕೂಲಿ ಕಾರ್ಮಿಕರಿಗೆ ಕೆಲಸದ ಅಗತ್ಯವಿರುತ್ತದೆ. ಆದರೆ ಇದೀಗ ನರೇಗಾ ಯೋಜನೆಯಲ್ಲಿ ಯಾವುದೇ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುತ್ತಿಲ್ಲ. ಸರಕಾರಗಳ ನಡುವಿನ ಈ ಗೊಂದಲದಿಂದ, ಬೇಸಿಗೆ ಸಮಯದಲ್ಲಿ ಉದ್ಯೋಗದ ನಿರೀಕ್ಷೆಯಲ್ಲಿದ್ದವರಿಗೆ ಕೆಲಸ ಸಿಗದೇ ಹೋಗುವ ಆತಂಕ ಶುರುವಾಗಿದೆ. ಒಂದು ವೇಳೆ ರಾಜ್ಯ ಸರಕಾರವು ಕೇಂದ್ರದ ವಿಬಿ ರಾಮ್ ಜಿ ಕಾಯಿದೆಯನ್ನು ಮಳೆಗಾಲದ ಅಧಿವೇಶನದಲ್ಲಿ ಅಳವಡಿಸಿಕೊಂಡರೂ ಎಲ್ಲ ಪ್ರಕ್ರಿಯೆ ಪೂರ್ಣಗೊಂಡು, ಕಾಮಗಾರಿ ಕೈಗೆತ್ತಿಕೊಳ್ಳಲು ಕನಿಷ್ಠ ಮೂರ್‍ನಾಲ್ಕು ತಿಂಗಳು ಬೇಕಾಗುತ್ತದೆ. ಈ ಸಮಯದಲ್ಲಿ ಕೂಲಿ ಕೆಲಸದ ನಿರೀಕ್ಷೆಯಲ್ಲಿದ್ದ ಲಕ್ಷಾಂತರ ಜನರಿಗೆ ಆದಾಯಕ್ಕೆ ಹೊಡೆತ ಬೀಳಲಿದೆ ಎನ್ನುವ ಆತಂಕ ಶುರುವಾಗಿದೆ.

ಕಾಂಗ್ರೆಸ್ ಅಭ್ಯರ್ಥಿಗೆ 30000 ಮತ ಲೀಡ್

ದಾವಣಗೆರೆ: ಬಾಗಲಕೋಟೆ, ದಾವಣಗೆರೆ ದಕ್ಷಿಣ ಕೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲವು ನಿಶ್ಚಿತ. ದಾವಣಗೆರೆಯಲ್ಲಿ 30 ಸಾವಿರ ಮತಗಳ ಅಂತರದಲ್ಲಿ ಸಮರ್ಥ್ ಗೆಲವು ಸಾಧಿಸಲಿದ್ದಾರೆ ಎಂದು ಮುಖ್ಯ ಸಚೇತಕ ಸಲೀಂ ಅಹಮದ್ ವಿಶ್ವಾಸ ವ್ಯಕ್ತಪಡಿಸಿದರು.

ಸರ್ವೆ ಪ್ರಕಾರ ಕಾಂಗ್ರೆಸ್ ಅಭ್ಯರ್ಥಿಗೆ 30 ಸಾವಿರ ಲೀಡ್ ಸಿಗುವ ವಾತಾವರಣವಿದೆ. ಶಾಮನೂರು ಕುಟುಂಬದ ಅಭಿ ವೃದ್ಧಿ ಕಾರ್ಯಗಳು, ಕಾಂಗ್ರೆಸ್ ಸರಕಾರದ ಗ್ಯಾರಂಟಿ ಯೋಜನೆಗಳು ಕಾಂಗ್ರೆಸ್ ಅಭ್ಯರ್ಥಿಗೆ ವರದಾನವಾ ಗಲಿವೆ. ಮಹಿಳಾ ಸಬಲೀಕರಣ, ಅನ್ನಭಾಗ್ಯ, ಗೃಹ ಲಕ್ಷ್ಮೀ, ಗೃಹಜ್ಯೋತಿ ಸೇರಿ ನೂರಾರು ಯೋಜನೆ ಗಳನ್ನು ಕಾಂಗ್ರೆಸ್ ಸರಕಾರ ಜಾರಿಗೆ ತರುವ ಮೂಲಕ ಸರ್ವರಿಗೂ ಸಮಬಾಳು, ಸಮಪಾಲು ಕಲ್ಪಿಸಿದೆ ಎಂದರು.

ಪ್ರಸ್ತುತ ರಾಜ್ಯದ ಜನತೆಗೆ ಕಾಂಗ್ರೆಸ್ ಸರಕಾರ 6ನೇ ಭಾಗ್ಯವನ್ನು ಕಲ್ಪಿಸಿದ್ದು, ಈಗಾಗಲೇ ಬಡವರಿಗೆ 2.22 ಲಕ್ಷ ಪಟ್ಟಾ ನೀಡಿದ್ದೇವೆ. ಆದರೆ, ಕೇಂದ್ರ ಸರಕಾರ ಕಳೆದ 12 ವರ್ಷಗಳಿಂದ ನುಡಿದಂತೆ ನಡೆಯದೇ ಜನರಿಗೆ ನರಕದರ್ಶನ ಮಾಡಿಸಿದ್ದೇ ಅವರ ಸಾಧನೆ. ರಾಜ್ಯದ ವಿಷಯದಲ್ಲಿ ಕೇಂದ್ರ ಮಲತಾಯಿ ಧೋರಣೆ ಅನುಸರಿಸುತ್ತಿದೆ. ನರೇಗಾ ಹೆಸರು ಬದಲಿಸುವ ಮೂಲಕ ದ್ವೇಷ ರಾಜಕಾರಣ ಉತ್ತೇಜಿಸುತ್ತಿದೆ. ಆದರೆ, ಮುಂದಿನ ದಿನಗಳಲ್ಲಿ 'ನರೇಗಾ' ಹೆಸರು ವಾಪಸ್ ತರಲು ಕಾಂಗ್ರೆಸ್ ಮತ್ತೆ ಹೋರಾಟ ಆರಂಭಿಸಲಿದೆ. ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗಾಗಿ ಸಚಿವರು, ಶಾಸಕರು ಕಾರ್ಯಕರ್ತರ ರೀತಿ ಬೂತ್‌ಗಳಿಗೆ ತೆರಳಿ ಜನರಿಗೆ ಸರ್ಕಾರದ ಅಭಿವೃದ್ಧಿ ಕಾರ್ಯ ತಿಳಿಸುವ ಜತೆಗೆ ಭ್ರಷ್ಟ ಬಿಜೆಪಿಯ ಕುತಂತ್ರ ಬಯಲು ಮಾಡುತ್ತಿದ್ದು, ಈ ಬಾರಿ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲವು ನಿಶ್ಚಿತ ಎಂದರು.

ಕೊಪ್ಪಳದಲ್ಲಿ ಇಬ್ಬರು ಪೇದೆ ಲೋಕಾ ಬಲೆಗೆ

ಕೊಪ್ಪಳ: ನಗರದಲ್ಲಿನ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ಪೊಲೀಸ್ ಠಾಣೆಯ ಇಬ್ಬರು ಪೇದೆಗಳು ಲೋಕಾಯುಕ್ತರ ಬಲೆಗೆ ಬಿದ್ದಿದ್ದಾರೆ. ಮಾರುತಿ ಬ್ಯಾಳಿ ಹಾಗೂ ಚಂದಾಲಿಂಗ ಲೋಕಾಯುಕ್ತ ಪೊಲೀಸರ ದಾಳಿಗೆ ಬಿದ್ದಿರುವ ಪೇದೆಗಳು. ಅಟ್ರಾಸಿಟಿ ಪ್ರಕರಣದಲ್ಲಿ ಜಾಮೀನು ಕೊಡಿಸುವುದಾಗಿ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಮೆಹಬೂಬ್ ಪಾಷಾ ಎಂಬುವರ ಕಡೆಯಿಂದ ಫೋನ್ ಪೇ ಮೂಲಕ 15 ಸಾವಿರ ರು. ಪಡೆದು ಕೊಂಡಿದ್ದರು. ಈ ಹಿನ್ನೆಲೆ ಇಬ್ಬರು ಪೊಲೀಸ್ ಪೇದೆಗಳ ಮೇಲೆ ದೂರು ನೀಡಿದ್ದರು. ಮತ್ತೇ ಮೂರು ಸಾವಿರ ಹಣ ಪಡೆಯುವಾಗ ಲೋಕಾಯುಕ್ತರ ಬಲೆಗೆ ಬಿದ್ದಿದ್ದಾರೆ.

ಕೊಪ್ಪಳ ಲೋಕಾಯುಕ್ತ ಪೊಲೀಸರು ದಾಳಿ ಮಾಡಿದ್ದಾರೆ. ಇಬ್ಬರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಎಸ್‌ಡಿಸಿಸಿ ಬ್ಯಾಂಕ್ 20,226 ಕೋಟಿ ರು.ವಹಿವಾಟು

ಮಂಗಳೂರು: ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ 112 ವರ್ಷಗಳ ಸಮೃದ್ಧ ಪರಂಪರೆ ಹೊಂದಿರುವ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ (ಎಸ್‌ಡಿಸಿಸಿ) ಬ್ಯಾಂಕ್, 2025–26ನೇ ಹಣಕಾಸು ವರ್ಷದಲ್ಲಿ ₹20,226.19 ಕೋಟಿಗಳ ದಾಖಲೆ ವಹಿವಾಟು ನಡೆಸುವ ಮೂಲಕ ಹೊಸ ಇತಿಹಾಸ ನಿರ್ಮಿಸಿದೆ.

> **ಆಧುನಿಕ ತಂತ್ರಜ್ಞಾನ ಅಳವಡಿಕೆಯಲ್ಲಿ ಬ್ಯಾಂಕ್ ಮುಂಚೂಣಿಯಲ್ಲಿದ್ದು, ಯುಪಿಐ , ಐಎಂಪಿಎಸ್ ಮತ್ತು ಟ್ಯಾಬ್ ಬ್ಯಾಂಕಿಂಗ್ ಸೌಲಭ್ಯಗಳನ್ನು ನೀಡುತ್ತಿದೆ. ಗ್ರಾಹಕರು ತಮ್ಮ ಮೊಬೈಲ್ ಮೂಲಕವೇ ಹಣ ವರ್ಗಾವಣೆ ಮತ್ತು ಬಿಲ್ ಪಾವತಿಗಳನ್ನು ಸುಲಭವಾಗಿ ಮಾಡುತ್ತಿದ್ದಾರೆ.**
> **-ಡಾ.ಎಂ.ಎನ್.ರಾಜೇಂದ್ರ ಕುಮಾರ್,** ಎಸ್‌ಡಿಸಿಸಿ ಅಧ್ಯಕ್ಷ

ಈ ಕುರಿತು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಬ್ಯಾಂಕಿನ ಅಧ್ಯಕ್ಷರಾದ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಅವರು, ಕಳೆದ ಸಾಲಿನ 17,366.68 ಕೋಟಿ ವಹಿವಾಟಿಗೆ ಹೋಲಿಸಿದರೆ ಈ ಬಾರಿ ಶೇ 16.47ರಷ್ಟು ಅಭೂತಪೂರ್ವ ಏರಿಕೆ ಕಂಡುಬಂದಿದೆ. ಇದು ರಾಜ್ಯದ ಸಹಕಾರಿ ವಲಯದಲ್ಲೇ ಹೊಸ ದಾಖಲೆಯಾಗಿದೆ. ಬ್ಯಾಂಕಿನ ಲಾಭಾಂಶದಲ್ಲೂ ಗಣನೀಯ ಏರಿಕೆ ಕಂಡು ಬಂದಿದ್ದು, 2026ರ ಮಾರ್ಚ್ ಅಂತ್ಯಕ್ಕೆ ಬ್ಯಾಂಕ್ 131.14 ಕೋಟಿ ನಿವ್ವಳ ಲಾಭ ಗಳಿಸಿದೆ. ಇದು ಕಳೆದ ವರ್ಷದ ಲಾಭಕ್ಕಿಂತ ಶೇ.18.78ರಷ್ಟು ಹೆಚ್ಚಾಗಿದ್ದು, ರಾಜ್ಯದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳ ಪೈಕಿ ಸಾರ್ವಕಾಲಿಕ ದಾಖಲೆಯಾಗಿದೆ. 113 ಶಾಖೆಗಳ ಮೂಲಕ 9,264.64 ಕೋಟಿ ಠೇವಣಿ ಸಂಗ್ರಹಿಸಿದೆ. ಇದು ಕಳೆದ ವರ್ಷಕ್ಕಿಂತ ಶೇ 17.53ರಷ್ಟು ಪ್ರಗತಿಯಾ ಗಿದೆ. ಬ್ಯಾಂಕ್ ಒಟ್ಟು 9,766.75 ಕೋಟಿ ಮುಂಗಡ ನೀಡಿದ್ದು, ಅದರಲ್ಲಿ ಕೃಷಿ ಮತ್ತು ಕೃಷಿ ಅಭಿವೃದ್ಧಿ ಕ್ಷೇತ್ರಕ್ಕೆ 2,340.05 ಕೋಟಿ ಸಾಲ ಒದಗಿಸಲಾಗಿದೆ. ಕೃಷಿಯೇತರ ಕ್ಷೇತ್ರಕ್ಕೆ 7,426.70 ಕೋಟಿ ಸಾಲ ನೀಡುವ ಮೂಲಕ ಆರ್ಥಿಕ ಸಬಲೀಕರಣಕ್ಕೆ ಒತ್ತು ನೀಡಲಾಗಿದೆ. ವಿಶೇಷವೆಂದರೆ, ಕಳೆದ 31 ವರ್ಷಗಳಿಂದ ಕೃಷಿ ಸಾಲ ಮರುಪಾವತಿಯಲ್ಲಿ ಬ್ಯಾಂಕ್ ಸತತವಾಗಿ ಶೇ 100ರಷ್ಟು ಸಾಧನೆ ಮಾಡುತ್ತಾ ಬಂದಿದೆ. ಈ ನಿರಂತರ ಸಾಧನೆಯು ರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ದಾಖಲೆಯಾಗಿ ಗುರುತಿಸಿಕೊಂಡಿದೆ.

ಸುದ್ದಿಗೋಷ್ಠಿಯಲ್ಲಿ ಎಸ್‌ಡಿಸಿಸಿ ಅಧ್ಯಕ್ಷ ಡಾ.ಎಂ.ಎನ್.ರಾಜೇಂದ್ರ ಕುಮಾರ್ ಮಾತನಾಡಿದರು.

ಅಂಕದ ಬದಲು ಗ್ರೇಡಿಂಗ್ ವ್ಯವಸ್ಥೆ ವಿವಾದದಲ್ಲಿ ರಾಜಭವನ ಎಂಟ್ರಿಗೆ ಆಕ್ಷೇಪ

ಲೋಕಭವನ ಮುತ್ತಿಗೆಗೆ ಕರವೇ ಕರೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆಗೆ ಅಂಕಗಳ ಬದಲು ಗ್ರೇಡ್ ನೀಡುವ ನಿರ್ಧಾರವನ್ನು ಮರುಪರಿಶೀಲಿಸುವಂತೆ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿಗೆ ರಾಜ್ಯಪಾಲರು ಪತ್ರ ಬರೆದಿರುವುದಕ್ಕೆ ಕರ್ನಾಟಕ ರಕ್ಷಣಾ ವೇದಿಕೆಯು ಆಕ್ರೋಶ ವ್ಯಕ್ತಪಡಿಸಿದೆ.

ರಾಜ್ಯಪಾಲರ ಪತ್ರದ ಬಗ್ಗೆ ಕಿಡಿ ಕಾರಿರುವ ಕರವೇ ನಾರಾಯಣ ಗೌಡ ಅವರು, ರಾಜ್ಯಪಾಲರು ಸರಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿರುವ ಸಂಬಂಧ ಸೋಮವಾರ ಬೆಳಗ್ಗೆ 11 ಗಂಟೆಗೆ ಲೋಕಭವನಕ್ಕೆ ಮುತ್ತಿಗೆ ಹಾಕಲು ನಿರ್ಧರಿಸಿದ್ದೇವೆ. ಈ ವೇಳೆ ರಾಜ್ಯದ ಮೂಲೆ ಮೂಲೆಗಳಿಂದ ಕಾರ್ಯಕರ್ತರು ಆಗಮಿಸಲಿದ್ದಾರೆ. ಈ ಹಸ್ತಕ್ಷೇಪವು ಒಕ್ಕೂಟ ವ್ಯವಸ್ಥೆಯನ್ನು ಅಣಕಿಸುವಂತಿದೆ. ನಿಮ್ಮ ಅಧಿಕ ಪ್ರಸಂಗವನ್ನು ರಾಜ್ಯದ ಜನತೆ ಒಪ್ಪಿಕೊಳ್ಳುವುದಿಲ್ಲ. ರಾಜ್ಯಪಾಲರು ಸರಕಾರದ ಪದನಿಮಿತ್ತ ಮುಖ್ಯಸ್ಥರು ಎಂಬುದನ್ನು ನೀವು ಮರೆತಿದ್ದೀರಿ. ನೀವು ನಮ್ಮಿಂದ ನೇರವಾಗಿ ಆಯ್ಕೆಯಾದ ಜನಪ್ರತಿನಿಧಿಯಲ್ಲ. ಒಂದು ಸರಕಾರ ಬಹುಮತದೊಂದಿಗೆ ಸದೃಢವಾಗಿ ಕಾರ್ಯನಿರ್ವಹಿಸುತ್ತಿರುವಾಗ ಈ ರೀತಿ ಮಾಡುವುದು ತಪ್ಪು. ದೈನಂದಿನ ಆಡಳಿತದಲ್ಲಿ ಮೂಗು ತೂರಿಸಲು ನಿಮಗೆ ಯಾವುದೇ ನೈತಿಕ ಅಧಿಕಾರವಿಲ್ಲ, ಅದು ನಿಮ್ಮ ವ್ಯಾಪ್ತಿಯ ಕೆಲಸವೂ ಅಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ.

ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಕಾಲಕಾಲಕ್ಕೆ ಬದಲಾವಣೆ ಮಾಡುವ ಸಂವಿಧಾನಬದ್ಧ ಹಕ್ಕು ರಾಜ್ಯ ಸರಕಾರಕ್ಕಿದೆ. ಸರಕಾರ ಈಗ ಗ್ರೇಡಿಂಗ್ ವ್ಯವಸ್ಥೆ ಜಾರಿಗೆ ತರುತ್ತಿರುವುದಕ್ಕೆ ಸಾಕಷ್ಟು ಕಾರಣಗಳಿವೆ. ಇದರ ಸಾಧಕ ಬಾಧಕಗಳನ್ನು ನಮ್ಮ ಜನಪ್ರತಿನಿಧಿಗಳು ನೋಡಿಕೊಳ್ಳುತ್ತಾರೆ. ಬೆಂಗಳೂರು ಸ್ಥಳೀಯ ಭಾಷೆಗಳ ಸಂರಕ್ಷಣಾ ಸಂಘದವರು ನಿಮಗೆ ಕೊಟ್ಟಿದ್ದ ಮನವಿಗೆ ತುರ್ತಾಗಿ ಪ್ರತಿಕ್ರಿಯಿಸಿರುವುದನ್ನು ಕೇಳಿ ನಮಗೆ ಆಶ್ಚರ್ಯವಾಯಿತು. ಬೆಂಗಳೂರಿನಲ್ಲಿ ಇಂಥದ್ದೊಂದು ಸಂಘ ಇದೆ ಎಂಬುದೇ ನಮಗೆ ತಿಳಿದಿರಲಿಲ್ಲ. ಈ ರೀತಿಯ ನಾಟಕಗಳನ್ನು ನಾವು ಎಷ್ಟೋ ನೋಡಿದ್ದೇವೆ. ಇಂತಹ ಕುತಂತ್ರಗಳು ಕರ್ನಾಟಕಕ್ಕೆ ಹೊಸದೇನೂ ಅಲ್ಲ. ಮರೆಯಲ್ಲಿ ನಿಂತು ಬಾಣ ಬಿಡುವ ಈ ಹೇಡಿಗಳು ಬೀದಿಗೆ ಬರಲಿ ಎಂದು ನಾವೂ ಕಾಯುತ್ತಿದ್ದೇವೆ ಎಂದಿದ್ದಾರೆ.

ಹಿಂದಿ ಪರ ಲಾಬಿ ಸಲ್ಲ: ಕರವೇ: ತ್ರಿಭಾಷಾ ನೀತಿ ಅನ್ವಯ ಕನ್ನಡವನ್ನು ಮೂರನೇ ಭಾಷೆಯನ್ನಾಗಿ ಅಲ್ಲಿನ ಮಕ್ಕಳಿಗೆ ಕಲಿಸಲು ಹೇಳಿ. ನಿಮಗೆ ಆ ಧೈರ್ಯವಿಲ್ಲದಿದ್ದರೆ ಕನ್ನಡಿಗರ ಹಿತಾಸಕ್ತಿಗೆ ವಿರುದ್ಧವಾಗಿ ಕರ್ನಾಟಕದ ನೆಲದಲ್ಲಿ ನಿಂತು ಮಾತನಾಡಬೇಡಿ. ತೃತೀಯ ಭಾಷೆಯ ಮೇಲಿನ ಪ್ರೇಮವನ್ನು ಉತ್ತರ ಭಾರತದ ರಾಜ್ಯಗಳಲ್ಲಿ ಉಕ್ಕಿ ಹರಿಸಿ. ಪಾಪ, ಅಲ್ಲಿನ ಮಕ್ಕಳು ಇದುವರೆಗೆ ಎರಡೇ ಭಾಷೆಗಳನ್ನು ಓದಿಕೊಂಡು ಬಂದಿದ್ದಾರೆ. ನೀವು ಹಿಂದಿ ಸಾಮ್ರಾಜ್ಯ ಶಾಹಿಯ ಲಾಬಿಯ ಪರವಾಗಿ ಮಾತನಾಡುತ್ತಿದ್ದೀರಿ ಎಂಬುದು ನಮಗೆ ಚೆನ್ನಾಗಿ ಗೊತ್ತಿದೆ. ನಮ್ಮ ನೆಲದಲ್ಲಿ ನಿಮಗೆ ಐಶಾರಾಮಿ ವ್ಯವಸ್ಥೆ ಕಲ್ಪಿಸಿಕೊಟ್ಟಿದ್ದೇವೆ. ಕನ್ನಡಿಗರ ತೆರಿಗೆ ದುಡ್ಡಿನಲ್ಲಿ ರಾಜಭವನ ನಡೆಯುತ್ತಿದೆ. ಹೀಗಾಗಿ ತಿಂದ ಮನೆಗೆ ಕನ್ನ ಹಾಕುವುದು ಸರಿಯಲ್ಲ ಎಂದೂ ನಾರಾಯಣಗೌಡ ಎಚ್ಚರಿಸಿದ್ದಾರೆ.

ಲವ್ ಜಿಹಾದ್ ಪ್ರಕರಣ ಗರ್ಭಪಾತಕ್ಕೆ ಮಾತ್ರೆ ಬಳಕೆ

ಹುಬ್ಬಳ್ಳಿ: ಲವ್ ಜಿಹಾದ್ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ಹಲವು ಘಟನೆಗಳಿಗೆ ಹುಬ್ಬಳ್ಳಿಯಲ್ಲಿ ಸಾಕ್ಷಿಯಾಗಿವೆ. ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಎರಡು ಹಾಗೂ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಒಂದು ಪ್ರಕರಣ ದಾಖಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಮೊಬೈಲ್ ಹಾಗೂ ಇನ್ನಿತರ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದಾರೆ.

ಶುಕ್ರವಾರ ತಡರಾತ್ರಿ ಯುವತಿಯು ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಸಮೀರ್ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಿಸಿದ್ದಾರೆ. ಸಂಬಂಧಿಸಿ ಶನಿವಾರ ಅವರನ್ನು ಕೆಎಂಸಿ–ಆರ್‌ಐ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ನಡೆಸಲಾಯಿತು.

ಕೆಲವರನ್ನು ವಶಕ್ಕೆ ಪಡೆದ ಪೊಲೀಸರು ವಿಚಾರಣೆ ನಡೆಸಿ, ಕೆಲವು ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಈ ನಡುವೆಯೇ ಎರಡೂ ಕುಟುಂಬಗಳು ಅನ್ಯೂನ್ಯವಾಗಿ ಒಡನಾಡಿದ್ದು, ಹಬ್ಬದ ಸಂದರ್ಭದಲ್ಲಿ ಪರಸ್ಪರ ಪಾಲ್ಗೊಂಡಿರುವ ಹಾಗೂ ಯುವತಿ ಗರ್ಭನಿರೋಧಕ ಮಾತ್ರೆ ಸೇವಿಸಿದ್ದಳು ಎನ್ನಲಾದ ವಿಡಿಯೊ ಹಾಗೂ ಫೋಟೊಗಳು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆಯಾಗಿವೆ. ಪ್ರಕರಣಕ್ಕೆ ಸಂಬಂಧಿಸಿ ಈವರೆಗೆ ಮೂರು ಪ್ರಕರಣಗಳು ದಾಖಲಾಗಿವೆ. ಕೆಲವರು ಸಮೀರ್ ವಿರುದ್ಧ ತಾವು ಸಹ ದೂರು ನೀಡುವುದಾಗಿ ಹೇಳಿದ್ದು, ಪ್ರಕರಣ ದಾಖಲಿಸಿದರೆ ಅವುಗಳನ್ನು ಸಹ ತನಿಖೆ ನಡೆಸಲಾಗುವುದು ಎಂದು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಶನಿವಾರ ಮಾಧ್ಯಮಗಳಿಗೆ ತಿಳಿಸಿದರು. ಕಾನೂನು ನಿಯಮಕ್ಕನುಗುಣವಾಗಿ ಆರೋಪಿಗಳನ್ನು ಹಾಗೂ ಸಂಬಂಧ ಪಟ್ಟವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಯುವತಿ ಹೇಳಿಕೆ ಪ್ರಕಾರ, ಸಮೀರ್ ಸಹೋದರಿ ಹಾಗೂ ಅವರ ಪತಿ ಅವಳಿಗೆ, ಸಮೀರ್ ಜತೆ ಇರುವಂತೆ ಒತ್ತಡ ಹಾಕುತ್ತಿದ್ದರು ಎಂದು ತಿಳಿದು ಬಂದಿದೆ. ಅವರನ್ನು ಕರೆಸಿ ವಿಚಾರಣೆ ನಡೆಸಲಾಗುತ್ತಿದೆ ಎಂದರು.

ಲೋಕಾಯುಕ್ತ ಬಲೆಗೆ ಬಿದ್ದ ಕಂದಾಯ ನಿರೀಕ್ಷಕ ಚಂದ್ರಪ್ಪ

ದಾವಣಗೆರೆ: ತಾಲೂಕಿನ ನಾಗನೂರು ಗ್ರಾಮದ ಜಮೀನು ಹದ್ದುಬಸ್ತಿಗೆ ವೈದ್ಯರೊಬ್ಬರಿಂದ 50,000 ರು. ಲಂಚ ಪಡೆಯುತ್ತಿದ್ದ ಕಂದಾಯ ನಿರೀಕ್ಷಕ ಚಂದ್ರಪ್ಪ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಕಂದಾಯ ನಿರೀಕ್ಷಕರನ್ನು ವಶಕ್ಕೆ ಪಡೆದ ಲೋಕಾಯುಕ್ತ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ಲಂಚದ ರೂಪದಲ್ಲಿ ಪಡೆದ ಹಣವನ್ನು ಜಪ್ತಿ ಮಾಡಿದ್ದಾರೆ.

ವೈದ್ಯ ಡಾ.ಉಮೇಶ್ ಹಿರೇಮಠ ಅವರು ನಾಗನೂರು ಗ್ರಾಮದ ಸರ್ವೆ ನಂಬರ್ 158ರಲ್ಲಿ ಜಮೀನು ಹೊಂದಿದ್ದರು. ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದಿಂದ (ಧೂಡಾ) ಏಕನಿವೇಶನಕ್ಕೆ ಅನುಮೋದನೆ ಪಡೆದ ಬಳಿಕ ಪಕ್ಕದ ಜಮೀನಿನವರು ತಕರಾರು ವ್ಯಕ್ತಪಡಿಸಿದ್ದರು. ಇದರಿಂದ ಉಮೇಶ್ ಅವರು ಹದ್ದುಬಸ್ತಿಗೆ ತಾಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದರು.

ಮಾರ್ಚ್ 18ರಂದು ವೈದ್ಯರ ಖಾಸಗಿ ಆಸ್ಪತ್ರೆಗೆ ತೆರಳಿದ ಕಂದಾಯ ನಿರೀಕ್ಷಕ ಹದ್ದುಬಸ್ತು ಮಾಡಿ ಧೂಡಾಗೆ ವರದಿ ನೀಡಲು 50,000 ರು. ಲಂಚಕ್ಕೆ ಬೇಡಿಕೆ ಮುಂದಿಟ್ಟಿದ್ದರು. ಲಂಚ ನೀಡಲು ಇಷ್ಟಪಡದ ಉಮೇಶ್ ಅವರು ಮಾರ್ಚ್ 21ರಂದು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ಶನಿವಾರ ತಾಲೂಕು ಕಚೇರಿಯಲ್ಲಿ ವೈದ್ಯರಿಂದ ಲಂಚ ಪಡೆಯುತ್ತಿದ್ದ ವೇಳೆ ದಾಳಿ ನಡೆಸಿದ ಡಿವೈಎಸ್‌ಪಿ ಕಲಾವತಿ ನೇತೃತ್ವದ ಲೋಕಾಯುಕ್ತ ಪೊಲೀಸರ ತಂಡ ಕಂದಾಯ ನಿರೀಕ್ಷಕರನ್ನು ವಶಕ್ಕೆ ಪಡೆಯಿತು.

ಬಿಜೆಪಿ ನಾಯಕರಿಗೆ ಆಹ್ವಾನವಿಲ್ಲ | ಸರಕಾರಕ್ಕೆ ಗೌಪ್ಯ ಸಭೆಯ ಮಾಹಿತಿ ಇಲ್ಲ

ಕೇಂದ್ರ ಗೃಹ ಸಚಿವರ ನಿಗೂಢ ಭೇಟಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರದ ವಿಧಾನಸಭಾ ಉಪಚುನಾವಣೆ ಮಧ್ಯೆಯೇ ಪಕ್ಷದ ನಾಯಕರಾದಿಯಾಗಿ ಯಾರಿಗೂ ಮಾಹಿತಿ ನೀಡದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಗೌಪ್ಯ ಸಭೆ ನಡೆಸಿ ದೆಹಲಿಗೆ ತೆರಳಿದ್ದಾರೆ.

ರಾಷ್ಟ್ರೀಯ ಭದ್ರತೆ ವಿಷಯದಿಂದಾಗಿ ಅತ್ಯಂತ ಗೌಪ್ಯವಾಗಿ ನಡೆದ ಈ ಧಾರ್ಮಿಕ ಸಭೆಯಲ್ಲಿ ಕೇವಲ ಐದಾರು ಪ್ರಮುಖರಿಗಷ್ಟೇ ಸೀಮಿತವಾಗಿತ್ತು ಎನ್ನಲಾಗಿದೆ. ಭಾರತದ ವಿರುದ್ಧ ದೇಶ ಹಾಗೂ ವಿದೇಶದಲ್ಲಿ ನಡೆಯುತ್ತಿರುವ ಅನೇಕ ಮಸಲತ್ತುಗಳು ಹಾಗೂ ಗೌಪ್ಯತೆಯ ದೃಷ್ಟಿಯಿಂದ ಹೇಳಲಾಗದ ಅನೇಕ ವಿಚಾರಗಳ ಬಗ್ಗೆ ಸಾಧುಸಂತರೊಂದಿಗೆ ಕೇಂದ್ರ ಸಚಿವರು ನಿಗೂಢವಾದ ಚರ್ಚೆ ನಡೆಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲದ ನಗರೂರಿನಲ್ಲಿನ ಬಿಜಿಎಸ್ ಮೆಡಿಕಲ್ ಕಾಲೇಜ್ ಆವರಣದಲ್ಲಿ ಧಾರ್ಮಿಕ ಕಾರ್ಯಕ್ರಮ ಶನಿವಾರ ಆಯೋಜನೆಗೊಂಡಿತ್ತು. ಶುಕ್ರವಾರ ತಡರಾತ್ರಿಯವರೆಗೂ ಅಮಿತ್ ಶಾ ಬರುವುದು ರಾಜ್ಯ ಬಿಜೆಪಿ ನಾಯಕರ ಅರಿವಿಗೇ ಹೋಗಲಿ ರಾಜ್ಯ ಸರಕಾರಕ್ಕೂ ಇದರ ಬಗ್ಗೆ ಮಾಹಿತಿ ಇರಲಿಲ್ಲ. ಶುಕ್ರವಾರ ಗೌಪ್ಯ ಸ್ಥಳದಲ್ಲಿ ತಂಗಿದ್ದ ಕೇಂದ್ರ ಗೃಹ ಸಚಿವರು ಶನಿವಾರ ಕೆಲವೇ ಕೆಲವು ಸಾಧು ಸಂತರ ಸಮಾಗಮದಲ್ಲಿ ನಡೆದ ಗೌಪ್ಯ ಸಭೆಯಲ್ಲಿ ಭಾಗವಹಿಸಿ ಮಹತ್ವದ ಮಾಹಿತಿಯನ್ನು ದೆಹಲಿಗೆ ಕೊಂಡೊಯ್ದಿದ್ದಾರೆ ಎನ್ನಲಾಗಿದೆ.

ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಕೇಂದ್ರ ಸಚಿವ ಅಮಿತ್ ಶಾ ಅವರನ್ನು ಶುಕ್ರವಾರ ತಡರಾತ್ರಿ ಸ್ವಾಗತ ಮಾಡಿದ ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸಂಸದ ಪಿ.ಸಿ.ಮೋಹನ್ ಹಾಗೂ ಪ್ರಮುಖರು ಇದ್ದರು.

ಭೇಟಿ ಕುತೂಹಲ

ಆದಿಚುಂಚನಗಿರಿ ಮಠದ ಬಿಜಿಎಸ್ ಮೆಡಿಕಲ್ ಕಾಲೇಜಿನಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಅಮಿತ್ ಶಾ, ರಾಜ್ಯಕ್ಕೆ ಆಗಮಿಸಿದ್ದರೂ, ರಾಜ್ಯ ಬಿಜೆಪಿ ನಾಯಕರು ಅವರನ್ನು ಸ್ವಾಗತಿಸಲು ಭರ್ಜರಿ ಸಿದ್ಧತೆ ಮಾಡಿಕೊಂಡಿದ್ದರು. ಕೇವಲ ವಿಮಾನ ನಿಲ್ದಾಣದಲ್ಲಿ ಸ್ವಾಗತಕ್ಕೆ ಮಾತ್ರ ಸೀಮಿತವಾಗಿದ್ದು, ನಂತರ ಶುಕ್ರವಾರ ರಾತ್ರಿ ಎಲ್ಲಿ ತಂಗಿದ್ದರು ಎಂಬ ಮಾಹಿತಿ ಯಾರಿಗೂ ತಿಳಿದಿಲ್ಲ. ಬಿಜೆಪಿ ನಾಯಕರು ಭಿನ್ನಮತ ಬದಿಗಿಟ್ಟು ಪ್ರಚಾರದಲ್ಲಿ ತೊಡಗಿದ್ದು, ಶಾ ಅವರನ್ನು ಭೇಟಿಯಾಗಿ ಮಾರ್ಗದರ್ಶನ ಪಡೆಯುವ ನಿರ್ಧಾರ ಮಾಡಿದ್ದರು. ಆದರೆ, ಯಾವುದೇ ಚರ್ಚೆಗೆ ರಾಜ್ಯದ ನಾಯಕರೊಂದಿಗೆ ಶಾ ಚರ್ಚಿಸಿಲ್ಲ, ಹೀಗಾಗಿ ಶಾ ಭೇಟಿ ನಿಗೂಢವಾಗಿದೆ.

ಸಮಾಚಾರ ಸಣ್ಣದಲ್ಲ

ಕಾರು ಪಲ್ಟಿಯಾಗಿ 9 ವರ್ಷದ ಬಾಲಕಿ ಸಾವು

ಚಿಕ್ಕಬಳ್ಳಾಪುರ: ಚಾಲಕನ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಕಾರು ಡಿಕ್ಕಿ ಹೊಡೆದು ಪಲ್ಟಿಯಾದ ಪರಿಣಾಮ 9 ವರ್ಷದ ಬಾಲಕಿ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಚಿಕ್ಕಬಳ್ಳಾಪುರ ತಾಲೂಕಿನ ಕೊತ್ತನೂರು ಗ್ರಾಮದ ಬಳಿ ನಡೆದಿದೆ. ಮೃತ ಬಾಲಕಿಯನ್ನು ಅಂಕಿತಾ (9) ಎಂದು ಗುರುತಿಸಲಾಗಿದೆ. ಬಾಲಕಿ ಕಲಬುರಗಿ ಜಿಲ್ಲೆಯ ಚಿಂಚೋಳಿ ಮೂಲದ ರಾಜೇಂದ್ರ ಹಾಗೂ ಭಾಗ್ಯಮ್ಮ ದಂಪತಿ ಮಗಳು ಎಂದು ತಿಳಿದುಬಂದಿದೆ. ಕುಟುಂಬ ಹೊಸಕೋಟೆಯಲ್ಲಿ ವಾಸವಾಗಿತ್ತು. ಜಾತ್ರೆಗೆ ತೆರಳಿದ್ದ ಭಾಗ್ಯಮ್ಮ ಸಂಬಂಧಿಕ ಮಹೇಶ್ ಎಂಬವರಿಗೆ ಸೇರಿದ ಸ್ವಿಫ್ಟ್ ಡಿಜೈರ್ ಕಾರಿನಲ್ಲಿ ಮಕ್ಕಳೊಂದಿಗೆ ಬೆಂಗಳೂರಿಗೆ ವಾಪಸ್ಸಾಗುತ್ತಿದ್ದರು. ಈ ವೇಳೆ ಅಪಘಾತ ಸಂಭವಿಸಿದೆ. ಲಾರಿ ಓವರ್ ಟೇಕ್ ಮಾಡುವಾಗ ಚಾಲಕನ ನಿಯಂತ್ರಣ ತಪ್ಪಿ ಕಾರು ಡಿವೈಡರ್‌ಗೆ ಡಿಕ್ಕಿಹೊಡೆಗಿದೆ. ಈ ವೇಳೆ ಬಾಲಕಿ ಸಾವನ್ನಪ್ಪಿದ್ದು, ಉಳಿದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಸಂಬಂಧ ಚಿಕ್ಕಬಳ್ಳಾಪುರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಕ್ಷ ವಿರೋಧಿಯಲ್ಲ: ಜಬ್ಬಾರ್ ಸ್ಪಷ್ಟನೆ

ದಾವಣಗೆರೆ: ಅನಾರೋಗ್ಯದ ಕಾರಣದಿಂದ ನಾನು ಚುನಾವಣಾ ಪ್ರಚಾರದಲ್ಲಿ ಭಾಗವಹಿಸಲ್ಲ ಹೊರತು ಪಕ್ಷಕ್ಕಾಗಿ ದುಡಿಯುವುದನ್ನು ನಿಲ್ಲಿಸಿಲ್ಲ. ನಾನು ಪಕ್ಷ ವಿರೋಧಿಯಲ್ಲ ಎಂದು ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಸ್ಪಷ್ಟನೆ ನೀಡಿದರು. ದಕ್ಷಿಣ ವಿಧಾನಸಭಾ ಕ್ಷೇತ್ರದ ಚುನಾವಣಾ ಕಣದಲ್ಲಿ ಅನಾವಶ್ಯಕ ಗೊಂದಲದ ಹೇಳಿಕೆಗಳು ಹರಿದಾಡುತ್ತಿರುವ ಹಿನ್ನೆಲೆ ತಮ್ಮ ನಿಲುವು ಸ್ಪಷ್ಟಪಡಿಸಿದ ಅವರು, ತನಗೆ ಹುಷಾರಿಲ್ಲದ ಕಾರಣ ಸಿಎಂ ಸಿದ್ದರಾಮಯ್ಯರು ಬಂದಾಗ ಬಂದಿರಲಿಲ್ಲ. ಜ್ವರ, ಕೆಮ್ಮು, ನೆಗಡಿ ಇತ್ತು. ಮೈಯಲ್ಲಿ ಹುಷಾರಿಲ್ಲದ ಕಾರಣ ಹೋಗಿರಲಿಲ್ಲ. ಹಾಗೆಂದ ಮಾತ್ರಕ್ಕೆ ನಾನೇನೂ ಪಕ್ಷ ವಿರೋಧಿ ಅಲ್ಲ. ಹೈಕಮಾಂಡ್ ನಿರ್ಧಾರಕ್ಕೆ ಬದ್ಧನಿದ್ದೇನೆ. ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರೂ ಇದುವರೆಗೂ ನಮ್ಮನ್ನು ಪ್ರಚಾರಕ್ಕೆ ಸೌಜನ್ಯಕ್ಕಾದರೂ ಕರೆದಿಲ್ಲ ಎಂದರು.

ತುಮಕೂರು: ಮಹಿಳಾ ಪಿಎಸ್‌ಐ ನಾಪತ್ತೆ

ತುಮಕೂರು: ಇಲ್ಲಿನ ಹೊಸ ಬಡಾವಣೆ ಪೊಲೀಸ್ ಠಾಣೆ ಪಿಎಸ್‌ಐ ಮಂಗಳಮ್ಮ ಕಾಣೆಯಾಗಿದ್ದಾರೆ. ಅವರಿಗಾಗಿ ತೀವ್ರ ಹುಡುಕಾಟ ನಡೆಸಿದ ಮಗಳು, ಪತ್ತೆಯಾಗದಿದ್ದಾಗ ಹೊಸ ಬಡಾವಣೆ ಠಾಣೆಗೆ ತೆರಳಿ ಕಾಣೆಯಾದ ಬಗ್ಗೆ ದೂರು ದಾಖಲಿಸಿದ್ದಾರೆ. ಏ.3ರಂದು ಡಿವೈಎಸ್‌ಪಿ ಕಚೇರಿಯಲ್ಲಿ ಸಭೆಗೆ ಮಂಗಳಮ್ಮ ಬಂದಿದ್ದರು. ಈ ವೇಳೆ ಮನೆಯಿಂದ ಕರೆ ಬಂದಿತ್ತು. ಬಳಿಕ ಅಲ್ಲಿಂದ ಠಾಣೆಗೆ ತೆರಳಿ, ಸಮವಸ್ತ್ರ ಬದಲಿಸಿ, ಸಿವಿಲ್ ಡ್ರೆಸ್‌ನಲ್ಲಿ ಹೊರಗೆ ತೆರಳಿದ್ದರು. ಇತ್ತೀಚೆಗಷ್ಟೇ ಮಂಗಳಮ್ಮ ಪುತ್ರಿಗೆ ಡಿವೋರ್ಸ್ ಆಗಿತ್ತು. ಕೆಲ ದಿನ ಗಳಿಂದ ತಾಯಿ ಮಗಳು ಒಟ್ಟಿಗೆ ವಾಸವಿದ್ದರು. ಕೌಟುಂಬಿಕ ಕಲಹ ಹಿನ್ನೆಲೆ ಮನನೊಂದು ಮನೆಬಿಟ್ಟು ಹೋಗಿರುವ ಶಂಕೆ ವ್ಯಕ್ತವಾಗಿದೆ. ನಾಪತ್ತೆಯಾದ ಪಿಎಸ್‌ಐಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ





- **ಸ್ಥಳ ವಾರ್ಡ್ ನಂ.25 ಒಕ್ಕಲಿಗರ ಭವನ ರಸ್ತೆ**
- **ಸಮಸ್ಯೆಯೇನು..?** ರಸ್ತೆ ಮಟ್ಟಕ್ಕಿಂತ ದೊಡ್ಡದಿರುವ ಮ್ಯಾನ್‌ಹೋಲ್ ಸರಿಪಡಿಸುವ ಬಗ್ಗೆ.
- **ಪರಿಹಾರ:** ಚಿಕ್ಕಮಗಳೂರು ನಗರದ ವಾರ್ಡ್ ನಂ.25 ಒಕ್ಕಲಿಗರ ಭವನ ರಸ್ತೆಯಲ್ಲಿ ರಸ್ತೆಯ ಮಟ್ಟಕ್ಕಿಂತ ಹೆಚ್ಚಿರುವ ಮ್ಯಾನ್‌ಹೋಲ್ ಅನ್ನು ದುರಸ್ತಿ ಮಾಡಿಸಲು ಆಗ್ರಹಿಸಿ ಸ್ಥಳೀಯರೊಬ್ಬರು ಸಿಎಂ ಕಚೇರಿಗೆ ದೂರವಾಣಿ ಕರೆ ಮೂಲಕ ಅಹವಾಲು ಸಲ್ಲಿಸಿದ್ದರು. ಸಿಎಂ ಕಚೇರಿ ಸೂಚನೆಯಂತೆ ಸ್ಥಳಕ್ಕೆ ನಗರಸಭಾ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ, ಮ್ಯಾನ್‌ಹೋಲ್ ಅನ್ನು ದುರಸ್ತಿ ಮಾಡಿಸಿದ್ದಾರೆ.

ದಿನ ವಿಶೇಷ

05 ಏಪ್ರಿಲ್ 2026 ಭಾನುವಾರ

» ಸೂರ್ಯಾಸ್ತ	: 6-41
» ತಿಥಿ	: ತೃತೀಯ
» ನಕ್ಷತ್ರ	: ವಿಶಾಖ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ವಸಂತ
» ಮಾಸಡ	: ಚೈತ್ರ
» ಪಕ್ಷ	: ಕೃಷ್ಣಪಕ್ಷ

ಗ್ಯಾಸ್ ಅಭಾವ: ಆಟೋ ಚಾಲಕರು ಕಣ್ಣೀರು

ಮಧ್ಯಪ್ರಾಚ್ಯ ಯುದ್ಧ ಇಂಧನ ಕ್ಷೇತ್ರಕ್ಕೆ ಬಲವಾದ ಪೆಟ್ಟು ಕೊಟ್ಟಿದ್ದು, ಸಿಎನ್‌ಜಿ, ಎಲ್‌ಪಿಜಿ ಗ್ಯಾಸ್ ಸಿಗದೆ ಸಾಕಷ್ಟು ಸಮಸ್ಯೆಗಳು ಉಲ್ಬಣಿಸಿವೆ. ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಆಟೋಗಳಿಗೆ ಸಿಎನ್‌ಜಿ, ಎಲ್‌ಪಿಜಿ ಗ್ಯಾಸ್ ಸಿಗುತ್ತಿಲ್ಲ. ಒಂದು ಕೆ.ಜಿ.ಗ್ಯಾಸ್ ತುಂಬಿಸಿಕೊಳ್ಳಲು ಸ್ಟೇಷನ್‌ಗಳ ಮುಂದೆ ಗಂಟೆಗಟ್ಟಲೇ ಸರತಿ ಸಾಲಿನಲ್ಲಿ ನಿಲ್ಲಬೇಕಾದ ಸ್ಥಿತಿ ಬಂದಿದೆ. ವ್ಯಾಪಾರ ಇಲ್ಲದೆ ಸಂಕಷ್ಟಕ್ಕೆ ಸಿಲುಕಿರುವ ಚಾಲಕರು ಕಣ್ಣೀರು ಹಾಕುತ್ತಿದ್ದಾರೆ.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ತಲೆದೋರಿರುವ ಎಲ್‌ಪಿಜಿ ಬಿಕ್ಕಟ್ಟಿನ ನೇರ ಪರಿಣಾಮ ಆಟೋ ಚಾಲಕರ ಮೇಲಾಗಿದ್ದು, ಎಲ್‌ಪಿಜಿ ಪೂರೈಕೆ ಇಲ್ಲದೆ ನಗರದ ಹಲವು ಗ್ಯಾಸ್ ಸ್ಟೇಷನ್‌ಗಳು ಬಂದ್ ಆಗಿದೆ.

ನಗರದಲ್ಲಿ ಈಗಾಗಲೇ ಅರ್ಧದಷ್ಟು ಗ್ಯಾಸ್ ಸ್ಟೇಷನ್‌ಗಳು ಮುಚ್ಚಲ್ಪಟ್ಟಿದ್ದು, ಈ ಸಮಸ್ಯೆ ಹೀಗೆ ಮುಂದುವರಿದರೆ ಮುಂದಿನ ದಿನಗಳಲ್ಲಿ ಎಲ್‌ಪಿಜಿ ಸಂಕಷ್ಟವು ವೃದ್ಧಿಯಾಗುವ ಸಾಧ್ಯತೆಯಿದೆ. ನಗರದಲ್ಲಿ ಸದ್ಯ ಲಭ್ಯವಿರುವ ಗ್ಯಾಸ್ ಸ್ಟೇಷನ್‌ಗಳ ಮುಂದೆ ಆಟೋಗಳು ಸರತಿ ನಿಂತಿರುವುದು ದಿನನಿತ್ಯದ ದೃಶ್ಯವಾಗಿದ್ದು, ಮುಂಜಾನೆಯಿಂದಲೇ ಗ್ಯಾಸ್ ಸ್ಟೇಷನ್‌ಗಳ ಮುಂದೆ ಕ್ಯೂ ನಿಲ್ಲುವಂತಹ ಸ್ಥಿತಿ ನಿರ್ಮಾಣವಾಗಿದೆ. ಎಲ್‌ಪಿಜಿ ದರದಲ್ಲೂ ಭಾರೀ ಪ್ರಮಾಣದ ಏರಿಕೆ ಉಂಟಾಗಿದ್ದು, ಸರಕಾರಿ ಸಂಸ್ಥೆಗಳಾದ ಇಂಡೇನ್, ಎಚ್‌ಪಿ ಹಾಗೂ ಭಾರತ್ ಪೆಟ್ರೋಲಿಯಂ ಲೀಟರ್‌ಗೆ ಸುಮಾರು 85 ದರದಲ್ಲಿ ಎಲ್‌ಪಿಜಿಯನ್ನು ಮಾರಾಟ ಮಾಡುತ್ತಿದೆ. ಆದರೆ ಖಾಸಗಿ ಏಜೆನ್ಸಿಗಳು ಆಟೋ ಚಾಲಕರಿಂದ 120 ರಿಂದ 125 ರು. ವರೆಗೆ ವಸೂಲಿ ಮಾಡುತ್ತಿವೆ ಎಂಬ ಆರೋಪವೂ ಕೇಳಿ ಬರುತ್ತಿವೆ. ಈ ಹಿಂದೆ ಎಲ್‌ಪಿಜಿ ದರ ಪ್ರತಿ ಲೀಟರ್‌ಗೆ ಸುಮಾರು 58ರು. ಇತ್ತು.

ಆಟೋ ಚಾಲಕರ ಅಳಲು: ಎಲ್‌ಪಿಜಿ ಕೊರತೆಯಿಂದ ಆಟೋ ಚಾಲಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಎಲ್‌ಪಿಜಿ ಕೊರತೆ ಮತ್ತಷ್ಟು ಎದುರಾದರೆ ಮುಂದಿನ ದಿನಗಳಲ್ಲಿ ಆಟೋ ಚಾಲಕರ ಜೀವನ ದುಸ್ತರ ಆಗುವ ಸಾಧ್ಯತೆ ಇದೆ. ಇದರ ಮತ್ತೊಂದು ಪರಿಣಾಮ ಪ್ರಯಾಣಿಕರ ಮೇಲೆ ಆಗುತ್ತಿದೆ. ಕೆಲವು ಆಟೋ ಚಾಲಕರು ದುಪ್ಪಟ್ಟು ಹಣ ವಸೂಲಿ ಮಾಡುತ್ತಿದ್ದಾರೆ.

ಎಲ್‌ಪಿಜಿ ಕೊರತೆಗೆ ಪ್ರಮುಖ ಕಾರಣ, ಬೆಂಗಳೂರು ಮತ್ತು ರಾಜ್ಯದ ಇತರ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹಲವು ಖಾಸಗಿ ಆಟೋ ಎಲ್‌ಪಿಜಿ ಬಂಕ್‌ಗಳು ಏಕಾಏಕಿ ಮುಚ್ಚಲ್ಪಟ್ಟಿದ್ದು ಅಥವಾ ಭಾಗಶಃ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದು. ಖಾಸಗಿ ಬಂಕ್‌ಗಳು ಬಾಗಿಲು ಹಾಕಿದ್ದರಿಂದ, ಗ್ಯಾಸ್ ತುಂಬಿಸಿಕೊಳ್ಳಲು ಇಡೀ ಆಟೋ ರಿಕ್ಷಾಗಳ ಸಮೂಹ ಬೆರಳೆಣಿಕೆಯಷ್ಟಿದ್ದ ಐಒಸಿಎಲ್ ಬಂಕ್‌ಗಳತ್ತ ಮುಖ ಮಾಡಿತ್ತು. ಇದರಿಂದಾಗಿ ಕೆಲವೇ ಗಂಟೆಗಳಲ್ಲಿ ಅನಿಲದ ದಾಸ್ತಾನು ಖಾಲಿಯಾಗಿದೆ.

ದರ ಏರಿಕೆ ಖಂಡನೆ

ಕಲಬುರಗಿ: ನಗರದಲ್ಲಿ ಆಟೋ ಎಲ್‌ಪಿಜಿ ತೀವ್ರ ಅಭಾವ ಹಾಗೂ ದರ ಏರಿಕೆ ಖಂಡಿಸಿ ಕಲ್ಯಾಣ ಕರ್ನಾಟಕ ಆಟೋ ಚಾಲಕರ ಸಂಘದ ನೇತೃತ್ವದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು. ನಗರದ ಎಸ್‌ವಿಪಿ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ಮೆರವಣಿಗೆ ನಡೆಸಿದ ನೂರಾರು ಚಾಲಕರು, ಸರಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲೆಯಲ್ಲಿ 14 ಎಲ್‌ಪಿಜಿ ಬಂಕ್‌ಗಳು ಬಹುತೇಕ ಬಂದ್ ಆಗಿವೆ.

ಗ್ಯಾಸ್ ಇಲ್ಲವೇ ಇಲ್ಲ

ವಿಜಯಪುರ: ನಗರದ ಗ್ಯಾಸ್ ವಿತರಣಾ ಕೇಂದ್ರದಲ್ಲಿ ಗ್ಯಾಸ್ ಪೂರೈಕೆ ಇಲ್ಲ. ಹೀಗಾಗಿ ಬಹುತೇಕ ಆಟೋ ಚಾಲಕರು ಆಟೋ ಮನೆಯಲ್ಲಿ ನಿಲ್ಲಿಸುವಂತಾಗಿದೆ. ನಗರದಲ್ಲಿ ಸಾವಿರಾರು ಸಂಖ್ಯೆಯಲ್ಲಿರುವ ಆಟೋ ಚಾಲಕರು ಆಟೋ ಮನೆಯಲ್ಲಿಟ್ಟರೆ, ಬಾಡಿಗೆ ಆಧರಿಸಿ ಆಟೋ ಓಡಿಸುವವರು ಆಟೋ ಮಾಲೀಕರಿಗೆ ಒಪ್ಪಿಸಿ ಚಿಂತಾಕ್ರಾಂತವಾಗಿ ಕುಳಿತು ಬಿಟ್ಟಿದ್ದಾರೆ. ನಗರದಲ್ಲಿ ಐದಕ್ಕಿಂತ ಹೆಚ್ಚು ಗ್ಯಾಸ್ ವಿತರಣಾ ಕೇಂದ್ರಗಳಿವೆ, ಎಲ್ಲಿಯೂ ಗ್ಯಾಸ್ ಪೂರೈಕೆ ಇಲ್ಲ.

ವಾಟಾಳ್ ಹೋರಾಟ

ರಾಮನಗರ: ಗ್ಯಾಸ್ ಸಮಸ್ಯೆ ಬಗೆಹರಿಸದ ಸರಕಾರದ ವಿರುದ್ಧ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಪ್ರತಿಭಟನೆ ನಡೆಸಿದರು. ರಾಮನಗರದ ಐಜೂರು ವೃತ್ತದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರದ ವಿರುದ್ಧ ತಮಟೆ ಚಳವಳಿ ನಡೆಸಿದ್ದಾರೆ. ಗ್ಯಾಸ್ ಸಮಸ್ಯೆ ಬಗೆಹರಿಸುವಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ವಿಫಲವಾಗಿವೆ. ರಾಜ್ಯದಲ್ಲಿ ಆಡಳಿತ, ವಿಪಕ್ಷಗಳು ಚುನಾವಣೆಯಲ್ಲಿ ಮುಳುಗಿವೆ ಎಂದು ಕಿಡಿಕಾರಿದರು.

ಪರಿಹಾರ ಭರವಸೆ

ಬೆಂಗಳೂರು: ಬೇಡಿಕೆ ನಿಭಾಯಿಸಲು ರಾಜ್ಯಾದ್ಯಂತ ಆಟೋ ಎಲ್‌ಪಿಜಿ ಪೂರೈಕೆ ಹೆಚ್ಚಿಸಲು ಕ್ರಮ ಕೈಗೊಳ್ಳಲು ಇಂಡಿಯನ್ ಆಚಯಿಲ್ ಕಾರ್ಪೊರೇಷನ್ ಲಿಮಿಟೆಡ್ ಪ್ರಕಟಣೆ ಹೊರಡಿಸಿದೆ. ಈ ಬಿಕ್ಕಟ್ಟನ್ನು ಪರಿಹರಿಸುವ ನಿಟ್ಟನಲ್ಲಿ ಐಒಸಿಎಲ್ ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇಂಡಿಯನ್ ಆಯಿಲ್ ತನ್ನ 55 ಆಟೋ ಎಲ್‌ಪಿಜಿ ಡಿಸ್ಪೆನ್ಸಿಂಗ್ ಸ್ಟೇಷನ್ ಮೂಲಕ ಆಟೋ ಮತ್ತು ಎಲ್‌ಪಿಜಿ ಚಾಲಿತ ಕಾರುಗಳ ಇಂಧನ ಅಗತ್ಯಗಳನ್ನು ಪೂರೈಸುತ್ತಿದೆ.

ಗ್ಯಾಸ್ ಲಭ್ಯ

ಶಿರಸಿ: ನಗರದ ಸಾರಿಗೆ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಆಟೋ ರಿಕ್ಷಾಗಳ ಇಂಧನ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಉಂಟಾಗಿಲ್ಲ ಎಂಬ ಸಮಾಧಾನಕರ ಸಂಗತಿ ಹೊರಬಿದ್ದಿದೆ. ಶಿರಸಿ ನಗರದಲ್ಲಿ ಒಟ್ಟು ಅಂದಾಜು 1200 ಆಟೋಗಳಿದ್ದು, ಅವುಗಳಲ್ಲಿ ಶೇ. 90 ರಷ್ಟು ಅಂದರೆ ಬಹುತೇಕ ಎಲ್ಲವೂ ಎಲ್‌ಪಿಜಿ ಇಂಧನವನ್ನೇ ಅವಲಂಬಿಸಿವೆ. ಶಿರಸಿ ನಗರದ 2 ಎಲ್‌ಪಿಜಿ ಬಂಕ್‌ಗಳ ಪೈಕಿ ಸದ್ಯ ಒಂದು ಬಂಕ್‌ನಲ್ಲಿ ಅನಿಲ ಲಭ್ಯವಿದೆ.

ಕೇಂದ್ರದ ಮೇಲೆ ಆರೋಪ ಸಲ್ಲ

ಕೊಪ್ಪಳ: ರಾಜ್ಯದಲ್ಲಿ ಆಟೋ ಚಾಲಕರಿಗೆ ಸಮಸ್ಯೆಯಾಗಿದ್ದು, ಈ ಸಮಸ್ಯೆ ನಾವು ಯಾರೂ ಬಯಸಿ ಬಂದಿರೋದಲ್ಲ. ಯುದ್ಧದ ಹಿನ್ನೆಲೆಯಲ್ಲಿ ಕೆಲ ಸಮಸ್ಯೆಗಳು ಉದ್ಭವವಾಗಿವೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು.

ಕೊಪ್ಪಳ ತಾಲೂಕಿನ ಹಿಟ್ನಾಳ್ ಟೋಲ್ ಗೇಟ್ ಬಳಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಯಾವುದೇ ಸರಕಾರ ಇದ್ದರೂ ಇಂತಹ ಪರಿಸ್ಥಿತಿಯಲ್ಲಿ ಜನ ಸಾಮಾನ್ಯರಿಗೆ ತೊಂದರೆ ಆಗದಂತೆ ನೋಡಿಕೊಳ್ಳೋದು ನಮ್ಮ ಧರ್ಮ. ಆದರೆ, ಈಗಿನ ಪರಿಸ್ಥಿತಿಯಲ್ಲಿ ಮೋದಿ ನೇತೃತ್ವದಲ್ಲಿ ಜನ ಸಾಮಾನ್ಯರಿಗೆ ಬೇಕಾಗಿರೋ ವಸ್ತುಗಳನ್ನ ತರಲು ಅಲ್ಪಸ್ವಲ್ಪ ಮಟ್ಟಿಗೆ ಯಶಸ್ಸು ಕಾಣುತ್ತಿದ್ದಾರೆ. ಇವತ್ತು ಕಾಂಗ್ರೆಸ್‌ನವರು ಏನೇನೋ ಮಾತಾಡುತ್ತಿದ್ದಾರೆ. ಕೇಂದ್ರದಲ್ಲಿ ಯುಪಿಎ ಸರಕಾರವೇ ಇದ್ರೆ ಏನು ಮಾಡುತ್ತಿದ್ದರು ಎಂದು ಪ್ರಶ್ನಿಸಿದರು. ಕೇಂದ್ರ ಸರಕಾರವನ್ನು ಬೈಯೋದು ಒಳ್ಳೆದಲ್ಲ ಅನ್ನೋದು ನನ್ನ ಅಭಿಪ್ರಾಯ ಎಂದರು.

ಗ್ಯಾಸ್ ಸಮಸ್ಯೆಗೆ ಕೇಂದ್ರವೇ ಕಾರಣ: ಡಿ.ಕೆ.ಶಿವಕುಮಾರ್

ಬೆಂಗಳೂರು: ದೇಶಾದ್ಯಂತ ಉಲ್ಬಣಿಸಿರುವ ಗ್ಯಾಸ್ ಸಮಸ್ಯೆಗೆ ಹಾಗೂ ಕರ್ನಾಟಕ ದಲ್ಲಿ ಆಟೋ ಗ್ಯಾಸ್ ಸಮಸ್ಯೆಗೆ ಕೇಂದ್ರ ಸರಕಾರದ ನಿರ್ಲಕ್ಷ್ಯವೇ ಕಾರಣ. ಆದರೆ ಈ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಬಿಜೆಪಿ ನಾಯಕರೇಕೆ ಮಾತನಾಡುತ್ತಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಟೋ ಚಾಲಕರಿಗೆ ಗ್ಯಾಸ್ ಸಮಸ್ಯೆಯಿಂದ ಬಹಳ ತೊಂದರೆಯಾಗುತ್ತಿದೆ. ಇದರಿಂದ ಸಂಚಾರ ವ್ಯವಸ್ಥೆಗೆ ಪರಿಣಾಮ ಬೀರುತ್ತಿದೆ. ಜತೆಗೆ ಹೋಟೆಲ್ ಕ್ಷೇತ್ರವು ಸಮಸ್ಯೆ ಎದುರಿಸುತ್ತಿದೆ. ಕೇಂದ್ರ ಸರಕಾರ ಈ ಬಗ್ಗೆ ಗಮನಹರಿಸಬೇಕು ಎಂದು ಆಗ್ರಹಿಸಿದರು. ಆಟೋ ಚಾಲಕರು ರಾಜ್ಯ ಸರಕಾರಕ್ಕೆ ಮನವಿ ಮಾಡಿರುವ ಬಗ್ಗೆ ಕೇಳಿದಾಗ, ಅನಿಲ ಪೂರೈಕೆ ಅಧಿಕಾರ ರಾಜ್ಯ ಸರಕಾರದ ಕೈಯಲ್ಲಿಲ್ಲ. ಕೇಂದ್ರ ಸರಕಾರದ ವ್ಯಾಪ್ತಿಗೆ ಬರುತ್ತದೆ. ಕೇಂದ್ರ ಸರಕಾರ ಸರಿಯಾಗಿ ಮುಂಜಾಗ್ರತೆ, ನೀತಿ ರೂಪಿಸಬೇಕಿತ್ತು. ಈ ವಿಚಾರದಲ್ಲಿ ವಿಫಲವಾಗಿದೆ. ಈ ವಿಚಾರವಾಗಿ ಬಿಜೆಪಿಯವರು ಯಾಕೆ ಮಾತನಾಡುತ್ತಿಲ್ಲ. ನಮ್ಮಿಂದ ತೊಂದರೆ ಯಾಗಿದೆ ಎಂದು ಒಪ್ಪಿಕೊಂಡು ಜನರ ಬಳಿ ಕ್ಷಮೆ ಕೋರಬೇಕು ಎಂದರು.

> **ಕೇರಳ ಚುನಾವಣೆ ಪ್ರಚಾರದಲ್ಲಿ ಎರಡು ದಿನ ಪ್ರವಾಸ ಮಾಡಬೇಕಾಗಿದ್ದು, ಅಲ್ಲಿ ಪ್ರವಾಸ ಮಾಡಿ ಬಂದ ಬಳಿಕ, ದಾವಣಗೆರೆ ಅಥವಾ ಬಾಗಲಕೋಟೆಗೆ ಮತ್ತೊಮ್ಮೆ ತೆರಳುತ್ತೇನೆ. ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಂದ ಮತಕ್ಕಿಂತ ಈ ಬಾರಿಯ ಉಪಚುನಾವಣೆಯಲ್ಲಿ ಹೆಚ್ಚು ಮತ ಬೀಳಲಿದ್ದು, ನಮ್ಮ ಅಭ್ಯರ್ಥಿಗಳು ಹೆಚ್ಚು ಮತಗಳ ಅಂತರದಲ್ಲಿ ಗೆಲ್ಲಲಿದ್ದಾರೆ.**
>
> **-ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ಬಿಜೆಪಿಗೆ ಮತ ಹಾಕಿದರೆ ವ್ಯರ್ಥ

ದಾವಣಗೆರೆ: ಬಿಜೆಪಿಗೆ ಮತ ಹಾಕಿದರೆ ಕಸದ ಬುಟ್ಟಿಗೆ ಹಾಕಿದಂತೆ. ಜನರ ಒಳಿತಿಗಾಗಿ ನಾವು ಮತ ಕೇಳುತ್ತಿದ್ದೇವೆ. ನೀವು ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಶಾಮನೂರು ಅವರಿಗೆ ಮತ ನೀಡಬೇಕೆಂದು ಸಚಿವ ಈಶ್ವರ ಖಂಡ್ರೆ ಮನವಿ ಮಾಡಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರು ದಿನಗಳಿಂದ ಪ್ರಚಾರ ಮಾಡುತ್ತಿದ್ದೇನೆ. 80 ಬೂತ್‌ಗಳಿಗೆ ಭೇಟಿ ನೀಡಿದ್ದೇನೆ. ಕಾಂಗ್ರೆಸ್ ಪಕ್ಷದ ಅಲೆ ಕಾಣುತ್ತಿದೆ. ಈ ಯುವಕರು, ಮಹಿಳೆಯರು ಸಮರ್ಥ್ ಪರವಾಗಿದ್ದಾರೆ. ಶಾಮನೂರು ಶಿವಶಂಕರಪ್ಪ ಅವರು ಅಮೋಘ ಕೊಡುಗೆ ಇಡೀ ರಾಜ್ಯಕ್ಕೆ ನೀಡಿದ್ದಾರೆ. ಹತ್ತಿ ಗಿರಣಿ ಬಂದ್ ಆದಾದ ಬಳಿಕ ಕಳಾಹೀನ ಆಗಿದ್ದ ನಗರವನ್ನು ಮರು ರೂಪಿಸಿದವರು ಶಿವಶಂಕರಪ್ಪನವರು.

> **ಗ್ಯಾರಂಟಿ, ಅಭಿವೃದ್ಧಿ ಕಾರ್ಯಗಳು ಕಾಂಗ್ರೆಸ್ ಕೈ ಹಿಡಿಯಲಿವೆ. ಕೊಳ್ಳುವ ಸಾಮರ್ಥ್ಯ ಹೆಚ್ಚು ಮಾಡಿ, ಬಡತನ ರೇಖೆಗಿಂತ ಮೇಲೆತ್ತಿದ್ದೇವೆ. ತಲಾದಾಯ ಕೂಡ ಹೆಚ್ಚು ಆಗಿದೆ. ಕೇಂದ್ರ ಸರ್ಕಾರ ಬಡವರ, ರೈತರು, ಕಾರ್ಮಿಕರ ಹಾಗೂ ಮಹಿಳೆಯರ ವಿರೋಧಿ ಆಗಿದೆ. ಸಿಲಿಂಡರ್ ಎಲ್ಪಿಜಿಯಿಂದ ಜನರು ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ.**
>
> **-ಈಶ್ವರ್ ಖಂಡ್ರೆ, ಸಚಿವ**

ಚಿತ್ರದುರ್ಗದ ಜಿಲ್ಲೆಯಲ್ಲಿ ಚಿಕ್ಕ ತಾಲೂಕು ಆಗಿದ್ದ ದಾವಣಗೆರೆ ದೊಡ್ಡ ನಗರವಾಗಿ ಬೆಳೆಯಲು ಅವರೇ ಕಾರಣ. ಕೋವಿಡ್ ಸಂದರ್ಭದಲ್ಲಿ ಮಾಡಿದ ಸೇವೆಯನ್ನು ಜನರು ಸ್ಮರಿಸುತ್ತಿದ್ದಾರೆ. ಎಲ್ಲ ಸಮುದಾಯದ ಪ್ರೀತಿಗೆ ಪಾತ್ರರಾಗಿದ್ದಾರೆ. ಈ ನಿಟ್ಟಿನಲ್ಲಿ ಕ್ಷೇತ್ರದ ಮತದಾರರು ಕಾಂಗ್ರೆಸ್ ಕೈಹಿಡಿಯಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಕರ್ನಾಟಕಕ್ಕೆ ಹಾನಿಕಾರಕ

ದಾವಣಗೆರೆ: ಬಿಜೆಪಿ ಕರ್ನಾಟಕಕ್ಕೆ ಹಾನಿಕಾರಕವಾಗಿದ್ದು, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ಬೆಲೆ ಏರಿಕೆ ಮೂಲಕ ಜನರ ಜೇಬಿಗೆ ಕತ್ತರಿ ಹಾಕುತ್ತಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲಾ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜನರ ಪಾಲ್ಗೊಳ್ಳುವಿಕೆಯ ಕರ್ನಾಟಕದ ಗ್ಯಾರಂಟಿ ಮಾದರಿ ಹಾಗೂ ಜನರ ಜೇಬಿಗೆ ಕತ್ತರಿ ಹಾಕುವ ಮೋದಿ ಮಾದರಿ ದೇಶದಲ್ಲಿವೆ. ಪಂಚ ಗ್ಯಾರಂಟಿಗಳಿಂದ ಕೇಂದ್ರದ ಬೆಲೆ ಏರಿಕೆಯಿಂದ ಬಚಾವ್ ಆಗುವ ಅಸ್ತ್ರವನ್ನು ಜನರಿಗೆ ನೀಡಿದೆ. ಆದರೆ, ಮೋದಿ ಮಾದರಿ ಜನರ ಜೇಬಿಗೆ ಹೇಗೆ ಕತ್ತರಿ ಹಾಕುತ್ತದೆ ಎಂಬುದು ಗೊತ್ತಾಗುವುದೇ ಇಲ್ಲ5. ಆದ್ದರಿಂದ ಜನರು ಜೇಬುಗಳ್ಳರಿಂದ ಎಚ್ಚರವಾಗಿರಬೇಕು ಎಂದರು. ಮೋದಿ ಅಧಿಕಾರಕ್ಕೆ ಬಂದ ಬಳಿಕ ಗ್ಯಾಸ್, ಪೆಟ್ರೋಲ್, ಡೀಸೆಲ್, ವಾಟರ್ ಕೂಲರ್, ಪಿವಿಸಿ ಪೈಪ್, ಏರ್ ಕೂಲರ್, ಮನೆ ಕಟ್ಟಲು ಬಳಸುವ ಕಬ್ಬಿಣ ಸೇರಿ ಅಗತ್ಯ ವಸ್ತುಗಳ ಬೆಲೆ ದುಪ್ಪಟಾಗಿದೆ. ಬಿಜೆಪಿ ಯಾವ ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತದೋ ಅಲ್ಲಿ ಜನರಿಗೆ ನಷ್ಟ ಉಂಟು ಮಾಡುತ್ತಿದೆ ಎಂದರು.

ಬಿಜೆಪಿ ವಿರುದ್ಧ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ವಾಗ್ದಾಳಿ ನಡೆಸಿದರು.

ಕಾರಂತರ ಸುಳಿಯಲ್ಲಿ ಪುಸ್ತಕ ಲೋಕಾರ್ಪಣೆ ಇಂದು



ಬೆಂಗಳೂರು: ವಿಶ್ವವಾಣಿ ಪುಸ್ತಕದ ವತಿಯಿಂದ ವಿಶ್ವವಾಣಿ ಪ್ರಧಾನ ಸಂಪಾದಕರಾದ ವಿಶ್ವೇಶ್ವರ್ ಭಟ್ ಅವರ 'ಕಾರಂತರ ಸುಳಿಯಲ್ಲಿ' ಪುಸ್ತಕ ಇಂದು (ಭಾನುವಾರ) ಲೋಕಾರ್ಪಣೆಗೊಳ್ಳಲಿದೆ. ಬೆಳಗ್ಗೆ 11 ಗಂಟೆಗೆ ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಪುಸ್ತಕ ಲೋಕಾರ್ಪಣೆಯಾಗಲಿದೆ. ವನ್ಯಜೀವಶಾಸ್ತ್ರಜ್ಞ ಹಾಗೂ ಲೇಖಕ ಉಲ್ಲಾಸ್ ಕಾರಂತ್, ಶಾಸ್ತ್ರೀಯ ನೃತ್ಯಪಟು ಹಾಗೂ ಲೇಖಕರಾದ ಕ್ಷಮಾರಾವ್, ಮನಃಶಾಸ್ತ್ರಜ್ಞರು ಮತ್ತು ಲೇಖಕರಾದ ಮಾಲವಿಕಾ ಕಪೂರ್, ಪತ್ರಕರ್ತ ಎಸ್.ದಿವಾಕರ್, ಪಾಡ್‌ಕಾಸ್ಟರ್ ಮತ್ತು ಪತ್ರಕರ್ತ ಶೋಭಾ ನಾರಾಯಣ್, ವಿಮರ್ಶಕರಾದ ಎಸ್.ಆರ್.ವಿಜಯಶಂಕರ ಅವರು ಭಾಗವಹಿಸಲಿದ್ದಾರೆ. ಒಬ್ಬ ತಂದೆಯಾಗಿ ಕಾರಂತರು ಹೇಗಿದ್ದರು ಎಂಬುದನ್ನು ಅವರ ಮಕ್ಕಳ ಕಣ್ಣಿನಿಂದ ನೋಡುವ ಅಪರೂಪದ ಪ್ರಯತ್ನವಾಗಿದೆ. ಡಾ. ಶಿವರಾಮ್ ಕಾರಂತರ ಮಕ್ಕಳಾದ ಉಲ್ಲಾಸ ಕಾರಂತ, ಮಾಲವಿಕಾ ಕಪೂರ, ಕ್ಷಮಾ ರಾವ್ ಅವರು ಬರೆದ 'ಎಟ್ಟಡಿಜ್ಞಿಜ ಖಿಟ ಓಚ್ಚಜ್ಞಠಿಜ'ಪುಸ್ತಕದ ಕನ್ನಡ ಅವತರಣಿಕೆಯಾಗಿದೆ. 'ಕಾರಂತರ ಸುಳಿಯಲ್ಲಿ' ಅವರ ಮಕ್ಕಳು ತಮ್ಮ ಬಾಲ್ಯದ ದಿನಗಳು, ತಂದೆಯೊಂದಿಗಿನ ಒಡನಾಟ, ತಾಯಿಯ ವ್ಯಕ್ತಿತ್ವ ಮತ್ತು ಅವರ ಮನೆಯ ಪರಿಸರವನ್ನು ಅತ್ಯಂತ ಆಪ್ತವಾಗಿ ಚಿತ್ರಿಸಿದ್ದಾರೆ.

ಬೊಮ್ಮಾಯಿ ಸೇರಿ ಮೂವರಿಗೆ ಹಾವೇರಿ ವಿಶ್ವವಿದ್ಯಾಲಯ ಗೌಡಾ

ಹಾವೇರಿ: ಇಲ್ಲಿಯ ಹಾವೇರಿ ವಿಶ್ವವಿದ್ಯಾಲಯದ ಮೊದಲ ಘಟಿಕೋತ್ಸವವು ಇದೇ 6ರಂದು ನಡೆಯಲಿದ್ದು, ಸಂಸದ ಬಸವರಾಜ ಬೊಮ್ಮಾಯಿ ಸೇರಿ ಮೂವರಿಗೆ ಗೌರವ ಡಾಕ್ಟರೇಟ್ (ಗೌಡಾ) ನೀಡಲು ಆಡಳಿತ ಮಂಡಳಿ ತೀರ್ಮಾನಿಸಿದೆ. ವಿಶೇಷ ಸಿಂಡಿಕೇಟ್ ಸಭೆ ನಡೆಸಿ ಸಾಧಕರನ್ನು ಗೌರವ ಡಾಕ್ಟರೇಟ್‌ಗೆ ಆಯ್ಕೆ ಮಾಡಲಾಗಿದೆ ಎಂದು ಕುಲಪತಿ ಪ್ರೊ.ಸುರೇಶ ಜಂಗಮಶೆಟ್ಟಿ ತಿಳಿಸಿದ್ದಾರೆ. ಸಾಮಾಜಿಕ ಸೇವೆಯನ್ನು ಪರಿಗಣಿಸಿ ಹಾವೇರಿ–ಗದಗ ಸಂಸದ ಬಸವರಾಜ ಬೊಮ್ಮಾಯಿ, ಶೈಕ್ಷಣಿಕ ಸೇವೆ ಪರಿಗಣಿಸಿ ಹಾವೇರಿಯ ಹುಕ್ಕೇರಿ ಮಠದ ಸದಾಶಿವ ಸ್ವಾಮೀಜಿ ಹಾಗೂ ಸಾಹಿತ್ಯ ಸೇವೆಯನ್ನು ಪರಿಗಣಿಸಿ ಕವಿ ಸತೀಶ ಕುಲಕರ್ಣಿ ಅವರಿಗೆ ಗೌರವ ಡಾಕ್ಟರೇಟ್ ನೀಡಲಾಗಿದೆ ಎಂದು ತಿಳಿಸಿದ್ದಾರೆ. ಹಾವೇರಿಯ ಜಿ.ಎಚ್. ಕಾಲೇಜಿನ ಸಭಾ ಭವನದಲ್ಲಿ ಏ. 6ರಂದು ನಡೆಯುವ ಘಟಿಕೋತ್ಸವದಲ್ಲಿ ರಾಜ್ಯಪಾಲರು, ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದ್ದಾರೆ.

2 ಸ್ಥಾನಗಳನ್ನು ನಾವೇ ಗೆಲ್ಲುತ್ತೇವೆ

ದಾವಣಗೆರೆ: ಈ ಉಪಚುನಾವಣೆ ಯಾವುದೇ ದಿಕ್ಸೂಚಿ ಅಲ್ಲ. ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಎರಡು ಸ್ಥಾನ ನಮ್ಮವು, ನಾವು ಗೆಲ್ಲುತ್ತೇವೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ನಗರದಲ್ಲಿ ಮಾತನಾಡಿದ ಅವರು, ಮೂರು ಉಪಚುನಾವಣೆಯಲ್ಲಿ ಗೆದ್ದಿದ್ದೇವೆ. ವಿಶೇಷವಾಗಿ ನಾವು ಇಬ್ಬರು ಮಾಜಿ ಸಿಎಂ ಮಕ್ಕಳನ್ನು ಸೋಲಿಸಿದ್ದೇವೆ. ಈಗ ಇರುವ ಎರಡು ಸ್ಥಾನ ಗೆಲ್ಲುತ್ತೇವೆ. ಕಾಂಗ್ರೆಸ್ ಕಿತ್ತೊಗೆಯಬೇಕು ಅಂತಾರೇ, ಕಿತ್ತೊಗೆಯಲು ಕಾಂಗ್ರೆಸ್ ಏನ್ ನಿಂಬೆ ಗಿಡನಾ? ತಮಿಳುನಾಡಿನಲ್ಲಿ ಕರುಣಾನಿಧಿ ನಿಧನ ನಂತರ ಸ್ಟಾಲಿನ್ ಸಿಎಂ ಆಗಿದ್ದರು ಎಂದರು.



ಉಮೇಶ್ ಮೇಟಿ ಪರ ಸಿಎಂ ಸಿದ್ದರಾಮಯ್ಯ ಅವರು ಬಾಗಲಕೋಟೆಯಲ್ಲಿ ಶನಿವಾರ ಮತಯಾಚಿಸಿದರು.

ಬಿಜೆಪಿಯವರಿಗೆ ಸೋಲಿನ ಭಯ ಕಾಡುತ್ತಿದೆ: ಸಿಎಂ

ಬಾಗಲಕೋಟೆ: ಕಾಂಗ್ರೆಸ್ ಸರಕಾರದ ವಿರುದ್ಧ ಅಪಪ್ರಚಾರ ಮಾಡುತ್ತಿರುವ ಬಿಜೆಪಿಯವರಿಗೆ ಸೋಲಿನ ಭಯ ಕಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಗಲಕೋಟೆ ಉಪಚುನಾವಣಾ ಪ್ರಚಾರ ಕಾರ್ಯ ಉತ್ತಮವಾಗಿ ನಡೆಯುತ್ತಿದ್ದು, ನಿರೀಕ್ಷೆಗೂ ಮೀರಿ ಜನಸ್ಪಂದನೆ ದೊರೆತಿದೆ. ಎಲ್ಲೆಡೆ ಅಭೂತಪೂರ್ವ ಸ್ಪಂದನೆ ಸಿಗುತ್ತಿದ್ದು, ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಲಿದೆ ಎಂದು ಮುಖ್ಯಮಂತ್ರಿಗಳು ಭರವಸೆ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರಕಾರದ ಕಾರ್ಯಕ್ರಮಗಳು ಬಡವರಿಗಾಗಿ ರೂಪಿಸಿಸಲ್ಪಟ್ಟಿವೆ. ಎಲ್ಲಾ ಜಾತಿ, ಧರ್ಮ, ಭಾಷೆಗಳಿಗೆ ಸೇರಿದ ಜನರಿಗೆ ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ. ಬಿಜೆಪಿ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಿದ್ದು, ಗ್ಯಾರಂಟಿ ಯೋಜನೆಗಳು ಸಾಮಾಜಿಕ ಬದ್ಧತೆಯನ್ನು ಒದಗಿಸುವ ಹೂಡಿಕೆಯಾಗಿದೆ. ಅಭಿವೃದ್ಧಿಯೆಂದರೆ ಕೇವಲ ರಸ್ತೆ, ಸೇತುವೆ, ಕಟ್ಟಡಗಳು ಮಾತ್ರವಲ್ಲ, ಆರ್ಥಿಕ, ಹಾಗೂ ಸಾಮಾಜಿಕ ಭದ್ರತೆ ಒದಗಿಸುವುದು ಕೂಡ ಆಗಿದೆ ಎಂದರು.

ಸಾಮಾಜಿಕ ಯೋಜನೆಗಳನ್ನು ಘೋಷಿಸಿದ ಮೇಲೆ ಬಿಜೆಪಿ ಅಂದಿನಿಂದ ಇಂದಿನವರೆಗೆ ವಿರೋಧಿಸುತ್ತಲೇ ಬಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸೇರಿದಂತೆ ಎಲ್ಲರೂ ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಹೇಳಿಕೊಂಡು ಬಂದಿದ್ದಾರೆ. ಕಳೆದ ಮೂರು ವರ್ಷಗಳಿಂದ ಗ್ಯಾರಂಟಿ ಯೋಚನೆಗಳು ಜಾರಿಯಲ್ಲಿದ್ದು 24/3/2026 ವರೆಗೆ 1.31 ಲಕ್ಷ ಕೋಟಿ ರು.ಗಳನ್ನು ಗ್ಯಾರಂಟಿಗಳಿಗೆ ಕೊಟ್ಟಿದ್ದೇವೆ. ಇದರ ಜತೆಗೆ, ನೀರಾವರಿ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರು, ಪೊಲೀಸ್ ವ್ಯವಸ್ಥೆಗೆ ವೆಚ್ಚ, ಎಸ್‌ಸಿಎಸ್ ಪಿ/ಟಿಎಸ್‌ಪಿ ಯೋಜನೆಗಳಿಗೆ ವೆಚ್ಚ ಮಾಡುವುದನ್ನು ಕಡಿಮೆ ಮಾಡಿಲ್ಲ. ಕಳೆದ ವರ್ಷದಲ್ಲಿ 42,000 ಕೋಟಿ ವೆಚ್ಚ ಮಾಡಿದ್ದರೆ, ಈ ವರ್ಷ 44,000 ಕೋಟಿಗೂ ಹೆಚ್ಚು ವೆಚ್ಚ ಮಾಡಲಾಗುತ್ತಿದೆ. ಅಭಿವೃದ್ಧಿ ಕೆಲಸಗಳ್ಯಾವುವೂ ಕುಂಠಿತವಾಗಿಲ್ಲ ಎಂದರು.

ಸಾಲದ ಮಿತಿ ಮೀರಿಲ್ಲ: ಸಿಎಂ

ಸಿದ್ದರಾಮಯ್ಯ ಸಾಲ ಮಾಡಿದ್ದಾರೆ ಎಂದು ಬಿಜೆಪಿ ಅಪಪ್ರಚಾರ ಮಾಡುತ್ತಿದೆ. ಆರ್ಥಿಕ ಹೊಣೆಗಾರಿಕೆ ಕಾಯ್ದೆಯನ್ನು ಬಿಜೆಪಿ ಸರಿಯಾಗಿ ಓದಿಕೊಳ್ಳಬೇಕು. ರಾಜ್ಯಗಳು ಆರ್ಥಿಕ ಸಂಕಷ್ಟದಲ್ಲಿದ್ದಾಗ 2002 ರಲ್ಲಿ ಜಾರಿಯಾದ ಈ ಕಾಯ್ದೆಯ ಪ್ರಕಾರ ಮೂರು ಮಾನದಂಡಗಳನ್ನು ಈಡೇರಿಸಬೇಕು. ಆರ್ಥಿಕ ಕೊರತೆ ಜಿಡಿಪಿಯ ಶೇ 3% ಒಳಗಿರಬೇಕು.33 ಲಕ್ಷದ 5500 ಲಕ್ಷ ಕೋಟಿ ಪೈಕಿ 25% ಸಾಲವಿರಬೇಕು. ಬಿಜೆಪಿ ಮತ್ತೊಮ್ಮೆ ಬಜೆಟ್ ಪುಸ್ತಕ ಓದಿಕೊಳ್ಳಲಿ. ಜಿಡಿಪಿಐ ಶೇಕಡ 25ಕ್ಕಿಂತ ಸಾಲ ಹೆಚ್ಚಾಗಬಾರದು. ನಮ್ಮ ಸಾಲ 24.94 ರಲ್ಲಿದೆ. ಹೀಗಾಗಿ ಸಾಲ ಮಿತಿಮೀರಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

2 ಕ್ಷೇತ್ರ ಕೈಜಾರುವ ಭೀತಿಯಿಂದ ಸಿಎಂಗೆ ನಿದ್ದೆ ಇಲ್ಲ: ಬಿವೈವಿ

ದಾವಣಗೆರೆ: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರ ಗಳು ಕಾಂಗ್ರೆಸ್ ಪಕ್ಷದ ಕೈಜಾರಿ ಹೋಗುತ್ತಿದ್ದು, ಮುಖ್ಯಮಂತ್ರಿಗಳಿಗೆ ನಿದ್ರೆ ಬರುತ್ತಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ವಿಶ್ಲೇಷಿಸಿದ್ದಾರೆ.

ಎರಡೂ ಕಡೆಗಳಲ್ಲಿ ಬಿಜೆಪಿ ಗೆದ್ದೇ ಗೆಲ್ಲುವ ವಾತಾವರಣ ನಿರ್ಮಾಣವಾಗಿದೆ. ಯಾವ ಕ್ಷೇತ್ರದಲ್ಲಿ ಹೆಚ್ಚು ಪ್ರಚಾರದಲ್ಲಿ ತೊಡಗಿಸಿಕೊಳ್ಳಬೇಕೆಂಬ ಗೊಂದಲದಲ್ಲಿ ಮುಖ್ಯಮಂತ್ರಿಗಳು ಇದ್ದಾರೆ. ಇವತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಹಿಂದುಳಿದವರ ನಡೆ ಬಿಜೆಪಿಯ ಕಡೆ' ನಡೆಯುತ್ತಿದೆ. ಸರ್ವ ಸಮಾಜದ ಜನರು ನಮ್ಮ ಅಭ್ಯರ್ಥಿ ಶ್ರೀನಿವಾಸದಾಸ ಕರಿಯಪ್ಪ ಅವರನ್ನು ಗೆಲ್ಲಿಸಲು ಸಂಕಲ್ಪ ತೊಟ್ಟಿದ್ದಾರೆ. ಈ ಸಮಾವೇಶ ಮತ್ತು ನಮ್ಮ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸುತ್ತಿರುವ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾದ ಅಧ್ಯಕ್ಷ ರಘು ಕೌಟಿಲ್ಯ ಮತ್ತು ಪದಾಧಿಕಾರಿಗಳಿಗೆ ಅಭಿನಂದನೆಗಳು ಎಂದು ತಿಳಿಸಿದರು.

ಭ್ರಷ್ಟಾಚಾರದ ಕುರಿತು ಮಾತನಾಡುವ ನೈತಿಕತೆ ಕಾಂಗ್ರೆಸ್ ಪಕ್ಷ ಮತ್ತು ಮುಖ್ಯಮಂತ್ರಿಗಳಿಗೆ ಇಲ್ಲ ಎಂದು ಅವರು ಆಕ್ಷೇಪಿಸಿದರು. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ಲೂಟಿ ಮಾಡಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮತದಾರರಿಗೆ ದುಡ್ಡು ಹಂಚುತ್ತಿದ್ದಾರೆ. ಶಾಮನೂರು ಅವರ ನೋಟು, ಬಿಜೆಪಿಗೆ ವೋಟು ಎಂದು ನಮ್ಮ ಕಾರ್ಯಕರ್ತರು ಹೇಳುತ್ತಿದ್ದಾರೆ ಎಂದು ನುಡಿದರು. ಜನರು ಎರಡೂ ಕ್ಷೇತ್ರಗಳಲ್ಲಿ ಕಮಲದ ಹೂವನ್ನು ಅರಳಿಸಬೇಕೆಂಬ ಸಂಕಲ್ಪ ಮಾಡಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಕಾರ್ಯಕರ್ತರು ಇದೇವೇಳೆ ಶಾಮನೂರು ಅವರ ನೋಟು, ಬಿಜೆಪಿಗೆ ವೋಟು' ಎಂಬ ಘೋಷಣೆಗಳನ್ನೂ ಕೂಗಿದರು.

ಭ್ರಷ್ಟಾಚಾರದ ಹಣದಿಂದ ಈ ಕ್ಷೇತ್ರದ ಜನರ ಮತವನ್ನು ಗೆಲ್ಲಲು ಸಾಧ್ಯವಿಲ್ಲ ಎಂದು ನುಡಿದ ಅವರು, ಮತದಾರರು ಈಗಾಗಲೇ ಬಿಜೆಪಿ ಗೆಲ್ಲಿಸುವ ತೀರ್ಮಾನ ಮಾಡಿದ್ದಾರೆ ಎಂದು ಹೇಳಿದರು. ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಾಗಿದ್ದಾಗ ಹಿಂದುಳಿದ ವರ್ಗಗಳ ವಿವಿಧ ನಿಗಮಗಳಿಗೆ 550 ಕೋಟಿ ರೂಪಾಯಿ ನೀಡಿದ್ದರು. ಸಿದ್ದರಾಮಯ್ಯನವರ ಸರಕಾರ ಕೇವಲ 200– 250 ಕೋಟಿಯನ್ನಷ್ಟೇ ಕೊಟ್ಟಿದೆ ಎಂದು ಗಮನ ಸೆಳೆದರು. ಹಿಂದುಳಿದ ವರ್ಗಗಳನ್ನು ಮತಬ್ಯಾಂಕಾಗಿ ಕಾಂಗ್ರೆಸ್ ಬಳಸಿಕೊಳ್ಳುತ್ತಿದೆ. ಇದನ್ನು ಅರ್ಥ ಮಾಡಿಕೊಂಡು ಪ್ರಾಮಾಣಿಕ ವ್ಯಕ್ತಿ ಶ್ರೀನಿವಾಸದಾಸ ಕರಿಯಪ್ಪ ಅವರನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

> **ಎಚ್.ಡಿ.ಕುಮಾರಸ್ವಾಮಿಯವರೂ ಶ್ರೀನಿವಾಸ್ ಪರ ಪ್ರಚಾರ ನಡೆಸಿದ್ದಾರೆ. ಜೆಡಿಎಸ್‌ನ ಎಲ್ಲ ಕಾರ್ಯಕರ್ತರೂ ಎರಡೂ ಕ್ಷೇತ್ರಗಳಲ್ಲಿ ನಮ್ಮ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸುತ್ತಿದ್ದಾರೆ. ಜೆಡಿಎಸ್ ಕೂಡ ನಮ್ಮ ಅಭ್ಯರ್ಥಿಗಳಿಗೆ ಶಕ್ತಿ ತುಂಬುವ ಕೆಲಸ ಮಾಡುತ್ತಿದೆ.**
>
> **-ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ದಾವಣಗೆರೆಯಲ್ಲಿ ಶ್ರೀನಿವಾಸದಾಸ ಕರಿಯಪ್ಪ ಪರ ಮತಯಾಚಿಸಿದರು.

ಫ್ರಾಂಜ್ ಕಾಫ್ಕಾ ಮತ್ತು ಒಂದು ಗೊಂಬೆಯ ಕಥೆ

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಫ್ರಾಂಜ್ ಕಾಫ್ಕಾ ಮತ್ತು ಆ ಪುಟ್ಟ ಬಾಲಕಿಯ ಕಥೆ ಸಾಹಿತ್ಯ ಚರಿತ್ರೆಯಲ್ಲೇ ಅತ್ಯಂತ ಆರ್ದ್ರವಾದ ಮತ್ತು ಮನುಷ್ಯ ಸಂಬಂಧಗಳ ಸೂಕ್ಷ್ಮತೆಯನ್ನು ಸಾರುವವಂಥದ್ದು. ಕಾಫ್ಕಾ ನಮಗೆ ನೆನಪಾಗುವುದು 'ಮೆಟಾಮಾರ್ಫಾಸಿಸ್'ನಂಥ ಗಂಭೀರ ಅಥವಾ ಅತಿವಾಸ್ತವಿಕ ಬರಹಗಳಿಂದ. ಆದರೆ ಈ ಗೊಂಬೆಯ ಕಥೆ ಅವರೊಳಗಿದ್ದ ಅಪಾರ ಕಾರುಣ್ಯವನ್ನು ತೋರಿಸುತ್ತದೆ.

ಅಂದ ಹಾಗೆ 'ಫ್ರಾಂಜ್ ಕಾಫ್ಕಾ ಮತ್ತು ಒಂದು ಗೊಂಬೆಯ ಕಥೆ'ಯನ್ನು ಕೇಳಿದ್ದೀರಾ? ಇದು ವಿಶ್ವ ಸಾಹಿತ್ಯದ ಅತ್ಯಂತ ಹೃದಯಸ್ಪರ್ಶಿ ಮತ್ತು ಮಾನವೀಯ ಸಂವೇದನೆಯ ಕಥೆಗಳಲ್ಲಿ ಒಂದು. ಇದು ಕಾಫ್ಕಾ ಜೀವನದ ಕೊನೆಯ ದಿನಗಳಲ್ಲಿ ನಡೆದ ಘಟನೆ. ಒಬ್ಬ ಲೇಖಕ ತನ್ನ ಕಲ್ಪನಾಶಕ್ತಿಯ ಮೂಲಕ ಮಗುವಿನ ಮುರಿದ ಹೃದಯವನ್ನು ಹೇಗೆ ಸರಿಪಡಿಸಬಹುದು ಎಂಬುದಕ್ಕೆ ಅತ್ಯುತ್ತಮ ಉದಾಹರಣೆ.

1923ರಲ್ಲಿ, ತಾನು ಸಾಯುವುದಕ್ಕೆ ಕೇವಲ ಒಂದು ವರ್ಷ ಮೊದಲು, ಕಾಫ್ಕಾ ಬರ್ಲಿನ್‌ನ ಸ್ಟೆಗ್ಲಿಟ್ಜ್ ಪಾರ್ಕ್‌ನಲ್ಲಿ ತನ್ನ ಗೆಳತಿ ಡೋರಾ ಡೈಮಂಟ್ ಜತೆ ನಡೆಯುತ್ತಿದ್ದ. ಆಗ ಅವನಿಗೆ ಅಳುತ್ತಿದ್ದ ಸಣ್ಣ ಹುಡುಗಿ ಕಂಡಳು. ವಿಚಾರಿಸಿದಾಗ, ಅವಳು ತನ್ನ ಪ್ರೀತಿಯ ಗೊಂಬೆಯನ್ನು ಕಳೆದುಕೊಂಡಿದ್ದಾಳೆಂದು ತಿಳಿಯಿತು. ಸಾಮಾನ್ಯವಾಗಿ ಯಾರಾದರೂ ಅಳುವ ಮಗುವನ್ನು ಸಮಾಧಾನಪಡಿಸಲು 'ಬೇರೆ ಗೊಂಬೆ ಕೊಡಿಸುತ್ತೇನೆ' ಅಂತಾರೆ. ಆದರೆ ಕಾಫ್ಕಾ ಹಾಗೆ ಮಾಡಲಿಲ್ಲ. ಆತ ಮಗುವಿನ ಕಣ್ಣೊರೆಸಿ, 'ನಿನ್ನ ಗೊಂಬೆ ಕಳೆದುಹೋಗಿಲ್ಲ, ಅದು ಪ್ರವಾಸಕ್ಕೆ ಹೋಗಿದೆ. ಅದು ನನಗೆ ಪತ್ರ ಬರೆದಿದೆ, ನಾನು ನಾಳೆ ಆ ಪತ್ರವನ್ನು ನಿನಗೆ ತಂದು ತೋರಿಸುತ್ತೇನೆ' ಎಂದ.



ಕಾಫ್ಕಾನಂಥ ಜನಪ್ರಿಯ ಹಾಗೂ ಗಂಭೀರ ಲೇಖಕ, ಮಗುವಿನ ಕಲ್ಪನಾ ಲೋಕವನ್ನು ಉಳಿಸಲು ಈ ಸಣ್ಣ ಸುಳ್ಳನ್ನು ಹೇಳಿದ. ಮರು ದಿನದಿಂದ ಕಾಫ್ಕಾ ಆ ಮಗುವಿಗೆ ಗೊಂಬೆಯ ಪರವಾಗಿ ಪತ್ರಗಳನ್ನು ಬರೆದು ತರಲು ಪ್ರಾರಂಭಿಸಿದ. ಈ ಕೆಲಸವನ್ನು ಆತ ತನ್ನ ಕಾದಂಬರಿ ಬರೆಯುವಷ್ಟೇ ಗಂಭೀರವಾಗಿ ತೆಗೆದುಕೊಂಡ.

'ದಯವಿಟ್ಟು ನನಗಾಗಿ ಅಳಬೇಡ, ನಾನು ಪ್ರಪಂಚವನ್ನು ನೋಡಲು ಹೊರಟಿದ್ದೇನೆ. ಇಲ್ಲಿನ ಅನುಭವಗಳನ್ನು ನಿನಗೆ ಪತ್ರದ ಮೂಲಕ ತಿಳಿಸುತ್ತೇನೆ' ಎಂದು ಗೊಂಬೆ ಬರೆದಂತೆ ಕಾಫ್ಕಾ ಓದಿ ಹೇಳುತ್ತಿದ್ದ. ಸುಮಾರು ಮೂರು ವಾರಗಳ ಕಾಲ ಕಾಫ್ಕಾ ಪ್ರತಿದಿನ ಪಾರ್ಕ್‌ಗೆ ಬಂದು ಹೊಸ ಹೊಸ ಪತ್ರಗಳನ್ನು ಓದುತ್ತಿದ್ದ. ಗೊಂಬೆಯು ಪ್ಯಾರಿಸ್‌ಗೆ ಹೋಗಿರುವುದು, ಅಲ್ಲಿನ ಫ್ಯಾಶನ್, ಲಂಡನ್‌ನ ಪ್ರಯಾಣ, ಸಮುದ್ರದ ಹಾದಿ – ಹೀಗೆ ಗೊಂಬೆಯ ಸಾಹಸಗಳನ್ನು ವಿವರಿಸುತ್ತಾ ಮಗುವಿನ ದುಃಖವನ್ನು ಕುತೂಹಲವನ್ನಾಗಿ ಬದಲಿಸಿದ.

ಮಗು ಪತ್ರ ಎಲ್ಲಿದೆ ಎಂದು ಕೇಳಿದಾಗ, 'ಅದನ್ನು ಮನೆಯಲ್ಲಿ ಮರೆತು ಬಂದಿದ್ದೇನೆ, ನಾಳೆ ತಂದು ಕೊಡುತ್ತೇನೆ' ಎಂದು ಹೇಳುತ್ತಿದ್ದ. ಈಗ ಗೊಂಬೆ ಎಲ್ಲಿದೆ? ಯಾವ ದೇಶದಲ್ಲಿದೆ? ಅಲ್ಲಿ ಏನು ಮಾಡುತ್ತಿದೆ? ಎಂಬುದನ್ನು ವಿವರಿಸುತ್ತಿದ್ದ. ಪತ್ರಗಳಲ್ಲಿ ಗೊಂಬೆ ತಾನು ಹೇಗೆ ಸ್ವತಂತ್ರವಾಗಿ ಬದುಕುತ್ತಿದ್ದೇನೆ ಮತ್ತು ಹೊಸ ವಿಷಯಗಳನ್ನು ಕಲಿಯುತ್ತಿದ್ದೇನೆ ಎಂದು ಬರೆಯುತ್ತಿತ್ತು.

ಕಾಫ್ಕಾ ಆ ಸಮಯದಲ್ಲಿ ಕ್ಷಯರೋಗದಿಂದ ಬಳಲುತ್ತಿದ್ದ ಮತ್ತು ತನ್ನ ಜೀವನದ ಕೊನೆಯ ದಿನಗಳಲ್ಲಿದ್ದ. ತನಗೆ ಸಾವು ಹತ್ತಿರವಾಗುತ್ತಿದೆ ಎಂದು ಕಾಫ್ಕಾಗೆ ಅನಿಸಲಾರಂಭಿಸಿತು. ಆಗ ಈ ಕಥೆಗೆ ಒಂದು ಸುಂದರ ಅಂತ್ಯ ನೀಡಲು ನಿರ್ಧರಿಸಿದ. ಆತ ಮಗುವಿಗೆ ಒಂದು ಹೊಸ ಗೊಂಬೆಯನ್ನು ತಂದುಕೊಟ್ಟ. ಇದು ನನ್ನ ಗೊಂಬೆಯಂತೆ ಕಾಣುತ್ತಿಲ್ಲವಲ್ಲ? ಎಂದು ಮಗು ಹೇಳಿತು. ಅದಕ್ಕೆ ಲಗತ್ತಿಸಲಾದ ಪತ್ರದಲ್ಲಿ, ನನ್ನ ಪ್ರವಾಸಗಳು ನನ್ನನ್ನು ಬದಲಿಸಿವೆ' ಎಂದು ಬರೆಯಲಾಗಿತ್ತು. ಮಗು ಆ ಹೊಸ ಗೊಂಬೆಯನ್ನು ಸಂತೋಷದಿಂದ ಸ್ವೀಕರಿಸಿತು.

ಕೊನೆಯಲ್ಲಿ ಆ ಗೊಂಬೆಗೆ ಮದುವೆಯಾಯಿತು ಎಂಬ ಸಬೂಬು ನೀಡಿ ಕಾಫ್ಕಾ ಆ ಪತ್ರಗಳ ಸರಣಿಯನ್ನು ಮುಗಿಸಿದ. ಅಂದರೆ, ಬದಲಾವಣೆ ಅನಿವಾರ್ಯ, ಬೆಳೆದಂತೆ ಹಳೆಯದನ್ನು ಬಿಟ್ಟು ಮುಂದೆ ಹೋಗಬೇಕು' ಎಂಬ ಸಂದೇಶವನ್ನು ಆ ಮಗುವಿಗೆ ಮನವರಿಕೆ ಮಾಡಿಕೊಟ್ಟ. ವರ್ಷಗಳ ನಂತರ, ಆ ಹುಡುಗಿ ದೊಡ್ಡವಳಾದಾಗ ಆ ಗೊಂಬೆಯೊಳಗೆ ಅಡಗಿಸಿಟ್ಟಿದ್ದ ಒಂದು ಸಣ್ಣ ಚೀಟಿ ಅವಳಿಗೆ ಸಿಕ್ಕಿತು. ಅದರಲ್ಲಿ ಹೀಗೆ ಬರೆಯಲಾಗಿತ್ತು – 'ನೀನು ಪ್ರೀತಿಸುವ ಪ್ರತಿಯೊಂದೂ ಒಂದು ದಿನ ಕಳೆದುಹೋಗಬಹುದು, ಆದರೆ ಕೊನೆಯಲ್ಲಿ ಪ್ರೀತಿಯು ಬೇರೆ ರೂಪದಲ್ಲಿ ನಿನ್ನನ್ನು ಹುಡುಕಿಕೊಂಡು ಬರುತ್ತದೆ.'

ಇಲ್ಲಿಗೆ ಕಥೆ ಮುಗಿಯುತ್ತದೆ.

ಹಾಗಾದರೆ ಈ ಕಥೆಯ ಮಹತ್ವವೇನು? ಈ ಘಟನೆಯು ಕೇವಲ ಒಂದು ಕಥೆಯಲ್ಲ, ಅದು ಜೀವನದ ದೊಡ್ಡ ಸತ್ಯವನ್ನು ಸಾರುತ್ತದೆ – ಕಳೆದುಹೋದ ವಸ್ತುವಿಗಾಗಿ ಅಳುವ ಬದಲು, ಅದರ ನೆನಪುಗಳನ್ನು ಸುಂದರವಾಗಿಸಿಕೊಳ್ಳುವುದು ಹೇಗೆ ಎಂಬುದನ್ನು ಇದು ಕಲಿಸುತ್ತದೆ. ಒಬ್ಬ ಬರಹಗಾರ ಕೇವಲ ಕಾಗದದ ಮೇಲೆ ಪದಗಳನ್ನು ಬರೆಯುವುದಿಲ್ಲ, ಬದಲಿಗೆ ಒಬ್ಬರ ಜೀವನದ ಕತ್ತಲೆಯನ್ನು ಹೋಗಲಾಡಿಸಬಲ್ಲ. ನಾವು ಪ್ರೀತಿಸುವ ವ್ಯಕ್ತಿಗಳು ಅಥವಾ ವಸ್ತುಗಳು ಬದಲಾಗಬಹುದು, ಆದರೆ ಆ ಪ್ರೀತಿಯ ಭಾವನೆ ಮಾತ್ರ ಶಾಶ್ವತ.

ಜೀವನದಲ್ಲಿ ನಷ್ಟ ಎನ್ನುವುದು ಅನಿವಾರ್ಯ, ಆದರೆ ಆ ನಷ್ಟವನ್ನು ನಾವು ಹೇಗೆ ಸ್ವೀಕರಿಸುತ್ತೇವೆ ಮತ್ತು ಪ್ರೀತಿಯನ್ನು ಹೊಸ ರೂಪದಲ್ಲಿ ಹೇಗೆ ಕಾಣುತ್ತೇವೆ ಎಂಬುದೇ ಈ ಕಥೆಯ ತಿರುಳು. ಫ್ರಾಂಜ್ ಕಾಫ್ಕಾನ ಈ ಗೊಂಬೆಯ ಪತ್ರಗಳು ಇಂದಿಗೂ ಪತ್ತೆಯಾಗಿಲ್ಲ. ಡೋರಾ ಡೈಮಂಟ್ ಅವಳ ನೆನಪುಗಳ ಮೂಲಕ ಮಾತ್ರ ಈ ಕಥೆ ಜಗತ್ತಿಗೆ ತಿಳಿದಿದೆ. ಇದು ಸಾಹಿತ್ಯ ಲೋಕದ ಅತ್ಯಂತ ಸುಂದರವಾದ ಕಳೆದುಹೋದ ನಿಧಿ' ಎನ್ನಬಹುದು. ಜೀವನದಲ್ಲಿ ಏನನ್ನಾದರೂ ಕಳೆದುಕೊಂಡಾಗ ಈ ಕಥೆ ನಮಗೆ ಸಾಂತ್ವನ ನೀಡಬಹುದು.

ಯಾರು ಡೋರಾ ಡೈಮಂಟ್ ?

'ಈ ಗೊಂಬೆ ಕಥೆ' ಡೋರಾ ಡೈಮಂಟ್ ಅವಳ ನೆನಪುಗಳ ಮೂಲಕ ಜಗತ್ತಿಗೆ ಗೊತ್ತಾಯಿತು ಅಂತ ಹೇಳಿದೆ ತಾನೇ? ಹಾಗಾದರೆ ಈ ಡೋರಾ ಡೈಮಂಟ್ ಯಾರು ಎಂಬ ಪ್ರಶ್ನೆ ಮೂಡುವುದು ಸಹಜ. ಈಕೆ ಫ್ರಾಂಜ್ ಕಾಫ್ಕಾ ಜೀವನದ ಕೊನೆಯ ವರ್ಷಗಳಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ ವ್ಯಕ್ತಿ. ಕಾಫ್ಕಾ ಸಾಹಿತ್ಯಿಕ ಮತ್ತು ವೈಯಕ್ತಿಕ ಬದುಕಿನ ಮೇಲೆ ಆಕೆ ಬೀರಿದ ಪ್ರಭಾವ ಅಪಾರ.

1923ರಲ್ಲಿ ಬಾಲ್ಟಿಕ್ ಸಮುದ್ರ ತೀರದ ರೆಸಾರ್ಟ್ ಒಂದರಲ್ಲಿ ಡೋರಾ, ಕಾಫ್ಕಾನನ್ನು ಭೇಟಿಯಾದಳು. ಆಗ ಡೋರಾಗೆ ಕೇವಲ 25 ವರ್ಷ, ಕಾಫ್ಕಾಗೆ 40. ಡೋರಾ ಅಲ್ಲಿ ಮಕ್ಕಳ ಶಿಬಿರವೊಂದರಲ್ಲಿ ಅಡುಗೆಯವಳಾಗಿ ಕೆಲಸ ಮಾಡುತ್ತಿದ್ದಳು. ಕಾಫ್ಕಾ ತನ್ನ ಕುಟುಂಬ ಮತ್ತು ತಂದೆಯ ನೆರಳಿನಿಂದ ಹೊರಬಂದು ಬರ್ಲಿನ್ನಲ್ಲಿ ಸ್ವತಂತ್ರವಾಗಿ ಬದುಕಲು ಡೋರಾ ಪ್ರೇರಣೆಯಾದಳು. ಕಾಫ್ಕಾನ ಅನಾರೋಗ್ಯದ ಸಮಯದಲ್ಲಿ ಅವನನ್ನು ಒಬ್ಬ ಮಗುವಿನಂತೆ ಡೋರಾ ನೋಡಿಕೊಂಡಳು.

ಪಾರ್ಕಿನಲ್ಲಿ ಮಗು ಗೊಂಬೆ ಕಳೆದುಕೊಂಡಾಗ ಕಾಫ್ಕಾ ಪತ್ರ ಬರೆದ ಘಟನೆಗೆ ಡೋರಾ ಏಕೈಕ ಸಾಕ್ಷಿ. ತನ್ನ ನೆನಪುಗಳಿಂದ ಈ ಕಥೆಯನ್ನು ಹೇಳದಿದ್ದರೆ, ಇದು ಜಗತ್ತಿಗೆ ತಿಳಿಯುತ್ತಲೇ ಇರಲಿಲ್ಲ. ಕಾಫ್ಕಾ ಸಾವಿನ ದವಡೆಯಲ್ಲಿದ್ದಾಗ, ತನ್ನ ಸಾಹಿತ್ಯದ ಕೆಲವು ಭಾಗಗಳನ್ನು ಸುಟ್ಟುಹಾಕುವಂತೆ ಡೋರಾಗೆ ಕೇಳಿಕೊಂಡಿದ್ದ. ಕಾಫ್ಕಾ ಇಚ್ಛೆಯಂತೆ ಡೋರಾ ಅವನ ಕಣ್ಣೆದುರೇ ಕೆಲವು ಹಸ್ತಪ್ರತಿಗಳನ್ನು ಸುಟ್ಟು ಹಾಕಿದಳು.

ಕಾಫ್ಕಾ ಮರಣದ ನಂತರ, ಡೋರಾ ಬಳಿ ಕಾಫ್ಕಾನ ಹಲವು ಪತ್ರಗಳು ಮತ್ತು ನೋಟ್‌ಬುಕ್‌ಗಳಿದ್ದವು. ಆದರೆ 1933ರಲ್ಲಿ ನಾಜಿ ಪಡೆಯ ದಾಳಿಯ ಸಮಯದಲ್ಲಿ ಅವೆಲ್ಲವನ್ನೂ ವಶಪಡಿಸಿಕೊಳ್ಳಲಾಯಿತು. ಆ ಅಮೂಲ್ಯ ಸಾಹಿತ್ಯ ಇಂದಿಗೂ ಪತ್ತೆಯಾಗಿಲ್ಲ. ಕಾಫ್ಕಾನನ್ನು ಡೋರಾ ಡೈಮಂಟ್ ಕೇವಲ ಒಬ್ಬ ಲೇಖಕನನ್ನಾಗಿ ನೋಡದೇ, ಒಬ್ಬ ವ್ಯಕ್ತಿಯಾಗಿ ಪ್ರೀತಿಸಿ ಕೊನೆಯವರೆಗೂ ಜತೆಗಿದ್ದವಳು. ಕಾಫ್ಕಾನ ಸಂಕೀರ್ಣ ಬದುಕಿನಲ್ಲಿ ಡೋರಾ ಒಂದು ಬೆಳಕಿನ ಕಿರಣದಂತಿದ್ದಳು.

ಚರ್ಚಿಲ್ ಮತ್ತು ಜಾನಿ ವಾಕರ್

ಬ್ರಿಟನ್ ಪ್ರಧಾನಿಯಾಗಿದ್ದ ದಿವಂಗತ ವಿನ್ಸ್ಟನ್ ಚರ್ಚಿಲ್, ವಿಸ್ಕಿ ಬಗ್ಗೆ ಹೇಳಿದ ಮಾತು ಬಹು ಪ್ರಸಿದ್ಧ – The water was not fit to drink. To make it palatable, we have to add whisky. By diligent effort, I learned to like it. (ನೀರು ಕುಡಿಯಲು ಯೋಗ್ಯವಾಗಿರುವುದಿಲ್ಲ. ಅದನ್ನು ಕುಡಿಯುವಂತಾಗಲು (ರುಚಿಯಾಗಿಸಲು), ನಾವು ಅದಕ್ಕೆ ವಿಸ್ಕಿಯನ್ನು ಬೆರೆಸಬೇಕು. ನಿರಂತರ ಪ್ರಯತ್ನದ ಮೂಲಕ, ನಾನು ಅದನ್ನು ಇಷ್ಟಪಡುವುದನ್ನು ಕಲಿತುಕೊಂಡೆ).

ಈ ಮಾತನ್ನು ಚರ್ಚಿಲ್, ಜಾನಿ ವಾಕರ್ ಬ್ಲಾಕ್ ಲೇಬಲ್ ಕುರಿತು ಹೇಳಿದ್ದೆಂದು, ನಿರಂತರ ಐವತ್ತೆಂಟು ವರ್ಷಗಳ ತನಕ 'ಗುಂಡು' ಹಾಕಿದ ಪತ್ರಕರ್ತ ವೈಎನ್ಕೆ ಹೇಳುತ್ತಿದ್ದರು. ಚರ್ಚಿಲ್ ದಿನವಿಡೀ ಜಾನಿ ವಾಕರ್ ಬ್ಲಾಕ್ ಲೇಬಲ್‌ನ್ನು ಸಿಪ್ ಮಾಡುತ್ತಿದ್ದರಂತೆ. ಚರ್ಚಿಲ್ ಕೇವಲ ಒಬ್ಬ ದಕ್ಷ ರಾಜಕಾರಣಿಯಷ್ಟೇ ಅಲ್ಲ, ಅವರು ಈ ವಿಸ್ಕಿಯ ಒಬ್ಬ 'ನಿಷ್ಠಾವಂತ ರಾಯಭಾರಿ'ಯೂ ಆಗಿದ್ದರು!

ಚರ್ಚಿಲ್ ಅವರ ದಿನಚರಿ ಶುರುವಾಗುತ್ತಿದ್ದುದೇ ವಿಸ್ಕಿಯೊಂದಿಗೆ. ಬೆಳಗ್ಗೆ ಸುಮಾರು ಎಂಟು ಗಂಟೆಗೆ ಎದ್ದ ತಕ್ಷಣ ಅವರು ಒಂದು ಗ್ಲಾಸ್ ನೀರಿಗೆ ಸ್ವಲ್ಪ ಜಾನಿ ವಾಕರ್ ಬ್ಲಾಕ್ ಲೇಬಲ್ ಬೆರೆಸಿಕೊಂಡು ಕುಡಿಯುತ್ತಿದ್ದರು. ಇದನ್ನು ಅವರು 'ಪಾಪಾಸ್ ಕಾಕ್ ಟೇಲ್' ಎಂದು ಕರೆಯುತ್ತಿದ್ದರು. ವಿಶೇಷವೆಂದರೆ, ಇದು ಪೂರ್ತಿ ಮದ್ಯವಾಗಿರದೇ, ನೀರಿಗೆ ಸ್ವಲ್ಪ ರುಚಿ ಮತ್ತು ಬಣ್ಣ ನೀಡುವಷ್ಟು ಮಾತ್ರ ಇರುತ್ತಿತ್ತು. ಎರಡನೇ ಮಹಾಯುದ್ಧದ ಸಮಯದಲ್ಲಿ ಚರ್ಚಿಲ್ ಅವರು ವಿಪರೀತ ಒತ್ತಡದಲ್ಲಿದ್ದಾಗಲೂ ತಮ್ಮ ಪ್ರಿಯವಾದ ಜಾನಿ ವಾಕರ್ ಅನ್ನು ಮರೆಯುತ್ತಿರಲಿಲ್ಲ. ಅವರು ಹೇಳುತ್ತಿದ್ದರಂತೆ – I have taken more out of alcohol than alcohol has taken out of me!



ಚರ್ಚಿಲ್ ಅವರಿಗೆ ಚಿತ್ರಕಲೆ ಎಂದರೆ ಬಹಳ ಇಷ್ಟ. ಅವರು ಬಿಡುವಿನ ಸಮಯದಲ್ಲಿ ಬಿಡಿಸಿದ ಒಂದು ಸುಂದರ ಪೇಂಟಿಂಗ್‌ನ ಹೆಸರು 'The Bottlescape'. ಈ ತೈಲಚಿತ್ರದಲ್ಲಿ ಒಂದು ಜಾನಿ ವಾಕರ್ ಬ್ಲಾಕ್ ಲೇಬಲ್ ಬಾಟಲಿ, ಒಂದು ಬಾಟಲಿ ಬ್ರಾಂಡಿ, ವೈನ್, ಶಾಂಪೇನ್ ಮತ್ತು ಕೆಲವು ಗ್ಲಾಸ್‌ಗಳನ್ನು ಅತ್ಯಂತ ಕಲಾತ್ಮಕವಾಗಿ ಜೋಡಿಸಿರುವುದನ್ನು ಕಾಣಬಹುದು. ಇದು ಜಾನಿ ವಾಕರ್ ಬಗ್ಗೆ ಅವರ ಪ್ರೀತಿ ಎಷ್ಟು ಗಾಢವಾಗಿತ್ತು ಎಂಬುದಕ್ಕೆ ಸಾಕ್ಷಿ.

ಇದನ್ನು ಅವರು 1926 ಅಥವಾ 1930ರ ಸುಮಾರಿಗೆ ಬಿಡಿಸಿದ್ದಿರಬಹುದು. ಅಚ್ಚರಿಯ ವಿಷಯವೆಂದರೆ, ಚರ್ಚಿಲ್ ಸುಮಾರು 500ಕ್ಕೂ ಹೆಚ್ಚು ಚಿತ್ರಗಳನ್ನು ಬಿಡಿಸಿದ್ದಾರೆ, ಆದರೆ ಮದ್ಯದ ಬಾಟಲಿಗಳನ್ನೇ ಪ್ರಧಾನವಾಗಿಟ್ಟುಕೊಂಡು ಬಿಡಿಸಿದ ಅಪರೂಪದ ಚಿತ್ರವಿದು. 2020ರಲ್ಲಿ ಲಂಡನ್ನ ಪ್ರಖ್ಯಾತ ಸೋಥ್ಬೀಸ್ ಹರಾಜು ಸಂಸ್ಥೆಯಲ್ಲಿ ಈ ಚಿತ್ರವು ಸುಮಾರು 983,000 ಯುರೋ (ಅಂದಾಜು 10 ಕೋಟಿ ರುಪಾಯಿಗೂ ಹೆಚ್ಚು!) ಮೊತ್ತಕ್ಕೆ ಮಾರಾಟವಾಯಿತು.

ಬೆಳಗ್ಗೆ ಎದ್ದ ತಕ್ಷಣ ಚರ್ಚಿಲ್ ಒಂದು ಲೋಟಕ್ಕೆ ಸ್ವಲ್ಪ ವಿಸ್ಕಿ ಮತ್ತು ಅತಿ ಹೆಚ್ಚು ನೀರು ಬೆರೆಸುತ್ತಿದ್ದರು. ಇದನ್ನು ನೋಡಿದವರು 'ಇಷ್ಟು ಬೆಳಗ್ಗೆಯೇ ಮದ್ಯಪಾನವೇ?' ಎಂದು ಕೇಳಿದಾಗ, ಅವರು ಅತ್ಯಂತ ಗಂಭೀರವಾಗಿ 'ಇದು ಮದ್ಯಪಾನವಲ್ಲ, ನನ್ನ ಬಾಯಿಯನ್ನು ಶುಚಿಗೊಳಿಸುವ ಮೌತ್‌ವಾಶ್' ಎಂದು ಉತ್ತರಿಸುತ್ತಿದ್ದರು. ಒಮ್ಮೆ ಚರ್ಚಿಲ್ ವಿಮಾನದಲ್ಲಿ ಪ್ರಯಾಣಿಸುತ್ತಿದ್ದರು. ವಿಮಾನ ಕೆಂಪು ಸಮುದ್ರದ ಮೇಲೆ ಹಾರುತ್ತಿತ್ತು. ಆಗ ಅವರು ತಮ್ಮ ಸಹಾಯಕನಿಗೆ ಕೇಳಿದರಂತೆ – 'ಕೆಂಪು ಸಮುದ್ರದ ನೀರು ಕುಡಿಯಲು ಯೋಗ್ಯವೇ?'. ಸಹಾಯಕ 'ಇಲ್ಲ ಸರ್' ಎಂದಾಗ, ಚರ್ಚಿಲ್ ತಕ್ಷಣ, 'ಹಾಗಾದರೆ ಸ್ವಲ್ಪ ಜಾನಿ ವಾಕರ್ ತನ್ನಿ, ಆ ನೀರನ್ನು ಕುಡಿಯುವಂತೆ ಮಾಡೋಣ' ಎಂದರಂತೆ!

ಚರ್ಚಿಲ್ ಎಂದೂ ಅತಿಯಾಗಿ ಕುಡಿದು ಮತಿ ಕಳೆದುಕೊಂಡವರಲ್ಲ, ಅವರು ಕುಡಿದಾಗಲೇ ಸರಿಯಾಗಿರುತ್ತಾರೆ ಮತ್ತು ಚುರುಕಾಗಿರುತ್ತಾರೆ ಎಂಬ ಮಾತು ಚಾಲ್ತಿಯಲ್ಲಿತ್ತು. ಚರ್ಚಿಲ್ ಅವರು ವಿಸ್ಕಿ ಪ್ರಿಯರಾಗಿದ್ದರೆ, ಹೌಸ್ ಆಫ್ ಕಾಮನ್ಸ್ ಸದಸ್ಯೆ ನ್ಯಾನ್ಸಿ ಆಸ್ಟರ್ (ಲೇಡಿ ಆಸ್ಟರ್) ಅದರ ಕಡು ವಿರೋಧಿಯಾಗಿದ್ದರು. ಅವರು ಆಗಾಗ ಮದ್ಯಪಾನ ನಿಷೇಧದ ಪರವಾಗಿ ಧ್ವನಿ ಎತ್ತುತ್ತಿದ್ದರು. ಇದೇ ಕಾರಣಕ್ಕೆ ಚರ್ಚಿಲ್–ಲೇಡಿ ಆಸ್ಟರ್ ನಡುವೆ ಆಗಾಗ ಜಗಳಗಳಾಗುತ್ತಿದ್ದವು. ಒಮ್ಮೆ ಲೇಡಿ ಆಸ್ಟರ್, ಚರ್ಚಿಲ್ ಅವರ ಮೇಲೆ ಸಿಟ್ಟಾಗಿ, 'ಮಿಸ್ಟರ್ ಚರ್ಚಿಲ್, ನೀವು ಕುಡಿದು ಪೂರ್ತಿ ಅಮಲೇರಿದ್ದೀರಿ, ನಿಮಗೆ ಪ್ರಜ್ಞೆಯೇ ಇಲ್ಲ.' ಎಂದರು.

ಅದಕ್ಕೆ ಚರ್ಚಿಲ್, 'ಹೌದು, ಲೇಡಿ ಆಸ್ಟರ್, ನಾನು ಕುಡಿದಿದ್ದೇನೆ ಮತ್ತು ನನಗೆ ಅಮಲೇರಿದೆ. ಆದರೆ ನಾಳೆ ಬೆಳಗ್ಗೆ ನಾನು ಎದ್ದಾಗ ನನ್ನ ಅಮಲು ಇಳಿದಿರುತ್ತದೆ, ಆದರೆ ನೀನು ಮಾತ್ರ ಎಂದಿನಂತೆ ಅಷ್ಟೇ ವಿಕಾರವಾಗಿ ಇರುತ್ತೀಯ!' ಎಂದಿದ್ದರು.

ಜಾನಿ ವಾಕರ್ ಬ್ಲಾಕ್ ಲೇಬಲ್

ಜಾನಿ ವಾಕರ್ ಬ್ಲಾಕ್ ಲೇಬಲ್‌ನ್ನು ಚರ್ಚಿಲ್ ಅಷ್ಟೇ ಗಾಢವಾಗಿ ಪ್ರೀತಿಸಿದ ಮತ್ತೊಬ್ಬರೆಂದರೆ ಚಿತ್ರನಟ ದಿವಂಗತ ಅಂಬರೀಶ್. ಅವರು ದಿನವೂ ಕುಡಿಯುತ್ತಿದ್ದರು ಮತ್ತು ದಿನವೂ ಜಾನಿ ವಾಕರ್ ಬ್ಲಾಕ್ ಲೇಬಲ್‌ನ್ನೇ ಕುಡಿಯುತ್ತಿದ್ದರು. ಅವರ ಮುಂದೆ ಅದಕ್ಕಿಂತ ದುಬಾರಿ ಬಾಟಲಿಯನ್ನಿಟ್ಟರೂ, ಅದನ್ನು ಬಿಟ್ಟು ಬೇರೆ ಯಾವ ಗುಂಡನ್ನೂ ಕುಡಿಯುತ್ತಿರಲಿಲ್ಲ. ಹಾಗಂತ ಅವರಿಗೆ ಆ ಗುಂಡಿನ ಬಗ್ಗೆ ಹೆಚ್ಚು ಗೊತ್ತಿರಲಿಲ್ಲ. ಆ ಬಗ್ಗೆ ತಿಳಿದುಕೊಳ್ಳುವ ಆಸಕ್ತಿಯೂ ಇರಲಿಲ್ಲ. ಒಮ್ಮೆ ಪಾರ್ಟಿಯಲ್ಲಿ ಸ್ನೇಹಿತರೊಬ್ಬರು, 'ಅಂಬರೀಶ್, ನೀವು ನಿತ್ಯವೂ ಕುಡಿಯುವ ಜಾನಿ ವಾಕರ್ ಬ್ಲಾಕ್ ಲೇಬಲ್ ಬಗ್ಗೆ ಸ್ವಾರಸ್ಯವಾದ ವಿಷಯಗಳನ್ನು ಹೇಳಿ' ಎಂದಾಗ, 'ಸುಮ್ನೆ ಕುಡಿ, ಇಲ್ಲಾಂದ್ರೆ ಎದ್ದೋಗು. ನನ್ನ ತಲೆ ತಿನ್ನಬೇಡ' ಎಂದು ಹೇಳಿದ್ದರು. ಇರಲಿ.

ಸುಮಾರು 206 ವರ್ಷಗಳ ಹಿಂದೆ (1820), ಜಾನ್ ವಾಕರ್ ಎಂಬ ವ್ಯಕ್ತಿ ಒಂದು ಸಣ್ಣ ಕಿರಾಣಿ ಅಂಗಡಿ ನಡೆಸುತ್ತಿದ್ದ. ಅಂದಿನ ಕಾಲದಲ್ಲಿ ಅಂಗಡಿಗಳಲ್ಲಿ ಸಿಗುತ್ತಿದ್ದ ವಿಸ್ಕಿಗಳು ಒಂದೇ ರುಚಿಯನ್ನು ಹೊಂದಿರುತ್ತಿರಲಿಲ್ಲ. ಚಹಾ ಪುಡಿಯನ್ನು ಬೆರೆಸಿ (ಬ್ಲೆಂಡ್) ಮಾರಾಟ ಮಾಡುತ್ತಿದ್ದ ಜಾನ್ ವಾಕರ್, ಅದೇ ತಂತ್ರವನ್ನು ವಿಸ್ಕಿಗೂ ಬಳಸಲು ನಿರ್ಧರಿಸಿದ. ಆತ ವಿವಿಧ ಡಿಸ್ಟಿಲರಿಗಳಿಂದ ಸಿಂಗಲ್ ಮಾಲ್ಟ್ ವಿಸ್ಕಿಗಳನ್ನು ತಂದು ಅವುಗಳನ್ನು ಬೆರೆಸಿ, ಪ್ರತಿ ಬಾರಿಯೂ ಒಂದೇ ರೀತಿಯ ಅದ್ಭುತ ರುಚಿ ನೀಡುವ ವಿಸ್ಕಿಯನ್ನು ತಯಾರಿಸಿದ. ಅಂದು ಇದಕ್ಕೆ 'ವಾಕರ್ಸ್ ಕಿಲ್ಮಾರ್ನಾಕ್ ವಿಸ್ಕಿ' ಎಂದು ಹೆಸರಿತ್ತು. ಕಿಲ್ಮಾರ್ನಾಕ್ ಎಂಬುದು ಆತನ (ಸ್ಕಾಟ್ಲೆಂಡಿನ) ಊರಿನ ಹೆಸರು.

ಜಾನ್ ವಾಕರ್ ಮಗ ಅಲೆಕ್ಸಾಂಡರ್ ವಾಕರ್ ಒಬ್ಬ ಸಮರ್ಥ ಉದ್ಯಮಿಯಾಗಿದ್ದ. ಆತ 1867 ರಲ್ಲಿ 'ಓಲ್ಡ್ ಹೈಲ್ಯಾಂಡ್ ವಿಸ್ಕಿ' ಎಂಬ ಹೆಸರಿನಲ್ಲಿ ವಿಸ್ಕಿಯನ್ನು ಮಾರುಕಟ್ಟೆಗೆ ಬಿಟ್ಟ. ಆ ಸಮಯದಲ್ಲಿ ಕಂಪನಿಯು ವಿವಿಧ ಗುಣಮಟ್ಟದ ವಿಸ್ಕಿಗಳನ್ನು ತಯಾರಿಸುತ್ತಿತ್ತು. ಅವುಗಳನ್ನು ಸುಲಭವಾಗಿ ಗುರುತಿಸಲು ಗ್ರಾಹಕರು ಬಾಟಲಿಯ ಮೇಲಿದ್ದ ಲೇಬಲ್‌ನ ಬಣ್ಣಗಳನ್ನು ಬಳಸುತ್ತಿದ್ದರು. ಕಡಿಮೆ ವರ್ಷ ಹಳೆಯದಾದ ವಿಸ್ಕಿಯನ್ನು 'ವೈಟ್ ಲೇಬಲ್' ಎನ್ನಲಾಗುತ್ತಿತ್ತು. ಸ್ವಲ್ಪ ಉತ್ತಮ ಗುಣಮಟ್ಟದ ವಿಸ್ಕಿಯನ್ನು 'ರೆಡ್ ಲೇಬಲ್' ಎನ್ನಲಾಗುತ್ತಿತ್ತು. ಅತ್ಯಂತ ಪ್ರೀಮಿಯಂ ಮತ್ತು ಹನ್ನೆರಡು ವರ್ಷಗಳ ಕಾಲ ಪಕ್ವಗೊಳಿಸಿದ ವಿಸ್ಕಿಯನ್ನು 'ಬ್ಲಾಕ್ ಲೇಬಲ್' ಎಂದು ಕರೆಯಲಾಗುತ್ತಿತ್ತು. ಜನಪ್ರಿಯತೆಯ ದೃಷ್ಟಿಯಿಂದ ಜನರು 'ಓಲ್ಡ್ ಹೈಲ್ಯಾಂಡ್ ವಿಸ್ಕಿ' ಎನ್ನುವ ಬದಲು ಅದರ ಬಣ್ಣ ನೋಡಿ 'ಬ್ಲಾಕ್ ಲೇಬಲ್' ಎಂದು ಕರೆಯಲು ಶುರು ಮಾಡಿದರು. ಜನರ ಈ ಅಭ್ಯಾಸವನ್ನೇ ಗಮನಿಸಿದ ಕಂಪನಿಯು, 1909 ರಲ್ಲಿ ಅಧಿಕೃತವಾಗಿ ತನ್ನ ವಿಸ್ಕಿಗಳ ಹೆಸರನ್ನು 'ಜಾನಿ ವಾಕರ್ ಬ್ಲಾಕ್ ಲೇಬಲ್' ಮತ್ತು 'ಜಾನಿ ವಾಕರ್ ರೆಡ್ ಲೇಬಲ್' ಎಂದು ಬದಲಾಯಿಸಿತು.

ಜಾನಿ ವಾಕರ್ ಹೆಸರಿನ ಜತೆಗೆ ಬಾಟಲಿಯ ವಿನ್ಯಾಸವೂ ಈ ಬ್ರ್ಯಾಂಡ್ ಬೆಳೆಯಲು ಪ್ರಮುಖ ಕಾರಣವಾಯಿತು ಎಂಬುದು ಅನೇಕರಿಗೆ ಗೊತ್ತಿಲ್ಲ. ಅಲೆಕ್ಸಾಂಡರ್ ವಾಕರ್ ಚೌಕಾಕಾರದ ಬಾಟಲಿಗಳನ್ನು ಪರಿಚಯಿಸಿದ. ಇದಕ್ಕೆ ಕಾರಣವೆಂದರೆ, ಹಡಗಿನಲ್ಲಿ ರಫ್ತು ಮಾಡುವಾಗ ಚೌಕಾಕಾರದ ಬಾಟಲಿಗಳು ಒಂದಕ್ಕೊಂದು ತಾಕಿದರೂ ಒಡೆಯುವ ಸಾಧ್ಯತೆ ಕಡಿಮೆ ಇರುತ್ತಿತ್ತು ಮತ್ತು ಕಡಿಮೆ ಜಾಗದಲ್ಲಿ ಹೆಚ್ಚು ಬಾಟಲಿಗಳನ್ನು ಜೋಡಿಸಬಹುದಿತ್ತು. ಗಮನಿಸಿ, ಜಾನಿ ವಾಕರ್ ವಿಸ್ಕಿ ಬಾಟಲಿಯ ಮೇಲಿನ ಲೇಬಲ್ ಅನ್ನು ನಿಖರವಾಗಿ ಇಪ್ಪತ್ನಾಲ್ಕು ಡಿಗ್ರಿ ಓರೆಯಾಗಿ ಅಂಟಿಸಲಾಗುತ್ತದೆ. ಇದು ಬಾಟಲಿಯ ಮೇಲೆ ಅಕ್ಷರಗಳನ್ನು ದೊಡ್ಡದಾಗಿ ಮತ್ತು ಎದ್ದು ಕಾಣುವಂತೆ ಮಾಡಲು ಅಲೆಕ್ಸಾಂಡರ್ ಮಾಡಿದ ಉಪಾಯವಾಗಿತ್ತು.

1908 ರಲ್ಲಿ ಖ್ಯಾತ ವ್ಯಂಗ್ಯಚಿತ್ರಕಾರ ಟಾಮ್ ಬ್ರೌನ್ ಮಧ್ಯಾಹ್ನದ ಊಟದ ಸಮಯದಲ್ಲಿ ಕಾಗದದ ಮೇಲೆ ಒಬ್ಬ ವ್ಯಕ್ತಿ ವೇಗವಾಗಿ ಹೆಜ್ಜೆ ಹಾಕುತ್ತಿರುವ ಒಂದು ಚಿತ್ರವನ್ನು ಬಿಡಿಸಿದ. 'ಇದು ಜಾನಿ ವಾಕರ್ ಸಂಸ್ಥಾಪಕ ಜಾನ್ ವಾಕರ್' ಎಂದು ತಮಾಷೆಗೆ ಹೇಳಿದ. ಇದನ್ನೇ ಕಂಪನಿ ತನ್ನ ಲೋಗೋವನ್ನಾಗಿ ಮಾಡಿಕೊಂಡಿತು. ಇದರೊಂದಿಗೆ ಓಟಿಬಿಟಿ ಗಟ್ಟುಜ್ಜಿ ಎಂಬ ಘೋಷವಾಕ್ಯವನ್ನು ಸೇರಿಸಲಾಯಿತು. ಇದು ಕಂಪನಿಯ ಪ್ರಗತಿ ಮತ್ತು ಎಂದಿಗೂ ನಿಲ್ಲದ ಗುಣವನ್ನು ಎತ್ತಿ ತೋರಿಸುತ್ತದೆ.

ಬ್ಲಾಕ್ ಲೇಬಲ್ ಅನ್ನು ಕೇವಲ ಒಂದು ಅಥವಾ ಎರಡು ವಿಸ್ಕಿಗಳಿಂದ ತಯಾರಿಸುವುದಿಲ್ಲ. ಇದರಲ್ಲಿ ಸ್ಕಾಟ್‌ಲ್ಯಾಂಡ್‌ನ ನಾಲ್ಕು ಪ್ರಮುಖ ಪ್ರದೇಶಗಳಾದ ಹೈಲ್ಯಾಂಡ್ಸ್, ಲೋಲ್ಯಾಂಡ್ಸ್, ಸ್ಪೇಸೈಡ್ ಮತ್ತು ಇಸ್ಲೇಯಿಂದ ಆಯ್ದುಕೊಂಡ ವಿಸ್ಕಿಗಳ ಮಿಶ್ರಣವಿರುತ್ತದೆ. ಇದೇ ಅದರ ವೈಶಿಷ್ಟ್ಯ. ಇದರಲ್ಲಿ ಬಳಸಿರುವ ಪ್ರತಿ ಹನಿ ವಿಸ್ಕಿಯೂ ಕನಿಷ್ಠ ಹನ್ನೆರಡು ವರ್ಷಗಳ ಕಾಲ ಪಕ್ವಗೊಂಡಿರುತ್ತದೆ. ಅಂದರೆ, ನೀವು ಇಂದು ಒಂದು ಬಾಟಲಿಯನ್ನು ಓಪನ್ ಮಾಡಿದರೆ, ಅದರ ಒಳಗಿರುವ ವಿಸ್ಕಿ ತಯಾರಿಕೆ ಕನಿಷ್ಠ 12 ವರ್ಷಗಳ ಹಿಂದೆಯೇ ಆರಂಭವಾಗಿತ್ತು ಎಂದರ್ಥ!

ಜಾನಿ ವಾಕರ್ ಬಗ್ಗೆ ಒಂದು ಮಾತಿದೆ – Johnnie Walker is the only man who keeps walking even after you've had five double shots and can't even stand! (ನೀವು ಐದು ಡಬಲ್ ಶಾಟ್ ಕುಡಿದು ನಿಲ್ಲಲು ಸಾಧ್ಯವಾಗದಿದ್ದರೂ, ಜಾನಿ ವಾಕರ್ ಮಾತ್ರ ಬಾಟಲಿಯ ಮೇಲೆ ಇನ್ನೂ ನಡೆಯುತ್ತಲೇ ಇರುತ್ತಾನೆ!). 'ಯಾರ ಮನೆಯಲ್ಲಿ ಜಾನಿ ವಾಕರ್ ವಿಸ್ಕಿ ಇರುವುದೋ, ಅವರ ಮನೆಯಲ್ಲಿ ದ್ರವ ಲಕ್ಷ್ಮಿ ನೆಲೆಸಿದ್ದಾಳೆ ಎಂದರ್ಥ' ಎಂದು ವೈಎನ್ಕೆ ಹೇಳುತ್ತಿದ್ದರು.

ಜಾನಿ ವಾಕರ್ ಕಂಪನಿಯ ಇತರ ಲೇಬಲ್‌ಗಳಾದ 'ಬ್ಲೂ ಲೇಬಲ್' ಅಥವಾ 'ಗೋಲ್ಡ್ ಲೇಬಲ್' ಬಗ್ಗೆ ಇನ್ನೊಮ್ಮೆ ಹೇಳುತ್ತೇನೆ.

ಪ್ರತಿ ಕಚ್ಚುವಿಕೆಯಲ್ಲಿ ಆನಂದ: ಹಿಟ್ಟಲ್ಲ, ಸೂಪರ್‌ಹಿಟ್!

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅರ್ಥಮನರ್ಥಂ ಭಾವಯ ನಿತ್ಯಮ್... ಎಂದು ಶಂಕರಾಚಾರ್ಯರು ಈಗೇನಾದರೂ ಹೇಳಿರುತ್ತಿದ್ದರೆ ಅದು ಮೂಢಮತಿಗಳಿಗಿಂತಲೂ ಹೆಚ್ಚಾಗಿ ಗೂಗಲ್ ಟ್ರಾನ್ಸ್‌ಲೇಟರ್‌ಅನ್ನು ಉದ್ದೇಶಿಸಿದ್ದಾಗಿರುತ್ತಿತ್ತು. ಆ ಪರಿಯಲ್ಲಿ ಕಾಣಸಿಗುತ್ತಿವೆ ಗೂಗಲ್ ಅನುವಾದದ ಅಧ್ವಾನಗಳು, ಅನರ್ಥಗಳು. ಸುಮಾರು 10–12 ವರ್ಷಗಳ ಹಿಂದೆ ಬೆಂಗಳೂರಿನ ಸೈಂಟ್ ಮಾರ್ಕ್ಸ್ ರಸ್ತೆ ಪಕ್ಕದಲ್ಲಿ ಕಾಣಿಸಿಕೊಂಡಿದ್ದ 'ಇಲ್ಲಿ ಮೂತ್ರ ತೇರ್ಗಡೆ ಹೊಂದಿಲ್ಲ' ಎಂಬ ಸೂಚನಾಫಲಕದಿಂದ ಈ ಅನರ್ಥಾನುವಾದ ಯುಗ ಆರಂಭವಾಗಿದ್ದೆಂದು ನನಗನಿಸುತ್ತದೆ. ಅದು, Do Not Pass Urine ಎಂಬುದನ್ನು ಗೂಗಲ್ ಕನ್ನಡಕ್ಕೆ ಅನುವಾದಿಸಿದ್ದ ರೀತಿಯಾಗಿತ್ತು. ಆಮೇಲೆ ಅದಕ್ಕಿಂತ ಹಾಸ್ಯಾಸ್ಪದ ಅನುವಾದಗಳು ಒಂದಾದ ಮೇಲೊಂದರಂತೆ ಕಾಣಿಸತೊಡಗಿದವು. ಅಂಗಡಿ ಮುಂಗಟ್ಟುಗಳ ನಾಮಫಲಕಗಳಲ್ಲಿ, ಜಾಹಿರಾತುಗಳಲ್ಲಿ, ಪತ್ರಿಕೆಗಳ ಸುದ್ದಿವಿವರಗಳಲ್ಲೂ ರಾರಾಜಿಸಿದವು. ಬಟ್ಟೆಯಂಗಡಿಯಲ್ಲಿ Gents Accessories 'ಪುರುಷರ ಬಿಡಿಭಾಗಗಳು' ಆಯ್ತು; ತರಕಾರಿ ಅಂಗಡಿಯಲ್ಲಿ Sweet Lime ನಿಂಬೆಹಣ್ಣಿನ ಬದಲಿಗೆ 'ಸಿಹಿ ಸುಣ್ಣ' ಆಯ್ತು; ರೇನ್‌ಕೋಟಿನ ಜಾಹಿರಾತು Always Stay Dry ಎಂಬುದನ್ನು 'ಸದಾ ಒಣಗಿರಿ' ಎಂದಿತು; ಆಲಿವ್ ಎಣ್ಣೆ Extra Virgin Extra Healthy ಇದ್ದದ್ದು 'ಹೆಚ್ಚುವರಿ ಕನ್ಯೆ ಹೆಚ್ಚು ಆರೋಗ್ಯಕರ' ಅಂತಾಯ್ತು; ಘಮಘಮಿಸುವ Mysore Sandal Soap 'ಮೈಸೂರು ಚಪ್ಪಲ್ ಸಾಬೂನು' ಎಂದಾಯ್ತು. ಮೆಟ್ರೋರೈಲಿನ ಬೋಗಿಗಳು Train Coaches 'ರೈಲು ತರಬೇತುದಾರರು' ಆದುವು. ಹಟಿಯಾದಿಂದ ಬೆಂಗಳೂರು ದಂಡು ನಿಲ್ದಾಣಕ್ಕೆ ಬರುವ Hatia Bengaluru Cant Express ರೈಲು 'ಹಟಿಯಾ ಬೆಂಗಳೂರು ಕ್ಯಾಂಟ್ ವ್ಯಕ್ತಪಡಿಸು' ಎಂಬ ಹೆಸರು ಪಡೆಯಿತು!

ತಮಾಷೆಯಲ್ಲ, ಇವೆಲ್ಲ ನಿಜವಾಗಿಯೂ ಕಾಣಿಸಿಕೊಂಡ ಅತಿ ಭಯಂಕರ ಅನುವಾದಗಳೇ. ಇನ್ನೂ ಸುಮಾರಿವೆ, ನಗೆಯುಕ್ಕಿಸುವ ಸರಕೆಂದು ಸಂಗ್ರಹಿಸಿಟ್ಟಿದ್ದೇನೆ. 'ಅಂಗಾಂಶ ಕಾಗದ' (Tissue Paper), 'ಸ್ಫೋಟಕ ಲೇಖನಗಳು' (Inflammable Articles), 'ಬೆತ್ತಲೆ ಜ್ವಾಲೆಯಿಲ್ಲ' (No Naked Flame), 'ಮುಂದೆ ಗೂನು' (Hump Ahead), 'ವಜ್ರ ಮತ್ತು ಚಿನ್ನದ ಆಭರಣಗಳ ಭವ್ಯವಾದ ಉಡಾವಣೆ' (Diamond & Gold Jewelry Grand launch), 'ದೃಢವಾದ ಬಾಳೆಹಣ್ಣು' (Banana Robusta), 'ಕಿವಿ ಆಮದು ಮಾಡಿಕೊಂಡ ಆರ್ಥಿಕತೆ ಇರಾನ್ (Kiwi Imported Economy Iran), 'ದಿನಾಂಕಗಳು ಆಮದು' (Dates Imported ಗಲ್ಫ್‌ನಿಂದ ಆಮದಾದ ಖರ್ಜೂರ), 'ಗೋಧಿ ಮುರಿದಿದೆ ಉತ್ತಮ' (Wheat-broken fine) ಇತ್ಯಾದಿ. ಇಂಥದನ್ನೆಲ್ಲ ನೋಡುತ್ತಲೇ ಬದುಕಬೇಕಾದ ಪರಿಸ್ಥಿತಿ ಕನ್ನಡಿಗರದು. ಆದರೂ 'ರಾಜ್ಯದಲ್ಲಿ ಮರಣ ದರ ಕಡಿಮೆ' (Death rate reduced) ಆಗಿದೆ ಎನ್ನುತ್ತವೆ ಪತ್ರಿಕೆಗಳು. ಯಾವುದಕ್ಕೂ ನಿಮ್ಮ ಖಾತೆಯಲ್ಲಿ 'ಸಮತೋಲನ ಕಾಯ್ದುಕೊಳ್ಳಿ'(Maintain your Balance) ಎನ್ನುತ್ತವೆ ಬ್ಯಾಂಕುಗಳು.

ಇವುಗಳ ಸಾಲಿಗೆ ಹೊಸ ಸೇರ್ಪಡೆ 'ಪ್ರತಿ ಕಚ್ಚುವಿಕೆಯಲ್ಲಿ ಆನಂದ!' ದೋಸೆ-ಇಡ್ಲಿ ಹಿಟ್ಟು ಮಾರುವ, ಬೆಂಗಳೂರು ಮೂಲದ Batterbox ಎಂಬ ಕಂಪನಿಯ ಜಾಹಿರಾತು. ಅದರಲ್ಲಿ 'Enjoyment in Every Bite' ಎಂಬ ಇಂಗ್ಲಿಷ್ ವಾಕ್ಯ ಕನ್ನಡದಲ್ಲಿ 'ಪ್ರತಿ ಕಚ್ಚುವಿಕೆಯಲ್ಲಿ ಆನಂದ ಆಗಿತ್ತು.' ''ನೀವು ಮನೆಯಲ್ಲಿ ಹಿಟ್ಟು ರುಬ್ಬುವುದು ಬೇಕಿಲ್ಲ, ರುಬ್ಬಿ ರೆಡಿ ಇರುವ ಹಿಟ್ಟನ್ನು ನಮ್ಮಿಂದ ಕೊಂಡುಕೊಳ್ಳಿ. ಗರಿಗರಿಯಾದ ದೋಸೆ ಮಾಡಿ. ರುಚಿರುಚಿಯಾಗಿ ಇರುತ್ತದೆ. ಪ್ರತಿ ತುತ್ತು ಸವಿಯುವಾಗಲೂ ನಿಮಗೆ ಆನಂದ ಸಿಗುತ್ತದೆ'' ಎನ್ನುವುದನ್ನು ಒಂದೇ ಒಂದು ಪವರ್‌ಫುಲ್ ಪಂಚ್‌ಲೈನ್ ಮೂಲಕ ಹೇಳುವ ಪ್ರಯತ್ನ ಆ ಜಾಹಿರಾತಿನದು. ಅದರಲ್ಲೇನೂ ತಪ್ಪಿಲ್ಲ. ಜಾಹಿರಾತೆಂದರೆ ಹಾಗೆಯೇ. ಆದರೆ ಗೂಗಲ್ ಅನುವಾದದಿಂದಾಗಿ ಆಭಾಸವಾಗಿತ್ತು. ವಾಟ್ಸ್ಯಾಪ್ ಫೇಸ್‌ಬುಕ್‌ಗಳಲ್ಲಿ ಆ ಜಾಹಿರಾತಿನ ಚಿತ್ರ ಹರಿದಾಡಿತು. ಹಿಟ್ಟು ರುಬ್ಬುವ ಕಂಪನಿಯನ್ನೇ ನೆಟ್ಟಿಗರು ಚೆನ್ನಾಗಿ ರುಬ್ಬಿದರು. ನಗೆಪಾಟಲಿಗೀಡಾದ ಕಂಪನಿ ಆ ಜಾಹಿರಾತನ್ನು ಸರಿಪಡಿಸಿಕೊಂಡಿತೋ ಏನೋ. ಆಯ್ತುಬಿಡಿ, ಮುಂದೆ ಇನ್ಯಾವುದೋ ಕಂಪನಿಯ ಜಾಹಿರಾತಿನಲ್ಲಿ ಮತ್ತಿನ್ನೇನೋ ಹಾಸ್ಯಾಸ್ಪದ ಆಭಾಸ ನಮ್ಮ ಕಣ್ಮನಗಳನ್ನು ತಣಿಸಲಿಕ್ಕೆಂದೇ ಉದಯಿಸುತ್ತದೆ. ಏಕೆಂದರೆ ಗೂಗಲ್‌ನ ಮಂತ್ರ ಅರ್ಥಮನರ್ಥಂ ಭಾವಯ ನಿತ್ಯಮ್.

ಅದಿರಲಿ, 'ಪ್ರತಿ ಕಚ್ಚುವಿಕೆಯಲ್ಲಿ ಆನಂದ' ವಾಕ್ಯವನ್ನೇ ಇನ್ನೊಮ್ಮೆ ಗಮನಿಸಿ. ದೋಸೆಹಿಟ್ಟಿನ ಜಾಹಿರಾತಿನಲ್ಲಿ ಅದು ಅಸಂಬದ್ಧವೇ, ಒಪ್ಪಿಕೊಳ್ಳೋಣ. ಆದರೆ, ಒಂದು ಸ್ವತಂತ್ರ ವಾಕ್ಯದಂತೆ ನೋಡಿದರೆ ಅದು ಬಹಳ ಅರ್ಥಪೂರ್ಣವೇ ಆಗುತ್ತದೆ. ಹೇಗಂತೀರಾ? ಬೇರೆಬೇರೆ ಸಂದರ್ಭಗಳಿಗೆ ತಕ್ಕಂತೆ ಅದನ್ನು ಅರ್ಥಗರ್ಭಿತ ಮಾಡಲಿಕ್ಕೆ ಆಗುತ್ತದೆ. ಉದಾಹರಣೆಗೆ– ಸೊಳ್ಳೆಗಳು ಹಾಗೆ ಹೇಳಿದ್ದಿರಬಹುದು! ಯಾವುದೇ ಮಸ್ಕಿಟೊ ರಿಪೆಲ್ಲೆಂಟ್‌ಗಳಿಗೂ ಜಗ್ಗದೆ ಮನುಷ್ಯರ ಮೇಲೆ ಸತತ ದಾಳಿ ನಡೆಸಿ ಬಿಸಿಬಿಸಿ ರಕ್ತ ಚಪ್ಪರಿಸುವ ಸೊಳ್ಳೆಗಳಿಗೆ 'ಪ್ರತಿ ಕಚ್ಚುವಿಕೆಯಲ್ಲಿ ಆನಂದ' ಸಿಗದಿರುತ್ತದೆಯೇ? ಎಲ್ಲೋ ಒಂದೆರಡಷ್ಟೇ ನಿಮ್ಮ ಕೈಯೇಟಿಗೆ ಅಪ್ಪಚ್ಚಿಯಾಗಿ ಜೀವ ಕಳೆದುಕೊಂಡಾವೆಯೇ ಹೊರತು ಮಿಕ್ಕವುಗಳಿಗೆ ರಕ್ತಸಂತರ್ಪಣೆಯ ಆನಂದವೋ ಆನಂದ.

ಬೆಕ್ಕಿನ ಮರಿಗಳು, ನಾಯಿಮರಿಗಳು ಪರಸ್ಪರ ಕಚ್ಚಿಕೊಳ್ಳುತ್ತ ಆಟ ಆಡುವುದನ್ನು ನೀವು ಗಮನಿಸಿರಬಹುದು. ಅದೇನೂ ಮಾರಾಮಾರಿ ಜಗಳ ಅಲ್ಲ, ಮೋಜಿನ ಆಟ. ಆ ಆಟದಲ್ಲಿ ಅವುಗಳಿಗೂ 'ಪ್ರತಿ ಕಚ್ಚುವಿಕೆಯಲ್ಲಿ ಆನಂದ'ವೇ. ತಾಯಿಬೆಕ್ಕು ತನ್ನ ಮರಿಗಳನ್ನು ಬಾಯಿಯಲ್ಲಿ ಕಚ್ಚಿಕೊಂಡೇ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವುದನ್ನೂ ನೀವು ನೋಡಿರಬಹುದು. ಅದು ಕೂಡ ಒಂದು ವಿಧದಲ್ಲಿ ಆನಂದದಾಯಕ ಕಚ್ಚುವಿಕೆಯೇ. ತಾಯಿಬೆಕ್ಕಿನ ದೃಷ್ಟಿಯಿಂದ ಮರಿಗಳ ಬಗೆಗಿನ ಪ್ರೀತಿವಾತ್ಸಲ್ಯ ಆ ಕಚ್ಚುವಿಕೆಯಲ್ಲಿರುವುದು. ಮರಿಗಳ ದೃಷ್ಟಿಯಿಂದ ಅದು ಅಮ್ಮನ ಆಶ್ರಯದ ಅಭಯ. ಕೋರೆಹಲ್ಲುಗಳಿಂದಲೇ ಕಚ್ಚಿದ್ದರೂ ಮರಿಗಳಿಗೆ ಒಂಚೂರೂ ನೋವಾಗುವುದಿಲ್ಲ. ಬಿದ್ದುಬಿಡುತ್ತೇವೆಂದು ಭಯವಿರುವುದಿಲ್ಲ. ಅವು ಆನಂದದಿಂದಲೇ ಇರುತ್ತವೆ. ಸಂಸ್ಕೃತದಲ್ಲಿ ಇದನ್ನು 'ಮಾರ್ಜಾಲಕಿಶೋರನ್ಯಾಯ' ಎಂದು ಲೋಕೋಕ್ತಿಯಾಗಿ ಬಳಸುವುದಿದೆ– ಭಕ್ತನು ಯಾವ ಚಿಂತೆಯನ್ನೂ ಹಚ್ಚಿಕೊಳ್ಳದೆ ಎಲ್ಲವನ್ನೂ ಭಗವಂತನಿಗೆ ಒಪ್ಪಿಸಿ ಶಾಂತನಾಗಿರುತ್ತಾನೆ, ಭಕ್ತನ ರಕ್ಷಣೆಯ ಹೊಣೆಯೆಲ್ಲವೂ ಆತನ ಸ್ವಾಮಿಗೆ ಸೇರಿದ್ದಾಗಿರುತ್ತದೆ– ಎಂಬ ವಿವರಣೆಯ ಸಂದರ್ಭದಲ್ಲಿ. ದೇವರೆಂದರೆ ತಾಯಿಬೆಕ್ಕು, ಭಕ್ತರೆಂದರೆ ಬೆಕ್ಕಿನಮರಿಗಳು. ಕಚ್ಚುವಿಕೆಯನ್ನು ಕಷ್ಟಕಾರ್ಪಣ್ಯವೆಂದು ತಪ್ಪಾಗಿ ಅರ್ಥೈಸಿಕೊಳ್ಳುತ್ತೇವೆ. ಅವು ಕಷ್ಟಗಳಲ್ಲ, ದೇವರು ನಮ್ಮನ್ನು ರಕ್ಷಿಸುವ ವಿಧಾನ. ಆ ಕಚ್ಚುವಿಕೆಯನ್ನು ನಾವು ಆನಂದಿಸಬೇಕು.

ಬೆಕ್ಕು ಮಾತ್ರವಲ್ಲ, ಆ ರೀತಿ ಮರಿಗಳನ್ನು ಕಚ್ಚಿಕೊಂಡು ಸಾಗಿಸುವಿಕೆ ಮಾರ್ಜಾಲ ಪ್ರಭೇದದ ಹುಲಿ ಚಿರತೆ ಮುಂತಾದುವಲ್ಲೂ ಇದೆ. ಎಷ್ಟು ನಾಜೂಕಿನ ಕಚ್ಚುವಿಕೆಯೆಂದರೆ ಅದನ್ನು ಮನುಷ್ಯನ ಮಾತು ಅಥವಾ ಅಕ್ಷರಗಳನ್ನು ಉಚ್ಚರಿಸುವ ರೀತಿ ಹೇಗಿರಬೇಕು ಎಂಬುದಕ್ಕೆ ದೃಷ್ಟಾಂತವಾಗಿ ಬಳಸಲಾಗಿದೆ. ಪಾಣಿನಿಯ ಶಿಕ್ಷಾಶಾಸ್ತ್ರದಲ್ಲಿ ಒಂದು ಶ್ಲೋಕ ಹೀಗಿದೆ: ''ವ್ಯಾಘ್ರೀ ಯಥಾ ಹರೇತ್ ಪುತ್ರಾನ್ ದಂಷ್ಟ್ರಾಭ್ಯಾಂ ನ ಚ ಪೀಡಯೇತ್। ಭೀತಾ ಪತನಭೇದಾಭ್ಯಾಂ ತದ್ವದ್ವರ್ಣಾನ್ ಪ್ರಯೋಜಯೇತ್॥'' ಇದರ ಅರ್ಥ– ಪ್ರತಿಯೊಂದು ವರ್ಣವನ್ನು ಉಚ್ಚರಿಸುವಾಗಲೂ ಅದು ಎಷ್ಟು ಪ್ರಯತ್ನದಿಂದ ಮತ್ತು ಸ್ಫುಟತೆಯಿಂದ ಕೂಡಿರಬೇಕೆಂದರೆ ತಾಯಿ ಹುಲಿಯು ತನ್ನ ಮರಿಯನ್ನು ಬಾಯಿಯಲ್ಲಿ ಕಚ್ಚಿ ಹಿಡಿದು ಎತ್ತಿ ಸಾಗುವಂತೆ. ಮರಿಗೆ ನೋವೂ ಆಗಬಾರದು, ಬಾಯಿಯಿಂದ ಜಾರಿ ಬೀಳಲೂಬಾರದು. ನಮ್ಮ ಉಚ್ಚಾರವೂ ಅಷ್ಟೇ: ತೀರ ಹಲ್ಲುಗಳನ್ನು ಗಟ್ಟಿಯಾಗಿ ಕಚ್ಚಿಕೊಂಡು ಮಾತಾಡುವುದೂ ಸಲ್ಲ, ಹಲ್ಲಿಲ್ಲದವರಂತೆ ಮಾತುಗಳನ್ನು ಯದ್ವಾತದ್ವಾ ಉದುರಿಸುವುದೂ ಸಲ್ಲ. ಉಚ್ಚಾರದಲ್ಲಿ 'ಕಚ್ಚುವಿಕೆ' ಹೇಗಿರಬೇಕೆಂದರೆ ಮಾತನಾಡುವವನಿಗೂ ಕೇಳುಗನಿಗೂ ಆನಂದದಾಯಕವಾಗಬೇಕು.

ಇನ್ನೊಂದು ಆನಂದದಾಯಕ ಕಚ್ಚುವಿಕೆ ಒಲಿಂಪಿಕ್ಸ್ ಪಂದ್ಯಗಳಲ್ಲಿ ಪದಕವಿಜೇತ ಕ್ರೀಡಾಳುಗಳು ಪದಕವನ್ನು ಬಾಯಿಯಲ್ಲಿ ಕಚ್ಚಿಕೊಳ್ಳುವುದು. ಇದನ್ನೂ ನೀವು ಫೋಟೊಗಳಲ್ಲಿ, ವಿಡಿಯೊಗಳಲ್ಲಿ ನೋಡಿಯೇಇರುತ್ತೀರಿ. ಇದಕ್ಕೆ ಸ್ವಲ್ಪ ಚರಿತ್ರೆಯೂ ಇದೆ. 1896ರಲ್ಲಿ ಅಥೆನ್ಸ್‌ನಲ್ಲಿ ಮೊತ್ತಮೊದಲ ಆಧುನಿಕ ಒಲಿಂಪಿಕ್ಸ್



ಆರಂಭವಾದಾಗ ಚಿನ್ನದ ಪದಕ ನೀಡುವ ಕ್ರಮವಿರಲಿಲ್ಲ. ಬೆಳ್ಳಿ ಮತ್ತು ಕಂಚಿನ ಪದಕಗಳು ಮೊದಲೆರಡು ಸ್ಥಾನಗಳಿಗೆ. 1900ರಲ್ಲಿ ಪದಕಗಳೇ ಇರಲಿಲ್ಲ, ಟ್ರೋಫಿ ಮತ್ತು ಕಪ್ ರೀತಿಯ ಬಹುಮಾನ. 1904ರಲ್ಲಿ ಮೊದಲಬಾರಿಗೆ ಅಪ್ಪಟ ಚಿನ್ನದ ಪದಕಗಳನ್ನು ನೀಡಲಾಯಿತು. 1908 ಮತ್ತು 1912ರಲ್ಲೂ ಆ ಕ್ರಮ ಮುಂದುವರೆಯಿತು. ಪದಕ ಅಪ್ಪಟ ಚಿನ್ನದ್ದೇ ಹೌದುತಾನೆ ಎಂದು ದೃಢಪಡಿಸಲಿಕ್ಕೆ ವಿಜೇತರು ಅದನ್ನು ಹಲ್ಲುಗಳಿಂದ ಲಘುವಾಗಿ ಕಚ್ಚುತ್ತಿದ್ದರಂತೆ. ಚಿನ್ನ ಮೃದುಲೋಹವಾದ್ದರಿಂದ ಅಂತಹ ಪರೀಕ್ಷೆ. 1916ರಿಂದೀಚೆಗೆ, ಅಂದರೆ ಮೊದಲ ಪ್ರಪಂಚಯುದ್ಧದ ಬಳಿಕ ಪದಕಗಳು ಅಪ್ಪಟ ಚಿನ್ನದ್ದಾಗಿರದೆ ಬೆಳ್ಳಿ ಮತ್ತು ತಾಮ್ರದ ಮಿಶ್ರಣಕ್ಕೆ ಚಿನ್ನದ ಲೇಪ ಅಷ್ಟೇ. ಆದರೆ ಈಗಲೂ ವಿಜೇತರು ಪದಕವನ್ನು ಕಚ್ಚಿ ನೋಡುವುದು ಒಂದು ಸಂಪ್ರದಾಯವೇ ಆಗಿದೆ. ಕ್ರೀಡಾಳುಗಳು ಹಾಗೆ ಮಾಡದಿದ್ದರೂ ಫೋಟೊಗ್ರಾಫರರೇ ಒತ್ತಾಯಿಸುತ್ತಾರೆ, ಅದೊಂದು ಆಕರ್ಷಕ ಐಕಾನಿಕ್ ಫೋಟೊ ಆಗುತ್ತದೆಂಬ ಕಾರಣಕ್ಕೆ. 2010ರ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಜರ್ಮನಿಯ ಕ್ರೀಡಾಳು ಡೇವಿಡ್ ಮ್ಯುಲ್ಲರ್ ಎಂಬಾತ ತಾನು ಗೆದ್ದ ಬೆಳ್ಳಿಪದಕವನ್ನು ಕಚ್ಚುವಾಗ ಹಲ್ಲು ಮುರಿದುಕೊಂಡ ಘಟನೆಯೂ ನಡೆದಿದೆ. ಈಗೀಗ ಒಲಿಂಪಿಕ್ಸ್ ಮಾತ್ರವಲ್ಲ ಬೇರೆ ಕ್ರೀಡೆ/ಪಂದ್ಯಗಳ ವಿಜೇತರೂ ಪದಕವನ್ನು ಕಚ್ಚುತ್ತಾರೆ. ಮೊನ್ನೆ ಐಸಿಸಿ–ಟಿ20 ವಿಜೇತ ತಂಡದಲ್ಲಿ ಹಾರ್ದಿಕ್ ಪಾಂಡ್ಯ ಮತ್ತೊಂದಿಬ್ಬರು ಪದಕ ಕಚ್ಚಿಕೊಂಡು ಫೋಟೊಗೆ ಪೋಸ್ ಕೊಟ್ಟಿದ್ದರು.

ಈಗ ನೀವು ಈ ಅಂಕಣದಲ್ಲಿ ಊಹಿಸಿರಲಾರದ, ಆದರೆ ಜತೆಯಲ್ಲಿರುವ ಚಿತ್ರದಿಂದ ಅಂದಾಜಿಸಿರಬಹುದಾದ, 'ಪ್ರತಿ ಕಚ್ಚುವಿಕೆಯಲ್ಲಿ ಆನಂದವೊಂದನ್ನು ವ್ಯಾಖ್ಯಾನಿಸುತ್ತೇನೆ. ಇದು ಗಂಡು–ಹೆಣ್ಣಿನ ಪ್ರಣಯದ ಆಟದಲ್ಲಿ, ಅರ್ಥಾತ್ ರತಿಕ್ರೀಡೆಯಲ್ಲಿ ಅಥವಾ ಮಿಲನಮಹೋತ್ಸವದಲ್ಲಿ ಸಂಭವಿಸುವ ಪ್ರೀತಿಭರಿತ ಕಚ್ಚುವಿಕೆ. ಇದರ ಬಗ್ಗೆ ವಾತ್ಸ್ಯಾಯನನ ಕಾಮಸೂತ್ರದಲ್ಲಿ 'ದಶನಚ್ಛೇದ್ಯ' ಎಂಬೊಂದು ಪ್ರತ್ಯೇಕ ಅಧ್ಯಾಯವೇ ಇದೆ. ಪರಸ್ಪರ ಕಚ್ಚುವಿಕೆಯಿಂದ ಪ್ರೇಮಿಗಳ ಮೈಮೇಲೆ ಮೂಡುವ ಗುರುತುಗಳಿಗೆ 'ದಂತಕ್ಷತ' ಎಂಬ ಚಂದದ್ದೊಂದು ಹೆಸರೂ ಇದೆ. ಮೇಲ್ತುಟಿ, ಬಾಯಿಯ ಒಳಭಾಗ(ನಾಲಗೆ) ಮತ್ತು ಕಣ್ಣುಗಳು– ಇವಿಷ್ಟನ್ನು ಹೊರತುಪಡಿಸಿ ಎಲ್ಲಿಯೂ ಕಚ್ಚಬಹುದು. ಅದರಲ್ಲೂ 'ಅಧರ'(ಕೆಳತುಟಿ) ಪರಮಾವಧಿ ಕಚ್ಚುವಿಕೆಗೆ ಒಳಗಾಗುವುದು. ಸಂಸ್ಕೃತ ಭಾಷೆಯನ್ನು ಶೃಂಗಾರಕ್ಕೆ ಎಷ್ಟು ಅಣಿಗೊಳಿಸಲಾಗಿದೆ ನೋಡಿ. ಬೇರೆಲ್ಲ ಭಾಷೆಗಳಲ್ಲಿ ತುಟಿಗಳೆರಡಕ್ಕೂ ಒಂದೇ ಪದ ಇರುವುದಾದರೆ ಸಂಸ್ಕೃತದಲ್ಲಿ ತುಟಿ ಎಂಬರ್ಥದ ಓಷ್ಠ ಪದವಲ್ಲದೆ ಕೆಳತುಟಿಗಷ್ಟೇ ಬಳಕೆಯಾಗುವ ಅಧರ ಎಂಬ ಪದ! ಸಂಸ್ಕೃತ ಕವಿಗಳು ಅದನ್ನು ಅಧರಂ ಮಧುರಂ ಎಂದು ಬಣ್ಣಿಸಿದ್ದೇ ಬಣ್ಣಿಸಿದ್ದು. ನಮ್ಮ ಬೇಂದ್ರೆಯವರೂ 'ಬಿದಿಗೆಯ ಬಿಂಬಾಧರದಲಿ ಇಂದಿಗು ಮಿಲನದ ಚಿಹ್ನವು ತೋರದಿದೆ... ಎನ್ನುವಲ್ಲಿ ಅಧರವನ್ನೂ, ಅದರ ಮೇಲೆ ಕಾಣಬೇಕಿದ್ದ ಕಚ್ಚಿದ ಗುರುತನ್ನೂ ರಸಮಯವಾಗಿ ಬಣ್ಣಿಸಿದ್ದಾರೆ.

ವಾತ್ಸ್ಯಾಯನನ ಪ್ರಕಾರ ಎಂಟು ವಿಧದ ದಂತಕ್ಷತಗಳಿರುತ್ತವೆ. ಅವುಗಳ ಸಂಕ್ಷಿಪ್ತ ವಿವರ ಹೀಗಿದೆ: 'ಗೂಢಕ' ಅಂದರೆ ಅತಿಹಗುರವಾಗಿ, ಯಾವುದೇ ಗುರುತು ಮೂಡದಂತೆ ಅಧರವನ್ನು ಕಚ್ಚುವುದು. 'ಉಚ್ಛೂನಕ' ಅಂದರೆ ಅಧರವನ್ನೇ– ಗಾಯವಾಗಿ ತುಟಿ ಊದಿಕೊಳ್ಳುವಷ್ಟು ತೀವ್ರವಾಗಿ ಕಚ್ಚುವುದು. 'ಬಿಂದು' ಪ್ರಕಾರದಲ್ಲಿ ಕಚ್ಚುವವರು ತಮ್ಮ ಕೆಳ ದಂತಪಂಕ್ತಿ ಮತ್ತು ಮೇಲ್ತುಟಿಯನ್ನಷ್ಟೇ ಬಳಸಿರುತ್ತಾರೆ, ಕಚ್ಚಿಸಿಕೊಂಡವರಿಗೆ ಗಾಯದ ಗುರುತುಗಳು ಬಿಂದುಮಾತ್ರ ಇರುತ್ತವೆ. 'ಬಿಂದುಮಾಲಾ'ದಲ್ಲಿ ಹಲ್ಲುಗಳಿಂದಾದ ಗುರುತುಗಳು ಮಾಲೆಯಂತೆ ಕಾಣುತ್ತವೆ, ಕಚ್ಚಿಸಿಕೊಳ್ಳುವ ಜಾಗ ಹಣೆ ಮತ್ತು ತೊಡೆ. 'ಪ್ರವಾಲಮಣಿ'ಯಲ್ಲಿ ಮೇಲಿನ ಬಾಚಿಹಲ್ಲುಗಳನ್ನು ಬಳಸಿ ಗಲ್ಲ ಅಥವಾ ಕುತ್ತಿಗೆಗೆ(ಸಿಂಹ ಸಿಂಹಿಣಿಗೆ ಮಾಡಿದಂತೆ) ಕಚ್ಚುವುದು. 'ಮಣಿಮಾಲಾ' ಅಂದರೆ ಯಾವುದೇ ಒಂದು ಜಾಗದಲ್ಲಿ ಆದರೆ ಅನೇಕ ಮಾಲೆಗಳ ರೀತಿಯ ಗುರುತುಗಳನ್ನು ಮೂಡಿಸುವ ಕಚ್ಚುವಿಕೆ. 'ಖಂಡಾಭ್ರಕ'ದಲ್ಲಿ ಅಲ್ಲಲ್ಲಿ ಚದುರಿದ ಮೋಡಗಳಂತೆ ಮುಖ್ಯವಾಗಿ ಎದೆ ಮೇಲೆ ಕಚ್ಚಿದ ಗುರುತುಗಳು. 'ವರಾಹಚರ್ವಿತ' ಅಂದರೆ ಕಾಡುಹಂದಿ ಹೊಲದಲ್ಲಿ ನುಗ್ಗಿದರೆ ಹೇಗಿರುತ್ತದೋ ಹಾಗೆ ಮೈಮೇಲೆ ಎಲ್ಲೆಂದರಲ್ಲಿ ಗುರುತುಗಳಾಗುವಂಥ ತೀವ್ರ ಕಚ್ಚುವಿಕೆ. ಹಾಗಂತ ಇವ್ಯಾವುವೂ ಹಿಂಸಾತ್ಮಕವಲ್ಲ, ಹೆಣ್ಣು–ಗಂಡು ಭೇದವಿಲ್ಲದೆ, ಕಚ್ಚುವವರಿಗೂ ಕಚ್ಚಿಸಿಕೊಳ್ಳುವವರಿಗೂ ಪರಮಾನಂದ ನೀಡುವ ಕಚ್ಚುವಿಕೆಗಳೇ. ಜಯಂತ ಕಾಯ್ಕಿಣಿಯವರ ಮುಂಗಾರುಮಳೆ ಭಾಷೆಯಲ್ಲಿ ಹೇಳುವುದಾದರೆ ''ಆಹಾ ಎಂಥ ಮಧುರ ಯಾತನೆ...''. ಇದನ್ನು ನೀಲಕಂಠ ದೀಕ್ಷಿತನೆಂಬ ಕವಿ ತಮಾಷೆಯಾಗಿ ಬಣ್ಣಿಸಿದ್ದಾನೆ: ''ದಂತೋಲ್ಲೇಖ ನಖಕ್ಷತಾದಿದಯಿತವ್ಯಾಪಾರಪಾರಂಪರೀ। ನಿರ್ಗ್ಲಾನಾಪಿ ಹಿ ಕಾಮಿನೀ ದಿನಮುಖೇ ನಿಸ್ಸೀಮಮಾನಂದತಿ। ಮಾರ್ಜಾರೀ ನಖರಾಂಕುರಾಖು ದಶನವ್ಯಾವಿಧ್ಯಮಾನಾ ಮನಾ। ಗಾಯುರ್ವೇದವಿದೋಽಭಿಗಚ್ಛತಿ ರುದತ್ಯಾಸನ್ನಮೃತ್ಯುರ್ಯಥಾ॥'' ಅಂದರೆ ಪ್ರಿಯತಮನಿಂದ ದಂತಕ್ಷತ–ನಖಕ್ಷತಗಳನ್ನು ಪಡೆದ ಸುಂದರಿಗೆ ಮುಂಜಾನೆಯ ವೇಳೆಗೆ ದೈಹಿಕವಾಗಿ ಅಷ್ಟಿಷ್ಟು ನೋವುಂಟಾಗಿದ್ದರೂ ಅದಕ್ಕೆ ಮಿಗಿಲಾದ ಆನಂದವನ್ನು ಅವಳು ಪಡೆದಿರುತ್ತಾಳೆ. ಆದರೆ ಅದೇ ಪ್ರಿಯತಮೆ ಒಂದುವೇಳೆ ಇಲಿ–ಬೆಕ್ಕುಗಳ ಉಗುರು–ಹಲ್ಲುಗಳಿಂದ ನೋಯಿಸಿಕೊಂಡರೆ ಸಾವೇ ಎದುರಾದಂತೆ ಸಂಕಟಪಡುತ್ತ ವೈದ್ಯರತ್ತ ಧಾವಿಸುತ್ತಾಳೆ!

ವಾತ್ಸ್ಯಾಯನನಿಗೆ ಥ್ಯಾಂಕ್ಸ್ ಹೇಳುತ್ತ 'ಪ್ರತಿ ಕಚ್ಚುವಿಕೆಯಲ್ಲೂ ಆನಂದವನ್ನು ಸಂಸ್ಕೃತದ ಬೇರೆಬೇರೆ ಕವಿಗಳು ತಮ್ಮ ಕಾವ್ಯಗಳ ಶೃಂಗಾರ ಸನ್ನಿವೇಶಗಳಲ್ಲಿ ವರ್ಣರಂಜಿತವಾಗಿ ಬಳಸಿಕೊಂಡಿದ್ದಾರೆ. ಕಾಳಿದಾಸನ ಕುಮಾರಸಂಭವದಲ್ಲಿ ಶಿವ–ಪಾರ್ವತಿಯರ ಪ್ರಣಯಲೀಲೆ: ನಿದ್ದೆಯಿಲ್ಲದೆ ಕಣ್ಣು ಕೆಂಪಾದ, ಅಧರದಲ್ಲಿ ಕಚ್ಚಿದ ಗುರುತುಳ್ಳ, ತಲೆಗೂದಲು ಅಸ್ತವ್ಯಸ್ತವಾಗಿದ್ದ, ಹಣೆಮೇಲಿನ ಕುಂಕುಮವೂ ಕರಗಿಹೋಗಿದ್ದ ಪಾರ್ವತಿಯನ್ನು ಕಂಡು ಶಿವನಿಗೆ ಮತ್ತಷ್ಟು ಮುದವಾಯಿತಂತೆ. ಶಿವನು ಕಚ್ಚಿದ್ದರಿಂದ ಆದ ತನ್ನ ಅಧರದ ನೋವನ್ನು ಅವನದೇ ತಲೆಯಲ್ಲಿದ್ದ ತಂಪು ಚಂದ್ರನತ್ತ ಮುಖವನ್ನೊಡ್ಡುತ್ತ ಪಾರ್ವತಿ ತತ್‌ಕ್ಷಣವೇ ಪರಿಹರಿಸಿಕೊಂಡಳಂತೆ! ಶಿಶುಪಾಲವಧೆ ಕಾವ್ಯದಲ್ಲಿ ಮಾಘಕವಿಯು ''ಆ ನಿರಾಭರಣಸುಂದರಿಯರಿಗೆ ಅಧರದ ಮೇಲಿನ ಗಾಯಗಳೇ ಆಭರಣವಾಗಿದ್ದವು. ಊದಿಕೊಂಡು ಬಿಂಬಹಣ್ಣಿನಂತಾಗಿದ್ದ ಅಧರದ ನೋವನ್ನು ಅವರ ಬಳೆಗಳ ಧ್ವನಿಯೇ ಹೇಳುತ್ತಿತ್ತು'' ಎಂದಿದ್ದಾನೆ. ಶ್ರೀಹರ್ಷನ ನೈಷಧೀಯಚರಿತದಲ್ಲಿ ನಳನ ಮಾತುಗಳು: ''ದಮಯಂತಿಯ ಅಧರವು ಗಾಯಗೊಂಡು ಊದಿದಂತೆ ಕಾಣುತ್ತಿದೆ. ಅವಳ ಕನಸಲ್ಲಿ ಬಂದ ನಾನೇ ಕಚ್ಚಿದೆನೇ? ನಾನು ಹಾಗೆ ಮಾಡಿದರೂ ಆಕೆಯೇನೂ ಮುನಿಸಿಕೊಳ್ಳುವುದಿಲ್ಲ. ಬಿಂಬಫಲವನ್ನು ಗಿಳಿ ಕಚ್ಚಿದರೆ ಬಿಂಬಫಲದ ಬಳ್ಳಿ ಸಿಟ್ಟಾಗುವುದಿಲ್ಲವಲ್ಲ?'' ಜಯದೇವನ ಗೀತಗೋವಿಂದದಲ್ಲಿ ಕೃಷ್ಣನ ಅಧರವೇ ಊದಿಕೊಂಡಿದೆ! ''ದಶನಪದಂ ಭವದಧರಗತಂ ಮಮ ಜನಯತಿ ಚೇತಸಿ ಖೇದಮ್'' ಎನ್ನುತ್ತಾಳೆ ರಾಧೆ, ಸಿಟ್ಟಿನಿಂದ. ''ರಾತ್ರಿಯಿಡೀ ಯಾರೋ ಗೋಪಿಕೆಯೊಡನೆ ಲಲ್ಲೆಗರೆದು ಬಂದಿದ್ದೀ. ನಿನ್ನ ತುಟಿಯಲ್ಲಿ ಉಂಟಾಗಿರುವ ಗಾಯಗಳು ನನ್ನನ್ನು ನೋಯಿಸುತ್ತಿವೆ. ನನ್ನ ಮುಂದೆ ನಿನ್ನದೇನೂ ತಪ್ಪಿಲ್ಲವೆಂದು ಹೇಗೆ ಹೇಳುತ್ತಿ?'' ಅದಕ್ಕೆ ಕೃಷ್ಣನೆನ್ನುತ್ತಾನೆ: ''ರಾಧೇ, ನನ್ನ ಮೇಲೆ ಸಂಶಯವಿದ್ದರೆ ನನ್ನನ್ನು ಶಿಕ್ಷಿಸು. ನಿರ್ದಾಕ್ಷಿಣ್ಯವಾಗಿ ನನ್ನ ತುಟಿಯನ್ನು ಕಚ್ಚು, ನಿನ್ನ ಬಾಹುಗಳೆಂಬ ಬಳ್ಳಿಯಿಂದ ನನ್ನನ್ನು ಬಂಧಿಸು. ನಿನ್ನ ಸ್ತನಭಾರದಿಂದ ನನ್ನನ್ನು ಅಪ್ಪಚ್ಚಿಗೊಳಿಸು.'' ಹೀಗೆಯೇ, ಅನಂತಭಟ್ಟನೆಂಬ ಕವಿಯು ಅರ್ಜುನನು ಹಿಮಾಲಯಕ್ಕೆ ಹೋಗಿದ್ದೇಕೆ ಎಂದು ಬಣ್ಣಿಸಿದ್ದಾನೆ– ನಾಗಕನ್ಯೆ ಉಲೂಪಿಯು ಪ್ರಣಯಕೇಳಿಯಲ್ಲಿ ಅರ್ಜುನನ ಮೈಗೆಲ್ಲ ಕಚ್ಚಿದ್ದಳಂತೆ, ಆ ಗಾಯಗಳ ಉರಿಯನ್ನು ಶಮನಗೊಳಿಸಲಿಕ್ಕೆಂದು ತಂಪಾದ ಹಿಮಾಲಯದತ್ತ ನಡೆದನಂತೆ! ದಂಡಿಯ ದಶಕುಮಾರ ಚರಿತೆಯಲ್ಲಿ ಇಂತಹ ಬಣ್ಣನೆ ಮತ್ತಷ್ಟು ರಂಗೇರುತ್ತದೆ. ಮಂತ್ರಗುಪ್ತನೆಂಬ ರಾಜಕುಮಾರನು ತನ್ನ ಶೃಂಗಾರಸಾಹಸವನ್ನು ಬಣ್ಣಿಸುವ ಸಂದರ್ಭದಲ್ಲಿ ನಿರೋಷ್ಠ್ಯವಾಗಿ ಮಾತನಾಡುತ್ತಾನೆ. ಅಂದರೆ ಅವನ ಮಾತಿನಲ್ಲಿ ಪ, ಫ, ಬ, ಭ, ಮ ಅಕ್ಷರಗಳೇ ಬರುವುದಿಲ್ಲ, ಹಿಂದಿನ ರಾತ್ರಿ ಅವನ ಪ್ರಿಯತಮೆಯು ತುಟಿ ಕಚ್ಚಿದ್ದರಿಂದ, ಆ ಗಾಯಗಳಿಂದಾಗಿ ಪ–ವರ್ಗದ ಅಕ್ಷರಗಳನ್ನು ಉಚ್ಚರಿಸುವ ಸಾಮರ್ಥ್ಯವನ್ನು ಆತ ತಾತ್ಕಾಲಿಕವಾಗಿ ಕಳೆದುಕೊಂಡಿದ್ದರಿಂದ! ಆಶ್ಚರ್ಯವಾಗುತ್ತದೆ ನಿಜವಾಗಿಯೂ ಆ ಪಾತ್ರಗಳಿಗೇ ಅಷ್ಟೆಲ್ಲ ಶೃಂಗಾರಪ್ರಜ್ಞೆ ಇತ್ತೇ ಅಥವಾ ಅವುಗಳನ್ನು ಬಣ್ಣಿಸಿದ ಕವಿಗಳ ರಸಿಕತೆಯ ಪರಾಕಾಷ್ಠೆಯೇ? ಏನಿದ್ದರೂ ಇದೆಲ್ಲವೂ 'ಪ್ರತಿ ಕಚ್ಚುವಿಕೆಯಲ್ಲಿ ಆನಂದ' ಅಲ್ಲದೆ ಮತ್ತೇನು? ಹೌದು, ಮಧುರವಾದ ಮತ್ತೇ!

ತ್ರಿಭಾಷಾ ಸೂತ್ರವಲ್ಲ, ಬೇಕಾದ್ದು ಬಹುಭಾಷೆಗಳಲ್ಲಿ ದ್ವಿಭಾಷೆ

ದೇಶದ ಎಲ್ಲ ಶಾಲೆಗಳಲ್ಲಿ ಹಿಂದಿಯನ್ನು ಕಡ್ಡಾಯ ಭಾಷೆಯಾಗಿ ಕಲಿಸಬೇಕು ಎಂದು ನಮಗೆ ಸ್ವಾತಂತ್ರ್ಯ ಸಿಗುವ ಪೂರ್ವದಲ್ಲೇ ಅಂದರೆ 1938 ರಲ್ಲೇ ಈಸ್ಟ್ ಇಂಡಿಯಾ ಕಂಪನಿಯ ಸರಕಾರ ಆದೇಶಮಾಡಿತ್ತು ಮತ್ತು ದಕ್ಷಿಣ ಭಾರತೀಯರಿಂದ ಅದಕ್ಕೆ ವಿರೋಧವೂ ಅಂದಿನಿಂದಲೇ ಪ್ರಾಂಭವಾಗಿತ್ತು. ಹಾಗಾಗಿ ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಗೌರವಿಸಬೇಕೇ ಅಥವಾ ಕೇವಲ ಒಂದು ಕಲಿಕಾ ಭಾಷೆಯಾಗಿ ಸ್ವೀಕರಿಸಬೇಕೆ ಅಥವಾ ತ್ರಿಭಾಷಾ ಸೂತ್ರದಡಿಯಲ್ಲಿ ಮೂರನೇ ಭಾಷೆಯಾಗಿಯಾದರೂ ಕಡ್ಡಾಯವಾಗಿ ಕಲಿಯಬೇಕೆ ಎನ್ನುವ ಗೊಂದಲ ದಕ್ಷಿಣ ಭಾರತೀಯರಿಗೆ ಸ್ವಾತಂತ್ರ್ಯ ಪೂರ್ವದಿಂದಲೂ ಇದೆ.

ವಿದ್ಯಮಾನ

ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vinayakbhat1669@gmail.com

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಮೇಲಿನ ಶೈಕ್ಷಣಿಕ ಒತ್ತಡವನ್ನು ಕಡಿಮೆ ಮಾಡುವ ಹಿಂದಿ ಭಾಷೆಯ ಹೇರಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ, ಶಿಕ್ಷಣ ಸಚಿವರಾದ ಮಧು ಬಂಗಾರಪ್ಪ ಅವರು ಮಹತ್ವದ ನಿರ್ಧಾರಗಳನ್ನು ಪ್ರಕಟಿಸಿದ್ದಾರೆ. ಇನ್ಮುಂದೆ ಎಸ್.ಎಸ್.ಎಲ್.ಸಿ ಪರೀಕ್ಷೆಗಳಲ್ಲಿ 'ತೃತೀಯ ಭಾಷೆ'ಯನ್ನು ಗ್ರೇಡಿಂಗ್ ವ್ಯವಸ್ಥೆಗೆ ಒಳಪಡಿಸಲಾಗುವುದು ಎಂದು ತಿಳಿಸಿದ್ದಾರೆ. ಈವರೆಗೆ 625 ಅಂಕಗಳ ಪರೀಕ್ಷೆಯಲ್ಲಿ ತೃತೀಯ ಭಾಷೆಗೆ 100 ಅಂಕಗಳನ್ನು ನಿಗದಿಪಡಿಸಲಾಗಿತ್ತು. ಇನ್ಮುಂದೆ ತೃತೀಯ ಭಾಷೆಯಲ್ಲಿ ಪಾಸ್ ಅಥವಾ ಫೇಲ್ ಎಂಬ ಪದ್ಧತಿ ಇರುವುದಿಲ್ಲ. ಅಂದರೆ, ಅಂತಿಮ ಫಲಿತಾಂಶದ ಅಂಕಗಳಿಗೆ ತೃತೀಯ ಭಾಷೆಯ ಅಂಕಗಳನ್ನು ಪರಿಗಣಿಸಲಾಗುವುದಿಲ್ಲ. ಬದಲಾಗಿ, ಗ್ರೇಡಿಂಗ್ (ಉದಾಹರಣೆಗೆ: ಎ, ಬಿ, ಸಿ, ಡಿ) ನೀಡಲಾಗುತ್ತದೆ. ಹಿಂದಿ, ಸಂಸ್ಕೃತ, ತುಳು, ಮರಾಠಿ, ಅರೇಬಿಕ್ ಸೇರಿದಂತೆ ಪಠ್ಯಕ್ರಮದಲ್ಲಿರುವ ಎಲ್ಲಾ ತೃತೀಯ ಭಾಷೆಗಳಿಗೂ ಈ ನಿಯಮ ಅನ್ವಯವಾಗಲಿದೆ. ಕನ್ನಡವನ್ನೂ ತೃತೀಯ ಭಾಷೆಯಾಗಿ ತೆಗೆದುಕೊಳ್ಳುವ ಆಯ್ಕೆ ಇರುವುದರಿಂದ ಕನ್ನಡಕ್ಕೂ ಅಷ್ಟರಮಟ್ಟಿಗೆ ಪೆಟ್ಟು ಬಿದ್ದಿದೆ ಎನ್ನುವುದು ಸತ್ಯ. ಆದ್ದರಿಂದ ಹಿಂದಿ ಹೇರಿಕೆಯನ್ನು ತಗ್ಗಿಸಲು ಹೋಗಿ, ಅನಿವಾರ್ಯವಾಗಿ ಮೂರನೇ ಭಾಷೆಯಾಗಿ ಆದರೂ ಕನ್ನಡವನ್ನು ಕಲಿಯುತ್ತಿದ್ದ ಮಕ್ಕಳಿಗೆ ಸರಕಾರವೇ ಕನ್ನಡ ಕಲಿಕೆ ಅನಿವಾರ್ಯವಲ್ಲ ಎಂದು ಹೇಳಿದ ಹಾಗಾಯ್ತು. ಪರೀಕ್ಷೆಯ ಸಮಯದಲ್ಲಿ ಈ ತೀರ್ಮಾನ ಘೋಷಿಸಿದ ರೀತಿಯ ಬಗ್ಗೆ ಸರಕಾರ ತೀವ್ರ ಟೀಕೆಯನ್ನು ಎದುರಿಸುವ ಹಾಗಾಯ್ತು. ಈ ವಿಷಯದಲ್ಲಿ ರಾಜ್ಯಪಾಲರೂ ಈಗ ಪ್ರವೇಶಮಾಡಿದ್ದು, ಭಾಷಾ ಸಾಮರಸ್ಯ ಹಾಗೂ ಮಕ್ಕಳ ಬೌದ್ಧಿಕ ಬೆಳವಣಿಗೆಯ ಮೇಲೆ ಸರಕಾರದ ಈ ಧಿಡೀರ್ ನಿರ್ಧಾರ ಮಾರಕ ಪರಿಣಾಮ ಬೀರುವುದರಿಂದ, ನಿರ್ಧಾರವನ್ನು ಮರುಪರಿಶೀಲಿಸುವಂತೆ ಸರಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸುದೀರ್ಘ ಪತ್ರ ಬರೆದಿದ್ದಾರೆ.

ಮೊನ್ನೆ ದಾವಣಗೆರೆಯಲ್ಲಿ ಚುನಾವಣಾ ಪ್ರಚಾರದಲ್ಲಿದ್ದ ಮುಖ್ಯಮಂತ್ರಿಗಳೆದುರಿನಲ್ಲೇ ಕನ್ನಡವನ್ನು ಅಲಕ್ಷ್ಯ ಮಾಡಲಾಯಿತು. ಎಲ್ಲರಿಗೂ ತಿಳಿದಿರುವಂತೆ, ದಾವಣಗೆರೆ ಉಪಚುನಾವಣಾ ಕಣದಲ್ಲಿರುವ ಶಾಮನೂರು ಶಿವಶಂಕರಪ್ಪನವರ ಮೊಮ್ಮೊಗ ನಿರ್ಣಾಯಕ ಸಂಖ್ಯೆಯಲ್ಲಿರುವ ಮುಸ್ಲಿಂ ಮತದಾರರ ವಿರೋಧವನ್ನು ಎದುರಿಸುತ್ತಿದ್ದಾರೆ, ಮುಸ್ಲಿಂ ಸಮುದಾಯದ ಕೋಪವನ್ನು ತಣಿಸುವ ಎಲ್ಲಾ ಪ್ರಯತ್ನವನ್ನೂ ಶಾಮನೂರು ಕುಟುಂಬ ಹಾಗೂ ರಾಜ್ಯ ಕಾಂಗ್ರೆಸ್ ಮಾಡುತ್ತಿದೆ ಎನ್ನುವುದು ತಿಳಿದ ವಿಷಯವೇ ಆಗಿದೆ. ಮೊನ್ನೆ ಮುಸ್ಲಿಂ ಸಮುದಾಯದವರನ್ನು ಉದ್ದೇಶಿಸಿ ಅಭ್ಯರ್ಥಿಯ ತಾಯಿ, ಸಂಸದರೂ ಆಗಿರುವ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ ಅವರು ಸಭೆಯೊಂದರಲ್ಲಿ ಮಾತನಾಡಲು ಬರುತ್ತಾರೆ, ವಿದ್ಯಾವಂತೆಯಾದ ಅವರು ಕನ್ನಡ ಇಂಗ್ಲಿಷ್ ಹಿಂದಿ ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡಬಲ್ಲವರು. ಆದರೆ ಕರ್ನಾಟಕದಲ್ಲಿ ಸಾಮಾನ್ಯವಾಗಿ ಕನ್ನಡದಲ್ಲೇ ಮಾತನಾಡುವ ಅವರು ಅನಿರೀಕ್ಷಿತವಾಗಿ ಹಿಂದಿಯಲ್ಲೇ ಮಾತಾಡಿದರು. ವೇದಿಕೆಯ ಮೇಲಿರುವ ಎಲ್ಲ ಮುಸ್ಲಿಂ ಸಮುದಾಯದ ನಾಯಕರಿಗೂ ಖುಷಿಯೋ ಖುಷಿ! ಮೇಡಂ ಹಿಂದಿಯಲ್ಲಿ ಮಾತನಾಡಿದ್ದಾರೆ, ಅದರಲ್ಲೂ ಎಲ್ಲರಿಗೂ ನಮಸ್ಕಾರ ಎಂದು ಹೇಳುವ ಜಾಗದಲ್ಲಿ 'ಸಲಾಂ ಆಲೇಕುಂ' ಎಂದಿದ್ದಾರೆ ಎನ್ನುವ ಕಾರಣಕ್ಕೋ ಏನೋ!

ರಾಜಕೀಯ ಏನೇ ಇರಲಿ, ಒಂದು ಕಾಲದಲ್ಲಿ ಕನ್ನಡ ಕಾವಲು ಸಮಿತಿಯ ಜವಾಬ್ದಾರಿ ಹೊತ್ತಿದ್ದ ರಾಜ್ಯದ ಮುಖ್ಯಮಂತ್ರಿಗಳ ಮುಂದೆ, ಅದರಲ್ಲೂ ಕರ್ನಾಟಕದ ನಡುಮನೆಯಂತಿರುವ ದಾವಣಗೆರೆಯಲ್ಲಿ ನಿಂತು ಕನ್ನಡ ಮಾತನಾಡದೇ, ತುಷ್ಟೀಕರಣಕ್ಕೆ ಹಿಂದಿಯನ್ನು ಮೇಡಮ್ ಭಾಷಣಕ್ಕೆ ಆಯ್ಕೆ ಮಾಡಿಕೊಂಡಿರುವುದನ್ನು ಯಾರೂ ಪ್ರಶ್ನೆ ಮಾಡುವ ಧೈರ್ಯ ತಾಕತ್ತು ತೋರಿಸದೇ, ಕೇಂದ್ರ ಸರಕಾರದಿಂದ ಹಿಂದಿ ಹೇರಿಕೆಯಾಗುತ್ತಿದೆ, ನಾವು ಇದನ್ನು ಸಹಿಸುವುದಿಲ್ಲ ಎಂದು ಬೊಬ್ಬೆಹಾಕುವುದರಲ್ಲಿ ಯಾವ ಪುರುಷಾರ್ಥವಿದೆಯೋ ಕಾಣೆ. ಕರ್ನಾಟಕದಲ್ಲಿ ಮುಸ್ಲಿಮರಿಗೆ ಕನ್ನಡ ಬರುತ್ತೆ, ನಿಸಾರ ಅಹಮದ್ ಅಂಥಹ ಕವಿಗಳು ಆ ಸಮುದಾಯದಲ್ಲಿ ಆಗಿ ಹೋಗಿದ್ದಾರೆ, ಕನ್ನಡಕ್ಕಾಗಿ ಇಂದಿಗೂ ಆ ಸಮುದಾಯದಲ್ಲಿ ಕೆಲಸ ಮಾಡುತ್ತಿರುವವರಿದ್ದಾರೆ.

ಧುರಂಧರ ಸಿನಿಮಾ ರಾಜ್ಯಾದ್ಯಂತ ಹವಾ ಎಬ್ಬಿಸುತ್ತಿದೆ, ರಾಜ್ಯದ ಅನೇಕ ಚಿತ್ರಮಂದಿರಗಳಲ್ಲಿ ಆ ಸಿನಿಮಾದ ಕನ್ನಡ ಅವತರಣಿಕೆಯೂ ಇದೆ, ಪ್ರಾಮಾಣಿಕವಾಗಿ ಹೇಳಿ! ಕರ್ನಾಟಕದಲ್ಲಿ ಕನ್ನಡ ಅವತರಣಿಕೆಯನ್ನು ಹೆಚ್ಚು ಜನ ನೋಡುತ್ತಾರೋ ಅಥವಾ ಹಿಂದಿಯನ್ನೋ, ಹಿಂದಿಯನ್ನೇ ತಾನೆ? ಹಾಗಾದರೆ, ಇದು ಹೇರಿಕೆಯ ಪ್ರಶ್ನೆಯಲ್ಲವೇ? ಸ್ವಯಂ ಪ್ರೇರಣೆಯಿಂದ ಅಂದಹಾಗಾಯ್ತು, ಬೇರೆ ಬೇರೇ ಕಾರಣಕ್ಕಾಗಿ ಜನರಿಗೆ ಅದು ಇಷ್ಟವಾಗುತ್ತದೆ. ಹಾಗಾಗಿ ಅವರು ಹಿಂದಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಅಷ್ಟೆ. ಇನ್ನು, ಕರ್ನಾಟಕದ ಮದರಸಾಗಳಲ್ಲಿ ಕನ್ನಡವನ್ನು ಕಲಿಸುವುದಿಲ್ಲ ಎನ್ನುವ ದೂರು ಇದೆ, ಕರ್ನಾಟಕ ಸರಕಾರ ರಾಜ್ಯದ ಮದರಸಾಗಳ ಶಿಕ್ಷಕರಿಗೆ ಕನ್ನಡ ಭಾಷೆಯನ್ನು ಕಲಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಇತ್ತೀಚೆಗೆ ಆರಂಭಿಸಿದೆ. ಇವೆಲ್ಲವನ್ನೂ ನೋಡುವಾಗ, ಭಾಷಾ ನೀತಿಯ ವಿಷಯದಲ್ಲಿ ಕಾಂಗ್ರೆಸ್ ಪಕ್ಷದ ದ್ವಂದ್ವಗಳು ಎದ್ದು ಕಾಣುತ್ತವೆ. ಇರಲಿ, ಇವಕ್ಕೆಲ್ಲ ಉತ್ತರ, ಸಮಜಾಯಿಶಿ ಕೊಡಲು, ತನ್ನ ನಿಲುವನ್ನು ಸಮರ್ಥಿಸಿಕೊಳ್ಳಲು ಸರಕಾರ ಮತ್ತು ಅದರ ಮಂತ್ರಿಗಳಿದ್ದಾರೆ. ನಾವು ಮೂಲಭೂತವಾಗಿ ಈ ತ್ರಿಭಾಷಾ ಸೂತ್ರದ ಹಿನ್ನೆಲೆಯನ್ನು ಸ್ವಲ್ಪ ನೋಡೋಣ.

ದೇಶದ ಎಲ್ಲ ಶಾಲೆಗಳಲ್ಲಿ ಹಿಂದಿಯನ್ನು ಕಡ್ಡಾಯ ಭಾಷೆಯಾಗಿ ಕಲಿಸಬೇಕು ಎಂದು ನಮಗೆ ಸ್ವಾತಂತ್ರ್ಯ ಸಿಗುವ ಪೂರ್ವದಲ್ಲೇ ಅಂದರೆ 1938 ರಲ್ಲೇ ಈಸ್ಟ್ ಇಂಡಿಯಾ ಕಂಪನಿಯ ಸರಕಾರ ಆದೇಶಮಾಡಿತ್ತು ಮತ್ತು ದಕ್ಷಿಣ ಭಾರತೀಯರಿಂದ ಅದಕ್ಕೆ ವಿರೋಧವೂ ಅಂದಿನಿಂದಲೇ ಪ್ರಾಂಭವಾಗಿತ್ತು. ಹಾಗಾಗಿ ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಗೌರವಿಸಬೇಕೇ ಅಥವಾ ಕೇವಲ ಒಂದು ಕಲಿಕಾ ಭಾಷೆಯಾಗಿ ಸ್ವೀಕರಿಸಬೇಕೆ ಅಥವಾ ತ್ರಿಭಾಷಾ ಸೂತ್ರದಡಿಯಲ್ಲಿ ಮೂರನೇ ಭಾಷೆಯಾಗಿಯಾದರೂ ಕಡ್ಡಾಯವಾಗಿ ಕಲಿಯಬೇಕೆ ಎನ್ನುವ ಗೊಂದಲ ದಕ್ಷಿಣ ಭಾರತೀಯರಿಗೆ ಸ್ವಾತಂತ್ರ್ಯ ಪೂರ್ವದಿಂದಲೂ ಇದೆ. ತಮಿಳುನಾಡಿನಿಂದ ಪ್ರಾರಂಭವಾದ ಈ ಹಿಂದಿ ವಿರೋಧಿ ಹೋರಾಟ ಪೆರಿಯಾರ್, ಅಣ್ಣಾದೊರೈರ ಕಾಲದಿಂದಲೂ ಇದೆ. ಇವತ್ತಿಗೂ ತ್ರಿಭಾಷಾ ಸೂತ್ರವನ್ನು ಒಪ್ಪದ ಏಕೈಕ ರಾಜ್ಯವಾಗಿ ತಮಿಳುನಾಡು ಪ್ರತ್ಯೇಕವಾಗಿ ನಿಂತಿದೆ. ತ್ರಿಭಾಷಾ ಸೂತ್ರವು ಭಾರತದಲ್ಲಿ ಶಾಲಾ ಶಿಕ್ಷಣದ ಅವಧಿಯಲ್ಲಿ ವಿದ್ಯಾರ್ಥಿಗಳು ಮೂರು ಭಾಷೆಗಳನ್ನು ಕಲಿಯಬೇಕು ಎಂಬ ಶಿಕ್ಷಣ ನೀತಿಯಾಗಿದೆ. 1968ರಲ್ಲಿ ಜಾರಿಗೆ ಬಂದ ಈ ಸೂತ್ರದಡಿ, ಪ್ರಾದೇಶಿಕ ಭಾಷೆ /ಮಾತೃಭಾಷೆ, ಇಂಗ್ಲಿಷ್ ಮತ್ತು ಹಿಂದಿ (ಹಿಂದಿಯೇತರ ರಾಜ್ಯಗಳಲ್ಲಿ) ಅಥವಾ ಹಿಂದಿ ಹಾಗೂ ಇಂಗ್ಲಿಷ್ ಜತೆಗೆ ಮತ್ತೊಂದು ಭಾರತೀಯ ಭಾಷೆ (ಹಿಂದಿ ಮಾತನಾಡುವ ರಾಜ್ಯಗಳಲ್ಲಿ) ಕಲಿಯುವುದು ಕಡ್ಡಾಯವಾಗಿದೆ. ರಾಷ್ಟ್ರೀಯ ಏಕತೆ, ಬಹುಭಾಷಾ ಪ್ರಾವೀಣ್ಯತೆ ಮತ್ತು ರಾಜ್ಯಗಳ ನಡುವಿನ ಸಂವಹನವನ್ನು ಸುಧಾರಿಸುವುದು ಈ ತ್ರಿಭಾಷಾ ಸೂತ್ರದ ಮೂಲ ಉದ್ದೇಶವಾಗಿದೆ. 2020 ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿಯೂ ತ್ರಿಭಾಷಾ ಸೂತ್ರವನ್ನೇ ಪುನರುಚ್ಚರಿಸಲಾಗಿದೆ. ಕರ್ನಾಟಕದಲ್ಲಿ ತ್ರಿಭಾಷಾಸೂತ್ರವನ್ನು 1968ರ ರಾಷ್ಟ್ರೀಯ ಶಿಕ್ಷಣ ನೀತಿಯ ಅನ್ವಯ ಅಳವಡಿಸಿಕೊಳ್ಳಲಾಯಿತು. ಅಂದಿನ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರ ಅವಧಿಯಲ್ಲಿ ಈ ಸೂತ್ರಕ್ಕೆ ಸಹಿಹಾಕಲಾಗಿತ್ತು. ಅಂದಿನಿಂದ ಇಲ್ಲಿಯವರೆಗೆ ಕರ್ನಾಟಕವು ತ್ರಿಭಾಷಾ ಸೂತ್ರವನ್ನೇ ಅನುಸರಿಸಿಕೊಂಡು ಬಂದಿದೆ.

ತಮಿಳುನಾಡಿನಂತೆ ಕರ್ನಾಟಕದಲ್ಲೂ ಅನೇಕ ಚಿಂತಕರು ಈ ಸೂತ್ರವನ್ನು ಮೊದಲಿನಿಂದಲೇ ವಿರಧಿಸುತ್ತಲೇ ಬಂದಿದ್ದಾರೆ. 1968ರಲ್ಲೇ ರಾಷ್ಟ್ರಕವಿ ಕುವೆಂಪುರವರು ಕೂಡಾ ಸರಕಾರದ ತ್ರಿಭಾಷಾ ಶಿಕ್ಷಣ ಪದ್ಧತಿಯನ್ನು ವಿರೋಧಿಸಿದ್ದರು ಎಂದು ಸರಕಾರ ಹೇಳುವ ಮೂಲಕ ಕುವೆಂಪು ಅವರನ್ನು ಈ ವಿವಾದದಲ್ಲಿ ಎಳೆದು ತರುವ ಪ್ರಯತ್ನ ಮಾಡುತ್ತಿದ್ದಂತೆ ಕಾಣುತ್ತಿದೆ. ತ್ರಿಭಾಷಾ ಸೂತ್ರದ ವಿರುದ್ಧವಾಗಿದ್ದ ಅವರ ಮನೋಧೋರಣೆಯ, ಕನ್ನಡ ವಿಶ್ವವಿದ್ಯಾನಿಲಯದಿಂದ ಪ್ರಕಟವಾದ ಅವರ ಲೇಖನವೂ ಈಗ ಮುನ್ನೆಲೆಗೆ ಬಂದಿದೆ. ಈ ತ್ರಿಭಾಷಾ ಸೂತ್ರ ರಾಜಕೀಯ ದುರಭಿಸಂಧಿಯಿಂದ ಪ್ರೇರಿತವಾದುದು ಎಂದು ಸಾರುವ ಆ ಲೇಖನದ ಸಾರಾಂಶ ಈ ರೀತಿಯಿದೆ. ಭಾರತದಲ್ಲಿ ಭಾಷಾಭಿಮಾನದ ಅತೀರೇಕದಿಂದ ಉಂಟಾಗಬಹುದಾದ ಗೊಂದಲವನ್ನು ಪರಿಹರಿಸಲು ಹಾಗೂ ಇಂಗ್ಲಿಷನ್ನು ಅಂತಾರಾಷ್ಟ್ರೀಯ ಮಾಧ್ಯಮಕ್ಕಾಗಿಯೂ,

ಹಿಂದಿಯನ್ನು ಭಾರತದ ರಾಷ್ಟ್ರೀಯ ಮಾಧ್ಯಮಕ್ಕಾಗಿಯೂ, ಕನ್ನಡವನ್ನು ಕರ್ನಾಟಕ ರಾಜ್ಯದ ಮಾಧ್ಯಮಕ್ಕಾಗಿಯೂ ಎಂಬರ್ಥದಲ್ಲಿ ಜನರು ಮೂರು ಭಾಷೆಗಳನ್ನು ಕಲಿಯಬೇಕು ಎಂದು 'ತ್ರಿಭಾಷಾ ಸೂತ್ರ' ವನ್ನು ಘೋಷಿಸಲಾಗಿದೆ, ಮೇಲುನೋಟಕ್ಕೆ ಇದು ಸಾಧುವಾಗಿ ತೋರುತ್ತಿದೆಯಾದರೂ, ಸೂಕ್ಷ್ಮವಾಗಿ ಗಮನಿಸಿದರೆ ಇದು ಅಪಾಯಕಾರಿ ಎಂದು ಗೊತ್ತಾಗುತ್ತದೆ. ಅದರ ಪ್ರಕಾರ, ಹಿಂದಿ ಇಂಗ್ಲಿಷ್‌ಗಳು ಬಲಾತ್ಕಾರ ಭಾಷೆಗಳಾಗುತ್ತವೆ. ಕನ್ನಡಕ್ಕೆ ಪೆಟ್ಟು ಬೀಳುತ್ತದೆ. ಇದು ಆ ಸೂತ್ರದಲ್ಲಿ ಕಾದಿರುವ ತೀವ್ರವಾದ ಅಪಾಯ. ಎಲ್ಲರೂ ಇಂಗ್ಲಿಷ್ ಮತ್ತು ಹಿಂದಿ ಕಲಿಯಬೇಕೆನ್ನುವುದೂ ದಬ್ಬಾಳಿಕೆಯ ಸೂಚಕವಲ್ಲದೆ ಮತ್ತೇನು? ಪ್ರಜಾಪ್ರಭುತ್ವದಲ್ಲಿ ಬಲಾತ್ಕಾರಕ್ಕೆ ಸ್ಥಾನವಿರಕೂಡದು. ಎಲ್ಲರಿಗೂ ಎಲ್ಲ ಭಾಷೆಯೂ ಏತಕ್ಕೆ ಬೇಕು? ಪ್ರತಿಯೊಬ್ಬರೂ ತಮಗೆ ಅಗತ್ಯವಿರುವ ಭಾಷೆಯನ್ನು ಕಲಿಯಬಹುದು. ಅಲ್ಲದೆ ತ್ರಿಭಾಷಾ ಸೂತ್ರವೇ ಏಕೆ? ಭರತಖಂಡಕ್ಕೀಗ ಬೇಕಾಗಿರುವುದು ಬಹುಭಾಷಾ ಸೂತ್ರ. ನಮ್ಮ ಜನ ಕಲಿಯಬೇಕಾಗಿರುವುದು ಇಂಗ್ಲಿಷನ್ನು ಮಾತ್ರವಲ್ಲ, ವೈಜ್ಞಾನಿಕ ಅವಶ್ಯಕತೆಗಳಿಗಾಗಿ ರಷ್ಯನ್, ಜರ್ಮನ್ ಮುಂತಾದ ವಿದೇಶೀ ಭಾಷೆಗಳನ್ನು ಕೂಡ ಕಲಿಯಬೇಕು.

ಆದ್ದರಿಂದ, ನಮಗೆ ಬೇಕಾದುದು ತ್ರಿಭಾಷಾ ಸೂತ್ರವಲ್ಲ ದ್ವಿಭಾಷಾ ಸೂತ್ರ, ಅಂದರೆ ಬಹುಭಾಷೆಗಳಲ್ಲಿ 'ದ್ವಿಭಾಷೆ' ಎಂಬುದೇ ನಮಗಿಂದು ಅತ್ಯಂತ ಕ್ಷೇಮಕರವೂ ಲಾಭದಾಯಕವೂ ಆದ ಸೂತ್ರ. ನಮ್ಮ ವಿದ್ಯಾರ್ಥಿಗಳ ಮುಂದೆ ಅನೇಕ ಭಾಷೆಗಳನ್ನಿರಿಸಿ, ಯಾವುದಾದರೂ ಎರಡು ಭಾಷೆಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಅವರಿಗೇ ಕೊಡಬೇಕು. ಭರತಖಂಡದ ಯಾವ ವಿದ್ಯಾರ್ಥಿಯ ಮೇಲೂ ಯಾವ ಭಾಷೆಯನ್ನೂ ಬಲಾತ್ಕಾರವಾಗಿ ಹೇರಬಾರದು. ಭಾರತೀಯರೆಲ್ಲರೂ ಹಿಂದಿಯನ್ನು ಕಲಿಯಬೇಕೆನ್ನುವ ವಾದದಲ್ಲಿ ಸಾಮ್ರಾಜ್ಯಶಾಹಿಯ ಮನೋಧರ್ಮದ ವಿನಾ ಇನ್ನಾವ ಅರ್ಥವೂ ಇಲ್ಲ. ಶೇಕಡ ಒಂದರಷ್ಟು ಜನಕ್ಕೆ ಅರ್ಧಮರ್ಧ ಇಂಗ್ಲಿಷ್ ಕಲಿಸಿ ಬ್ರಿಟೀಷರು ಇನ್ನೂರು ವರ್ಷಕ್ಕೂ ಮೇಲೆ ಸಮರ್ಥವಾಗಿ ರಾಜ್ಯಭಾರ ನಡೆಸಲಿಲ್ಲವೆ? ಇದೂ ಹಾಗೆಯೇ ಆಗುತ್ತದೆ ಎನ್ನುತ್ತಾರೆ ಕುವೆಂಪು.

ತ್ರಿಭಾಷಾ ಸೂತ್ರ ಎಂಬುದು, ಭಾರತೀಯರಿಗೆ ತ್ರಿಶೂಲಪ್ರಾಯವಾಗುತ್ತದೆ. ಆದ್ದರಿಂದ ಬಹುಭಾಷೆಗಳಲ್ಲಿ 'ದ್ವಿಭಾಷೆ' ಎಂಬುದೇ ನಮಗಿಂದು ಕ್ಷೇಮಕರ ಸೂತ್ರವಾಗಿದೆ. ಒಂದು ವೇಳೆ ಮೂರೂ ಭಾಷೆಗಳನ್ನು ಕಲಿಯಬೇಕು ಎಂದು ಹಠ ಹಿಡಿದರೂ ಬಹುಭಾಷೆಗಳಲ್ಲಿ ಮೂರುಭಾಷೆಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ವಿದ್ಯಾರ್ಥಿಗಿರಬೇಕು. ಬರಿಯ 'ತ್ರಿಭಾಷೆ'ಯಾದರೆ ಇಂಗ್ಲಿಷ್ ಮತ್ತು ಹಿಂದಿ ಬಲಾತ್ಕಾರದ ಭಾಷೆಗಳಾಗುತ್ತವೆ. ಕನ್ನಡ ತೆಲುಗು ಮಲಯಾಳಂ ಭಾಷೆಗಳು ತೃತೀಯ ಸ್ಥಾನಕ್ಕಿಳಿದು ಹಿಂದಿಯನ್ನು ಓಲೈಸುವ ಅಡಿಯಾಳುಗಳಂತಾಗಿ ತೊತ್ತುಗಳಾಗುತ್ತವೆ. ಮಾತೃಭಾಷೆ ಹಾಗೂ ಇಂಗ್ಲಿಷ್ ಎರಡನ್ನು ಕಲಿತರೆ ಸಾಕು, ಕನ್ನಡದ ಮಕ್ಕಳ ಜ್ಞಾನಾರ್ಜನೆಗೆ ಬೇಕಾದಷ್ಟಾಯಿತು, ಹಿಂದಿಯನ್ನೂ ಕಲಿಯಿರಿ ಎಂದು ವರಾತ ಮಾಡುವುದರಿಂದ ಕನ್ನಡದ ಉಳಿವು ಹಾಗೂ ಬೆಳವಣಿಗೆಗೆ ಮಾರಕವಾಗುತ್ತದೆ ಎನ್ನುವುದು ಕುವೆಂಪು ಅವರ ವಾದವಾಗಿತ್ತು. ಇಂಗ್ಲಿಷ್, ರಷ್ಯನ್ ಹಾಗೂ ಜರ್ಮನ್ ಭಾಷೆಗಳಾದರೂ ಓಕೆ, ಆದರೆ ದೇಶೀಯ ಹಿಂದಿ ಭಾಷೆ ಮಾತ್ರ ಬೇಡ ಎನ್ನುವ ಅವರ ಧೋರಣೆಯೂ ಸೇರಿ, ಕುವೆಂಪು ವಿಚಾರಧಾರೆಯಲ್ಲಿ ಅಸಹಿಷ್ಣುತೆ ಹಾಗೂ ನಕಾರಾತ್ಮಕತೆ ಅಲ್ಲಲ್ಲಿ ಸ್ವಲ್ಪ ಕಂಡರೂ, ಅವರ ಕನ್ನಡ ಪರ ಅಥವಾ ಹಿಂದಿ ವಿರೋಧಿ ಧೋರಣೆಯನ್ನು ಪೂರ್ತಿ ತಳ್ಳಿಹಾಕುವಂತಿಲ್ಲ. ತ್ರಿಭಾಷಾ ಶಿಕ್ಷಣ ಪದ್ಧತಿಯನ್ನು ವಿರೋಧಿಸಿ ಅವರು ಒಂದು ಕವನವನ್ನೂ ಬರೆದಿದ್ದರಂತೆ, ಸಾಮಾಜಿಕ ಜಾಲತಾಣಗಳಲ್ಲಿ ಈಗ ಈ ಕವನ ಬಹಳ ಓಡಾಡುತ್ತಿದೆ. ಅದು ಹೀಗಿದೆ

'ಭಾಷಾ ತ್ರಿಶೂಲವೀ ತ್ರಿಭಾಷಾ ಸೂತ್ರ
ಬಾಲಕರ ರಕ್ಷಿಸೈ ಹೇ ತ್ರಿನೇತ್ರ
ಚೂರು ತಿಂಡಿಗೆ ಸಿಕ್ಕಿಸಿಹರೋ ಈ ಮೂರು ಗಾಳ
ನುಂಗದಿದ್ದರೆ ಹಸಿವೆ ನುಂಗಿದರೆ ಪ್ರಾಣ ಶೂಲ'

ಮೊದಲನೆಯದಾಗಿ, ಕವನದಲ್ಲಿನ ಭಾಷಾ ಸೌಂದರ್ಯ ಹಾಗೂ ಧ್ಯೇಯ-ಧೋರಣೆಯನ್ನು ಗಮನಿಸಿದರೆ, ಈ ಕವನ ರಾಷ್ಟ್ರ ಕವಿ ಕುವೆಂಪು ಅವರದ್ದು ಎಂದು ನನಗಂತೂ ನಂಬಲಾಗುತ್ತಿಲ್ಲ. ಕಾರಣ ಅದರಲ್ಲಿ ಕನ್ನಡ, ಇಂಗ್ಲಿಷ್ ಹಾಗೂ ಹಿಂದಿ ಈ ಮೂರೂ ಭಾಷೆಗಳನ್ನು ಶೂಲಕ್ಕೆ ಹೋಲಿಸಲಾಗಿದೆ. 'ಭಾಷಾ ತ್ರಿಶೂಲವೀ ತ್ರಿಭಾಷಾ ಸೂತ್ರ' ಹಿಂದಿ ಇಂಗ್ಲಿಷಿನ ಜೊತೆಗೆ, ಕನ್ನಡವನ್ನೂ ತ್ರಿಶೂಲವೆನ್ನುವ ಆಯುಧಕ್ಕೆ ಹೋಲಿಸಿದಂತಾಯಿತು. ಮುಂದುವರಿದು, ಚೂರು ತಿಂಡಿಗೆ ಸಿಕ್ಕಿಸಿಹರೋ ಈ ಮೂರು ಗಾಳ ಎಂದು ಮೂರೂ ಭಾಷೆಯನ್ನು ಕರೆಯಲಾಗಿದೆ, ಗಾಳಕ್ಕೆ ತಿಂಡಿ ಸಿಕ್ಕಿಸುವುದನ್ನು ನಾವು ಕೇಳಿದ್ದೇವೆ, ತಿಂಡಿಗೇ ಗಾಳ ಸಿಕ್ಕಿಸುವದನ್ನು ಇಲ್ಲಿಯವರೆಗೆ ನಾವು ಕೇಳಿದ್ದಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನೋಡುವುದಾದರೆ, ವಿದ್ಯಾರ್ಥಿಗಳ ಅಥವಾ ಕನ್ನಡದ ಮಕ್ಕಳ ಎಂದು ಬರೆಯಬಹುದಾದ ಜಾಗದಲ್ಲಿ, 'ಬಾಲಕರ ರಕ್ಷಿಸೈ' ಎಂದು ಬರೆಯಲಾಗಿದೆ, ಹಾಗಾದರೆ ಬಾಲಕಿಯರನ್ನು ಯಾರು ರಕ್ಷಿಸಬೇಕು ಎನ್ನುವ ಪ್ರಶ್ನೆ ಬರುತ್ತದೆಯಲ್ಲವೆ? ಹಾಗಾಗಿ, ಈ ಕವನ, 'ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಯಂಥಾ ಹಾಡಿನ ಮೂಲಕ, ವಿಶ್ವಮಾನವ ಪ್ರಜ್ಞೆಯ ಮೂಲಕ ಸಾಮರಸ್ಯವನ್ನು ಬೋಧಿಸಿದ ಹಾಗೂ ಮಹಾಕಾವ್ಯವನ್ನು ರಚಿಸಿದ ಕವಿ ಶ್ರೇಷ್ಠ ಕುವೆಂಪು ಅವರದ್ದು ಎನ್ನುವುದು ಯಾಕೋ ಸರಿಹೊಂದುತ್ತಿಲ್ಲ.

ವಿಶ್ವಗುರು ಬರೀ ದರ್ಶನ ಕೊಡೋದು, ಸಂದರ್ಶನ ಅಲ್ಲ

ಸಿನಿಗನ್ನಡ

ತುಂಟರಗಾಳಿ

ಹರಿ ಪರಾಕ್
vveditoped@gmail.com

ನಟ, ನಿರ್ದೇಶಕ ಉಪೇಂದ್ರ, ಮೊನ್ನೆ ಮತ್ತೆ ತಮ್ಮದೇ ನಟನೆ ನಿರ್ದೇಶನದ ಪತ್ರಿಕೋಗೋಷ್ಠಿ ಒಂದನ್ನು ಕರೆದಿದ್ದರು. ಅಲ್ಲಿ, ಮತ್ತೆ ಅದೇ ಒನ್ ಮ್ಯಾನ್ ಶೋ, ನಾನು ನಾನು ಅನ್ನೋ ಹಾಹಾಕಾರ. ಯಾರಿಗೂ ಅರ್ಥವಾಗದೇ ಇರೋ ರೀತಿ ಮಾತಾಡೋದೇ ಬುದ್ಧಿವಂತಿಕೆ ಅನ್ನೋ ಭಾವನೆ. ಕೊನೆಗೂ ಏನನ್ನೂ ಸ್ಪಷ್ಟವಾಗಿ ಹೇಳದೇ ಅಲ್ಲಿಂದ ಎದ್ದು ಹೋದರು ಉಪೇಂದ್ರ. ಅವರ ಪ್ರಜಾಕೀಯದಿಂದ ರಾಜಕೀಯದಲ್ಲಿ ಏನೋ ಬದಲಾವಣೆ ಆಗುತ್ತೆ ಅಂತ ಅಂದುಕೊಂಡವರು ಮಾತ್ರ ಅವರ ಬರುವಿಕೆಗಾಗಿ ಕಾದು ಕುಳಿತಿದ್ದಾರೆ. ಆದರೆ ಉಪೇಂದ್ರ, ತೋಳ ಬಂತು ತೋಳ ಎನ್ನುವಂತೆ ಆಗ ಬಂದೆ, ಈಗ ಬಂದೆ ಅಂತ ಕಾಗೆ ಹಾರಿಸ್ತಾನೇ ಇದ್ದಾರೆ. ಅವರು ಬಂದ ಕೂಡಲೇ ಏನೋ ಆಗಿಬಿಡುತ್ತೆ ಅನ್ನೋ ನಂಬಿಕೆ ಯಾರಿಗೂ ಇಲ್ಲ. ಅಲ್ಲದೆ ಅವರಿಗೆ ಓಟು ಹಾಕಲು ಜನ ತುದಿಗಾಲಿನಲ್ಲಿ ನಿಂತುಕೊಂಡೂ ಇಲ್ಲ. ಜನ ನಿಂತುಕೊಳ್ಳೋದಿರಲಿ, ಸ್ವತಃ ಉಪೇಂದ್ರ ಅವರೇ ಚುನಾವಣೆಯಲ್ಲಿ ನಿಂತುಕೊಳ್ಳಲು ರೆಡಿ ಇಲ್ಲ. ಆದರೆ ಸುಮ್ಮನೆ ಕೂತುಕೊಂಡ್ರೆ ಜನ ನನ್ನ ಮರೆತು ಬಿಡ್ತಾರೆ ಅನ್ನೋ ಕಾರಣಕ್ಕೆ ಅವರು ಆಗಾಗ ಮಾತಾಡ್ತಾರೆ. ಪಾಪ ಈಗಲೂ ಶೂಟಿಂಗ್ ಮಧ್ಯೆ ಒಂದಿಷ್ಟು ಬಿಡುವು ಸಿಕ್ಕಿತ್ತು ಅಂತ ಅನ್ನುತ್ತೆ. ಅದಕ್ಕೆ ಖಾಲಿ ಕೂತಿದ್ದೀನಲ್ಲ ಅಂತ ಬಂದು ಒಂದಷ್ಟು ಖಾಲಿ ಪಲಾವ್ ಮಾತನಾಡಿ ಎದ್ದು ಹೋಗಿದ್ದಾರೆ ಬುದ್ಧಿವಂತ. ಆದರೆ ಅವರಿಗಾಗಿ ಕಾದು ಕುಳಿತಿರುವ ಅವರ ಅಭಿಮಾನಿಗಳಿಗೆ ಮಾತ್ರ ಕಾದ ಹೆಂಚಿನ ಮೇಲೆ ಕೂತಿರುವ ಖಾಲಿ ದೋಸೆಗಾಗಿ ಕಾದು ಕುಳಿತಿರುವ ಕೆಲಸ ಮಾತ್ರ ತಪ್ಪಿಲ್ಲ.

ಲೂಸ್ ಟಾಕ್ ▶▶ ನರೇಂದ್ರ ಮೋದಿ

- ಏನ್ ಸರ್ ದೇಶದ ಜನ ಗ್ಯಾಸು, ಬೆಲೆ ಏರಿಕೆ ಅಂತ ಸುಸ್ತಾಗಿದ್ದಾರೆ, ನೀವ್ ನೋಡಿದ್ರೆ ಟೀ ಸೊಪ್ಪು ಕೀಳ್ತಾ ಇದ್ದೀರಲ್ಲ?
– ಶ್! ನಾನು ಎಲೆಕ್ಷನ್ ಪ್ರಚಾರದಲ್ಲಿ ಬ್ಯುಸಿ ಆಗಿದ್ದಾಗ ಯಾರೂ ಡಿಸ್ಟರ್ಬ್ ಮಾಡಂಗಿಲ್ಲ ನನ್ನ.

- ಆದ್ರೂ, ಕೂಲಿ ಕೆಲ್ಸ ಮಾಡ್ತಾ ಇದ್ದೀರಲ್ಲ ಸರ್?
– ಏನ್ ಮಾಡೋದು ಕೂಲಿಗಳ ವೋಟೂ ಮುಖ್ಯ ಅಲ್ವಾ?

- ಎಲೆಕ್ಷನ್ ಬಿಟ್ಟು ನೀವು ಬೇರೆ ಏನೂ ಮಾತಾಡಲ್ಲ ಅನ್ಸುತ್ತೆ. ಆದ್ರೂ ನೀವು ಯುದ್ಧ ನಿಲ್ಲಿಸೋ ಕೆಲಸ ಮಾಡಲಿಲ್ವಲ್ಲ ಸರ್?
– ಮಾಡಿದೆ ಕಣ್ರೀ, ಸಿಬಿಐ, ಐಡಿ, ಇಡಿ ರೈಡ್ ಮಾಡಿಸ್ತೀನಿ ಅಂತ ಹೆದರಿಸಿದೆ. ಅವ್ರು ಹೆದರಿಕೊಳ್ಳಲಿಲ್ಲ.

- ಕರ್ಮ, ಹೋಗ್ಲಿ, ನೀವ್ಯಾಕೆ ಪತ್ರಕರ್ತರಿಗೆ ಸಂದರ್ಶನ ಕೊಡಲ್ಲ?
– ನನ್ನ ಪರ ಇರೋ ಪತ್ರಕರ್ತರಿಗೆ ಕೊಡ್ತೀನಪ್ಪ. ಅಲ್ಲದೆ, ನಾನು ವಿಶ್ವಗುರು ಕಣ್ರೀ, ಬರೀ ದರ್ಶನ ಅಷ್ಟೇ ಕೊಡೋದು, ಸಂದರ್ಶನ ಅಲ್ಲ.

- ಸರಿ, ಬೇರೆ ಥರ ಕೇಳ್ತೀನಿ. ನೀವ್ಯಾಕೆ ನಿಮ್ಮ ವಿರೋಧಿ ಪತ್ರಕರ್ತರಿಗೆ ಸಂದರ್ಶನ ಕೊಡಲ್ಲ?
– ಅಯ್ಯೋ, ನಾನ್ ಕೊಡದೇ ಇದ್ರೂ, ನಿಮ್ಮಂಥೋರು ಕಾಲ್ಪನಿಕ ಸಂದರ್ಶನ ಅನ್ನೋ ಹೆಸರಲ್ಲಿ ಆಗಾಗ ಸಂದರ್ಶನ ತಗೊಂಡ್ಬಿಡ್ತಾರೆ ಬಿಡಿ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ಅಂಡ್ ಫ್ಯಾಮಿಲಿ ಅಂದ್ರೆ, ಖೇಮು ಶ್ರೀ, ಮರಿಖೇಮು, ಅವರ ಜೊತೆಗೆ ಖೇಮುವಿನ ಅಜ್ಜ ಅಜ್ಜಿ ದುಬಾಯ್ಗೆ ಹೋಗಿ ಸೆಟಲ್ ಆದ್ರು. ಅವರ ಉಳಿದ ಸಂಬಂಧಿಕರೆಲ್ಲಾ ಇಂಡಿಯಾದಲ್ಲೇ ಇದ್ರು. ದುಬಾಯ್ನ ಹವಾಮಾನ ಒಗ್ಗದೆ ಅಜ್ಜಿಗೆ ಅನಾರೋಗ್ಯ ಕಾಡತೊಡಗಿತು. ಎಷ್ಟೇ ಪ್ರಯತ್ನ ಪಟ್ಟರೂ ಅಜ್ಜಿಯನ್ನು ಉಳಿಸಿಕೊಳ್ಳಲಾಗಲಿಲ್ಲ. ಅಜ್ಜಿ ತೀರಿ ಹೋದ ಸುದ್ದಿಯನ್ನು ಇಂಡಿಯಾದಲ್ಲಿದ್ದ ಸಂಬಂಧಿಕರಿಗೆ ಮುಟ್ಟಿಸಿದ ಖೇಮು 'ಅಜ್ಜಿಯ ಆಸೆಯಂತೆ ಅವಳನ್ನು ನಮ್ಮ ಹುಟ್ಟೂರಲ್ಲೇ ಮಣ್ಣು ಮಾಡಬೇಕು, ಹಾಗಾಗಿ ಆಕೆಯ ಬಾಡಿಯನ್ನು ಇಲ್ಲಿಂದ ಕಳಿಸುತ್ತೇನೆ' ಎಂದು ಹೇಳಿದ. ಸರಿ ದುಬಾಯ್ ನಿಂದ ಅಜ್ಜಿಯ ದೇಹ ಕಫಿನ್ ಬಾಕ್ಸ್‌ನಲ್ಲಿ ಇಂಡಿಯಾಗೆ ಬಂತು. ಸಂಬಂಧಿಕರು ಅದನ್ನು ಮನೆಗೆ ತಂದರು. ಬಾಕ್ಸ್ ಓಪನ್ ಮಾಡಿದರೆ ಅದರಲ್ಲೊಂದು ಲೆಟರ್ ಇತ್ತು. ಅದರಲ್ಲಿ ಖೇಮು ಹೀಗೆ ಬರೆದಿದ್ದ. 'ನೋಡಿ, ಅಜ್ಜಿಯ ಕೊರಳಲ್ಲಿ ಎರಡು ಮೂರು ಬಂಗಾರದ ಸರಗಳಿವೆ. ಅವನ್ನು ಎಲ್ಲ ಹೆಣ್ಣುಮಕ್ಕಳೂ ಸಮನಾಗಿ ಹಂಚಿಕೊಳ್ಳಿ. ಜೊತೆಗೆ ಕೈಯಲ್ಲಿ ಬಳೆಗಳೂ ಇವೆ, ಅವನ್ನೂ ಅಷ್ಟೆ. ಇನ್ನು ಚಿಂಟು ರೀಬಾಕ್ ಶೂ ಬೇಕಂತ ಹೇಳಿದ್ದ ಅದನ್ನು ಅಜ್ಜಿಯ ಕಾಲಿಗೆ ಹಾಕಿ ಕಳಿಸಿದ್ದೇನೆ. ಅಜ್ಜಿಯ ಕೈಯಲ್ಲಿ ರ್ಯಾಡೋ ವಾಚ್ ಇದೆ ಅದನ್ನು ಪಿಂಟುಗೆ ಕೊಡಿ. ಅಜ್ಜಿ ಉಟ್ಟುಕೊಂಡಿರುವ ಸೀರೆ ತುಂಬಾ ಕಾಸ್ಟ್ಲೀ. ಅದನ್ನು ರೇವತಿಗೆ ಕೊಡಿ. ಕೈ ಬೆರಳಲ್ಲಿರೋ ವಜ್ರದ ಉಂಗುರವನ್ನು ನಮ್ಮ ಸುಮತಿಗೆ ಕೊಡಿ. ಇನ್ನೊಂದು ಮುಖ್ಯ ವಿಷಯ. ಯಾರಿಗಾದರೂ ಇನ್ನೇನಾದರೂ ಹೇಳಿಬಿಡಿ.... ಬೇಕಿದ್ದರೆ ಈಗಲೇ ಇತ್ತೀಚೆಗೆಯಾಕೋ ಅಜ್ಜನಿಗೂ ಹುಷಾರಿಲ್ಲ!

ಲೈನ್ ಮ್ಯಾನ್

- ಐಪಿಎಲ್ 'ಕಪ್' ಗೆದ್ದರೆ ಕೊಡುವ ಪ್ರೈಜ್ ಮನಿ
– 'ಕಪ್ಪು' ಹಣ

- ಅಮ್ಮಂದಿರ ಸಮ್ಮೇಳನ ನಡೆದರೆ ಅದಕ್ಕೆ ಬರುವ ತಾಯಂದಿರ ಗುಂಪನ್ನು ಏನಂತಾರೆ?
– 'ಮಾ'ಬ್

- ನಾಯಿಗಳಿಗೆ ಇಷ್ಟವಾಗುವ, ವ್ಯಕ್ತಿ
– 'ಬೋನಿ' ಕಪೂರ್

- ಬೆಲೆಬಾಳುವ ಮುತ್ತುಗಳನ್ನು ಬಚ್ಚಿಡುವ ಜಾಗ
– ಲಿಪ್ ಲಾಕರ್

- ಬರೀ ಇನ್ಕಮಿಂಗ್ ಕಾಲ್ ಗೋಸ್ಕರ ಇಟ್ಕೊಂಡಿರೋ ಮೊಬೈಲ್ ಫೋನ್
– 'ಹಿಯರ್' ಫೋನ್

- ರೈಲ್ವೆ ಇಲಾಖೆಯಲ್ಲಿ ನೀಡುವ ತರಬೇತಿ
– ಟ್ರೈನಿಂಗ್

- ಓಟ್ ಹಾಕಲಿ ಅಂತ ಹಾಕಿಸುವ ಬಿರಿಯಾನಿ ಊಟಕ ಏನಂತಾರೆ?
– 'ಓಟ್' ಮೀಲ್ಸ್

- ಪೋಲೋಗೆ ವಿರುದ್ಧಾರ್ಥಕ ಪದ ಏನು?
– ಪೋಗಾದಿರೆಲೋ

- ಹೈದರಾಬಾದ್ ಮತ್ತು ಕರ್ನಾಟಕ ನಡುವಿನ ಮ್ಯಾಚ್ ಟೈ ಆದ್ರೆ ಪ್ರಶಸ್ತಿ ಯಾರಿಗೆ?
– 'ಹೈದರಾಬಾದ್ ಕರ್ನಾಟಕ'ಕ್ಕೆ

ಕೈಚೀಲ ಈಗ ಪ್ರಕೃತಿಯಷ್ಟೇ ಸಹಜ, ಸಾಂಕೇತಿಕ

ಬರಹ ಹೊಂದಿರುವ ಕೈಚೀಲ ಕಸುಬುದಾರಿಕೆಗೆ ಒಂದು ಉದಾಹರಣೆ. ನೀವು ಪ್ಯಾಲೆಸ್ಟೀನ್ ಬಗ್ಗೆ ಕಾಳಜಿ ವಹಿಸುತ್ತೀರೋ ಇಲ್ಲವೋ, ನೀವು ಪುಸ್ತಕದ ಸಾಲುಗಳನ್ನು ಓದುತ್ತೀರೋ ಇಲ್ಲವೋ, ಕೈಚೀಲದಲ್ಲಿ ಮಾತ್ರ ಎಲ್ಲರ ಕಣ್ಣು ರಫಾ ಮೇಲಿದೆ ಎಂದು ಬರೆಯಲಾಗಿರುತ್ತದೆ. ಅದು ನಾವು ತೆಗೆದುಕೊಳ್ಳಬೇಕಾದ ವಸ್ತುಗಳ ಪಟ್ಟಿಯನ್ನೂ ಹೊಂದಿರುತ್ತದೆ. ಅದೂ ಈಗ ಟ್ರೆಂಡ್ ಆಗಿದೆ. ಈ ಕೈಚೀಲಗಳು ಒಂದು ಸಾಂಕೇತಿಕ ಗುಣ ಹೊಂದಿವೆ.

ಹೊರಸೂಸುವ ಮನ

ಸುಸಾನ್ ಥಾಮಸ್
vveditoped@gmail.com

ಈ ವರ್ಷ ಫೆಬ್ರವರಿಯಲ್ಲಿ ಮೆಕ್‌ಡೊನಾಲ್ಡ್ ಇಂಡಿಯಾ 'ಟೋಟ್‌ಅಲಿಯುವರ್ಸ್' (toteallyyours) ಎಂಬ ಅಭಿಯಾನ ಆರಂಭಿಸಿತು. ಅದೊಂದು ಕೈಚೀಲವನ್ನು ತನ್ನ ವ್ಯಾಪಾರದ ಭಾಗವಾಗಿ ನೀಡಲು ಶುರು ಮಾಡಿದೆ. 299 ರು., ಅದಕ್ಕೂ ಮೇಲಿನ ಮೌಲ್ಯದ ಊಟವನ್ನು ಆರ್ಡರ್ ಮಾಡಿದರೆ, ಅದನ್ನು ತನ್ನದೇ ಕೈಚೀಲದಲ್ಲಿ ಹಾಕಿ, ನಿಮಗೆ ತಲುಪಿಸುವ ವ್ಯಕ್ತಿಗೆ ನೀಡುತ್ತದೆ. 1944ರ ಕಾಲಘಟ್ಟದಲ್ಲಿ ಮಂಜುಗಡ್ಡೆಯನ್ನು ಇಟ್ಟುಕೊಳ್ಳುವ ಬಾಕ್ಸ್ ಅನ್ನು ಹೊತ್ತೊಯ್ಯಲು ಬಳಸಲ್ಪಡುತ್ತಿದ್ದ ಈ ಕೈಚೀಲ, ಆಧುನಿಕ ಕಾಲಘಟ್ಟದಲ್ಲಿ ಒಂದು ಸಂಸ್ಕೃತಿಯೇ ಆಗಿ ಬದಲಾಗಿದೆ. ನಮ್ಮ ನಿತ್ಯ ಜೀವನದಲ್ಲೊಂದು ಭಾಗವಾಗಿದೆ. ಪುಸ್ತಕ ಬಿಡುಗಡೆ, ಧರಣಿ, ಉತ್ಪನ್ನಗಳ ಬಿಡುಗಡೆ ಕಾರ್ಯಕ್ರಮ, ಕಾಲೇಜುಗಳು ಆರಂಭವಾಗುವ ಹಂತ, ಸಮಾರಂಭಗಳು ಎಲ್ಲೆಲ್ಲೂ ಈ ಕೈಚೀಲಗಳು ಕಾಣುತ್ತವೆ. ಪ್ರಜಾಪ್ರಭುತ್ವದ ಒಂದು ಭಾಗವಾಗಿಯೇ ಇದು ಹರಡಿಕೊಂಡಿದೆ. ಅತ್ಯಂತ ಶಾಂತ ವ್ಯಕ್ತಿ, ರಾಜಕೀಯ ಕಾರ್ಯಕರ್ತ, ಯಥಾಸ್ಥಿತಿವಾದಿ, ಕ್ರಾಂತಿಕಾರಿ (ಕಾರಣವಿದ್ದೋ, ಕಾರಣವಿಲ್ಲದೆಯೋ!) ಎಲ್ಲರ ಬಳಿಯೂ ಇದಿರುತ್ತದೆ.

ಬೆಂಗಳೂರಿನ ಎನ್‌ಐಎಫ್‌ಟಿ ವಿದ್ಯಾ ಸಂಸ್ಥೆಯಲ್ಲಿ ನಾನು ಐದು ವರ್ಷ ನಿರ್ದೇಶಕಿಯಾಗಿ ಕಾರ್ಯ ನಿರ್ವಹಿಸಿದ್ದೆ. ಆಗ ಕಾಲೇಜು ಆರಂಭದಲ್ಲಿ ಈ ಕೈಚೀಲಗಳು ವಿದ್ಯಾರ್ಥಿಗಳ ಜೊತೆಯಲ್ಲೇ ಇರುತ್ತಿದ್ದವು. 2020ರಲ್ಲಿ ಪರಿಸ್ಥಿತಿ ಕೈಮೀರಿ ಎಲ್ಲವೂ ಆನ್‌ಲೈನ್ ಆದ ವರ್ಷವೊಂದು ಮಾತ್ರ ಇದಕ್ಕೆ ಹೊರತು. ಪ್ರತಿವರ್ಷ ಕೈಚೀಲಗಳಲ್ಲಿ ನಾವು ಪ್ರಯೋಗ ಮಾಡುತ್ತಿದ್ದೆವು. ಪಾಕೆಟ್‌ಗಳು, ಚೀಲ ಮುಚ್ಚಲು ಜಿಪ್‌ಗಳು, ಹಿಡಿಕೆಪಟ್ಟಿಯ ಉದ್ದ ಇದರಲ್ಲಿ ಬದಲಾವಣೆಗಳು ಸಂಭವಿಸುತ್ತಿದ್ದವು. ಆದರೆ ಕೈಚೀಲಗಳು ಮಾತ್ರ ಕಡ್ಡಾಯವಾಗಿದ್ದವು.

21ನೇ ಶತಮಾನದ ಆರಂಭದ ಹೊಸ್ತಿಲಲ್ಲಿ ನನ್ನ ವೃತ್ತಿಜೀವನ ಆರಂಭವಾದಾಗ, ಸಮ್ಮೇಳನಗಳಲ್ಲಿ ಫೈಲ್‌ಗಳನ್ನು ನೀಡಲಾಗುತ್ತಿತ್ತು. ಕಾರ್ಯಕ್ರಮದಲ್ಲಿ ಏನೇನು ನಡೆಯುತ್ತದೆ ಎಂಬ ಮಾಹಿತಿ ಪುಸ್ತಿಕೆಗಳನ್ನು ಬಟ್ಟೆಯ ಫೈಲ್‌ಗಳಲ್ಲಿ ಹಾಕಿ ಕೊಡಲಾಗುತ್ತಿತ್ತು. ಇತ್ತೀಚೆಗೆ ಹೈದರಾಬಾದ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ನನಗೆ ಕಲಾಮ್ಕಾರಿ ಶೈಲಿಯ ಕೈಚೀಲವನ್ನು ನೀಡಲಾಯಿತು. ಇದರಲ್ಲಿ ಪಕ್ಕಾ 'ವೋಕಲ್ ಫಾರ್ ಲೋಕಲ್'ನ (ದೇಶೀಯತೆ) ಸ್ಫೂರ್ತಿಯಿದ್ದರೂ, ಜಾಗತಿಕ ವಿನ್ಯಾಸವನ್ನು ಅಳವಡಿಸಿಕೊಳ್ಳಲಾಗಿತ್ತು. ಒಳಗಡೆ ಪೂಥೆರಾಕುಲು ಎಂಬ ಸಿಹಿಯ ಬಾಕ್ಸ್, ಬೀದರ್‌ನ ಲೋಹದ ತಟ್ಟೆ, ಒಂದು ಮಗ್ ಇತ್ತು. ಕಾರ್ಯಕ್ರಮದ ವಿಷಯಗಳು ಹಾಗೂ ಇತರೆ ದಾಖಲೆಗಳನ್ನು ಇ-ಮೇಲ್ ಮಾಡಲಾಗಿತ್ತು.

2018ರಲ್ಲಿ ಬೆಂಗಳೂರು ಸಾಹಿತ್ಯ ಸಮ್ಮೇಳನದಲ್ಲಿ ನನಗೆ ಕೈಚೀಲವೊಂದು ಸಿಕ್ಕಿತ್ತು. ಅದರಲ್ಲಿ ಗಂಡಭೈರುಂಡ ಚಿಹ್ನೆಯಿತ್ತು, ಅಲ್ಲಿ ಕಾರ್ಯಕ್ರಮವೊಂದನ್ನು ನಿರ್ವಹಿಸಿದ್ದೆ. ಆ ಕೈಚೀಲವನ್ನು ಸಿದ್ಧಪಡಿಸಿದ್ದ ಶೈನೀ ಆ್ಯಂಟೋನಿ ಬಳಿ ನಾನು ಮಾತನಾಡಿದಾಗ, ಅವರು ನಮ್ಮ ಕೈಚೀಲಗಳು ಮಾರಾಟಕ್ಕಿಲ್ಲ ಎಂದು ತಿಳಿಸಿದ್ದರು. ಆ ಚೀಲಗಳನ್ನು ನಿರೂಪಕರಿಗೆ, ಲೇಖಕರಿಗೆ ಸ್ಮರಣಿಕೆಗಳನ್ನಾಗಿ ನೀಡಲಾಗಿತ್ತು. ನನ್ನ ಬಳಿ ಆಭರಣದಂಗಡಿ, ಅಖಿಲ ಭಾರತ ಮೀನುಗಾರಿಕೆ ಸಮ್ಮೇಳನ, ಸ್ವಚ್ಛ ಭಾರತ್ ಮಿಷನ್ ಕಾರ್ಯಕ್ರಮದ ಕೈಚೀಲಗಳಿದ್ದವು. ಬೆಟ್ಟವಿಳಿದು ನನ್ನೂರಿನ ಆಭರಣದಂಗಡಿಗಳಲ್ಲಿ ಬಂಗಾರ ಕೊಳ್ಳಲು ಬರುವವರು, ಬಿಲ್ ಕೌಂಟರ್‌ಗಳಲ್ಲಿ ಕೈಚೀಲ ಕೊಡುವಂತೆ ಮನವಿ ಮಾಡುತ್ತಿರುತ್ತಾರೆ. ಅದನ್ನೇ ಮುಂದೆ ತರಕಾರಿ, ದಿನಸಿ ಹಾಕಲು ಬಳಸಲಾಗುತ್ತದೆ. ನಾನಂತೂ ಬಟ್ಟೆ ಇಸ್ತ್ರಿ ಮಾಡಲೂ ಇದನ್ನೇ ಬಳಸುತ್ತೇನೆ.

ಈ ಚೀಲವೇ ಒಂದು ವಿಶೇಷ ದೃಶ್ಯ. ನಡೆದುಕೊಂಡು ಹೋಗುವಾಗ ನಮ್ಮತ್ತ ಎಲ್ಲರ ಗಮನ ಸೆಳೆಯುವ ಒಂದು ಸಾಧನ. ಸಾಹಿತ್ಯ ಜಗತ್ತಿನಲ್ಲಿ ಇದನ್ನು ಬಹಳ ಗಂಭೀರವಾಗಿ ಪ್ರಚಾರ ಮಾಡಿದ್ದು ಅರುಂಧತಿ ರಾಯ್ ಅವರ ನೂತನ ಪುಸ್ತಕ ಮಾರಾಟ ಮಾಡುವಾಗ. ಪ್ರಸುತ ಆ ಪುಸಕವನ್ನು ಮಾರುವಾಗ ಅದರೊಂದಿಗೆ ಒಂದು ಕೈಚೀಲವನ್ನು (299 ರು. ಮೌಲ್ಯ, ಉಚಿತ) ನೀಡಲಾಗುತ್ತದೆ. ಅದರ ಮೇಲೆ ರಾಯ್ ಅವರ ಮುಖದ ಚಿತ್ರವಿದೆ. ಜೊತೆಗೆ ಪುಸ್ತಕದಲ್ಲಿನ ಸುಂದರ ಸಾಲು 'ಆಕೆಯೇ ನನ್ನ ಆಶ್ರಯ ಮತ್ತು ನನ್ನೊಳಗಿನ ಭೋರ್ಗರೆತ'ವೂ ಬರೆಯಲ್ಪಟ್ಟಿದೆ. ಚೀಲದ ಮೌಲ್ಯ ಮೆಕ್‌ಡೊನಾಲ್ಡ್‌ನ ಊಟದಷ್ಟೇ ಮೌಲ್ಯ ಹೊಂದಿದೆ. ಈ ಪುಸ್ತಕ ಬರ್ಗರ್‌ಗಿಂತ ದುಬಾರಿಯಾಗಿದ್ದರೂ, ಎರಡೂ ಕಡೆ ಚೀಲ ಮಾತ್ರ ಉಚಿತವಾಗಿ ಸಿಗುತ್ತದೆ.

ದೆಹಲಿಯ ಸರೋಜಿನಿ ನಗರದ ಮಧ್ಯಮ ವರ್ಗದವರ ಮಾರುಕಟ್ಟೆಯಲ್ಲಿ, ಬರಹಗಳನ್ನು ಹೊಂದಿರುವ ಸಾಲುಸಾಲು ಕೈಚೀಲಗಳು ಇರುತ್ತವೆ. ಈ ಚೀಲಗಳು ದಪ್ಪವಾಗಿರುತ್ತವೆ, ಕೆಲವೊಂದು ಕೆಟ್ಟದಾಗಿರುತ್ತವೆ. ಹಣೆಯಲ್ಲಿ ಸಿಂದೂರ ಹಚ್ಚಿಕೊಂಡಿರುವ ಮುಗ್ಧ ತಾಯಂದಿರು ಕಿರುಚುತ್ತಾ, ಫ್ರಿಜ್ಜಿನ ಕವರ್‌ಗಳು ಮತ್ತಿತರ ಚೀಲಗಳಿಗೆ ಹುಡುಕುತ್ತಿರುತ್ತಾರೆ. ಸ್ವಲ್ಪ ವರ್ಷಗಳ ಹಿಂದೆ ವಾಹನಗಳ ಹಿಂಭಾಗದ ಬರಹಗಳು ಗಮನ ಸೆಳೆಯುತ್ತಿದ್ದವು. ಅದೊಂದು ಮುಂಜಾನೆ ರಿಚ್ಮಂಡ್ ರಸ್ತೆಯಲ್ಲಿ ನನ್ನ ಸಹೋದರನ ಮಕ್ಕಳನ್ನು ಬಿಡಲು ಅವನೊಂದಿಗೆ ಬೈಕ್‌ನಲ್ಲಿ ಹೋಗುತ್ತಿದ್ದಾಗ, ಎದುರು ಹೋಗುತ್ತಿದ್ದ ಕಾರು ನನ್ನನ್ನು ದಿಗ್ಗನೆ ಎಚ್ಚರಿಸಿತು. ಅದರಲ್ಲಿ ಅಂಟಿಸಿದ್ದ ಸ್ಟಿಕ್ಕರ್‌ನಲ್ಲಿ 'ಸ್ತ್ರೀವಾದವೆಂದರೆ ಮಹಿಳೆಯರನ್ನೂ ಮನುಷ್ಯರು ಎಂದು ಪರಿಗಣಿಸುವ ಸುಧಾರಣಾ ವಾದ' ಎಂದು ಬರೆಯಲ್ಪಟ್ಟಿತ್ತು. ದೆಹಲಿಯಲ್ಲಿ ನಾನು ನೋಡುವ ವಾಹನಗಳ ಸ್ಟಿಕ್ಕರ್‌ಗಳಲ್ಲಿ, ತಮ್ಮ ರಾಜಕೀಯ ಗುರುತುಗಳನ್ನು, ಜಾತಿಗಳನ್ನು ಹೆಮ್ಮೆಯಿಂದ ಘೋಷಿಸಿಕೊಳ್ಳುವ ಬರಹಗಳನ್ನು ನೋಡುತ್ತೇನೆ. ನೀವು ಯಾರು ಎಂದು ತೋರಿಸಿಕೊಳ್ಳಲು ಅವು ನಿಮಗೆ ಸಹಾಯ ಮಾಡುತ್ತವೆ! ಅವೆಲ್ಲ ಇರಲಿ ಭಾರತದಲ್ಲಿನ ಟ್ರಕ್‌ಗಳು, ಆಟೋಗಳ ಪ್ರೌಢತೆಯನ್ನು ಯಾರೂ ನಿರ್ಲಕ್ಷಿಸುವಂತಿಲ್ಲ.

ಅವುಗಳಲ್ಲಿ ಎಚ್ಚರಿಕೆಯಿಂದ ವಾಹನ ಚಲಾಯಿಸಿ ಎನ್ನುವುದರಿಂದ ಹಿಡಿದು, ಕುಟುಂಬ ಯೋಜನೆ, ಹೃದಯಾಘಾತವಾದರೆಗಿನ ಬರಹಗಳಿರುತ್ತವೆ.

ಬರಹ ಹೊಂದಿರುವ ಕೈಚೀಲ ಕಸುಬುದಾರಿಕೆಗೆ ಒಂದು ಉದಾಹರಣೆ. ನೀವು ಪ್ಯಾಲೆಸ್ಟೀನ್ ಬಗ್ಗೆ ಕಾಳಜಿ ವಹಿಸುತ್ತೀರೋ ಇಲ್ಲವೋ, ನೀವು ಪುಸ್ತಕದ ಸಾಲುಗಳನ್ನು ಓದುತ್ತೀರೋ ಇಲ್ಲವೋ, ಕೈಚೀಲದಲ್ಲಿ ಮಾತ್ರ ಎಲ್ಲ ಕಣ್ಣು ರಫಾ ಮೇಲಿದೆ ಎಂದು ಬರೆಯಲಾಗಿರುತ್ತದೆ. ಅದರಲ್ಲಿ ನಾವು ತೆಗೆದುಕೊಳ್ಳಬೇಕಾದ ವಸ್ತುಗಳ ಪಟ್ಟಿಯನ್ನೂ ಹೊಂದಿರುತ್ತದೆ. ಅದೂ ಈಗ ಟ್ರೆಂಡ್ ಆಗಿದೆ. ಈ ಕೈಚೀಲಗಳು ಒಂದು ಸಾಂಕೇತಿಕ ಗುಣ ಹೊಂದಿವೆ. ಟೀಶರ್ಟ್‌ಗಳಲ್ಲಿ ಬರೆಯಲ್ಪಟ್ಟಿರುವ ಸಾಲುಗಳು ಹೇಗೆ ಮುಖಕ್ಕೆ ಬಡಿಯುತ್ತವೋ, ಹಾಗೆ ಈ ಚೀಲಗಳಲ್ಲಿನ ಸಾಲುಗಳು ರಾಚುವುದಿಲ್ಲ. ಇವು ಕಿರುಚಾಡದೇ ನಿಮ್ಮ ಗಮನ ಸೆಳೆಯುತ್ತವೆ. ತನ್ನ ಕೈಗಳನ್ನು ಗಲೀಜು ಮಾಡಿಕೊಳ್ಳದೇ ಒಬ್ಬ ವ್ಯಕ್ತಿ ಇಲ್ಲಿ ರಾಜಕೀಯವಾಗಿರಬಹುದು. ಇದೊಂದು ರೀತಿಯ ಸ್ಲ್ಯಾಕ್ಟಿವಿಸಂ (ಕಾರ್ಯವಂತಿಕೆ ಮತ್ತು ಚೀಲವನ್ನು ಬೆಸೆಯುವಂತಹ ಗುಣ)!

ಬಟ್ಟೆಯ ಚೀಲ ನೈಜ ಜಗತ್ತಿನ ಸಹಜ ಚಿಹ್ನೆ. ಇದು ಎಲ್ಲವನ್ನೂ ಹೊಂದಿರುತ್ತದೆ, ನಿಮ್ಮ ರಾಜಕೀಯ ಚಿಂತನೆಗಳು, ಇತರೆ ಸಂಗತಿಗಳೂ ಇದರಲ್ಲಿರುತ್ತವೆ. ಸಾಕಷ್ಟು ವಸ್ತುಗಳನ್ನು ತುಂಬಿಸಿಕೊಳ್ಳುವ ಗುಣವೇ ಇದನ್ನು ಸಾಂಕೇತಿಕಗೊಳಿಸುತ್ತದೆ. ಎಲ್ಲವನ್ನೂ ತನ್ನೊಂದಿಗೆ ಒಯ್ಯುವ ಗುಣವನ್ನು ಇದು ಅಭಿವ್ಯಕ್ತಿಸುತ್ತದೆ. ಇದು ಈ ಸಮಯದ ಸಾಂಸ್ಕೃತಿಕ ಸಂಕೇತ. ಇಲ್ಲೊಂದು ರಕ್ತಸಂಬಂಧ ಮತ್ತು ಆತ್ಮೀಯತೆಯನ್ನು ಒಂದು ಚೀಲದೊಂದಿಗೆ ನೀವು ಹೊಂದಬಹುದು. ಇದರಲ್ಲಿ ಮುಚ್ಚುಮರೆಯಿರುವುದಿಲ್ಲ. ತನ್ನ ನಿಜರೂಪವನ್ನು ಅವಿತಿಡುವ ಪ್ರಸಂಗವೇ ಬರುವುದಿಲ್ಲ, ಮಹಿಳೆಯೊಬ್ಬಳ ದೌರ್ಬಲ್ಯಗಳನ್ನು ಸಾರ್ವಜನಿಕವಾಗಿ ತೋಡಿಕೊಳ್ಳಬೇಕಾದ ಅಗತ್ಯವೂ ಇರುವುದಿಲ್ಲ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 79

ಸಮಾಚಾರ ಸಣ್ಣದಲ್ಲ

ಪ್ರತಿಭಟನೆಗೆ ಪಾಕಲ್ಲಿ ಪೆಟ್ರೋಲ್ ದರ ಕಡಿತ

ಇಸ್ಲಾಮಾಬಾದ್: ಪಾಕಿಸ್ತಾನ ಸರಕಾರ ಇಂಧನ ದರವನ್ನು ಒಮ್ಮೆಲೇ ಅರ್ಧದಷ್ಟು ಏರಿಕೆ ಮಾಡಿದ್ದನ್ನು ವಿರೋಧಿಸಿ ಜನತೆ ಬೀದಿಗಿಳಿದು ಭಾರೀ ಪ್ರತಿಭಟನೆ ಮಾಡಿದ್ದಾರೆ. ಪೆಟ್ರೋಲ್ ಮತ್ತು ಹೈ-ಸ್ಪೀಡ್ ಡೀಸೆಲ್ ಬೆಲೆಯನ್ನು ಕ್ರಮವಾಗಿ ಶೇ.43 ಮತ್ತು ಶೇ.55ರಷ್ಟು ಏರಿಕೆ ಮಾಡಿದ್ದರಿಂದ ಪೆಟ್ರೋಲ್ ಬೆಲೆ ಲೀ.ಗೆ 458 ರು. ಮತ್ತು ಹೈಸ್ಪೀಡ್ ಡೀಸೆಲ್ ರು.520ಕ್ಕೆ ಏರಿಕೆಯಾಗಿದೆ. ನಿತ್ಯ ಬಳಕೆ ಇಂಧನಗಳ ದರವನ್ನೇ ಭಾರೀ ಪ್ರಮಾಣದಲ್ಲಿ ಏರಿಕೆ ಮಾಡಿರುವುದನ್ನು ಖಂಡಿಸಿ ದೇಶಾದ್ಯಂತ ಭಾರೀ ಪ್ರತಿಭಟನೆಗಳು ನಡೆದಿದ್ದರಿಂದ ಪ್ರಧಾನಿ ಶೆಹಬಾಜ್ ಷರೀಫ್ ಸರಕಾರ ಪೆಟ್ರೋಲ್ ಬೆಲೆಯಲ್ಲಿ 80 ರು. ಇಳಿಕೆ ಮಾಡಿದೆ. ಪರಿಣಾಮ, ಶನಿವಾರದಿಂದ ಲೀ. ಪೆಟ್ರೋಲ್ 378 ರು.ಗೆ ಮಾರಾಟವಾಗುತ್ತಿದೆ. ಆದರೆ, ಹೈ ಸ್ಪೀಡ್ ಡೀಸೆಲ್ ಬೆಲೆಯನ್ನು ಮಾತ್ರ ಲೀ.ಗೆ 520.35 ರು. ಲೆಕ್ಕದಲ್ಲೇ ಮುಂದುವರಿಸಲಾಗಿದೆ.

ದೆಹಲಿ ಉದ್ಯಮಕ್ಕೆ ಪಿಎನ್‌ಜಿ ಕಡ್ಡಾಯ

ದೆಹಲಿ: ಪೈಪಡ್ ನ್ಯಾಚುರಲ್ ಗ್ಯಾಸ್(ಪಿಎನ್‌ಜಿ-ಕೊಳವೆ ಮೂಲಕ ನೈಸರ್ಗಿಕ ಅನಿಲ) ಪೂರೈಕೆ

ಲಭ್ಯ ವಿರುವ ಪ್ರದೇಶಗಳಲ್ಲಿ ಉದ್ಯಮ ಸಂಸ್ಥೆಗಳು ಕಡ್ಡಾಯವಾಗಿ ಪಿಎನ್‌ಜಿ ಸಂಪರ್ಕ ಹೊಂದಬೇಕಿದೆ ಅಥವಾ ಪಿಎನ್‌ಜಿ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸಿರಬೇಕಿದೆ. ಇಲ್ಲವಾದಲ್ಲಿ ಅಂತಹ ಉದ್ಯಮ ಸಂಸ್ಥೆಗಳಿಗೆ ವಾಣಿಜ್ಯ ಬಳಕೆಯ ಸಿಲಿಂಡರ್ ಪೂರೈಕೆ ಸ್ಥಗಿತಗೊಳಿಸಲಾಗುವುದು ಎಂದು ದೆಹಲಿ ಸರಕಾರ ಹೇಳಿದೆ. ಆ ಮೂಲಕ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ವಿತರಣೆಯ ಮಾನದಂಡಗಳನ್ನು ಬಿಗಿಗೊಳಿಸಿದೆ.

ಎನ್‌ಸಿಇಆರ್‌ಟಿಗೆ ಡೀಮ್ಡ್ ವಿವಿ ಸ್ಥಾನ

ದೆಹಲಿ: ಕೇಂದ್ರದ ಶಿಕ್ಷಣ ಸಚಿವಾಲಯವು 'ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ'(ಎನ್‌ಸಿಇಆರ್‌ಟಿ) ಹಾಗೂ ಅದರ 6 ಶೈಕ್ಷಣಿಕ ಘಟಕಗಳಿಗೆ ವಿಶೇಷ ವರ್ಗದಡಿ 'ಡೀಮ್ಡ್ ವಿಶ್ವವಿದ್ಯಾಲಯ' ಸ್ಥಾನಮಾನವನ್ನು ನೀಡಿ ಆದೇಶ ಹೊರಡಿಸಿದೆ. ಜತೆಗೆ ಎನ್‌ಸಿಇಆರ್‌ಟಿ ಪಠ್ಯಕ್ರಮ ಮಂಡಳಿ ಅಧಿಕಾರವನ್ನೂ ವಿಸ್ತರಿಸಿ 'ವಿಶ್ವವಿದ್ಯಾ ಲಯ ಅನುದಾನ ಆಯೋಗ'(ಯುಜಿಸಿ)ದ ವ್ಯಾಪ್ತಿಗೆ ತರಲಾಗಿದೆ. ಕೇಂದ್ರದ ಈ ಕ್ರಮದಿಂದಾಗಿ ಕರ್ನಾಟಕದ ಮೈಸೂರು ನಗರದಲ್ಲಿರುವ ಪ್ರಾದೇ ಶಿಕ ಶಿಕ್ಷಣ ಸಂಸ್ಥೆ(ಆರ್‌ಇಐ) ಸೇರಿದಂತೆ ರಾಜಸ್ಥಾನದ ಅಜ್ಮೀರ್, ಮಧ್ಯಪ್ರದೇಶದ ಭೋಪಾಲ್, ಒಡಿಶಾ ರಾಜ್ಯದ ಭುವನೇಶ್ವರ, ಅಸ್ಸಾಂನ ಶಿಲ್ಲಾಂಗ್‌ನಲ್ಲಿನ 'ಆರ್‌ಇಐ'ಗಳು ಹಾಗೂ ಪಂಡಿತ್ ಸುಂದರಲಾಲ್ ಶರ್ಮಾ ಇನ್‌ಸ್ಟಿಟ್ಯೂಟ್ ಆಫ್ ವೊಕೇಷನಲ್ ಎಜುಕೇಶನ್ ಸಂಸ್ಥೆಗಳು ಡೀಮ್ಡ್ ವಿವಿ ಸ್ಥಾನ ಪಡೆದಿವೆ.

5.9 ತೀವ್ರತೆ ಭೂಕಂಪ ಆಫ್ಘನ್‌ನಲ್ಲಿ 8 ಸಾವು

ಕಾಬೂಲ್: ಅಫ್ಘಾನಿಸ್ತಾನದಲ್ಲಿ ಶುಕ್ರವಾರ ರಾತ್ರಿ 5.9 ತೀವ್ರತೆಯ ಭೂಕಂಪವಾಗಿದ್ದು, 8 ಮಂದಿ ಸಾವಿಗೀಡಾಗಿದ್ದಾರೆ ಎಂದು ವರದಿಯಾಗಿದೆ. ಭೂಕಂಪದ ಕೇಂದ್ರಬಿಂದು ಅಫ್ಘನ್‌ನ ದರವಾನ್ ಬಳಿ 71.01 ಡಿಗ್ರಿ ಪೂರ್ವ ಮತ್ತು 36.52 ಡಿಗ್ರಿ ಉತ್ತರ ಅಕ್ಷಾಂಶದಲ್ಲಿತ್ತು. ಅಂದರೆ, ಕುಂದುಜ್ ನಗರದಿಂದ ಪೂರ್ವಕ್ಕೆ 150 ಕಿಮೀ ದೂರದ ಹಿಂದೂಕುಶ್ ಪರ್ವತ ಶ್ರೇಣಿಯಲ್ಲಿತ್ತು ಎಂದು ಗುರುತಿಸಲಾಗಿದೆ. ಈ ವರ್ಷ ಅಫ್ಘಾನಿಸ್ತಾನದಲ್ಲಿ ಭೂಕಂಪವಾಗಿರುವುದು 2ನೇ ಬಾರಿಯಾಗಿದೆ. ದೆಹಲಿಯ ರಾಷ್ಟ್ರೀಯ ರಾಜಧಾನಿ ಪ್ರದೇಶ(ಎನ್‌ಸಿಆರ್), ಪಂಜಾಬ್, ಹರಿಯಾಣ, ಜಮ್ಮು- ಕಾಶ್ಮೀರದ ಕಾರ್ಗಿಲ್‌ನಲ್ಲೂ ಶುಕ್ರವಾರ ರಾತ್ರಿ 9.45ರಲ್ಲಿ ಕೆಲವು ಸೆಕೆಂಡ್ ಕಂಪನದ ಅನುಭವವಾಗಿದೆ. ಇದರ ಬೆನ್ನಲ್ಲೇ ದೆಹಲಿಯಲ್ಲಿ ಧೂಳು ಸಹಿತ ಬಿರುಗಾಳಿ ಬೀಸಿದ್ದು, ದೆಹಲಿ-ಎನ್‌ಸಿಆರ್‌ನಲ್ಲಿ ಬಲವಾದ ಗಾಳಿಯೊಂದಿಗೆ ಗುಡುಗು ಸಹಿತ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

{ ಖ್ವಾಜಾ ಆಸಿಫ್ } ಪಾಕ್ ರಕ್ಷಣಾ ಸಚಿವ

ಪಾಕಿಸ್ತಾನ ಶಾಂತಿ-ಪ್ರಾದೇಶಿಕ ಸ್ಥಿರತೆ ಕಾಪಾಡಲು ಬದ್ಧ. ದೇಶದ ಸ್ವಾತಂತ್ರ್ಯ ರಕ್ಷಣೆಗಾಗಿ ಸದಾ ಸಿದ್ಧ. ಪ್ರಚೋದನೆ ಮಾಡಿದರೆ, ಭಾರತ-ಪಾಕ್ ನಡುವೆ ಮತ್ತೆ ಸಂಘರ್ಷವೇನಾದರೂ ನಡೆದರೆ ನಮ್ಮ ದಾಳಿ ಗಡಿಭಾಗಕ್ಕೆ ಸೀಮಿತವಾಗದು. ಗಡಿ ದಾಟಿ ಒಳಕ್ಕೆ ನುಗ್ಗಿ ಆರ್‌ಎಸ್‌ಎಸ್ ಶಿಬಿರಗಳು, ಜನರ ಮನೆಗಳಿಗೇ ನೇರ ದಾಳಿ ನಡೆಸುತ್ತೇವೆ.

ಉತ್ತರ ಪ್ರದೇಶ ಎಟಿಎಸ್‌ನಿಂದ ನಾಲ್ವರು ಯುವ ಉಗ್ರರ ಸೆರೆ | ಭಾರತದಲ್ಲಿ ವಿದ್ರೋಹಿ ಕೃತ್ಯಗಳಿಗೆ ಸಂಚು: ಪಾಕ್ ನಿರ್ದೇಶನ | ಸೇನಾ ಶಿಬಿರಗಳು, ರೈಲು ನಿಲ್ದಾಣಗಳ ಗುರಿಯಾಗಿಸಿದ್ದ ತಂಡ | ಐಎಸ್‌ಐ ಹ್ಯಾಂಡ್ಲರ್ ಜತೆ ಸಂವಹನಕ್ಕೆ ಎನ್‌ಕ್ರಿಪ್ಟೆಡ್ ಆಪ್ ಬಳಕೆ

ಪಾಕ್ ಸಂಪರ್ಕದ ಉ.ಪ್ರ ಉಗ್ರರ ಜಾಲ ಬಯಲು

ಲಖನೌ: ಪಾಕಿಸ್ತಾನದ ನಿರ್ದೇಶನದ ಮೇರೆಗೆ ಭಾರತದ ಪ್ರಮುಖ ಸ್ಥಳಗಳನ್ನು ಸ್ಫೋಟಿಸಿ ದೇಶದಲ್ಲಿ ತಲ್ಲಣ ಮೂಡಿಸಲು, ದೇಶವಾಸಿಗಳಲ್ಲಿ ಭಯ ಹುಟ್ಟಿಸಲು ಸಂಚು ಹೂಡಿದ್ದ ಭಯೋತ್ಪಾದಕರ ಜಾಲವೊಂದನ್ನು ಉತ್ತರ ಪ್ರದೇಶದ 'ಭಯೋತ್ಪಾದನಾ ನಿಗ್ರಹ ಪಡೆ'(ಎಟಿಎಸ್) ಭೇದಿಸಿದೆ.

ಪಾಕಿಸ್ತಾನದಿಂದ ಬರುತ್ತಿದ್ದ ನಿರ್ದೇಶನಗಳಂತೆ ಭಾರತದಲ್ಲಿನ ಪ್ರಮುಖ ರೈಲು ನಿಲ್ದಾಣಗಳಲ್ಲಿ, ಪ್ರಮುಖ ಸಂಸ್ಥೆಗಳು ಇರುವೆಡೆ ಸ್ಫೋಟ ನಡೆಸುವ ಮೂಲಕ ಭಯವನ್ನು ಹುಟ್ಟು ಹಾಕಲು ಹೊಂಚು ಹಾಕಿದ್ದ ಉತ್ತರ ಪ್ರದೇಶ ರಾಜ್ಯದ ವಿವಿಧ ಸ್ಥಳಗಳಲ್ಲಿನ ನಾಲ್ವರು ಯುವಕರನ್ನು 'ಎಟಿಎಸ್' ಬಂಧಿಸಿದೆ.

ಏಪ್ರಿಲ್‌ನಲ್ಲಿ ಲಖನೌ ರೈಲ್ವೆ ನಿಲ್ದಾಣದ ಬಳಿ ದೊಡ್ಡ ಸ್ಫೋಟ ನಡೆಸುವ ಮೂಲಕ ದೊಡ್ಡ ಮಟ್ಟದ ವಿಧ್ವಂಸಕ ಕೃತ್ಯಕ್ಕೆ ನಾಲ್ವರ ಯೋಜನೆ ರೂಪಿಸಿಕೊಂಡಿತ್ತು. ಆದರೆ ಅದಕ್ಕೂ ಮುನ್ನವೇ ಉತ್ತರ ಪ್ರದೇಶ 'ಎಟಿಎಸ್' ತಂಡದ ಅಧಿಕಾರಿಗಳು ಈ ಉಗ್ರ ಜಾಲವನ್ನು ಬಯಲಿಗೆಳೆಯುವ ಮೂಲಕ ದೊಡ್ಡ ಅನಾಹುತವನ್ನು ತಪ್ಪಿಸಿದ್ದಾರೆ.

ನಾಲ್ವರು ಉಗ್ರರ ಈ ತಂಡ ಸೇನಾ ಶಿಬಿರಗಳು, ಜನದಟ್ಟಣೆಯ ಪ್ರಮುಖ ರೈಲು ನಿಲ್ದಾಣಗಳು, ದೇಶದ ಪ್ರತಿಷ್ಠಿತ ಉದ್ಯಮ ಸಂಸ್ಥೆಗಳ ಬಳಿಯಲ್ಲಿ ಸ್ಫೋಟಕ ಸಿಡಿಸಿ, ಇಲ್ಲವೇ ರಾಸಾಯನಿಕ ಬಳಸಿ ಭಾರೀ ಬೆಂಕಿ ಅವಘಡ ಸೃಷ್ಟಿಸಿ ಭಯೋತ್ಪಾದನೆ ಉಂಟು ಮಾಡಲು ಸಂಚು ಹೂಡಿತ್ತು. ಅಲ್ಲದೇ, ಹೆಚ್ಚು ಜನರು ಸೇರುವಲ್ಲಿ, ರೈಲ್ವೇ ಸಿಗ್ನಲ್ ಬಾಕ್ಸ್‌ಗಳಿಗೆ, ಗ್ಯಾಸ್ ಸಿಲಿಂಡರ್ ಅಳವಡಿಸಿದ ವಾಹನಗಳಿಗೆ ಬೆಂಕಿ ಹಚ್ಚಿ ಜನರಲ್ಲಿ ಭಯ ಉಂಟು ಮಾಡಲು

ಯೋಜಿಸಿತ್ತು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ನಾಲ್ವರೂ ಈವರೆಗೆ ಪ್ರಾಯೋಗಿಕವಾಗಿ ಕೆಲವೆಡೆ ಬೆಂಕಿ ಹಚ್ಚುವ ಮೂಲಕ ಸಣ್ಣಪುಟ್ಟದಾಗಿ ಅಗ್ನಿ ಅವಘಡಗಳನ್ನು ನಡೆಸಿದ್ದಾರೆ ಎಂದು ದೃಢಪಟ್ಟಿದೆ.

ಇದಲ್ಲದೇ ಪ್ರಮುಖ ಪೊಲೀಸ್ ಠಾಣೆಗಳ ಬಗ್ಗೆ ಹಾಗೂ ರಾಜಕೀಯ ನಾಯಕರ ಚಲನವಲನ ಕುರಿತು ಮಾಹಿತಿ ಸಂಗ್ರಹಿಸಿ ಪಾಕ್ ಹ್ಯಾಂಡ್ಲರ್‌ಗೆ ದಾಟಿಸುವ ಜವಾಬ್ದಾರಿಯನ್ನೂ ಈ ನಾಲ್ವರು ಉಗ್ರರ ತಂಡಕ್ಕೆ ವಹಿಸಲಾಗಿತ್ತು ಎಂಬುದು ತನಿಖೆ ವೇಳೆ ತಿಳಿದುಬಂದಿದೆ.

ಸ್ಫೋಟಕಗಳ ವಶ: ಮುಖ್ಯ ಆರೋಪಿ ಸಾಕಿಬ್ ಬಳಿಯಿಂದ ಸ್ಫೋಟಕ ಸಾಮಗ್ರಿಗಳು, ಬೆಂಕಿ ಪ್ರೇರಕ ರಾಸಾಯನಿಕ ದ್ರಾವಣಗಳು, 7 ಸ್ಮಾರ್ಟ್‌ಫೋನ್‌ಗಳು, ಅಲ್ ಖೈದಾ ಮತ್ತು ಗಜ್ವಾ ಹಿಂದ್ ಉದ್ದೇಶ ಪ್ರಚುರಪಡಿಸುವ ಕರಪತ್ರಗಳು ಮತ್ತು ನಕಲಿ ಆಧಾರ್ ಕಾರ್ಡ್‌ಗಳನ್ನು ಉತ್ತರ ಪ್ರದೇಶ 'ಎಟಿಎಸ್' ತಂಡ ವಶಪಡಿಸಿಕೊಂಡಿದೆ.

ಜಾಲದ ತಂತುಗಳಿಗೆ ಶೋಧ: ಸಾಮಾಜಿಕ ಜಾಲತಾಣ ಮತ್ತು ಎನ್‌ಕ್ರಿಪ್ಟೆಡ್ ಮೊಬೈಲ್ ಆಪ್‌ಗಳ ಮೂಲಕ ಹಣದ ಆಮಿಷವೊಡ್ಡಿ ಯುವಕರನ್ನು ತಮ್ಮ ಉಗ್ರ ಜಾಲಕ್ಕೆ ಸೇರಿಸಿಕೊಳ್ಳಲೂ ಸಾಕಿಬ್ ಮತ್ತು ತಂಡ ಯತ್ನಿಸುತ್ತಿತ್ತು. ಪಾಕ್‌ನ ಐಎಸ್‌ಐ ಹ್ಯಾಂಡ್ಲರ್‌ಗಳ ನಿರ್ದೇಶನದ ಮೇರೆಗೆ ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ತರಲು ಹೊಂಚು ಹಾಕಿದ್ದ ಭಯೋತ್ಪಾದನಾ ಜಾಲದ ನಾಲ್ವರು ಸದ್ಯಕ್ಕೆ ಸೆರೆ ಸಿಕ್ಕಿದ್ದಾರೆ. ಆದರೆ, ಈ ಜಾಲದ ಉದ್ದಗಲವನ್ನು ತಿಳಿದುಕೊಂಡು ಮಟ್ಟ ಹಾಕಲು ಉತ್ತರ ಪ್ರದೇಶ ಎಟಿಎಸ್ ತಂಡ, ಬಂಧಿತ ನಾಲ್ವರ ವಿಚಾರಣೆಯನ್ನು ತೀವ್ರಗೊಳಿಸಿದೆ ಎಂದು ಮೂಲಗಳು ತಿಳಿಸಿವೆ.

ಸಾಕಿಬ್

ಅರ್ಬಾಬ್


ವಿಕಾಸ್

ಲೋಕೇಶ್

ತಂಡದ ನಾಯಕ ಸಾಕಿಬ್(ಡೆವಿಲ್)

ಉತ್ತರ ಪ್ರದೇಶದ ಮೀರತ್ ನಗರದ ನಿವಾಸಿ, ವೃತ್ತಿಯಲ್ಲಿ ಕ್ಷೌರಿಕನಾಗಿದ್ದ ಸಾಕಿಬ್ ಈ ಉಗ್ರರ ತಂಡದ ಮುಖ್ಯಸ್ಥನಾಗಿದ್ದಾನೆ. ತನ್ನನ್ನು ತಂಡದಲ್ಲಿ ದೊಡ್ಡದಾಗಿ ಬಿಂಬಿಸಿಕೊಳ್ಳಲು ಡೆವಿಲ್ ಎಂಬ ಅಡ್ಡಹೆಸರು ಇಟ್ಟುಕೊಂಡಿದ್ದಾನೆ. ಮೀರತ್‌ನ ಮತ್ತೊಬ್ಬ ಯುವಕ ಅರ್ಬಾಬ್, ಗೌತಮ್ ಬುದ್ಧ ನಗರದ ವಿಕಾಸ್ ಗೆಹ್ಲಾವತ್ ಅಲಿಯಾಸ್ ರೌನಕ್ ಮತ್ತು ಲೋಕೇಶ್ ಎಂಬವರನ್ನು ಎಟಿಎಸ್ ತಂಡ ಬಂಧಿಸಿದೆ. ಲೋಕೇಶ್‌ಗೆ ಪಪ್ಪಾ ಪಂಡಿತ್, ಬಾಬು, ಸಂಜು ಎಂಬ ಅಡ್ಡ ಹೆಸರುಗಳೂ ಇವೆ. ಸಾಮಾಜಿಕ ಜಾಲತಾಣಗಳಲ್ಲಿ ಗೌತಮ್ ಬುದ್ಧ್ ನಗರದ ವಿಕಾಸ್ ಮತ್ತು ಲೋಕೇಶ್‌ನನ್ನು ಸಾಕಿಬ್ ಮೊದಲಿಗೆ ಪರಿಚಯ ಮಾಡಿಕೊಂಡ. ಅವರ ಬಗ್ಗೆ ವಿಶ್ವಾಸ ಮೂಡಿದ ಬಳಿಕ ಹಣ ಕೊಡುವುದಾಗಿ ಆಸೆ ಹುಟ್ಟಿಸಿ ತಮ್ಮ ಉಗ್ರ ಜಾಲಕ್ಕೆ ಸಾಕಿಬ್ ಸೇರಿಸಿಕೊಂಡ. ಆ ಬಳಿಕ ಅವರಿಬ್ಬರಿಗೂ ಅಲ್-ಖೈದಾ ಮತ್ತು ಗಜ್ವಾ-ಎ-ಹಿಂದ್‌ನಂತಹ ಉಗ್ರಗಾಮಿ ವಿಚಾರಧಾರೆಗಳನ್ನು ಭೋದಿಸಿ ಪ್ರೇರೇಪಣೆ ಮಾಡುತ್ತಿದ್ದ. ದೊಡ್ಡ ಮೊತ್ತದ ಆಮಿಷವೊಡ್ಡಿ ಕೆಲವೆಡೆ ಬೆಂಕಿ ಹಚ್ಚುವ ಕೆಲಸಗಳಿಗೆ ಬಳಸಿಕೊಂಡಿದ್ದ ಎಂದು ತಿಳಿದುಬಂದಿದೆ.

ಉಗ್ರ ಕೃತ್ಯದ ವಿಡಿಯೊ ಕಳುಹಿಸಿದರೆ ಪಾಕ್ ಹಣ

ತಂಡದ ಮುಖಂಡನಾದ ಸಾಕಿಬ್, ಪಾಕಿಸ್ತಾನದ ಬೇಹುಗಾರಿಕಾ ಸಂಸ್ಥೆ ಐಎಸ್‌ಐನ ಹ್ಯಾಂಡ್ಲರ್‌ಗಳ ಜತೆ ನಿತ್ಯವೂ ಸಂಪರ್ಕದಲ್ಲಿದ್ದ. ಅವರೊಂದಿಗೆ ಟೆಲಿಗ್ರಾಮ್, ಸಿಗ್ನಲ್ ಮತ್ತು ಇನ್‌ಸ್ಟಾಗ್ರಾಮ್ ಮೊದಲಾದ ಎನ್‌ಕ್ರಿಪ್ಟೆಡ್ ಅಪ್ಲಿಕೇಷನ್‌ಗಳ ಮೂಲಕ ಸಂವಹನ ನಡೆಸುತ್ತಿದ್ದ. ಪಾಕ್ ಐಎಸ್‌ಐ ಹ್ಯಾಂಡ್ಲರ್ ಮತ್ತು ಸಾಕಿಬ್ ನಡುವಿನ ಸಂಪರ್ಕ ಸಂಖ್ಯೆಗಳ ಪಟ್ಟಿಯಲ್ಲಿ ಅಫ್ಘಾನಿಸ್ತಾನದ ಹಲವು ಸಂಖ್ಯೆಗಳೂ ಪತ್ತೆಯಾಗಿವೆ. ಪಾಕ್ ಹ್ಯಾಂಡ್ಲರ್ ನಿರ್ದೇಶನದಂತೆ ಭಾರತದ ವಿವಿಧೆಡೆ ಭಯೋತ್ಪಾದಕ ಕೃತ್ಯ ನಡೆಸಿದ ನಂತರ ಅದರ ವಿಡಿಯೊಗಳನ್ನು ಪಾಕಿಸ್ತಾನಕ್ಕೆ ಕಳುಹಿಸಿದರೆ ಪಾಕ್ ಹ್ಯಾಂಡ್ಲರ್ ಕೃತ್ಯಕ್ಕೆ ತಕ್ಕಂತೆ ಹಣ ಕಳುಹಿ ಸುವ ಒಪ್ಪಂದವಾಗಿತ್ತು. ಅದರಂತೆ ಈವರೆಗೂ ಅಲ್ಲಲ್ಲಿ ಬೆಂಕಿ ಹಚ್ಚುವ ಮೂಲಕ ಭಯ- ಗೊಂದಲ ಉಂಟು ಮಾಡುವ ಪ್ರಯತ್ನ ಮಾಡಿದ್ದ ಘಟನೆಗಳನ್ನೂ ವಿಡಿಯೊ ಚಿತ್ರೀಕರಿಸಿ ಪಾಕ್ ಹ್ಯಾಂಡ್ಲರ್ ಜತೆ ಸಾಕಿಬ್ ಹಂಚಿಕೊಂಡು ಹಣ ಪಡೆದಿದ್ದ. ಹಣದ ವರ್ಗಾವಣೆಗಾಗಿ ಪಾಕ್ ಹ್ಯಾಂಡ್ಲರ್ ಮತ್ತು ಸಾಕಿಬ್ ಕೀ ಕೋಡ್‌ಗಳನ್ನು ಬಳಸುತ್ತಿದ್ದರು ಎಂಬುದು ತನಿಖೆ ವೇಳೆ ದೃಢಪಟ್ಟಿದೆ.

ಶಶಿತರೂರ್ ಭದ್ರತಾ ಸಿಬ್ಬಂದಿ ಮೇಲೆ ಹಲ್ಲೆ

ತಿರುವನಂತಪುರಂ: ಕೇರಳದಲ್ಲಿ ಏ.9ರಂದು ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದ್ದು, ಪ್ರಚಾರ ಕಾರ್ಯ ಭರದಿಂದ ಸಾಗುತ್ತಿದೆ. ಕಾಂಗ್ರೆಸ್‌ನ ಹಿರಿಯ ನಾಯಕ, ತಿರುವನಂತಪುರಂ ಸಂಸದ ಶಶಿತರೂರ್ ಅವರ ಬೆಂಗಾವಲು ಪಡೆ ಮೇಲೆ ಚೆಲ್ಲಿತ್ತೋಡು ಬಳಿ ಹಲ್ಲೆ ನಡೆದಿದ್ದು, ಮೂವರನ್ನು ಸ್ಥಳದಲ್ಲೆ ಬಂಧಿಸಲಾಗಿದೆ.

ಕೇರಳದ ಮಲಪ್ಪುರಂ ಜಿಲ್ಲೆಯ ವಂಡೂರಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎ.ಪಿ.ಅನಿಲ್ ಕುಮಾರ್ ಪರ ಚುನಾವಣಾ ಪ್ರಚಾರಕ್ಕೆಂದು ಶಶಿತರೂರ್ ಶುಕ್ರವಾರ ರಾತ್ರಿ ತೆರಳುತ್ತಿದ್ದರು. ತಿರುವಳ್ಳಿ ಚೆಲ್ಲಿತ್ತೋಡು ಸೇತುವೆ ಬಳಿ ಎರಡು ಕಾರು, ಹಲವು ಮೋಟಾರ್ ಬೈಕ್‌ಗಳಲ್ಲಿ ಬಂದ ಹಲ್ಲೆಕೋರರ ಗುಂಪು ಶಶಿತರೂರ್ ಮತ್ತು ಅವರ ಬೆಂಗಾಲು ಪಡೆ ಕಾರುಗಳನ್ನು ತಡೆದಿದೆ. ಬಳಿಕ ಕಾರಿಳಿದು ಬಂದು ರಸ್ತೆ ತಡೆ ತೆರವುಗೊಳಿಸಲು ಮುಂದಾದ ಶಶಿ ತರೂರ್ ಅವರ ಗನ್‌ಮ್ಯಾನ್ ಸೇರಿದಂತೆ ಬೆಂಗಾವಲು ಪಡೆಯ ಭದ್ರತಾ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿದೆ.

ಭದ್ರತಾ ಸಿಬ್ಬಂದಿಯ ದೂರಿನ ಮೇರೆಗೆ ವಂದೂರು ಪೊಲೀಸರು ಕಾಳಿಕಾವು ಮೂಲದ ಉಮರ್ ಎಂಬಾತ ಸೇರಿದಂತೆ ಒಟ್ಟು ಐವರ ವಿರುದ್ಧ ಕಾರು ತಡೆದು ಹಲ್ಲೆ ನಡೆಸಿದ ಆರೋಪದಡಿ ಪ್ರಕರಣ ದಾಖಲಿಸಿದ್ದಾರೆ. ಹಲ್ಲೆ ನಡೆಸಿದವರಲ್ಲಿ ಮೂವರನ್ನು ಸ್ಥಳದಲ್ಲೇ ಬಂಧಿಸಿದ್ದು, ಉಳಿದವರಿಗಾಗಿ ಶೋಧ ನಡೆಸುತ್ತಿದ್ದಾರೆ. ಹಲ್ಲೆಕೋರರು ಬಂದಿದ್ದ 2 ಕಾರುಗಳನ್ನೂ ವಶಪಡಿಸಿಕೊಳ್ಳಲಾಗಿದೆ.

ಈ ದಾಳಿಯ ಹಿಂದೆ ರಾಜಕೀಯ ದ್ವೇಷ, ಪಿತೂರಿ ಇದೆಯೇ ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಇರಾನ್ ಹೊರ್ಮುಜ್ ಬಂದ್ ಬಳಿಕ ಜಲಸಂಧಿ ದಾಟಿ ಬಂದ 8ನೇ ಇಂಧನ ನೌಕೆ

ಭಾರತದತ್ತ ಗ್ರೀನ್ ಸಾನ್ವಿ ಎಲ್‌ಪಿಜಿ ಹಡಗು

ದೆಹಲಿ: ಇರಾನ್ ಹೊರ್ಮುಜ್ ಜಲಸಂಧಿಯನ್ನು ದಾಟಿಕೊಂಡು ಭಾರತದ ಧ್ವಜವಿರುವ ಮತ್ತೊಂದು ಎಲ್‌ಪಿಜಿ ನೌಕೆ ಶನಿವಾರ ಅರಬ್ಬೀ ಸಮುದ್ರದಲ್ಲಿ ಸಂಚಾರ ನಡೆಸುತ್ತಿದ್ದು, ಭಾನುವಾರ ಅಥವಾ ಸೋಮವಾರ ಭಾರತದ ಬಂದರನ್ನು ತಲುಪುವ ಸಾಧ್ಯತೆ ಇದೆ.

ಇದರಿಂದಾಗಿ ಫೆ.28ರಂದು ಇರಾನ್ ಯುದ್ಧ ಶುರುವಾಗಿ ಹೊರ್ಮುಜ್ ಜಲಸಂಧಿ ಬಂದ್ ಆದ ಬಳಿಕ 8 ಹಡಗುಗಳು ಜಲಸಂಧಿಯನ್ನು ದಾಟಿಕೊಂಡು ಭಾರತಕ್ಕೆ ಎಲ್‌ಪಿಜಿ ಮತ್ತು ಕಚ್ಚಾತೈಲವನ್ನು ಹೊತ್ತು ತಂದಂತಾಗಿದೆ. ಬೇರೆ ದೇಶಗಳಿಗೆ ಹೋಲಿಸಿದರೆ ಭಾರತವೇ ಅತಿ ಹೆಚ್ಚು ಹಡಗುಗಳಲ್ಲಿ ಅಡುಗೆ ಅನಿಲ ಮತ್ತು ಕಚ್ಚಾತೈಲವನ್ನು ಹೊರ್ಮುಜ್ ಜಲಸಂಧಿ ಮಾರ್ಗದಲ್ಲಿ ತರಿಸಿಕೊಂಡಂತಾಗಿದೆ. ಹೊರ್ಮುಜ್ ಜಲಸಂಧಿ ಭಾರತ, ರಷ್ಯಾ, ಚೀನಾ ಮತ್ತು ಪಾಕಿಸ್ತಾನ ಸೇರಿದಂತೆ 5 ಮಿತ್ರ ರಾಷ್ಟ್ರಗಳಿಗೆ ಮುಕ್ತವಾಗಿದೆ ಎಂದು ಇರಾನ್ ಘೋಷಿಸಿರುವುದು ಗಮನಾರ್ಹ.

46,650 ಮೆಟ್ರಿಕ್ ಟನ್ ಎಲ್‌ಪಿಜಿ ಭರ್ತಿ ಮಾಡಿಕೊಂಡು ಯುನೈಟೆಡ್ ಅರಬ್ ಎಮಿರೇಟ್ಸ್‌ನ ಜಬಾಲ್ ಅಲ್ ಝುನ್ನಾಹ್ ಅಂಚ್ ಬಂದರಿನಿಂದ ಶುಕ್ರವಾರ ಮುಂಜಾನೆಯೇ ಹೊರಟಿರುವ ಗ್ರೀನ್ ಸಾನ್ವಿ ಹಡಗು, ಶುಕ್ರವಾರ ರಾತ್ರಿ ಹೊರ್ಮುಜ್ ಜಲಸಂಧಿಯನ್ನು ದಾಟಿದೆ. ಶನಿವಾರ ಇಡೀ ದಿನ ಅರಬ್ಬೀ ಸಮುದ್ರದಲ್ಲಿ ಗಂಟೆಗೆ 12.4 ನಾಟಿಕಲ್ ಕಿಮೀ ವೇಗದಲ್ಲಿ ಸಂಚರಿಸುತ್ತಾ ಭಾರತದತ್ತ ಬರುತ್ತಿದೆ. ಬಹುಶಃ ಈ ಎಲ್‌ಪಿಜಿ ನೌಕೆಯು ಮುಂಬೈ ಅಥವಾ ನವ ಮಂಗಳೂರು ಬಂದರಿನತ್ತ ಸಾಗುವ ನಿರೀಕ್ಷೆ ಇದೆ.

ಇರಾನ್ ಯುದ್ಧ ಆರಂಭವಾದ ನಂತರದಲ್ಲಿ ಈವರೆಗೂ ಇರಾನ್‌ನ ಹೊರ್ಮುಜ್ ಜಲಸಂಧಿ ದಾಟಿಕೊಂಡು ಶಿವಾಲಿಕ್, ನಂದಾ ದೇವಿ, ಜಗ್ ಲಾಡ್ಕಿ, ಪೈನ್ ಗ್ಯಾಸ್, ಜಗ್ ವಸಂತ, ಬಿ ಡಬ್ಲ್ಯು ಟೈರ್, ಬಿಡಬ್ಲ್ಯು ಎಲ್ಮ್ ಇಂಧನ ನೌಕೆಗಳು ಭಾರತಕ್ಕೆ ಬಂದು ತಲುಪಿವೆ. ಈಗ ಗ್ರೀನ್ ಸಾನ್ವಿ ಬರುತ್ತಿದೆ.

16 ನೌಕೆ ಉಳಿಕೆ: ಉಳಿದಂತೆ ಹೊರ್ಮುಜ್ ಜಲಸಂಧಿಯಾಚೆಗೆ ಭಾರತದ ಧ್ವಜವಿರುವ ಇನ್ನೂ 16 ನೌಕೆಗಳಿದ್ದು, ಅವುಗಳಲ್ಲಿ 485 ಭಾರತೀಯ ನಾವಿಕರು ಉಳಿದುಕೊಂಡಿದ್ದಾರೆ. ಭಾರತದ ಧ್ವಜವಿರುವ ಹಡಗುಗಳಿಗೆ ಸಮುದ್ರ ಮಾರ್ಗ ಸಂಚಾರ ಸುರಕ್ಷಿತಗೊಳಿಸಲು ಭಾರತೀಯ ನೌಕಾಪಡೆಯು ಓಮನ್ ಕೊಲ್ಲಿ ಮತ್ತು ಅರೇಬಿಯನ್ ಸಮುದ್ರದಲ್ಲಿ ಕಾವಲಿಗಿದ್ದು, ಭದ್ರತೆ ಒದಗಿಸುತ್ತಿದೆ ಎಂದು ವಿದೇಶಾಂಗ ಸಚಿವಾಲಯ ದೃಢಪಡಿಸಿದೆ.

ಅಮೆರಿಕಕ್ಕೆ ಮತ್ತೊಂದು ಪೆಟ್ಟು, ಎ-10 ವಿಮಾನ ನೆಲಕ್ಕುರುಳಿಸಿದ್ದೇವೆ: ಇರಾನ್

ಟೆಹರಾನ್: ಹೊರ್ಮುಜ್ ಜಲಸಂಧಿ ಸಮೀಪ ಅಮೆರಿಕದ ಎ-10 ಯುದ್ಧವಿಮಾನವನ್ನು ಹೊಡೆದು ನೆಲಕ್ಕೆ ಉರುಳಿಸಿರುವುದಾಗಿ ಇರಾನ್ ಸೇನೆ ಶನಿವಾರ ಹೇಳಿಕೊಂಡಿದೆ. ಆದರೆ, ಈ ಬಗ್ಗೆ ಅಮೆರಿಕದ ರಕ್ಷಣಾ ಇಲಾಖೆಯ ಮುಖ್ಯ ಕಚೇರಿ ಪೆಂಟಗನ್ ಆಗಲೀ, ಶ್ವೇತಭವನವಾಗಲೀ ಪ್ರತಿಕ್ರಿಯೆ ನೀಡಿಲ್ಲ. ಎ-10 ವಿಶೇಷವಾಗಿ ಯುದ್ಧ ಟ್ಯಾಂಕ್‌ಗಳು ಮತ್ತು ಭೂಪಡೆಗಳ ವಿರುದ್ಧ ಕಾರ್ಯಾಚರಣೆಗೆ ವಿನ್ಯಾಸಗೊಂಡಿರುವ ಯುದ್ಧ ವಿಮಾನವಾಗಿದೆ.

ಇದಕ್ಕೂ ಮೊದಲು ಶುಕ್ರವಾರ, ಅಮೆರಿಕ ವಾಯುಪಡೆಯ ಎಫ್-15ಇ ಯುದ್ಧವಿಮಾನವನ್ನು ಇರಾನ್ ನೆಲಕ್ಕುರುಳಿಸಿದೆ. ಇರಾನ್ ಮಾಧ್ಯಮಗಳು ಬಿಡುಗಡೆ ಮಾಡಿದ ಚಿತ್ರಗಳನ್ನು ಪರಿಶೀಲಿಸಿದ ಅಮೆರಿಕದ ಸಿಎನ್‌ಎನ್ ಮಾಧ್ಯಮ ಸಂಸ್ಥೆಯು, ಇವು ಎಫ್-15ಇ ವಿಮಾನದ ಅವಶೇಷಗಳಾಗಿವೆ ಎಂದು ದೃಢಪಡಿಸಿದೆ.

ಅಮೆರಿಕದ ಬಲಿಷ್ಠವಾದ ಎಫ್-15ಇ ಈಗಲ್ ಯುದ್ಧ ವಿಮಾನ ಇರಾನ್ ನೆಲದಲ್ಲೇ ಶುಕ್ರವಾರ ಪತನವಾಗಿದೆ. ಎಫ್-15ಇ ದೊಡ್ಡ ಗಾತ್ರದ ಬಲಿಷ್ಠ ಯುದ್ಧವಿಮಾನವಾಗಿದ್ದು, ಅದರಲ್ಲಿ ಇಬ್ಬರು ಪೈಲಟ್‌ಗಳಿರುತ್ತಾರೆ. ಅಮೆರಿಕ ಸೇನಾಪಡೆಗಳು ಸ್ಥಳಕ್ಕೆ ಧಾವಿಸಿ ಪೈಲಟ್‌ನನ್ನು ರಕ್ಷಿಸಿ ಕರೆದೊಯ್ದಿವೆ. ಪೈಲಟ್ ಸಣ್ಣಪುಟ್ಟ ಗಾಯಗಳೊಂದಿಗೆ ಪರಾಗಿದ್ದು, ಅಮೆರಿಕದ ಸೇನಾ ಶಿಬಿರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೆ, ಇನ್ನೊಬ್ಬ ಪೈಲಟ್ ಏನಾದರು ಎಂಬುದು ತಿಳಿದುಬಂದಿಲ್ಲ. ಅವರಿಗಾಗಿ ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಸಿಎನ್‌ಎನ್ ವರದಿ ತಿಳಿಸಿದೆ. ಪೈಲಟ್‌ಗಾಗಿ ಶೋಧ ನಡೆಸುತ್ತಿರುವ ಪ್ರದೇಶವನ್ನು ನಕ್ಷೆ ಯಲ್ಲಿ ವಾಲ್ ಸ್ಟ್ರೀಟ್ ಜರ್ನಲ್ ಗುರುತಿಸಿದೆ. ಇದಕ್ಕೂ ಮುನ್ನ ಅಮೆರಿಕದ ಎಫ್-35 ಯುದ್ಧ ವಿಮಾನವನ್ನು ಇರಾನ್ ನೆಲಕ್ಕೆ ಕೆಡವಿದೆ. ಈಗಿನ ಯುದ್ಧದಲ್ಲಿ ಅಮೆರಿಕದ ಹಲವು ಯುದ್ಧ ವಿಮಾನಗಳನ್ನು ಇರಾನ್ ಹೊಡೆದು ಹಾಕಿದೆ.

ಟ್ರಂಪ್ ಪ್ರತಿಕ್ರಿಯೆ

48 ಗಂಟೆಗಳ ಅವಧಿಯಲ್ಲಿ ಅಮೆರಿಕದ ಶಕ್ತಿಶಾಲಿ ಯುದ್ಧ ವಿಮಾನಗಳಾದ ಎಫ್-35, ಎ-10, ಎ-15ಇ ಜೆಟ್, ಯುಎಚ್ 60 ಬ್ಲ್ಯಾಕ್ ಹಾಕ್ ಹೆಲಿಕಾಪ್ಟರ್ ಹಾಗೂ ವಾರ್ ಕಿಂಗ್ ಖ್ಯಾತಿಯ ಎಇ-130 ವಿಮಾನವನ್ನು ಹೊಡೆದು ಹಾಕಿರುವುದಾಗಿ ಇರಾನ್ ಸೇನೆ ಹೇಳಿಕೆ ಬಗ್ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾಧ್ಯಮ ಸಂದರ್ಶನವೊಂದರಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ. 'ನಾವು ಈಗ ಯುದ್ಧ ನಡೆಸುತ್ತಿದ್ದೇವೆ. ಈ ಘಟನೆಗಳು ಶಾಂತಿ ಮಾತುಕತೆ ಮೇಲೆ ಪರಿಣಾಮ ಬೀರುವುದಿಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

ಕೇಂದ್ರ ವಾಣಿಜ್ಯ ಸಚಿವ ಪಿಯೂಶ್ ಗೋಯಲ್ ವಿಶ್ವಾಸ

ಜನವಿಶ್ವಾಸ್ ಜಾರಿ: 5 ಕೋಟಿ ಕೇಸ್ ಅಂತ್ಯ

ದೆಹಲಿ: ಜನವಿಶ್ವಾಸ್ ವಿಧೇಯಕವನ್ನು ಲೋಕಸಭೆಯಲ್ಲಿ ಶುಕ್ರವಾರ ಮಂಡಿಸಿದ ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಶ್ ಗೋಯಲ್ ಅವರು, ಈ ವಿಧೇಯಕ ಕಾಯಿದೆಯಾಗಿ ಜಾರಿಗೊಂಡಲ್ಲಿ ದೇಶಾದ್ಯಂತದ ನ್ಯಾಯಾಲಯಗಳಲ್ಲಿ ಬಾಕಿಯಾಗಿರುವ 5 ಕೋಟಿಗೂ ಅಧಿಕ ಕೇಸ್‌ಗಳನ್ನು ಒಮ್ಮೆಲೇ ಬಗೆಹರಿಸಲು ಅನುಕೂಲವಾಗಲಿದೆ ಎಂದಿದ್ದಾರೆ.

ಕೇಂದ್ರ ಸರಕಾರದ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಒಟ್ಟು 79 ಕಾಯಿದೆಗಳಲ್ಲಿ ಕೆಲವು ಸ್ವಾತಂತ್ರ್ಯ ಪೂರ್ವದವಾಗಿವೆ. ಅವುಗಳಲ್ಲಿ ಕೆಲವು ಕಾಯಿದೆಗಳು ಜನವಿಶ್ವಾಸ್ ಕಾಯಿದೆಯ ಜಾರಿಯಿಂದ ರದ್ದಾಗಲಿವೆ. ಆಗ ಸಣ್ಣ ಪುಟ್ಟ ಲೋಪಗಳಿಗೂ ಅಪರಾಧ ಪ್ರಕರಣ ದಾಖಲಾಗಿ ನ್ಯಾಯಾಲಯಗಳಲ್ಲಿ ವಿಚಾರಣೆ ಬಾಕಿಯಾಗಿರುವ 5 ಕೋಟಿಗೂ ಅಧಿಕ ಪ್ರಕರಣಗಳನ್ನು ಮುಕ್ತಾಯಗೊಳಿಸಲು ಅವಕಾಶವಾಗಲಿದೆ. ಇದಕ್ಕೆ ಸಂಬಂಧಿಸಿದ ಇಲಾಖೆಗಳು ಮತ್ತು ಸರಕಾರಿ ವಕೀಲರು ಸಣ್ಣ ಪುಟ್ಟ ಅಪರಾಧ ಪ್ರಕರಣಗಳನ್ನು ವಾಪಸ್ ತೆಗೆದುಕೊಳ್ಳುವರು. ಆ ಕುರಿತು ನ್ಯಾಯಾಲಯಕ್ಕೆ ಅರ್ಜಿಗಳನ್ನು ಸಲ್ಲಿಸಿ ಪ್ರಕರಣಗಳ ಮುಕ್ತಾಯಕ್ಕೆ ಮನವಿ ಮಾಡುವರು. ಇದರಿಂದಾಗಿ ಕನಿಷ್ಠ 5 ಕೋಟಿ ಪ್ರಕರಣಗಳ ಹೊರೆ ನ್ಯಾಯಾಲಯಗಳಿಗೆ ತಗ್ಗಲಿದೆ ಎಂದು ವಿವರಿಸಿದರು. ಈ ಬಗೆಯಲ್ಲಿ ಸರಕಾರಿ ಇಲಾಖೆಗಳಿಗೆ ಸಂಬಂಧಿಸಿ ಸಣ್ಣ ಪುಟ್ಟ ಅಪರಾಧ ಪ್ರಕರಣಗಳನ್ನು ಎದುರಿಸುತ್ತಿರುವವರು ಪಬ್ಲಿಕ್ ಪ್ರಾಸಿಕ್ಯೂಟರ್ ಕಚೇರಿಯನ್ನು ಸಂಪರ್ಕಿಸುವುದು ಒಳಿತು ಎಂಬುದು ನನ್ನ ಸಲಹೆಯಾಗಿದೆ ಎಂದೂ ಸಚಿವರು ಹೇಳಿದ್ದಾರೆ.

ಕೇಂದ್ರ ಸರಕಾರ ಈಗ ಸಂಸತ್ತಿನಲ್ಲಿ ಪರಿಚಯಿಸಿರುವ ಜನವಿಶ್ವಾಸ್ ವಿಧೇಯಕ ಒಂದು ಸಾವಿರಕ್ಕೂ ಅಧಿಕ ನಿಯಮ -ಕಾಯಿದೆಗಳನ್ನು 'ಅಪರಾಧ ಪ್ರಕರಣ'ಗಳ ಪಟ್ಟಿಯಿಂದ ಹೊರಹಾಕಲಿದೆ. ಆ ಪ್ರಕರಣಗಳಿಗೆ ಈವರೆಗೆ ನಿಗದಿಯಾಗಿದ್ದ ಸೆರೆವಾಸದ ಶಿಕ್ಷೆಗೆ ಬದಲಾಗಿ ದಂಡ ವಿಧಿಸಿ ಪ್ರಕರಣ ಕೊನೆಗೊಳಿಸಲು ಅವಕಾಶ ಮಾಡಿಕೊಡುತ್ತಿದೆ. ಆದರೆ, ಸಮಾಜಕ್ಕೆ, ಸಾರ್ವಜನಿಕರಿಗೆ, ಸಾರ್ವಜನಿಕ ಆಸ್ತಿಗಳಿಗೆ ಹಾನಿ ಮಾಡುವಂತಹ ಪ್ರಕರಣಗಳು ಮಾತ್ರ 'ಅಪರಾಧ ಪ್ರಕರಣ'ಗಳ ಚೌಕಟ್ಟಿನಲ್ಲೇ ಮುಂದುವರಿಯುತ್ತವೆ ಎಂದು ಸಚಿವ ಗೋಯಲ್ ವಿವರಿಸಿದ್ದಾರೆ.

ಇದೇ ಬಗೆಯ ಜನವಿಶ್ವಾಸ್ ವಿಧೇಯಕವನ್ನು ದೇಶದ 12 ರಾಜ್ಯಗಳ ಶಾಸನಸಭೆಗಳಲ್ಲಿ ಈಗಾಗಲೇ ಮಂಡಿಸಿ ಕಾಯಿದೆಯಾಗಿ ಜಾರಿಗೂ ತರಲಾಗಿದೆ ಎಂದೂ ಗೋಯಲ್ ವಿವರಿಸಿದರು.

ಸೆರೆವಾಸ ತಪ್ಪಲಿರುವ ಕಾಯಿದೆಗಳು

- ಫಾರ್ಮಸಿ ಆಕ್ಟ್
- ಡ್ರಗ್ಸ್ ಅಂಡ್ ಕಾಸ್ಮೆಟಿಕ್ಸ್ ಆಕ್ಟ್
- ಫುಡ್ ಸೇಫ್ಟಿ ಅಂಡ್ ಸ್ಟ್ಯಾಂಡರ್ಡ್ ಆಕ್ಟ್
- ಕ್ಲಿನಿಕಲ್ ಎಸ್ಟಾಬ್ಲಿಷ್‌ಮೆಂಟ್ಸ್ (ರಿಜಿಸ್ಟ್ರೇಷನ್ ಅಂಡ್ ರೆಗ್ಯುಲೇಷನ್) ಆಕ್ಟ್
- ನ್ಯಾಷನಲ್ ಕಮಿಷನ್ ಫಾರ್ ಅಲೈಡ್ ಅಂಡ್ ಹೆಲ್ತ್‌ಕೇರ್ ಪ್ರಾವಿಸನ್ಸ್ ಆಕ್ಟ್

ಇರಾನ್ ನೌಕಾದಳ ಉಪ ಗುಪ್ತಚರ ನಾಯಕ ಹತ

ಟೆಹರಾನ್: ಪಶ್ಚಿಮ ಏಷ್ಯಾ ವಲಯದಲ್ಲಿ ಸದ್ಯ ನಡೆಯುತ್ತಿರುವ ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧದಲ್ಲಿ ಇರಾನ್ ನೌಕಾಪಡೆಯ ಗುಪ್ತಚರ ವಿಭಾಗದ ಉಪ ಮುಖ್ಯಸ್ಥ ಬೆಹ್ನಾಮ್

ರೆಝಾಯ್ ಶುಕ್ರವಾರದ ದಾಳಿಯಲ್ಲಿ ಹತರಾಗಿದ್ದಾರೆ. ಬೆಹ್ನಾಮ್ ಸಾವನ್ನು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಶನಿವಾರ ದೃಢಪಡಿಸಿದೆ.

ಪ್ರಸ್ತುತ ಯುದ್ಧದಲ್ಲಿ ಇರಾನ್ ನಡೆಸುತ್ತಿದ್ದ ಪ್ರತಿದಾಳಿಗಳಲ್ಲಿ ಬೆಹ್ನಾಮ್ ಪ್ರಮುಖ ಪಾತ್ರ ವಹಿಸಿದ್ದರು. ಸಾಗರ ಮಾರ್ಗದಿಂದ ಎದುರಾಗುತ್ತಿದ್ದ ದಾಳಿಗಳ ಕಾರ್ಯತಂತ್ರ ಮಾಹಿತಿಗಳನ್ನು ಸಂಗ್ರಹಿಸುವ ಜವಾಬ್ದಾರಿ ಅವರ ತಂಡದ್ದಾಗಿತ್ತು. ಬೆಹ್ನಾಮ್ ನೌಕಾಪಡೆ ಗುಪ್ತಚರ ಕಾರ್ಯಾಚರಣೆಗಳನ್ನು ಮುನ್ನಡೆಸುತ್ತಿದ್ದರು. ಅಮೆರಿಕ-ಇಸ್ರೇಲ್ ಫೆ.28ರಂದು ಇರಾನ್ ಮೇಲೆ ಆರಂಭಿಸಿದ ಯುದ್ಧದಲ್ಲಿ ಈವರೆಗೆ ಇರಾನ್ ಕಡೆ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಮತ್ತು ಹಲವು ಹಿರಿಯ ಸಚಿವರು, ಸೇನಾಧಿಕಾರಿಗಳು ಹತರಾಗಿದ್ದಾರೆ. ನಾಗರಿಕರು, ಶಾಲಾ ಮಕ್ಕಳು, ಸೈನಿಕರು ಸೇರಿದಂತೆ ಈವರೆಗೆ ಒಟ್ಟು 1,340ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ.

ನಾಸಿಕ್: ಕಾರು ಬಾವಿಗುರುಳಿ 9 ಬಲಿ

ನಾಸಿಕ್: ಮಹಾರಾಷ್ಟ್ರ ರಾಜ್ಯದ ನಾಸಿಕ್ ಜಿಲ್ಲೆಯ ದಿನ್ಡೋರಿ ತಾಲೂಕಿನಲ್ಲಿ ಕಾರು ಬಾವಿಗೆ ಉರುಳಿದ್ದರಿಂದ ಪುಟ್ಟ ಮಕ್ಕಳು ಸೇರಿದಂತೆ ಒಂದೇ ಕುಟುಂಬದ 9 ಜೀವಗಳು ದುರ್ಮರಣಕ್ಕೀಡಾಗಿವೆ.

ನಾಸಿಕ್ ಜಿಲ್ಲೆಯ ದಿಂಡೋರಿ ತಾಲೂಕಿನ ಶಿವಾಜಿನಗರ ಪ್ರದೇಶದಲ್ಲಿ ಕೋಚಿಂಗ್ ಸೆಂಟರ್‌ನ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಕಾರ್ಯಕ್ರಮ ಶುಕ್ರವಾರ ರಾತ್ರಿ 10 ಗಂಟೆಗೆ ಮುಗಿದಿದ್ದು, ಬಳಿಕ ತಡರಾತ್ರಿ ಮನೆಗೆ ವಾಪಸಾಗುತ್ತಿದ್ದ ಇಂದೋರ್‌ನ ದರ್ಗೋಡೆ ಕುಟುಂಬದವರಿದ್ದ ಮಾರುತಿ ಎಕ್ಸ್‌ಎಲ್6 ಕಾರು ಚಾಲಕನ ನಿಯಂತ್ರಣ ತಪ್ಪಿ ತೆರೆದ ಬಾವಿಗೆ ಬಿದ್ದಿದೆ.

ಮೃತರನ್ನು ದಿಂಡೋರಿ ತಾಲೂಕಿನ ಇಂದೋರ್ ನಿವಾಸಿ ರೇಷ್ಮಾ ಸುನಿಲ್ ದರ್ಗುಡೆ (27), ಆಶಾ ಅನಿಲ್ ದರ್ಗುಡೆ (32), ಖುಷಿ ಅನಿಲ್ ದರ್ಗುಡೆ (14), ಶ್ರೇಯಸ್ ಅನಿಲ್ ದರ್ಗುಡೆ (11), ರಾಖಿ ಸುನಿಲ್ ದರ್ಗುಡೆ ಮತ್ತು ಶ್ರಾವಣಿ ಅನಿಲ್ ದರ್ಗುಡೆ (11), ಸಮೃದ್ಧಿ ರಾಜೇಂದ್ರ ದರ್ಗುಡೆ (7), ಮಾಧುರಿ ಅನಿಲ್ ದರ್ಗುಡೆ (13), ಸುನಿಲ್ ದತ್ತು ದರ್ಗುಡೆ (32) ಎಂದು ಗುರುತಿಸಲಾಗಿದೆ. ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ಪಡೆ(ಎನ್‌ಡಿಆರ್‌ಎಫ್) ತಂಡ ಸೇರಿದಂತೆ ಸ್ಥಳೀಯ ಅಗ್ನಿಶಾಮಕ ದಳ ಜಂಟಿಯಾಗಿ ರಕ್ಷಣಾ ಕಾರ್ಯಾಚರಣೆ ಶನಿವಾರ ಮುಂಜಾನೆವರೆಗೂ ಮುಂದುವರಿಯಿತು. ನೀರು ತುಂಬಿದ ದೊಡ್ಡ ತೆರೆದ ಬಾವಿಯಲ್ಲಿ ಪೂರ್ಣ ಮುಳುಗಿ ಹೋಗಿದ್ದ ಕಾರನ್ನು ಕ್ರೇನ್ ಸಹಾಯದಿಂದ ಹೊರತೆಗೆಯಲಾಗಿದೆ. ಚಾಲಕ ಸ್ಟೀರಿಂಗ್ ಮೇಲಿನ ನಿಯಂತ್ರಣ ಕಳೆದುಕೊಂಡಿದ್ದೇ ಅಪಘಾತಕ್ಕೆ ಕಾರಣವಿರಬಹುದು ಎಂದು ಶಂಕಿಸಲಾಗಿದೆ. ದಿನ್ಡೋರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಇರಾನ್ ಸಂಸತ್ ಸ್ಪೀಕರ್ ಸುಳಿವು

ಬಾಬ್ ಅಲ್ ಮಂದೇಬ್ ಬಂದ್

ಟೆಹರಾನ್: ಅಮೆರಿಕ-ಇಸ್ರೇಲ್ ವಿರುದ್ಧ ಫೆ.28ರಿಂದಲೂ ಹೋರಾಡುತ್ತಿರುವ ಇರಾನ್, ಹೊರ್ಮುಜ್ ಜಲಸಂಧಿಯನ್ನು ನಿರ್ಬಂಧಿಸುವ ಮೂಲಕ ಯೂರೋಪ್ ಹಾಗೂ ಪಶ್ಚಿಮ ಏಷ್ಯಾ ಭಾಗದಲ್ಲಿನ ದೇಶಗಳಿಗೆ ಇಂಧನ ಕೊರತೆಯಾಗುವಂತೆ ಮಾಡಿ ಭಾರಿ ಪೆಟ್ಟು ಕೊಟ್ಟಿದೆ. ಆ ಮೂಲಕ ಆ ದೇಶಗಳಿಂದ ಅಮೆರಿಕ-ಇಸ್ರೇಲ್ ಮೇಲೆ ಒತ್ತಡ ಬೀಳುವಂತೆ ಮಾಡಿದೆ. ವಿರೋಧಿಗಳ ಮೇಲಿನ ಒತ್ತಡ ಹೆಚ್ಚಿಸಲು ನೆರೆಯಲ್ಲಿನ ಮತ್ತೊಂದು ಜಲಸಂಧಿ 'ಬಾಬ್ ಅಲ್ ಮಂಡೇಬ್' ಅನ್ನು ಬಂದ್ ಮಾಡುವುದಕ್ಕೂ ಮುಂದಾಗಿದೆ. ವಿಶ್ವದ ಹಲವು ದೇಶಗಳ ಆರ್ಥಿಕತೆಗೆ, ಆಮದು-ರಫ್ತು ವಹಿವಾಟಿಗೆ ಪ್ರಮುಖ ಎನಿಸಿಕೊಂಡಿರುವ 'ಬಾಬ್ ಅಲ್ -ಮಂಡೇಬ್' ಜಲಸಂಧಿಯನ್ನು ಬಂದ್ ಮಾಡುವುದಾಗಿ ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಗಾಲಿಬಾಫ್ ಅವರು 'ಎಕ್ಸ್' ಖಾತೆಯಲ್ಲಿ ಹೇಳಿಕೊಂಡಿದ್ದಾರೆ. ಕೆಂಪು ಸಮುದ್ರವನ್ನು ಅಡೆನ್ ಕೊಲ್ಲಿಗೆ ಸಂಪರ್ಕಿಸುವ 'ಬಾಬ್ ಅಲ್-ಮಂಡೇಬ್' ಜಲಸಂಧಿ ಯೆಮೆನ್ ದೇಶದ ಜಲಮಾರ್ಗದ ಬದಿಯಲ್ಲಿದೆ. ಜಾಗತಿಕವಾಗಿ ಕಚ್ಚಾತೈಲ, ಎಲ್‌ಎನ್‌ಜಿ, ಗೋಧಿ, ಅಕ್ಕಿ ಮತ್ತು ರಸಗೊಬ್ಬರ ಸಾಗಣೆಯಲ್ಲಿ ಈ ಜಲಸಂಧಿಯ ಪಾಲು ದೊಡ್ಡದಿದೆ ಎಂಬುದು ಗಮನಾರ್ಹ.



ಬಾಬ್ ಎಲ್ ಮಂದೇಬ್ ಜಲಸಂಧಿ

ಸಮಾಚಾರ ಸಣ್ಣದಲ್ಲ

ಬಿಜೆಪಿ ಸ್ಥಾಪನಾ ದಿನಾಚರಣೆ ನಾಳೆ

ಬೆಂಗಳೂರು: ಬಿಜೆಪಿ ಸ್ಥಾಪನಾ ದಿನದ ಅಂಗವಾಗಿ ಏ.6ಕ್ಕೆ ಬೆ.6 ಗಂಟೆಗೆ ನಗರದ ಯಲಹಂಕ ಉಪನಗರದಲ್ಲಿರುವ ಭಾರತೀಯ ಜನತಾ ಪಾರ್ಟಿ ಕಚೇರಿಯಲ್ಲಿ ಬಿಜೆಪಿ ಸ್ಥಾಪನಾ ದಿನ ಆಯೋಜಿಸಲಾಗಿದೆ ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಈ ವೇಳೆ ಯಲಹಂಕ ನಗರ ಮಂಡಲದ ಎಲ್ಲಾ ಪದಾಧಿಕಾರಿಗಳು, ವಿವಿಧ ಮೋರ್ಚಾಗಳು, ಪ್ರಕೋಷ್ಠಗಳ ಸದಸ್ಯರು, ಮಹಾಶಕ್ತಿ ಕೇಂದ್ರ ಮತ್ತು ಶಕ್ತಿ ಕೇಂದ್ರಗಳ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಭಾಗವಹಿಸಲು ಮನವಿ ಮಾಡಲಾಗಿದೆ. ಇದೇ ಸಂದರ್ಭದಲ್ಲಿ ಬೂತ್ ಅಧ್ಯಕ್ಷರು, ಶಕ್ತಿ ಕೇಂದ್ರದ ಪ್ರಭಾರಿಗಳು ಹಾಗೂ ಸಹ ಪ್ರಭಾರಿಗಳು, ಮಂಡಲದ ಎಲ್ಲಾ ಪದಾಧಿಕಾರಿಗಳು ತಮ್ಮ ಮನೆಗಳ ಮೇಲೆ ಪಕ್ಷದ ಧ್ವಜ ಹಾರಿಸುವಂತೆ ಸೂಚಿಸಲಾಗಿದೆ. ಜತೆಗೆ ಧ್ವಜಾರೋಹಣದ ಸೆಲ್ಫಿಗಳನ್ನು ಸಾಮಾಜಿಕ ಜಾಲತಾಣಗಳಾದ ವಾಟ್ಸಾಪ್, ಫೇಸ್ಬುಕ್, ಟೆಲಿಗ್ರಾಮ್‌ಗಳಲ್ಲಿ ಹಂಚಿಕೊಳ್ಳುವಂತೆ ವಿನಂತಿಸಲಾಗಿದೆ. ಈ ವೇಳೆ ಯಲಹಂಕ ನಗರ ಮಂಡಲದ ಅಧ್ಯಕ್ಷ ಎಂ.ಮುನಿರಾಜು, ಪ್ರಧಾನ ಕಾರ್ಯದರ್ಶಿ ವಿ. ಪವನ್ ಕುಮಾರ್, ವಿ.ಎಂ. ಈಶ್ವರ್ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪತ್ರಕರ್ತ ಟಿ.ಕೆ. ತ್ಯಾಗರಾಜ್ ಪತ್ನಿ ಸರಸ್ವತಿ ನಿಧನ

ಬೆಂಗಳೂರು: ಲಂಕೇಶ್ ಪತ್ರಿಕೆಯಲ್ಲಿ ಕಾರ್ಯನಿರ್ವಹಿಸಿದ್ದ ಹಿರಿಯ ಪತ್ರಕರ್ತ ಟಿ.ಕೆ.ತ್ಯಾಗರಾಜ್ ಅವರ ಪತ್ನಿ ಸರಸ್ವತಿ ಅವರು ಅನಾರೋಗ್ಯದಿಂದ ವಿಧಿವಶರಾಗಿದ್ದಾರೆ.

ಸುಮಾರು ಒಂಬತ್ತು ವರ್ಷಗಳಿಂದ ಗಂಭೀರ ಅನಾರೋಗ್ಯದಿಂದ ಬಳಲುತ್ತಿದ್ದ ಸರಸ್ವತಿ ಅವರು ಎರಡು ದಿನಗಳ ಹಿಂದೆ ನಗರದ ಮಾರ್ಥಾಸ್ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಅವರು ಇಹಲೋಕ ತ್ಯಜಿಸಿದರು. ಬಳಿಕ ಅವರ ದೇಹವನ್ನು ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ದೇಹದಾನ ಮಾಡಲಾಗಿದೆ. ಸರಸ್ವತಿ ಅವರು ವೃತ್ತಿಯಲ್ಲಿ ವಕೀಲರಾಗಿದ್ದು, ಮಾನವೀಯತೆ ಮತ್ತು ನ್ಯಾಯ ಬದ್ಧತೆಯ ಮೂಲಕ ಗುರುತಿಸಿಕೊಂಡಿದ್ದರು. ಬಡವರ ಪರ ಸದಾ ನಿಂತು ಅನೇಕ ಕಠಿಣ ಪ್ರಕರಣಗಳಲ್ಲಿ ನ್ಯಾಯ ಒದಗಿಸಿದ್ದ ಅವರು, ಸಾಮಾಜಿಕ ಜವಾಬ್ದಾರಿಯುಳ್ಳ ವ್ಯಕ್ತಿತ್ವವಾಗಿ ಹೆಸರುವಾಸಿಯಾಗಿದ್ದರು. ಕೊನೆಯ ದಿನಗಳಲ್ಲಿ ಆರೋಗ್ಯ ಹದಗೆಟ್ಟ ಹಿನ್ನೆಲೆ ರಕ್ತದ ಪ್ಲೇಟ್ಲೆಟ್ಸ್ ಅವಶ್ಯಕತೆ ಉಂಟಾಗಿದ್ದು, ಚಿಕಿತ್ಸೆ ನಡೆಯುತ್ತಿದ್ದಂತೆಯೇ ಅವರು ನಿಧನರಾದರು ಎಂಬುದು ಕುಟುಂಬ ಮೂಲಗ ಳಿಂದ ತಿಳಿದುಬಂದಿದೆ. ಸರಸ್ವತಿ ಅವರ ನಿಧನದಿಂದ ಕುಟುಂಬಕ್ಕೆ ಹಾಗೂ ಸ್ನೇಹಿತರ ವಲಯಕ್ಕೆ ಅಪಾರ ನಷ್ಟ ಉಂಟಾಗಿದೆ.

ಏ.8ಕ್ಕೆ ವಿಶ್ವಜಲ ದಿನ

ಬೆಂಗಳೂರು: ಬೆಂಗಳೂರು ಜಲಮಂಡಳಿ ಹಾಗೂ ಬೆಂಗಳೂರು ಜಲಮಂಡಳಿ ಅಭಿಯಂತರರ ಸಂಘದ ವತಿಯಿಂದ ಏ.8ರ ಬೆಳಗ್ಗೆ ಡಾ. ಬಿ.ಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕಾನಮಿಕ್ಸ್ ಯುನಿವರ್ಸಿಟಿ, ಜ್ಞಾನ ಭಾರತಿ ಕ್ಯಾಂಪಸ್‌ನಲ್ಲಿ ವಿಶ್ವ ಜಲದಿನ 2026ನ್ನು ಆಯೋಜಿಸಲಾಗಿದೆ. ಈ ವರ್ಷದ ಕಾರ್ಯಕ್ರಮ ನೀರು ಮತ್ತು ಲಿಂಗತ್ವ ಎಂಬ ವಿಶೇಷ ವಿಷಯದಲ್ಲಿ ನಡೆಯಲಿದ್ದು, ಎಲ್ಲಿ ನೀರು ಹರಿಯುತ್ತದೋ, ಅಲ್ಲಿ ಸಮಾನತೆ ಬೆಳೆಯುತ್ತದೆ ಎಂಬ ಘೋಷವಾಕ್ಯವನ್ನು ಹೊಂದಿದೆ. ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ವಿ. ರಾಮ್ ಪ್ರಸಾತ್ ಮನೋಹರ್ ಕಾರ್ಯಕ್ರಮವನ್ನು ಉದ್ಘಾಟನೆ, ಅಧ್ಯಕ್ಷತೆ ವಹಿಸಲಿದ್ದು, ಮ್ಯಾಪಿಂಗ್ ಮಲ್ನಾಡ್ ಸಂಸ್ಥೆಯ ಸಂಸ್ಥಾಪಕಿ ನಿರ್ಮಲಾ ಗೌಡ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ. ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿವಿ ರಿಜಿಸ್ಟ್ರಾರ್ ಮಮತಾದೇವಿ.ಜಿ.ಎಸ್., ಕೇಂದ್ರ ಅಂತರ್ಜಲ ಮಂಡಳಿಯ ವಿಜ್ಞಾನಿ ವೀಣಾ. ಆರ್. ಅಚ್ಯುತ ಹಾಗೂ ವಿಂಜನಹಳ್ಳಿ ಆರೋಹಣ ಗ್ರಾಮೀಣ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಆಶಾ ಎಸ್. ತಾಂತ್ರಿಕ ಸಂವಹನದ ಬಗ್ಗೆ ಮಾಹಿತಿ ನೀಡಲಿದ್ದಾರೆ.

ವಿದ್ಯಾರ್ಥಿಗಳಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಸಲಹೆ | 6 ಮಂದಿಗೆ ಗೌರವ ಡಾಕ್ಟರೇಟ್, 73 ಜನರಿಗೆ ಪ್ರಥಮ ರ್‍ಯಾಂಕ್, 23 ಮಂದಿಗೆ ಪಿಎಚ್‌ಡಿ ಪದವಿ

ವಿದ್ಯಾರ್ಥಿಗಳು ಸಮಾಜ ಸೇವೆಯತ್ತ ಮುಖ ಮಾಡಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿದ್ಯಾರ್ಥಿಗಳು ತಮ್ಮ ಜೀವನವನ್ನು ಕೇವಲ ವೈಯಕ್ತಿಕ ಸಾಧನೆಗಳಿಗೆ ಮಾತ್ರ ಸೀಮಿತಗೊಳಿಸದೆ, ಸಮಾಜ ಸೇವೆಯತ್ತಲೂ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ತಿಳಿಸಿದರು.

ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ 5ನೇ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದಕ ವಿತರಿಸಿ ಮಾತನಾಡಿದ ಅವರು, ಇಂದಿನ ಯುಗವು ತ್ವರಿತ ಬದಲಾವಣೆ, ತಂತ್ರಜ್ಞಾನ ಮತ್ತು ಜಾಗತಿಕ ಸ್ಪರ್ಧೆಯ ಯುಗವಾಗಿದ್ದು, ವಿದ್ಯಾರ್ಥಿಗಳು ನಿರಂತರ ಕಲಿಕೆಯನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯ. ಕಲಿಕೆ ಎಂದರೆ ಕೇವಲ ಪದವಿ ಪಡೆಯುವುದಲ್ಲ, ಅದು ಜ್ಞಾನ ಮತ್ತು ಕೌಶಲ್ಯಗಳನ್ನು ನಿರಂತರವಾಗಿ ನವೀಕರಿಸುವ ಪ್ರಕ್ರಿಯೆ. ಇಂದಿನ ಕಾಲದಲ್ಲಿ ಕೃತಕ ಬುದ್ಧಿಮತ್ತೆ, ಡೇಟಾ ಸೈನ್ಸ್, ಜೈವಿಕ ತಂತ್ರಜ್ಞಾನ, ಹಸಿರು ಶಕ್ತಿ ಮತ್ತು ಸೈಬರ್ ಭದ್ರತೆ ಮುಂತಾದ ಕ್ಷೇತ್ರಗಳಲ್ಲಿ ಹೊಸ ಅವಕಾಶಗಳು ತೆರೆದುಕೊಳ್ಳುತ್ತಿವೆ. ಇವುಗಳನ್ನು ಸದ್ಬಳಕೆ ಮಾಡಿಕೊಂಡು ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ನಿರ್ಮಿಸಿಕೊಳ್ಳಬೇಕು ಎಂದರು.

ಬೆಂಗಳೂರು ನಗರವನ್ನು ದೇಶದ ತಂತ್ರಜ್ಞಾನ ರಾಜಧಾನಿ ಎಂದು ಗುರುತಿಸಿಲಾಗಿದೆ. ನಗರವು ಮಾಹಿತಿ ತಂತ್ರಜ್ಞಾನ ಮಾತ್ರವಲ್ಲದೆ ಸಂಶೋಧನೆ, ಉದ್ಯಮಶೀಲತೆ ಮತ್ತು ನವೀನ ಚಿಂತನೆಗೆ ಪ್ರಮುಖ ಕೇಂದ್ರವಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ನಗರದ ಈ ವೈಶಿಷ್ಟ್ಯತೆಯನ್ನು ಮತ್ತಷ್ಟು ಬಲಪಡಿಸುವಲ್ಲಿ ಪ್ರಮುಖ ಪಾತ್ರವಹಿಸಬೇಕು. ಭಾರತವು 2047ರೊಳಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ಗುರಿಯತ್ತ ಸಾಗುತ್ತಿದೆ. ಈ ಗುರಿ ಸಾಧನೆಯಲ್ಲಿ ಯುವಕರ ಪಾತ್ರ ನಿರ್ಣಾಯಕ. ಜ್ಞಾನ, ಕೌಶಲ್ಯ ಮತ್ತು ಮೌಲ್ಯಗಳಿಂದ ಸಜ್ಜುಗೊಂಡ ಯುವಶಕ್ತಿ ದೇಶದ ಶಕ್ತಿಯಾಗಿದೆ ಎಂದರು.

ಹವಾಮಾನ ಬದಲಾವಣೆ, ಸಾಮಾಜಿಕ ಅಸಮಾನತೆ ಮತ್ತು ಆರ್ಥಿಕ ಸವಾಲುಗಳನ್ನು ಎದುರಿಸುವ ಇಂದಿನ ಜಗತ್ತಿನಲ್ಲಿ ವಿದ್ಯಾರ್ಥಿಗಳು ಜವಾಬ್ದಾರಿಯುತ ನಾಗರಿಕರಾಗಬೇಕು. ಪರಿಸರ ಸಂರಕ್ಷಣೆ, ದುರ್ಬಲ ವರ್ಗಗಳ ಬಗ್ಗೆ ಸಂವೇದನಾಶೀಲತೆ ಮತ್ತು ಸಮಗ್ರ ಅಭಿವೃದ್ಧಿಗೆ ಕೊಡುಗೆ ನೀಡುವುದು ನಿಮ್ಮ ಕರ್ತವ್ಯವಾಗಿದೆ ಎಂದರು.

ಈ ವೇಳೆ ಡಿಆರ್‌ಡಿಒದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಸಿಸ್ಟಮ್‌ನ ಮಹಾನಿರ್ದೇಶಕ ಡಾ.ಬಿ. ಕುಮಾರ್ ದಾಸ್ ಮಾತನಾಡಿ, ಡಾ. ಮನಮೋಹನ್ ಸಿಂಗ್ ಅವರ ಹೆಸರಿನಲ್ಲಿ ಸಾಗುತ್ತಿರುವ ಈ ವಿಶ್ವವಿದ್ಯಾಲಯವು ದೇಶಭಕ್ತಿ, ಬದ್ಧತೆ ಮತ್ತು ಶಕ್ತಿಯ ಪ್ರತೀಕವಾಗಿದೆ. ವಿದ್ಯಾರ್ಥಿಗಳು ಜ್ಞಾನ ಮತ್ತು ಮೌಲ್ಯಗಳ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಕೈಜೋಡಿಸಬೇಕು. ವಿದ್ಯಾರ್ಥಿಗಳು ಜೀವನದ ಹೊಸ ಅಧ್ಯಾಯಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ, ಬುದ್ಧಿವಂತಿಕೆ ಮತ್ತು ಚಾಣಾಕ್ಷತೆ ನಡುವಿನ ವ್ಯತ್ಯಾಸವನ್ನು ಅರಿತು, ತಮ್ಮ ಆಸಕ್ತಿಯನ್ನು ದೇಶ ಸೇವೆಗೆ ಮಾರ್ಗದರ್ಶನ ಮಾಡಬೇಕೆಂದು ಎಂದರು.

ಯಶಸ್ಸು ಎಂದರೆ ಎಲ್ಲವನ್ನೂ ಸಾಧಿಸುವುದಲ್ಲ, ದೇಶದ ಅಭಿವೃದ್ಧಿಗೆ ಕೊಡುಗೆ ನೀಡುವುದೇ ನಿಜವಾದ ಸಾಧನೆ. ತಂದೆ-ತಾಯಿ ಹಾಗೂ ಶಿಕ್ಷಕರ ತ್ಯಾಗವನ್ನು ಪ್ರತಿದಿನ ವಿದ್ಯಾರ್ಥಿಗಳು ಸ್ಮರಿಸಬೇಕು. ಅರ್ಜುನನಂತೆ ಗುರಿಯತ್ತ ಏಕಾಗ್ರತೆಯಿಂದ ಪ್ರಯತ್ನಿಸಿದರೆ ಯಶಸ್ಸು ಖಚಿತವಾಗುವುದು. ತಂತ್ರಜ್ಞಾನ ಹಾಗೂ ಸಂಸ್ಕೃತಿಯ ಸಮತೋಲನವನ್ನು ಕಾಪಾಡಿಕೊಂಡು, ಪರಿಸರ ಸಂರಕ್ಷಣೆ ಸೇರಿದಂತೆ ವಿವಿಧ ಸವಾಲುಗಳನ್ನು ಎದುರಿಸಲು ಯುವಕರು ಸಿದ್ಧರಾಗಬೇಕು ಎಂದರು.

ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿವಿ 5ನೇ ವಾರ್ಷಿಕ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು 6 ಜನರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು. ಈ ವೇಳೆ ಡಾ ಮನಮೋಹನ ಸಿಂಗ್ ಬೆಂ.ನ.ವಿವಿ ಕುಲಪತಿ ಪ್ರೊ.ರಮೇಶ್ ಬಿ., ಡಿಆರ್‌ಡಿಒದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಸಿಸ್ಟಮ್‌ನ ಮಹಾನಿರ್ದೇಶಕ ಡಾ.ಬಿ. ಕುಮಾರ್ ದಾಸ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಶಿಕ್ಷಣದ ಉದ್ದೇಶ ಕೇವಲ ಜ್ಞಾನವಲ್ಲ, ಚಾರಿತ್ರ್ಯ ನಿರ್ಮಾಣವೂ ಆಗಿದೆ. ನೈತಿಕತೆ, ಕರುಣೆ ಮತ್ತು ಮಾನವೀಯ ಮೌಲ್ಯಗಳಿಲ್ಲದ ಶಿಕ್ಷಣ ಅಪೂರ್ಣ. ಶೈಕ್ಷಣಿಕ ಶ್ರೇಷ್ಠತೆ ಮತ್ತು ಸಂಶೋಧನೆಯಲ್ಲಿ ವಿಶ್ವವಿದ್ಯಾಲಯ ಮುಂದಿನ ದಿನಗಳಲ್ಲಿ ಇನ್ನಷ್ಟು ಎತ್ತರ ತಲುಪಲಿ.
– **ಥಾವರ್‌ಚಂದ್ ಗೆಹ್ಲೋಟ್**, ರಾಜ್ಯಪಾಲ

ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿ.ವಿ ಯಿಂದ ಡಿ.ಲೀಟ್ ಪದವಿ ನೀಡಿರುವುದು ನನಗೆ ತುಂಬಾ ಖುಷಿ ತಂದಿದೆ. ಕಳೆದ ಎರಡು ದಶಕಗಳಿಂದ ಮಾಡಿದ ಪರಿಶ್ರಮವನ್ನು ಗುರುತಿಸಿ ಈ ಪದವಿಯನ್ನು ನೀಡಿರುವುದು ನನಗೆ ದೊಡ್ಡ ಗೌರವ.
– **ಅರ್ಜುನ್ ಜನ್ಯ** , ಸಂಗೀತ ನಿರ್ದೇಶಕ

ನಾಲ್ಕು ಚಿನ್ನದ ಪದಕಗಳು ದೊರೆತಿರುವುದು ಸಂತಸ ತಂದಿದೆ. ಪೋಷಕರು ಹಾಗೂ ಶಿಕ್ಷರ ಮಾರ್ಗದರ್ಶನ ಮತ್ತು ಬೆಂಬಲದಿಂದ ಈ ಸಾಧನೆ ಸಾಧ್ಯವಾಯಿತು. ಬೆಂಗಳೂರು ನಗರ ವಿವಿ ರಸಾಯನಶಾಸ್ತ್ರ ವಿಭಾಗವು ಅಧ್ಯಯನಕ್ಕೆ ಸೂಕ್ತವಾದ ಪರಿಸರವ್ಯವಸ್ಥೆ, ಶಿಕ್ಷಕರನ್ನು ಕಲ್ಪಿಸಿದೆ. ರಾತ್ರಿ ಇಡೀ ಅಧ್ಯಯನದ ಬದಲು ಅಂದಿನ ಅಧ್ಯಯನ ಅಂದೇ ಮುಗಿಸಿದ್ದರಿಂದ ಪದಕದ ಸಾಧನೆ ಸಾಧ್ಯವಾಯಿತು. ಪ್ರಸ್ತುತ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದು ಪಿ.ಎಚ್.ಡಿ ಮಾಡುವ ಗುರಿ ಇದೆ.
–**ಸ್ನೇಹಾ ಟಿ. ಪದಕ ವಿಜೇತೆ**

ಅವಕಾಶಗಳಿಗಾಗಿ ಕಾಯದೆ ಸ್ವಯಂ ಪರಿಶ್ರಮದ ಮೂಲಕ ಭವಿಷ್ಯವನ್ನು ರೂಪಿಸಿಕೊಳ್ಳಲು ಮುಂದಾಗಬೇಕು. ವಿದ್ಯಾರ್ಥಿಗಳ ಸಾಧನೆ ಶ್ಲಾಘನೀಯ. ವಿದ್ಯಾರ್ಥಿಗಳು ಅವಕಾಶಗಳನ್ನು ಸೃಷ್ಟಿಸಿಕೊಂಡು ಸಮಾಜ ಸೇವೆಯ ದಿಕ್ಕಿನಲ್ಲಿ ಮುಂದುವರಿಯಿರಿ.
–**ಪ್ರೊ.ರಮೇಶ್ ಬಿ. ಕುಲಪತಿ,** ಡಾ ಮನಮೋಹನ ಸಿಂಗ್ ಬೆಂ.ನ.ವಿವಿ

ಆರು ಜನರಿಗೆ ಗೌರವ ಡಾಕ್ಟರೇಟ್

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ವತಿಯಿಂದ ನಡೆದ 5ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ 6 ಜನರಿಗೆ ರಾಜ್ಯಪಾಲರು ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಿದರು. ಅರ್ಜುನ್ ಜನ್ಯ, ಬಿ.ಕೆ. ವೆಂಕಟೇಶ್ ಪ್ರಸಾದ್, ಟಿ.ಕೆ. ನಾರಾಯಣಪ್ಪ ಸೇರಿದಂತೆ ಇತರ ಮೂರು ಜನರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು ಜತೆಗೆ ವಿವಿಧ ವಿಷಯಗಳಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದ ಒಟ್ಟು 73 ವಿದ್ಯಾರ್ಥಿಗಳಿಗೆ ಬಂಗಾರದ ಪದಕ ಮತ್ತು ನಗದು ಬಹುಮಾನ, ಅಲ್ಲದೆ 23 ವಿದ್ಯಾರ್ಥಿಗಳಿಗೆ ಪಿಎಚ್ ಡಿ ಪದವಿ ಪ್ರದಾನ ಮಾಡಲಾಯಿತು.

ಸ್ಕಾಲರ್‌ಶಿಪ್‌ಗಳ ಬೆಂಬಲದಿಂದ ಕನಸುಗಳತ್ತ ಹೆಜ್ಜೆ

ಘಟಿಕೋತ್ಸವ ಸಮಾರಂಭದಲ್ಲಿ 3 ಚಿನ್ನದ ಪದಕಗಳೊಂದಿಗೆ ದ್ವಿತೀಯ ರ್‍ಯಾಂಕ್ ಪಡೆದ ದಿವ್ಯಶ್ರೀ ಎಸ್ ಎಂಬ ವಿದ್ಯಾರ್ಥಿನಿ, ಚಿಕ್ಕ ವಯಸ್ಸಿನಲ್ಲೇ ತಂದೆ-ತಾಯಿಯನ್ನು ಕಳೆದುಕೊಂಡಿದ್ದರೂ ಸಂಕಷ್ಟಗಳ ನಡುವೆಯೂ ತನ್ನ ವಿದ್ಯಾಭ್ಯಾಸವನ್ನು ನಿಲ್ಲಿಸದೆ ಮುಂದುವರಿಸಿಕೊಂಡು ಬಂದಿರುವುದು ವಿಶೇಷವಾಗಿದೆ. ವಿದ್ಯಾರ್ಥಿನಿ ಕೇವಲ ವಿದ್ಯಾರ್ಥಿವೇತನಗಳ ನೆರವಿನಿಂದಲೇ ತನ್ನ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ, ಘಟಿಕೋತ್ಸವದಲ್ಲಿ ಚಿನ್ನದ ಪದಕಗಳನ್ನು ಗಳಿಸಿರುವುದು ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆ. ಸಂಕಷ್ಟಗಳು ಎಷ್ಟೇ ಬಂದರೂ ಶಿಕ್ಷಣದ ಮೂಲಕ ಜೀವನವನ್ನು ರೂಪಿಸಿಕೊಳ್ಳಬಹುದು ಎಂಬುದಕ್ಕೆ ಈ ವಿದ್ಯಾರ್ಥಿನಿಯ ಹೋರಾಟ ಸ್ಫೂರ್ತಿದಾಯಕ ಉದಾಹರಣೆಯಾಗಿದೆ.

ಲೇಖನಾ ಹೆಗ್ಡೆ ಮಿಸ್ ಯೂನಿವರ್ಸ್ ಕರ್ನಾಟಕ

ಬೆಂಗಳೂರು: ನಗರದ ಅರಮನೆ ಮೈದಾನದಲ್ಲಿ ನಡೆದ ಮಿಸ್ ಯೂನಿವರ್ಸ್ ಕರ್ನಾಟಕ 2026 ಬ್ಯೂಟಿ ಪೇಜಂಟ್ ಫಿನಾಲೆಯಲ್ಲಿ ಲೇಖನಾ ಹೆಗ್ಡೆ ಅವರು ಕಿರೀಟವನ್ನು ಮುಡಿಗೇರಿಸಿಕೊಂಡು ವಿಜೇತರಾದರು. ಈ ಸ್ಪರ್ಧೆಯಲ್ಲಿ ಸ್ಫೂರ್ತಿ ಶೆಟ್ಟಿ ಮೊದಲ ರನ್ನರ್ ಅಪ್ ಸ್ಥಾನ ಪಡೆದರೆ, ಜಾಗೃತಿ ಚೋಪ್ರಾ ಎರಡನೇ ರನ್ನರ್‌ಅಪ್ ಸ್ಥಾನವನ್ನು ಗಳಿಸಿದರು. ಕಳೆದ ವರ್ಷದ ವಿಜೇತೆ ವಂಶಿ ಉದಯ್ ಅವರು ಲೇಖನಾ ಹೆಗ್ಡೆಗೆ ಕಿರೀಟ ಮುಡಿಗೇರಿಸಿ ಸಂಭ್ರಮಿಸಿದರು.

ಕಾರ್ಯಕ್ರಮದಲ್ಲಿ ಟ್ರೆಡಿಷನಲ್ ರೌಂಡ್ ಹಾಗೂ ರೆಸಾರ್ಟ್ ವೇರ್ ರೌಂಡ್‌ಗಳು ವಿಶೇಷ ಆಕರ್ಷಣೆಯಾಗಿದ್ದು, ಸ್ಪರ್ಧಾಳುಗಳ ವಿಭಿನ್ನ ಶೈಲಿ ಹಾಗೂ ಸಂಸ್ಕೃತಿ ಮೆರಗು ನೋಡುಗರ ಮನ ಸೆಳೆಯುವಂತಿತ್ತು. ಒಟ್ಟು 38 ಸ್ಪರ್ಧಾಳುಗಳು ಭಾಗವಹಿಸಿದ್ದ ಈ ಬ್ಯೂಟಿ ಪೇಜಂಟ್‌ನಲ್ಲಿ ಪ್ರತಿಯೊಬ್ಬರೂ ತಮ್ಮದೇ ಆದ ಶೈಲಿಯಲ್ಲಿ ಮಿಂಚಿದರು. ಇದೇ ಸಂದರ್ಭದಲ್ಲಿ ಮಿಸ್ ಟೀನ್ ವಿಭಾಗದಲ್ಲೂ ಸ್ಪರ್ಧೆ ನಡೆಯಿತು. ಸಮೀಕ್ಷಾ ಮಿಸ್ ಟೀನ್ ಕಿರೀಟ ಮುಡಿಗೇರಿಸಿಕೊಂಡರೆ, ವರ್ಷಾ ಮತ್ತು ಆಯುಷ್ಮಾ ಶಾಂಭವಿ ಕ್ರಮವಾಗಿ ಮೊದಲ ಹಾಗೂ ಎರಡನೇ ಸ್ಥಾನ ಗಳಿಸಿದರು ಜತೆಗೆ ವಿವಾಹಿತ ಮಹಿಳೆಯರಿಗಾಗಿ ನಡೆದ ಮಿಸೆಸ್ ಇಂಡಿಯಾ ವಿಭಾಗದಲ್ಲಿಯೂ ವಿಜೇತರನ್ನು ಘೋಷಿಸಿ ಕಿರೀಟಗಳನ್ನು ಪ್ರದಾನ ಮಾಡಲಾಯಿತು. ಈ ಮೂಲಕ ಎಲ್ಲಾ ವಯೋಮಾನದ ಮಹಿಳೆಯರಿಗೂ ತಮ್ಮ ಪ್ರತಿಭೆ ಪ್ರದರ್ಶಿಸಲು ವೇದಿಕೆ ಒದಗಿಸಲಾಯಿತು.

ವಿಶ್ವವಾಣಿ ಟಿವಿ ಸ್ಪೆಷಲ್ ಡಿಜಿಟಲ್ ಪಾರ್ಟ್ನರ್

ಸತತವಾಗಿ ಎರಡನೇ ಬಾರಿ ವಿಶ್ವವಾಣಿ ಟಿವಿ ಸ್ಪೆಷಲ್ ಯುಟ್ಯೂಬ್ ಚಾನೆಲ್ ಮಿಸ್ ಯೂನಿವರ್ಸ್ ಕರ್ನಾಟಕ ಬ್ಯೂಟಿ ಪೇಜೆಂಟ್‌ಗೆ ಡಿಜಿಟಲ್ ಪಾರ್ಟ್‌ನರ್ ಆಗಿ ಕೈ ಜೋಡಿಸಿತ್ತು. ಫ್ಯಾಷನ್ ಕ್ಷೇತ್ರದ ಪ್ರಮುಖರಾದ ನಿಕಿಲ್ ಆನಂದ್, ಅಮ್ಜದ್ ಖಾನ್, ಮಹಮ್ಮದ್ ಸೈಜಲ್ ಹಾಗೂ ಮಣಿಕಾ ವಿಶ್ವಕರ್ಮ ಜ್ಯೂರಿ ಪ್ಯಾನೆಲ್‌ನಲ್ಲಿ ಭಾಗವಹಿಸಿ ಸ್ಪರ್ಧಾಳುಗಳನ್ನು ಮೌಲ್ಯಮಾಪನ ಮಾಡಿ ಅಂತಿಮ ತೀರ್ಮಾಣ ಕೈಗೊಂಡರು. ಕಾರ್ಯಕ್ರಮದಲ್ಲಿ ಶೋ ಡೈರೆಕ್ಟರ್ ಶ್ರೀಕಾಂತ್ ಶೆಟ್ಟರ್, ಮಿಸ್ ಯೂನಿವರ್ಸ್ ಕರ್ನಾಟಕ ರಿಜಿನಲ್ ಡೈರೆಕ್ಟರ್ ನಂದಿನಿ ನಾಗರಾಜ್ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ಹಸಿರು ತಂತ್ರಜ್ಞಾನ ಬಳಕೆ ಅನಿವಾರ್ಯ: ಶುಭಾ ರಾವ್

ಬೆಂಗಳೂರು: ಆಧುನಿಕ ತಂತ್ರಜ್ಞಾನಗಳಾದ ಕೃತಕ ಬುದ್ಧಿಮತ್ತೆ, ಬಿಲ್ಡಿಂಗ್ ಇನ್ಫರ್ಮೇಶನ್ ಮಾಡೆಲಿಂಗ್ ಹಾಗೂ ಇಂಟರ್‌ನೆಟ್ ಆಫ್ ಥಿಂಗ್ಸ್‌ಗಳು ಇಂಜಿನಿಯರಿಂಗ್ ಕ್ಷೇತ್ರವನ್ನು ಸಂಪೂರ್ಣವಾಗಿ ಪರಿವರ್ತಿಸುತ್ತಿವೆ ಎಂದು ಬ್ಲೂಮ್ ಕಂಪನಿಯ ಹಿರಿಯ ಸ್ಟ್ರಕ್ಚರಲ್ ಎಂಜಿನಿಯರ್ ಶುಭಾ ರಾವ್ ತಿಳಿಸಿದರು.

ನಗರದ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಸಚೇತನ-2026 ತಾಂತ್ರಿಕ ಉತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ಎಂಜಿನಿಯರಿಂಗ್ ಕ್ಷೇತ್ರವು ಪರಂಪರ ವಿಧಾನಗಳಿಂದ ಡೇಟಾ ಆಧಾರಿತ ವ್ಯವಸ್ಥೆಗಳತ್ತ ಸಾಗುತ್ತಿದೆ. 3ಡಿ ಮಾದರಿಗಳು, ಸ್ವಯಂಚಾಲಿತ ತಂತ್ರಜ್ಞಾನ ಮತ್ತು ಡಿಜಿಟಲ್ ವಿಶ್ಲೇಷಣೆಗಳ ಮೂಲಕ ಕಟ್ಟಡ ನಿರ್ಮಾಣ ಪ್ರಕ್ರಿಯೆ ವೇಗವಾಗಿ ಹಾಗೂ ಪರಿಣಾಮಕಾರಿಯಾಗಿ ನಡೆಯುತ್ತಿದೆ. ಪರಿಸರ ಸ್ನೇಹಿ ತಂತ್ರಜ್ಞಾನಗಳ ಬಳಕೆ ಅತ್ಯಗತ್ಯವಾಗಿದ್ದು, ನಿರ್ಮಾಣ ಕ್ಷೇತ್ರವು ಜಾಗತಿಕ ಕಾರ್ಬನ್ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿರು ವುದರಿಂದ ಹಸಿರು ತಂತ್ರಜ್ಞಾನ ಗಳನ್ನು ಅಳವಡಿಸಿಕೊಳ್ಳಬೇಕು. ಇದರಿಂದ ವೆಚ್ಚ ಕಡಿಮೆಯಾಗುವುದರ ಜತೆಗೆ ಪರಿಸರ ಸಂರಕ್ಷಣೆ ಗೂ ಸಹಾಯವಾಗುತ್ತದೆ ಎಂದರು. ಈ ವೇಳೆ ಎಲ್‌ಆ್ಯಂಡ್‌ಟಿಯ ಎಡ್ಯೂಟೆಕ್ ಡಾ.ಎಸ್.ಲೋಕೇಶ್ ಮಾತನಾಡಿ, ಎಂಜಿನಿ ಯರಿಂಗ್ ವಿದ್ಯಾರ್ಥಿಗಳು ತಾಂತ್ರಿಕ ಜ್ಞಾನ ಜತೆಗೆ ಸೃಜನಾತ್ಮಕ ಚಿಂತನೆ ಮತ್ತು ಬುದ್ಧಿವಂತಿಕೆಯನ್ನು ಬೆಳೆಸಿಕೊಳ್ಳಬೇಕು ಎಂದರು. ಈ ವೇಳೆ ಸಂಸ್ಥೆ ಪ್ರಾಂಶುಪಾಲ ಡಾ.ಎಚ್.ಎಲ್. ನಾಗರಾಜ್, ಶೈಕ್ಷಣಿಕ ವಿಭಾಗದ ನಿರ್ದೇಶಕ ಡಾ. ಜೆ. ಸುಧೀರ್ ರೆಡ್ಡಿ, ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಎಂ. ಮಂಜುನಾಥ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಬ್ಲೂಮ್ ಕಂಪನಿಯ ಹಿರಿಯ ಸ್ಟ್ರಕ್ಚರಲ್ ಇಂಜಿನಿಯರ್ ಶುಭಾ ರಾವ್ ಮಾತನಾಡಿದರು. ಈ ವೇಳೆ ಎಲ್ ಆ್ಯಂಡ್ ಟಿ ಯ ಎಡ್ಯೂಟೆಕ್ ಡಾ. ಎಸ್. ಲೋಕೇಶ್, ಸಂಸ್ಥೆಯ ಪ್ರಾಂಶುಪಾಲ ಡಾ. ಎಚ್.ಎಲ್. ನಾಗರಾಜ್, ಶೈಕ್ಷಣಿಕ ವಿಭಾಗದ ನಿರ್ದೇಶಕ ಡಾ. ಜೆ. ಸುಧೀರ್ ರೆಡ್ಡಿ, ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಎಂ. ಮಂಜುನಾಥ್ ಇದ್ದರು.

ಜನಗಣತಿಗೆ ಗೈರಾದರೆ ಕಠಿಣ ಕ್ರಮ

ಬೆಂಗಳೂರು: ಜಿಬಿಎ ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜನಗಣತಿ-2027 ಮನೆಪಟ್ಟಿ ಮತ್ತು ವಸತಿ ಗಣತಿ ಕಾರ್ಯವು ಏ.16ರಿಂದ ಮೇ 15 ರವರೆಗೆ ನಡೆಯಲಿದ್ದು, ಈ ಜನಗಣತಿ ಕಾರ್ಯಕ್ಕೆ ಗೈರಾದಲ್ಲಿ ಕಠಿಣ ಕ್ರಮಕೈಗೊಳ್ಳಲಾಗುವುದು ಎಂದು ಆಯುಕ್ತ ಕೆ.ಎನ್ ರಮೇಶ್ ಹೇಳಿದರು.

ಈ ಸಮೀಕ್ಷಾ ಕಾರ್ಯಕ್ಕೆ 4678 ಗಣತಿದಾರರು, 798 ಮೇಲ್ವಿಚಾರಕರನ್ನು ನೇಮಕ ಮಾಡಲಾಗಿರುತ್ತದೆ. ಜನಗಣತಿ ಸಿಬ್ಬಂದಿಗೆ ಏ6ರಿಂದ ಏ.8ರವರೆಗೆ ಒಟ್ಟು 16 ತರಬೇತಿ ಕೇಂದ್ರಗಳಲ್ಲಿ ತರಬೇತಿ ನೀಡಲಾಗುತ್ತಿದ್ದು, ಈಗಾಗಲೇ ನೀಡಿರುವ ಆದೇಶದಲ್ಲಿ ತರಬೇತಿ ಸ್ಥಳ ಹಾಗೂ ದಿನಾಂಕಗಳನ್ನು ನಿಗದಿಪಡಿಸಲಾಗಿರುತ್ತದೆ. ತರಬೇತಿ ಕಾರ್ಯಕ್ಕೆ ಜನಗಣತಿ ಸಿಬ್ಬಂದಿ ಕಡ್ಡಾಯವಾಗಿ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ, ಅಂತಹ ಸಿಬ್ಬಂದಿ ವಿರುದ್ಧ ಕ್ರಮ ಜರುಗಿಸಲಾಗುವುದು.

ಎಚ್ಚರಿಕೆ ಏನು?

- **ಜನಗಣತಿ ಕಾಯಿದೆ , 1948 ರ ಸೆಕ್ಷನ್ 11 ಪ್ರಕಾರ ತಮ್ಮ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು.**
- **ನೀಡಲಾದ ಆದೇಶಗಳನ್ನು ಪಾಲಿಸದಿದ್ದಕ್ಕಾಗಿ, ಬಿಎನ್ಎಸ್223ರಲ್ಲಿ ಎಫ್‌ಐಆರ್**
- **ಸಂಪೂರ್ಣ ದುರ್ನಡತೆ ಮತ್ತು ಅವಿಧೇಯತೆಗಾಗಿ ಅಮಾನತ್ತು ಮತ್ತು ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗುವುದು.**
- **ಅನಧಿಕೃತ ಗೈರುಹಾಜರಿಯನ್ನು ಕೆಲಸ ಮಾಡದ ದಿನ ಎಂದು ಪರಿಗಣಿಸಲಾಗುವುದು.**

ಜಿಟಿಟಿಸಿ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ

ಬೆಂಗಳೂರು: ಆಸ್ಟ್ರೇಲಿಯಾದ ಪ್ರತಿಷ್ಠಿತ ಕಂಪನಿ ಪ್ರಾಕ್‌ಗೆ ನಮ್ಮ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಉದ್ಯೋಗಿಗಳಾಗಿ ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿ. ಬರುವ ದಿನಗಳಲ್ಲಿ ಹಲವು ದೇಶಗಳ ಅತ್ಯುತ್ತಮ ಕಂಪನಿಗಳಲ್ಲಿ ಜಿಟಿಟಿಸಿ ವಿದ್ಯಾರ್ಥಿಗಳು ಉದ್ಯೋಗ ಮಾಡುವ ನಿಟ್ಟಿನಲ್ಲಿ ನಾವು ಕಾರ್ಯಪ್ರವೃತ್ತರಾಗಿದ್ದೇವೆ ಎಂದು ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ಜಿಟಿಟಿಸಿಯ ವ್ಯವಸ್ಥಾಪಕ ನಿರ್ದೇಶಕರಾದ ಸಿದ್ದಲಿಂಗಪ್ಪ ಬಿ ಪೂಜಾರಿ ತಿಳಿಸಿದರು.

ಆಯ್ಕೆಯಾದ ಅಭ್ಯರ್ಥಿಗಳಿಗೆ ಉದ್ಯೋಗದ ಆಫರ್ ಲೆಟರ್ ನೀಡುವ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ನಮ್ಮ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಜಾಗತಿಕ ಉದ್ಯೋಗ ಅವಕಾಶಗಳನ್ನು ಸೃಷ್ಟಿಸಲು ನೇಪಿಯನ್ / ಪ್ರಾಕ್ ಜೊತೆ ಕೈಜೋಡಿಸಿರುವುದು ನಮಗೆ ಹೆಮ್ಮೆಯ ವಿಷಯ. ಇದು GTTC ಯ ಉದ್ಯಮಸಂಬಂಧಿತ, ಗುಣಮಟ್ಟದ ತಾಂತ್ರಿಕ ತರಬೇತಿ ವ್ಯವಸ್ಥೆಯ ಪ್ರತಿಬಿಂಬವಾಗಿದೆ. ಜಿಟಿಟಿಸಿ ಅಭ್ಯರ್ಥಿಗಳ ಯಶಸ್ವಿ ನೇಮಕಾತಿ, ನಮ್ಮ ತರಬೇತಿ ವ್ಯವಸ್ಥೆಯ ಜಾಗತಿಕ ಪ್ರಾಮುಖ್ಯತೆಯನ್ನು ತೋರಿಸುತ್ತದೆ. ಮುಂದಿನ ದಿನಗಳಲ್ಲಿ ಇಂತಹ ಸಹಭಾಗಿತ್ವಗಳನ್ನು ಮತ್ತಷ್ಟು ಬಲಪಡಿಸಿ, ಕರ್ನಾಟಕದ ಯುವಕರಿಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸುವುದು ನಮ್ಮ ಉದ್ದೇಶ ಎಂದರು

ಪ್ರಾಕ್ ಸಂಸ್ಥೆಯ ಅರುಣ್ ಬೆಂಗಳೂರು ಅವರು , ಜಿಟಿಟಿಸಿ ಜತೆಗಿನ ಈ ಸಹಕಾರವು ಭವಿಷ್ಯದ ಜಾಗತಿಕ ಉದ್ಯೋಗ ಶಕ್ತಿ ಸೃಷ್ಟಿಸುವ ನಮ್ಮ ಬದ್ಧತೆಗೆ ಉದಾಹರಣೆಯಾಗಿದೆ. ನಮ್ಮ ಕಾರ್ಯಾಚರಣೆ ಮತ್ತು ಗುಣಮಟ್ಟದ ಮಾನದಂಡಗಳಿಗೆ ಅರ್ಹರಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದೇವೆ. ಅವರು ಪ್ರಾಕ್ ಸಂಸ್ಥೆಯ ಪರಿಸರಕ್ಕೆ ಸುಲಭವಾಗಿ ಹೊಂದಿಕೊಳ್ಳುವರು ಎಂಬ ವಿಶ್ವಾಸವಿದೆ. ಈ ಸಹಭಾಗಿತ್ವವು ನಮ್ಮ ಜಾಗತಿಕ ಕಾರ್ಯಾಚರಣೆಗಳಿಗೆ ಮತ್ತಷ್ಟು ಪ್ರತಿಭಾನ್ವಿತ ಅಭ್ಯರ್ಥಿಗಳ ಆಯ್ಕೆಗೆ ಸಹಕಾರಿಯಾಗುತ್ತದೆ. ಮುಂದಿನ ದಿನಗಳಲ್ಲಿ ಈ ಸಹಕಾರವನ್ನು ಇನ್ನಷ್ಟು ಬಲಪಡಿಸುವ ನಿರೀಕ್ಷೆಯಿದೆ. ಎಂದರು

ಔಷಧಗಳ ದರ ಹೆಚ್ಚಳಕ್ಕೆ ಖಂಡನೆ

ಬೆಂಗಳೂರು: ವಾಣಿಜ್ಯ ಬಳಕೆಯ ಅಡುಗೆ ಅನಿಲ ಮತ್ತು ಜೀವ ರಕ್ಷಕ ಔಷಧಗಳ ಬೆಲೆ ಹೆಚ್ಚಿಸಿರುವ ಕೇಂದ್ರ ಸರಕಾರದ ನಿರ್ಧಾರವನ್ನು ಎಸ್ ಯುಸಿಐ (ಕಮ್ಯುನಿಸ್ಟ್) ಪಕ್ಷದ ರಾಜ್ಯ ಸಮಿತಿ ಖಂಡಿಸಿದೆ. ಕೇಂದ್ರದ ಸರಕಾರ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ದೇಶದ ಜನರನ್ನು ರಕ್ಷಿಸುವ ಬದಲು, 19 ಕೆ.ಜಿ ತೂಕದ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್ ಬೆಲೆ ಯನ್ನು 25 ದಿನಗಳ ಅಂತರದಲ್ಲಿ ಮತ್ತೆ 218 ಹೆಚ್ಚಿಸಿದೆ. ಏಪ್ರಿಲ್ 1 ರಿಂದ ಇದರ ಮಾರುಕಟ್ಟೆ ಬೆಲೆ 2208 ಆಗಿದೆ. ಇದಕ್ಕೂ ಮುನ್ನ, 25 ದಿನಗಳ ಹಿಂದೆಯಷ್ಟೇ ಕೇಂದ್ರ ಸರಕಾರವು ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ?60, ವಾಣಿಜ್ಯ ಸಿಲಿಂಡರ್ ಬೆಲೆಯನ್ನು ?114.50 ಹೆಚ್ಚಿಸಿತ್ತು ಎಂದು ಎಸ್ ಯುಸಿಐ ರಾಜ್ಯ ಕಾರ್ಯದರ್ಶಿ ಕೆ. ಉಮಾ ಆರೋಪಿಸಿದ್ದಾರೆ.

ಆಪರೇಷನ್ ಸಿಂಧೂರ್ ಬಳಿಕ ಭಾರತದ ಶಸ್ತ್ರಗಳಿಗೆ ಬೇಡಿಕೆ

ಭಾರತ ರಕ್ಷಣಾ ಸಾಮಗ್ರಿ ರಫ್ತು ದಾಖಲೆ

ದೆಹಲಿ: ಭಾರತದ ರಕ್ಷಣಾ ಉಪಕರಣಗಳ ವಲಯದ ರಫ್ತು ವಹಿವಾಟು ಇತಿಹಾಸದಲ್ಲೇ ಗರಿಷ್ಠ ಮಟ್ಟಕ್ಕೆ ಮುಟ್ಟಿದೆ. ಜಾಗತಿಕ ಶಸ್ತ್ರಾಸ್ತ್ರ ಮಾರುಕಟ್ಟೆಯಲ್ಲಿ ಭಾರತದ ಶಸ್ತ್ರಾಸ್ತ್ರಗಳಿಗೆ ಭಾರೀ ಬೇಡಿಕೆ ಸೃಷ್ಟಿಯಾಗುತ್ತಿದೆ.

ಪಾಕಿಸ್ತಾನ ವಿರುದ್ಧದ ಆಪರೇಷನ್ ಸಿಂದೂರ್ ಕಾರ್ಯಾಚರಣೆಯ ಯಶಸ್ಸು, ಮತ್ತೊಂದೆಡೆ ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಯುದ್ಧದ ಈಗಿನ ಸಂದರ್ಭ ಭಾರತದ ರಕ್ಷಣಾ ಕ್ಷೇತ್ರದ ಸಾಮಗ್ರಿಗಳಿಗೆ ವಿವಿಧ ದೇಶಗಳಿಂದ ಬೇಡಿಕೆ ಬರುವಂತೆ ಮಾಡುತ್ತಿದೆ.

ರಕ್ಷಣಾ ಸಚಿವಾಲಯದ ಅಂಕಿ-ಅಂಶಗಳ ಪ್ರಕಾರ, 2025-26ರಲ್ಲಿ ಭಾರತದ ರಕ್ಷಣಾ ವಲಯದ ರಫ್ತು ವಹಿವಾಟು 38,424 ಕೋಟಿ ರು.ಗಳಿಗೆ ಏರಿಕೆ ಕಂಡಿದೆ. ಇದು ಈವರೆಗೆ ದಾಖಲಾಗಿರುವ ಅತಿ ಗರಿಷ್ಠ ಪ್ರಮಾಣವಾಗಿದೆ.

2016-17ರಲ್ಲಿ 1,522 ಕೋಟಿ ರು.ಗಳಷ್ಟು ಶಸ್ತ್ರಾಸ್ತ್ರಗಳನ್ನು ಭಾರತ ರಫ್ತು ಮಾಡಿತ್ತು. ಅದಕ್ಕೆ ಹೋಲಿಸಿದಲ್ಲಿ ಈಗ ಶಸ್ತ್ರಾಸ್ತ್ರಗಳು ಮತ್ತು ಯುದ್ಧ ಸಾಮಗ್ರಿಗಳ ರಫ್ತು ವಹಿವಾಟು 25 ಪಟ್ಟು ಹೆಚ್ಚಳವಾಗಿದೆ. ಅಂದರೆ, ಕಳೆದೊಂದು ದಶಕದಲ್ಲಿ ಇಷ್ಟು ತೀವ್ರ ಪ್ರಮಾಣದ ಬೇಡಿಕೆ ಸೃಷ್ಟಿಯಾಗಿದೆ ಎಂಬುದು ಗಮನಾರ್ಹ.

ಭಾರತದ ರಕ್ಷಣಾ ಕ್ಷೇತ್ರದ ಸಾಮಗ್ರಿಗಳ ರಫ್ತು ಪ್ರಮಾಣ 2018-19ರಲ್ಲಿ ಮೊದಲ ಬಾರಿಗೆ 10,000 ಕೋಟಿ ರು.ಗಳನ್ನು ದಾಟಿತ್ತು. ನಂತರ ಕೋವಿಡ್-19ರ ಅವಧಿಯಲ್ಲಿ ಸ್ವಲ್ಪ ಕುಸಿತ ಕಂಡಿತು. ಆ ಬಳಿಕ 2021-22ರ ಸಾಲಿನಿಂದ ರಕ್ಷಣಾ ಸಾಮಗ್ರಿ ರಫ್ತು ವಹಿವಾಟು ಮತ್ತೆ ವೇಗವಾಗಿ ಏರಿಕೆ ಕಾಣಲಾರಂಭಿಸಿದೆ. 2023-24ರಿಂದ 2025-26ರವರೆಗೆ ಶಸ್ತ್ರಾಸ್ತ್ರ ರಫ್ತು 21,083 ಕೋಟಿ ರು.ನಿಂದ 38,424 ಕೋಟಿ ರು.ಗಳಿಗೆ ಹೆಚ್ಚಳವಾಗಿದೆ.

ಮ್ಯಾನ್ಮಾರ್ ಖರೀದಿಯೇ ಶೇ.28: 2016-25ರ ನಡುವಿನ 10 ವರ್ಷಗಳ ಅವಧಿಯಲ್ಲಿ ಭಾರತದ ರಕ್ಷಣಾ ಸಾಮಗ್ರಿ ರಫ್ತು ವಹಿವಾಟು ಕೆಲವೇ ದೇಶಗಳನ್ನು ಆಧರಿಸಿತ್ತು. ಮ್ಯಾನ್ಮಾರ್ ಭಾರತದ ಒಟ್ಟು ರಕ್ಷಣಾ ವಲಯದ ರಫ್ತು ವಹಿವಾಟಿನಲ್ಲಿ ಶೇ.28ರಷ್ಟು ದೊಡ್ಡ ಪಾಲು ಹೊಂದಿದ ಖರೀದಿದಾರನಾಗಿತ್ತು. ಶೇ.19 ಪಾಲಿನ ಫಿಲಿಪೈನ್ಸ್ ಮತ್ತು ಶೇ.15ರಷ್ಟು ಪಾಲಿದ್ದ ಅರ್ಮೇನಿಯಾ ನಂತರದ ಸ್ಥಾನಗಳಲ್ಲಿದ್ದವು. ಈ 3 ದೇಶಗಳು ಭಾರತದ ರಕ್ಷಣಾ ಉಪಕರಣ ರಫ್ತು ವಹಿವಾಟಿನ ಶೇ.60ಕ್ಕಿಂತ ಹೆಚ್ಚು ಪಾಲು ಹೊಂದಿವೆ ಎಂಬುದು ಗಮನಾರ್ಹ. ಶೇ.13 ಪಾಲು ಶ್ರೀಲಂಕಾದ್ದಾಗಿದೆ. ಹಿಂದೂ ಮಹಾಸಾಗರ ದ್ವೀಪ ರಾಷ್ಟ್ರಗಳಾದ ಮಾರಿಷಸ್ ಶೇ.8.3 ಮತ್ತು ಸಿಶೆಲ್ಸ್ ಶೇ.6, ವಿಯೆಟ್ನಾಂ ಶೇ.5.5ರಷ್ಟು ಖರೀದಿ ಪಾಲು ಹೊಂದಿವೆ. ಉಳಿದಂತೆ. ಅಫ್ಘಾನಿಸ್ತಾನ, ಬಾಂಗ್ಲಾದೇಶ, ಮೊರೊಕ್ಕೊ ಮತ್ತು ಮಾಲ್ಡೀವ್ಸ್ ದೇಶಗಳು ಒಟ್ಟಾಗಿ ಶೇ.5ರಷ್ಟು ರಫ್ತು ಪಾಲನ್ನು ಹೊಂದಿವೆ.



ರಕ್ಷಣಾ ಉಪಕರಣ ರಫ್ತು ವೈವಿಧ್ಯ

ಭಾರತದ ರಕ್ಷಣಾ ರಫ್ತು ಸಾಮಗ್ರಿಗಳಲ್ಲಿ ನೌಕಾಪಡೆಗೆ ಸಂಬಂಧಿಸಿದ ಉತ್ಪನ್ನಗಳೇ ಅಗ್ರಸ್ಥಾನದಲ್ಲಿವೆ. 2016-25ರ ದಶಕದಲ್ಲಿನ ಒಟ್ಟು ರಕ್ಷಣಾ ರಫ್ತು ವಹಿವಾಟಿನ ಶೇ.55ರಷ್ಟು ಪಾಲು ಹಡಗುಗಳದ್ದೇ ಆಗಿದೆ. ಫಿರಂಗಿಗಳದ್ದು ಶೇ.13ರ ಪಾಲಿದೆ. ಕ್ಷಿಪಣಿಗಳ ಪ್ರಮಾಣ ಶೇ.12ರಷ್ಟು ಇದೆ. ಸೆನ್ಸರ್‌ಗಳು ಮತ್ತು ನಿಗಾ ವ್ಯವಸ್ಥೆ ಉಪಕರಣಗಳ ರಫ್ತು ಶೇ.9ರಷ್ಟಿದೆ. ವಿಮಾನಗಳ ಪಾಲು ಶೇ.6, ವಾಯು-ರಕ್ಷಣಾ ವ್ಯವಸ್ಥೆ ಶೇ.5.3, ರಕ್ಷಣಾ ಕ್ಷೇತ್ರದ ವಾಹನಗಳು ಶೇ.0.3ರಷ್ಟು ಅಲ್ಪ ಪ್ರಮಾಣವಾಗಿದೆ.

ನೀರು ಕೊಟ್ಟು ಮಾನವೀಯತೆ ತೋರಿದ್ದಕ್ಕೆ ಅತ್ಯಾಚಾರ

ವಿಜಯವಾಡ: ಆಂಧ್ರಪ್ರದೇಶದ ಪಲ್ನಾಡು ಜಿಲ್ಲೆಯ ಮಾಚೆರ್ಲಾ ಪಟ್ಟಣದಲ್ಲಿ ಕಾಮುಕನೊಬ್ಬ ಒಬ್ಬಂಟಿ ಮಹಿಳೆಯಿದ್ದ ಮನೆ ಬಳಿ ಬಂದು ಕುಡಿಯಲು ನೀರು ಕೇಳಿದ್ದಾನೆ. ಮಹಿಳೆ ನೀರು ತರಲು ಹೋದಾಗ ಮನೆಯೊಳಕ್ಕೆ ನುಗ್ಗಿ ಮಹಿಳೆಯ ಕೈಕಾಲು ಕಟ್ಟಿಹಾಕಿ, ಚಾಕು ತೋರಿಸಿ ಹೆದರಿಸಿ ಅತ್ಯಾಚಾರ ನಡೆಸಿದ್ದಾನೆ.

ಶುಕ್ರವಾರ ಮಧ್ಯಾಹ್ನ 3.30ರ ವೇಳೆ ಮನೆ ಬಳಿ ಬಂದ ಆರೋಪಿ ದುಷ್ಕೃತ್ಯ ಎಸಗಿದ್ದಾನೆ. ಸಂತ್ರಸ್ತ ಮಹಿಳೆ(30) ಸರಕಾರದ ಇಲಾಖೆಯೊಂದರ ನೌಕರರಾಗಿದ್ದಾರೆ.

ದುಷ್ಕೃತ್ಯದ ವೇಳೆ ಮಹಿಳೆ ತಾನು ಎಚ್‌ಐವಿ ಸೋಂಕು ಪೀಡಿತೆ ಎಂದು ಹೇಳಿದರೂ ಲೆಕ್ಕಿಸದ ಕಾಮುಕ ಅತ್ಯಾಚಾರ ನಡೆಸಿದ್ದಾನೆ. ಆ ಬಳಿಕ ಮಹಿಳೆಯ ಖಾಸಗಿ ಅಂಗಕ್ಕೆ ಕಬ್ಬಿಣದ ಸಲಾಕೆ ತೂರಿಸಿ ಕ್ರೌರ್ಯ ತೋರಿದ್ದಾನೆ. ಬಳಿಕ ಆಕೆಯ ಕೈಕಾಲನ್ನೂ ಬಿಚ್ಚದೇ ಕಟ್ಟಿಹಾಕಿದ ಸ್ಥಿತಿಯಲ್ಲೇ ಬಿಟ್ಟು ಸ್ಥಳದಿಂದ ತೆರಳಿದ್ದಾನೆ.

ಸಂಬಂಧಿಕರ ಕರೆ ಮಾಡಿದಾಗ ಮಹಿಳೆ ಸಂಪರ್ಕಕ್ಕೆ ಸಿಗದ ಕಾರಣ ಮನೆಗೆ ಧಾವಿಸಿ ಬಂದಿದ್ದಾರೆ. ಆಗ ಮಹಿಳೆ ಪ್ರಜ್ಞಾಹೀನ ಸ್ಥಿತಿಯಲ್ಲಿರುವುದನ್ನು ಕಂಡು ಮಾಚೆರ್ಲಾ ಸರಕಾರಿ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿ ಬಳಿಕ ವೈದ್ಯರ ಸಲಹೆ ಮೇರೆಗೆ ನರಸರಾವ್‌ಪೇಟ ಏರಿಯಾ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಸದ್ಯ ಮಹಿಳೆ ಸ್ವಲ್ಪ ಚೇತರಿಸಿಕೊಂಡಿದ್ದಾರೆ. ಸತತ ವೈದ್ಯಕೀಯ ನಿಗಾದಲ್ಲಿರಿಸಲಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಪೊಲೀಸರು ಮತ್ತು ವಿಧಿವಿಜ್ಞಾನ ತಂಡ ಮಹಿಳೆಯ ಮನೆಗೆ ತೆರಳಿ ಆರೋಪಿಯ ಬೆರಳಚ್ಚು ಮತ್ತಿತರ ಸಾಕ್ಷ್ಯಗಳನ್ನು ಕಲೆಹಾಕಿದೆ. ಸಿಸಿಟಿವಿ ಪರಿಶೀಲಿಸಿ ಆರೋಪಿಯ ಸೆರೆಗೆ ವಿಶೇಷ ತಂಡ ರಚಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಗೆದ್ದು ಅಗ್ರಸ್ಥಾನಕ್ಕೇರಿದ ರಾಜಸ್ಥಾನ್ ರಾಯಲ್ಸ್

ಅಹ್ಮದಾಬಾದ್: ಶನಿವಾರ ನಡೆದ 2ನೇ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡ 6 ರನ್‌ಗಳಿಂದ ಗುಜರಾತ್ ಟೈಟಾನ್ಸ್ ತಂಡವನ್ನು ಮಣಿಸಿದೆ. ಸತತ 2 ಪಂದ್ಯಗಳನ್ನು ಗೆದ್ದ ಅದು 4 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಟಾಸ್ ಗೆದ್ದ ರಾಜಸ್ಥಾನ್ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 210 ರನ್ ಗಳಿಸಿತು. ರನ್ ಬೆನ್ನತ್ತಿದ ಗುಜರಾತ್ ಟೈಟಾನ್ಸ್ 8 ವಿಕೆಟ್ ನಷ್ಟಕ್ಕೆ 204 ರನ್ ಗಳಿಸಲಷ್ಟೇ ಸಾಧ್ಯವಾಯಿತು. ನಾಯಕ ಶುಭಮನ್ ಗಿಲ್ ಅನುಪಸ್ಥಿತಿಯಲ್ಲಿ ಕಣಕ್ಕಿಳಿದ ಗುಜರಾತ್ ಪರ ಸಾಯಿ ಸುದರ್ಶನ್ 73 ರನ್ ಸಿಡಿಸಿದರು. ಆದರೆ ಇದು ಗೆಲುವಿಗೆ ಸಾಕಾಗಲಿಲ್ಲ. ರಾಜಸ್ಥಾನ್ ಪರ ಧ್ರುವ ಜುರೆಲ್ 75, ಯಶಸ್ವಿ ಜೈಸ್ವಾಲ್ 55 ರನ್ ಚಚ್ಚಿದರು.

ಆರ್‌ಸಿಬಿ ನಾಯಕ ರಜತ್ ತಿರುಪತಿಯಲ್ಲಿ ಪೂಜೆ

ಬೆಂಗಳೂರು: ಐಪಿಎಲ್ ಉದ್ಘಾಟನಾ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿರುವ ಹಾಲಿ ಚಾಂಪಿಯನ್ ಆರ್‌ಸಿಬಿ ತಂಡ ದ್ವಿತೀಯ ಪಂದ್ಯವನ್ನಾಡಲು ಸಜ್ಜಾಗಿದೆ. ಭಾನುವಾರ (ಏ.5)ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬದ್ಧ ಎದುರಾಳಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಸೆಣಸಾಟ ನಡೆಸಲಿದೆ. ಈ ಪಂದ್ಯಕ್ಕೂ ಮುನ್ನ ಆರ್‌ಸಿಬಿ ನಾಯಕ ರಜತ್ ಪಾಟೀದಾರ್ ಮತ್ತು ಜಿತೇಶ್ ಶರ್ಮಾ ತಿರುಪತಿ ತಿರುಮಲ ದೇವಸ್ಥಾನಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದ್ದಾರೆ. ಉಭಯ ಆಟಗಾರರು ತಿರುಪತಿ ತಿರುಮಲ ದೇವಸ್ಥಾನಕ್ಕೆ ಭೇಟಿದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಅಪ್ಪನ ಪರವಾಗಿ ಧೋನಿ ಕ್ಷಮೆಯಾಚಿಸಿದ ಯುವಿ

ದೆಹಲಿ: ತನ್ನ ಕ್ರಿಕೆಟ್ ವೃತ್ತಿಜೀವನವನ್ನು ಕಪಿಲ್ ದೇವ್ ಮತ್ತು ತನ್ನ ಮಗನ ವೃತ್ತಿ ಜೀವನವನ್ನು ಮಹೇಂದ್ರ ಸಿಂಗ್ ಧೋನಿ ಹಾಳುಗೆಡವಿದ್ದರು ಎಂದು ಭಾರತ ತಂಡದ ಮಾಜಿ ಆಲ್ರೌಂಡರ್ ಯುವರಾಜ್ ಸಿಂಗ್ ಅವರ ತಂದೆ ಯೋಗರಾಜ್ ಸಿಂಗ್ ಈ ಹಿಂದೆ ಆರೋಪ ಮಾಡಿದ್ದರು. ತಂದೆಯ ಈ ಹೇಳಿಕೆಗೆ ಯುವರಾಜ್ ಸಿಂಗ್ ಅವರು ಕಪಿಲ್ ಮತ್ತು ಧೋನಿ ಅವರ ಕ್ಷಮೆಯಾಚಿಸಿದ್ದಾರೆ. ಸ್ಪೋರ್ಟ್ಸ್ ತಕ್‌ನ ಪಾಡ್‌ಕಾಸ್ಟ್‌ನ ಟೀಸರ್‌ನಲ್ಲಿ ಯುವರಾಜ್ ಸಿಂಗ್ ಈ ಅವರು ಈ ಬಗ್ಗೆ ಮಾತನಾಡಿದ್ದಾರೆ. ಕಪಿಲ್ ದೇವ್ ಮತ್ತು ಎಂಎಸ್ ಧೋನಿ ಅವರ ಕ್ಷಮೆಯಾಚಿಸಲು ನಾನು ಬಯಸುತ್ತೇನೆ. ಈ ರೀತಿ ಮಾತನಾಡುವುದು ಸರಿಯಿಲ್ಲ ಎಂದು ನಾನು ಅಪ್ಪನಿಗೆ ಹೇಳಿರುವುದಾಗಿ ಹೇಳಿದ್ದಾರೆ. ಮೊದಲಿನಿಂದಲೂ ಭಾರತ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಅವರ ವಿರುದ್ಧ ಯೋಗರಾಜ್ ಸಿಂಗ್ ಅವರಿಗೊಂದು ಸಿಟ್ಟಿದೆ. ಯುವರಾಜ್ ಸಿಂಗ್ ಅವರು ಭಾರತ ತಂಡದಿಂದ ಹೊರಬೀಳಲು ಧೋನಿಯೇ ಕಾರಣ. ಧೋನಿಯಿಂದಾಗಿಯೇ ಯುವಿಯ ಅಂತಾರಾಷ್ಟ್ರೀಯ ಕ್ರಿಕೆಟ್ ಬದುಕು ಹಾಳಾಯಿತು ಎಂದು ಬಹಳಷ್ಟು ಬಾರಿ ಸಂದರ್ಶನಗಳಲ್ಲಿ ಹೇಳಿಕೆಗಳನ್ನು ನೀಡಿದ್ದರು.

ಇಂದು ಬೆಂಗಳೂರಿನಲ್ಲಿ ಐಪಿಎಲ್‌ನ ರೋಚಕ ಮುಖಾಮುಖಿ
ಕೊಹ್ಲಿ–ಧೋನಿ ಅಭಿಮಾನಿಗಳಿಗೆ ಕಾತರ | ಆದರೆ ಧೋನಿ ಆಡಲ್ಲ
ಉತ್ಸಾಹದಲ್ಲಿ ಆರ್‌ಸಿಬಿ | ಎರಡೂ ಪಂದ್ಯ ಸೋತಿರುವ ಚೆನ್ನೈ

ಆರ್‌ಸಿಬಿ ಖೆಡ್ಡಾದಲ್ಲಿ ಚೆನ್ನೈ ಸಮರ

ಬೆಂಗಳೂರು: ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾರತ–ಪಾಕಿಸ್ತಾನದ ಪಂದ್ಯವನ್ನು ಪ್ರೇಕ್ಷಕರು ಎಷ್ಟು ಕಾತರದಿಂದ ನಿರೀಕ್ಷಿಸುತ್ತಾರೋ, ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು – ಚೆನ್ನೈ ಸೂಪರ್ ಕಿಂಗ್ಸ್ ಪಂದ್ಯವನ್ನು ಅಷ್ಟೇ ಕಾತರದಿಂದ ವೀಕ್ಷಿಸಲಾಗುತ್ತದೆ. ಐಪಿಎಲ್‌ನಲ್ಲಿ ಆರ್‌ಸಿಬಿ ಗೆದ್ದಿರುವುದು ಒಂದೇ ಟ್ರೋಫಿಯಾದರೂ, ಇಡೀ ಕೂಟದಲ್ಲಿ ಈ ತಂಡ ಗರಿಷ್ಠ ಅಭಿಮಾನಿ ಬಳಗವನ್ನು ಹೊಂದಿದೆ. ಆ ಅಭಿಮಾನದ ಅತಿರೇಕದಿಂದ ಕಳೆದ ಐಪಿಎಲ್ ವಿಜಯೋತ್ಸವದ ವೇಳೆ ರಾಜ್ಯದಲ್ಲಿ 11 ಅಭಿಮಾನಿಗಳು ಸಾವನ್ನಪ್ಪಿದ್ದರು. ಇನ್ನೊಂದು ಕಡೆ 5 ಬಾರಿ ಟ್ರೋಫಿ ಗೆದ್ದಿರುವ ಚೆನ್ನೈ ಕಿಂಗ್ಸ್ ಐಪಿಎಲ್‌ನ ಅತಿ ಯಶಸ್ವಿ ತಂಡ. ಬೆಂಗಳೂರು ತಂಡದಲ್ಲಿ ಕೊಹ್ಲಿ ಇರುವುದರಿಂದ ದೇಶಾದ್ಯಂತ ಇರುವ ಅಭಿಮಾನಿಗಳು ಈ ತಂಡವನ್ನು ಬೆಂಬಲಿಸುತ್ತಾರೆ. ಚೆನ್ನೈ ಪರ ಸದ್ಯ ಧೋನಿ ಆಡದಿದ್ದರೂ, ಈಗಲೂ ಅವರೇ ಆ ತಂಡದ ಬ್ರ್ಯಾಂಡ್‌ನಂತೆ ಇದ್ದಾರೆ. ಹಾಗಾಗಿ ಧೋನಿ ಹೆಸರು ಕೇಳಿದರೆ ಅಭಿಮಾನಿಗಳು ದೇಶಾದ್ಯಂತ ಹುಚ್ಚೆದ್ದು ಕುಣಿಯುತ್ತಾರೆ. ಇಬ್ಬರು ದಂತಕಥೆಗಳ ನಡುವಿನ ಕಾದಾಟದಂತೆ ಈ ಪಂದ್ಯ ಪ್ರತಿಬಿಂಬಿತವಾಗುವುದರಿಂದ ಗರಿಷ್ಠ ರೋಚಕತೆ ಸೃಷ್ಟಿಯಾಗಿರುತ್ತದೆ. ಈ ಪಂದ್ಯವೂ ಅದಕ್ಕೆ ಹೊರತಲ್ಲ.

ಹಾಲಿ ಚಾಂಪಿಯನ್ ಆಗಿರುವ ಆರ್‌ಸಿಬಿ ತನ್ನ ಮೊದಲ ಪಂದ್ಯವನ್ನು ಮಾ.28ರಂದು ಬೆಂಗಳೂರಿನಲ್ಲಿ ಆಡಿ ಹೈದ್ರಾಬಾದ್ ಎದುರು ಭರ್ಜರಿ ಗೆಲುವು ದಾಖಲಿಸಿತ್ತು. ಸತತ 2ನೇ ಪಂದ್ಯವನ್ನು ಬೆಂಗಳೂರು ತನ್ನದೇ ನೆಲದಲ್ಲಿ ಆಡುತ್ತಿದೆ. ಚೆನ್ನೈ ಕಿಂಗ್ಸ್ ತಂಡದ್ದು ಒಂದು ರೀತಿಯಲ್ಲಿ ದುಸ್ಥಿತಿ ಎಂದೇ ಹೇಳಬೇಕು. ಧೋನಿಗೆ ವಯಸ್ಸಾಗಿ, ಮಂಡಿ ನೋವು ವಿಪರೀತವಾಗಿದೆ. ಅವರಿಗೀಗ ಹತ್ತಿರಹತ್ತಿರ 45 ವರ್ಷ. ಇತ್ತೀಚೆಗಿನ ವರ್ಷಗಳಲ್ಲಿ ಯಾವುದೇ ಕ್ರಿಕೆಟಿಗ 40 ವರ್ಷಕ್ಕಿಂತ ಜಾಸ್ತಿ ಆಡಿದ ಉದಾಹರಣೆಗಳೇ ಇಲ್ಲ. ಹಾಗಿದ್ದರೂ ಧೋನಿ ಚೆನ್ನೈ ತಂಡದ ಪರ ಕಾಣಿಸುತ್ತಲೇ ಇದ್ದಾರೆ. ಅವರ ಪ್ರದರ್ಶನ ಕಳಪೆಯಾಗಿದೆ. ಓಡಲು ಆಗದೇ ಕೆಳಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬರುತ್ತಾರೆ.

ಅವರಿಗೆ ತಂಡದ ತಂತ್ರಗಾರಿಕೆಯಲ್ಲಿ ಪಾಲ್ಗೊಳ್ಳಲು ಆಗುತ್ತಿದೆಯೇ ಹೊರತು, ಪೂರ್ಣಪ್ರಮಾಣದಲ್ಲಿ ತಮ್ಮ ಶಕ್ತಿಯನ್ನು ವಿನಿಯೋಗಿಸಲು ಆಗುತ್ತಿಲ್ಲ. ಈ ಬಾರಿಯೂ ಅವರು ಆರಂಭದ 6 ಪಂದ್ಯಗಳಲ್ಲಿ ತಂಡದ ಪರ ಆಡುವುದಿಲ್ಲ. ಅದಕ್ಕೂ ಫಿಟ್ನೆಸ್ ಸಮಸ್ಯೆಯೇ ಕಾರಣ. ಆದರೆ ಚೆನ್ನೈ ತಂಡದ ವ್ಯವಸ್ಥಾಪಕರಿಗೆ ಧೋನಿಯೆನ್ನುವ ಅದ್ಭುತ ಬ್ರ್ಯಾಂಡನ್ನು ತಂಡದಲ್ಲಿ ನೋಡದೇ ಇರಲು ಸಾಧ್ಯವಿಲ್ಲ ಎಂಬ ಸ್ಥಿತಿಯಿದೆ. ಪರೋಕ್ಷವಾಗಿ ಇದೇ ಅಂಶ ತಂಡದ ಸಾಮರ್ಥ್ಯವನ್ನು ಕುಗ್ಗಿಸಿದೆ. ಪ್ರಸ್ತುತ ಚೆನ್ನೈ ತಂಡವನ್ನು ಅವಲೋಕಿಸಿದಾಗ ಬಲ ಗೊಳ್ಳುವ ಲಕ್ಷಣ ತೋರುತ್ತಿದೆ. ಸತತ 2 ಸೋಲಿನ ಹೊರತಾಗಿಯೂ ತಂಡದಲ್ಲಿ ಸಂಜು ಸ್ಯಾಮ್ಸನ್, ಮ್ಯಾಟ್ ಹೆನ್ರಿ, ಯುವ ಕ್ರಿಕೆಟಿಗ ಆಯುಷ್ ಮ್ಹಾತ್ರೆ, ಸರ್ಫರಾಜ್ ಖಾನ್, ಜೇಮೀ ಒವರ್ಟನ್, ಶಿವಂ ದುಬೆ ಇರುವುದು ಭರವಸೆ ಮೂಡಿಸಿದೆ.

ಇನ್ನು ಆರ್‌ಸಿಬಿ ಮೊದಲ ಪಂದ್ಯವನ್ನು ಸುಲಭವಾಗಿ ಗೆದ್ದ ವಿಶ್ವಾಸದಲ್ಲಿದೆ. ಕೊಹ್ಲಿ, ಸಾಲ್ಟ್, ಪಾಟೀದಾರ್, ಟಿಮ್ ಡೇವಿಡ್, ಭುವನೇಶ್ವರ್ ಅವರಿರುವ ತಂಡ ಎಂತಹ ಎದುರಾಳಿಯನ್ನೂ ಮಣಿಸಬಲ್ಲದು. ಸದ್ಯ ಈ ತಂಡಕ್ಕಿರುವ ಒಂದೇ ಒಂದು ಕೊರಗೆಂದರೆ ಇನ್ನೂ ಜೋಶ್ ಹೇಝಲ್‌ವುಡ್ ಬಗ್ಗೆ ಖಚಿತತೆ ಬರದೇ ಇರುವುದು. ಇವರ ವೇಗದ ಬೌಲಿಂಗ್ ಯಾವುದೇ ತಂಡಕ್ಕೂ ಆಸ್ತಿಯಾಗಿದೆ. ಅವರು ತಂಡವನ್ನು ಕೂಡಿಕೊಂಡಿದ್ದರೂ ಇನ್ನೂ ಫಿಟ್ನೆಸ್ ಪಡೆದುಕೊಂಡಿಲ್ಲ.

ಸಂಭಾವ್ಯ ತಂಡಗಳು

ಬೆಂಗಳೂರು
- ಕೊಹ್ಲಿ
- ಸಾಲ್ಟ್
- ಪಡಿಕ್ಕಲ್
- ಪಾಟೀದಾರ್ ನಾಯಕ
- ಜಿತೇಶ್
- ಟಿಮ್ ಡೇವಿಡ್
- ಶೆಫರ್ಡ್
- ಕೃಣಾಲ್
- ಭುವನೇಶ್ವರ್
- ಮಂಗೇಶ್
- ಡಫಿ

ಚೆನ್ನೈ
- ಋತುರಾಜ್ ನಾಯಕ
- ಸ್ಯಾಮ್ಸನ್
- ಆಯುಷ್
- ಕಾರ್ತಿಕ್
- ಸರ್ಫರಾಜ್
- ಶಿವಂ
- ಪ್ರಶಾಂತ್
- ಒವರ್ಟನ್
- ಖಲೀಲ್
- ನೂರ್‌ಅಹ್ಮದ್
- ಹೆನ್ರಿ

ಮುಖಾಮುಖಿ

ಒಟ್ಟು ಪಂದ್ಯ	35
ಆರ್‌ಸಿಬಿ ಜಯ	13
ಚೆನ್ನೈ ಜಯ	21
ಫಲಿತಾಂಶವಿಲ್ಲ	01

ಅಂಕಣ ಹೇಗಿದೆ?

ಚಿನ್ನಸ್ವಾಮಿ ಕ್ರೀಡಾಂಗಣದ ಬೌಂಡರಿ ಚಿಕ್ಕದು, ಇಲ್ಲಿ ದೊಡ್ಡ ಮೊತ್ತ ದಾಖಲಿಸಬಹುದೆನ್ನುವ ನಂಬಿಕೆಯಿದೆ. ಮಾ.28ರಂದು ನಡೆದ ಮೊದಲ ಪಂದ್ಯದಲ್ಲಿ ಇಲ್ಲಿ ಎರಡೂ ತಂಡಗಳು ಬೃಹತ್ ಮೊತ್ತ ದಾಖಲಿಸಿದ್ದವು. ಇಲ್ಲಿನ ಕಪ್ಪುಮಣ್ಣಿನ ಅಂಕಣ ಆರಂಭದಲ್ಲಿ ವೇಗಕ್ಕೆ ನೆರವು ನೀಡುತ್ತದೆ. 2ನೇ ಬ್ಯಾಟಿಂಗ್ ವೇಳೆ ಇಬ್ಬನಿಯಿಂದ ಪಂದ್ಯದ ಮೇಲಾಗುವ ಅಡ್ಡ ಪರಿಣಾಮ ತಡೆಯಲು ಸಂಘಟಕರು ಕೆಲವು ಕ್ರಮ ತೆಗೆದುಕೊಂಡಿರುವುದರಿಂದ, 2ನೇ ಇನಿಂಗ್ಸ್ ವೇಳೆಯೂ ಬೌಲರ್‌ಗಳು ಚೆಂಡಿನ ಮೇಲೆ ನಿಯಂತ್ರಣ ಸಾಧಿಸಬಹುದು.

ಸ್ಥಳ: ಚಿನ್ನಸ್ವಾಮಿ ಮೈದಾನ, ಬೆಂಗಳೂರು
ಸಮಯ: ರಾ.7.30
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಧೋನಿ ಐಪಿಎಲ್‌ನ 2ನೇ ಹಿರಿಯ ಆಟಗಾರ

ಐಪಿಎಲ್ ಇತಿಹಾಸವನ್ನೇ ತೆಗೆದುಕೊಳ್ಳುವುದಾದರೆ ಆಸ್ಟ್ರೇಲಿಯಾದ ಸ್ಪಿನ್ನರ್ ಬ್ರಾಡ್ ಹಾಗ್ ಹಿರಿಯ ಆಟಗಾರ. ಅವರು 45 ವರ್ಷ 92 ದಿನಗಳಾಗಿದ್ದಾಗಲೂ ಆಡಿದ್ದರು. ಧೋನಿಗೆ ಪ್ರಸ್ತುತ 44 ವರ್ಷ 271 ದಿನಗಳಾಗಿವೆ. ಅವರೀಗ ಈ ಪಟ್ಟಿಯಲ್ಲಿ 2ನೇ ಸಾಲಿನಲ್ಲಿ ಬರುತ್ತಾರೆ. 44 ವರ್ಷ 219 ದಿನಗಳಾಗಿದ್ದಾಗಲೂ ಆಡಿದ್ದ ಸ್ಪಿನ್ನರ್ ಪ್ರವೀಣ್ ತಾಂಬೆ 3ನೇ ಹಿರಿಯ ಆಟಗಾರ.

ರೋಹಿತ್ 35, ಸೂರ್ಯ 51, ಮುಂಬೈ 162/6
ಸಮೀರ್ ಸ್ಫೋಟಕ 90, ಡೆಲ್ಲಿಗೆ 6 ವಿಕೆಟ್ ಜಯ

ಸಮೀರ್ ಸಿಡಿತಕ್ಕೆ ಮುಂಬೈ ನಿರುತ್ತರ: ಡೆಲ್ಲಿಗೆ 2ನೇ ಜಯ

ದೆಹಲಿ: ಸಮೀರ್ ರಿಝ್ವಿ ಅವರ ನಿರಂತರ ಅರ್ಧಶತಕದ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡ 5 ಬಾರಿಯ ಚಾಂಪಿಯನ್ನರಾದ ಮುಂಬೈ ಇಂಡಿಯನ್ಸ್ ವಿರುದ್ಧ 6 ವಿಕೆಟ್‌ಗಳ ಜಯ ದಾಖಲಿಸಿದೆ. ಈ ಹಿಂದಿನ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಅಜೇಯ 79 ರನ್‌ಗಳನ್ನು ಬಾರಿಸಿ ತಂಡವನ್ನು ಗೆಲ್ಲಿಸಿದ್ದ ಅವರು ಇದೀಗ ಮುಂಬೈ ಇಂಡಿಯನ್ಸ್ ತಂಡದ ಬಲಿಷ್ಠ ದಾಳಿಯನ್ನೂ ಮೆಟ್ಟಿನಿಂತರು. 51 ಎಸೆತಗಳಲ್ಲಿ ಅವರು ಬಾರಿಸಿದ 90 ರನ್‌ಗಳ ನೆರವಿನಿಂದ ಡೆಲ್ಲಿ ತಂಡ ಮುಂಬೈ ವಿರುದ್ಧ ಸುಲಭ ಜಯ ಸಾಧಿಸಿತು. ಹೀಗಾಗಿ ಡೆಲ್ಲಿ ತಂಡದ ಮೊದಲೆರಡು ವಿಕೆಟ್‌ಗಳನ್ನು 7 ರನ್ ಆಗುವುದರೊಳಗೆ ಕಬಳಿಸಿದ್ದ ಮುಂಬೈನ ಗೆಲುವಿನ ಆಸೆ ಕಮರಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ತಂಡ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 162 ರನ್‌ಗಳನ್ನಷ್ಟೇ ಗಳಿಸಲು ಸಾಧ್ಯವಾಯಿತು. ಈ ಮೊತ್ತವನ್ನು ಬೆಂಬತ್ತಿ ಹೊರಟ ಡೆಲ್ಲಿ ಕ್ಯಾಪಿಟಲ್ಸ್ ತಂಡ ಇನ್ನೂ 11 ಎಸೆತಗಳು ಬಾಕಿ ಉಳಿದಿರುವಾಗಲೇ 4 ವಿಕೆಟ್ ಕಳೆದುಕೊಂಡು ಜಯಭೇರಿ ಬಾರಿಸಿತು. ಜೊತೆಗೆ ಐಪಿಎಲ್ ಅಂಕಪಟ್ಟಿಯಲ್ಲೂ ಸತತ 2 ಜಯಗಳೊಂದಿಗೆ 4 ಅಂಕ ಗಳಿಸಿತು.

ಸೂರ್ಯ ಅರ್ಧಶತಕ: ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್ ಗೆ ಇಳಿಸಲ್ಪಟ್ಟ ಮುಂಬೈ ತಂಡ 18 ರನ್ ಗಳಾಗುವಷ್ಟರಲ್ಲಿ ರ್ಯಾನ್ ರಿಕಲ್ಟನ್ (9) ಮತ್ತು ತಿಲಕ್ ವರ್ಮಾ(0) ಅವರ ವಿಕೆಟ್ ಅನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ಹಂತದಲ್ಲಿ ಅನುಭವಿ ರೋಹಿತ್ ಶರ್ಮಾ (26 ಎಸೆತದಲ್ಲಿ 35) ಅವರು ಹಂಗಾಮಿ ನಾಯಕ ಸೂರ್ಯಕುಮಾರ್ ಯಾದವ್ (36 ಎಸೆತದಲ್ಲಿ 51) ಅವರ ಜೊತೆ ಸೇರಿ ಇನಿಂಗ್ಸ್ ಕಟ್ಟುವ ಕಾರ್ಯ ಮಾಡಿದರು. ಆದರೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಡೆತ್ ಓವರ್‌ಗಳಲ್ಲಿ ರನ್ ಬಾಚಲು ವಿಫಲರಾಗಿದ್ದರಿಂದ ತಂಡ 162ರ ಸ್ಪರ್ಧಾತ್ಮಕ ಮೊತ್ತಕ್ಕೆ ತೃಪ್ತಿಪಡುವಂತಾಯಿತು.

ಸಂಕ್ಷಿಪ್ತ ಸ್ಕೋರ್: ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 162/6 (ರೋಹಿತ್ ಶರ್ಮಾ 35, ಸೂರ್ಯಕುಮಾರ್ 51, ಮುಕೇಶ್ ಕುಮಾರ್ 26ಕ್ಕೆ 2, ಅಕ್ಷರ್ ಪಟೇಲ್ 22ಕ್ಕೆ 1). ಡೆಲ್ಲಿ ಕ್ಯಾಪಿಟಲ್ಸ್ 18.1 ಓವರ್‌ಗಳಲ್ಲಿ 164/4 (ಸಮೀರ್ ರಿಝ್ವಿ 90, ಪಾಥುಮ್ ನಿಸ್ಸಂಕ 44, ಡೇವಿಡ್ ಮಿಲ್ಲರ್ ಅಜೇಯ 21, ದೀಪಕ್ ಚಹರ್ 20ಕ್ಕೆ 1, ಮಿಚೆಲ್ ಸ್ಯಾಂಟ್ನರ್ 22ಕ್ಕೆ 1)

ನಾಯಕ ಕಮಿನ್ಸ್‌ಗೆ ಬೆನ್ನುನೋವು ತೀವ್ರ, ಆಸ್ಟ್ರೇಲಿಯಾಕ್ಕೆ ವಾಪಸ್

ಇಂದು ಕಿಶನ್ ಹೈದರಾಬಾದ್‌ಗೆ ಪಂತ್ ಲಖನೌ ಪಂಥಾಹ್ವಾನ

ಹೈದರಾಬಾದ್: ಸನ್‌ರೈಸರ್ಸ್ ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮ್ಮಿನ್ಸ್ ಅವರು ತಮ್ಮ ಬೆನ್ನಿನ ಗಾಯದ ಹಿನ್ನೆಲೆಯಲ್ಲಿ ಪಕ್ಕಾ ಸ್ಕ್ಯಾನ್ ಮಾಡಿಸಲು ಆಸ್ಟ್ರೇಲಿಯಾಕ್ಕೆ ಮರಳಿದ್ದಾರೆ. ಸ್ಕ್ಯಾನ್ ಬಳಿಕ ಕ್ರಿಕೆಟ್ ಆಸ್ಟ್ರೇಲಿಯಾ ಅನುಮತಿಸಿದಲ್ಲಿ ಮಾತ್ರ ಭಾರತಕ್ಕೆ ಹಿಂದಿರುಗಿ ಐಪಿಎಲ್ ಆಡಲಿದ್ದಾರೆ. ಆದರೆ ಆ ಬಗ್ಗೆ ಯಾವುದೇ ಖಚಿತತೆಯಿಲ್ಲ. ಹೀಗಾಗಿ ಹಂಗಾಮಿ ನಾಯಕರಾಗಿರುವ ಇಶಾನ್ ಕಿಶನ್ ಅವರೇ ನಾಯಕರಾಗಿ ಮುಂದುವರಿದಿದ್ದಾರೆ. ಭಾನುವಾರ ಸನ್‌ರೈಸರ್ಸ್ ಹೈದರಾಬಾದ್ ತಂಡ, ರಿಷಭ್ ಪಂತ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿದೆ. ಹೈದರಾಬಾದ್ ಮತ್ತೆ ಇಶಾನ್ ನಾಯಕತ್ವದಲ್ಲಿ ಆಡಲಿದೆ.

2025ರ ಆರಂಭದಲ್ಲಿ ಮುಗಿದ ಬಾರ್ಡರ್ ಗಾವಸ್ಕರ್ ಟ್ರೋಫಿ ಟೂರ್ನಿಯ ಬಳಿಕ ಆಸೀಸ್ ತಂಡದ ನಾಯಕರಾಗಿರುವ ಪ್ಯಾಟ್ ಕಮಿನ್ಸ್‌ಗೆ ಬೆನ್ನುನೋವು ಕಾಣಿಸಿಕೊಂಡಿತ್ತು. ಆ ಬಳಿಕ ಅವರಿಗೆ ನಿರಂತರವಾಗಿ ಕ್ರಿಕೆಟ್ ಆಡಲು ಸಾಧ್ಯವಾಗುತ್ತಿಲ್ಲ. 2025ರಲ್ಲಿ ನಡೆದ ಐಸಿಸಿ ಚಾಂಪಿಯನ್ಸ್ ಟ್ರೋಫಿ, 2026ರ ಐಸಿಸಿ ವಿಶ್ವ ಟಿ20 ವಿಶ್ವಕಪ್ ಸೇರಿದಂತೆ ಅವರು ಹಲವು ಮಹತ್ವದ ಟೂರ್ನಿಗಳಲ್ಲಿ ಕಾಣಿಸಿಕೊಂಡಿಲ್ಲ. ಆ್ಯಶಸ್ ಸರಣಿಯ ಒಂದು ಪಂದ್ಯದಲ್ಲಿ ಮಾತ್ರ ಅವರಿಗೆ ಆಡಲು ಸಾಧ್ಯವಾಗಿತ್ತು.



ಸ್ಥಳ: ಹೈದರಾಬಾದ್
ಸಮಯ: ಮ.3.30

ಇದೀಗ ಅವರು ಹೈದರಾಬಾದ್ ಪರ ಆಡಲು ಭಾರತಕ್ಕೆ ಆಗಮಿಸಿದ್ದರು. ತಾಲೀಮು ಅವಧಿಗಳಲ್ಲಿ ಬೌಲಿಂಗ್ ಸಹ ಮಾಡಿದ್ದರು. ಆದರೆ ಕಣಕ್ಕಿಳಿಯಲು ಮಾತ್ರ ಸಾಧ್ಯ ಆಗಿರಲಿಲ್ಲ. ಈಗ ಆಸೀಸ್‌ಗೆ ಮರಳಿದ್ದು ಕ್ರಿಕೆಟ್ ಆಸ್ಟ್ರೇಲಿಯಾ ಯಾವ ತೀರ್ಮಾನಕ್ಕೆ ಬರಲಿದೆ ಎಂಬ ಬಗ್ಗೆ ಕ್ರಿಕೆಟ್ ಪ್ರೇಮಿಗಳಿಗೆ ಕುತೂಹಲ ಇದೆ. ಈ ಬಗ್ಗೆ ಐಪಿಎಲ್‌ಗೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ್ದ ಪ್ಯಾಟ್ ಕಮಿನ್ಸ್, ನಾನು ಇನ್ನೂ ಬೆನ್ನುನೋವಿನಿಂದ ಚೇತರಿಸಿಕೊಳ್ಳುತ್ತಿದ್ದೇನೆ, ನೆಟ್ಸ್‌ನಲ್ಲಿ ಬೌಲಿಂಗ್‌ಗೆ ಮರಳಿದ್ದೇನೆ. ಐಪಿಎಲ್‌ನ ಆರಂಭದ ಪಂದ್ಯಗಳಲ್ಲಿ ಆಡಲು ಸಾಧ್ಯವಾಗದು. ಆದರೆ ಬೇಗನೇ ಕಣಕ್ಕಿಳಿವೆ ಎಂದಿದ್ದರು. ಐಪಿಎಲ್‌ನಲ್ಲಿ ಒಟ್ಟು 3 ತಂಡಗಳನ್ನು ಪ್ರತಿನಿಧಿಸಿರುವ ಪ್ಯಾಟ್ ಕಮಿನ್ಸ್ ಅವರು 2024ರ ಸೀಸನ್‌ನಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ. ಒಟ್ಟು 72 ಪಂದ್ಯಗಳನ್ನು ಆಡಿರುವ ಬೌಲಿಂಗ್ ಆಲ್ರೌಂಡರ್ 20.40 ಸರಾಸರಿಯಲ್ಲಿ 612 ರನ್ ಮತ್ತು 79 ವಿಕೆಟ್ ಗಳಿಸಿದ್ದಾರೆ.

ಪ್ಯಾಟ್ ಕಮ್ಮಿನ್ಸ್ ಅನುಪಸ್ಥಿತಿಯಲ್ಲಿ, ಇಶಾನ್ ಕಿಶನ್ ಅವರಿಗೆ ಸನ್‌ರೈಸರ್ಸ್ ತಂಡದ ನಾಯಕತ್ವದ ಜವಾಬ್ದಾರಿಗಳನ್ನು ವಹಿಸಲಾಗಿದ್ದು ಪ್ಯಾಟ್ ಕಮ್ಮಿನ್ಸ್ ಮರಳಿದರೆ, ಅವರು ತಂಡವನ್ನು ಮುನ್ನಡೆಸಲಿದ್ದಾರೆ. ಈ ಸೀಸನ್‌ನಲ್ಲಿ ಆಡಿರುವ ಎರಡು ಪಂದ್ಯಗಳಲ್ಲಿ ಒಂದನ್ನು ಗೆದ್ದು ಒಂದನ್ನು ಸೋತಿದೆ. ಐಪಿಎಲ್ 2026ರ ಉದ್ಘಾಟನಾ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ 6 ವಿಕೆಟ್‌ಗಳ ಸೋಲನುಭವಿಸಿತ್ತು. ಬಳಿಕ ಈಡನ್ ಗಾರ್ಡನ್ಸ್‌ನಲ್ಲಿ ನಡೆದ ಪಂದ್ಯದಲ್ಲಿ ಸನ್‌ರೈಸರ್ಸ್ ತಂಡ ಕೋಲ್ಕತಾ ನೈಟ್‌ರೈಡರ್ಸ್ ವಿರುದ್ಧ 65 ರನ್‌ಗಳ ಗೆಲುವು ಸಾಧಿಸಿತ್ತು.

ವಿಟಾಕೀಸ್

ಬಾಲ್ಯದ ಗೆಳತಿಯ ಅರಸುವ ಪ್ರೇಮಿ

ಫಸ್ಟ್ ಲವ್ ಈಸ್ ಬೆಸ್ಟ್ ಲವ್ ಎನ್ನುವ ಮಾತಿದೆ. ಜೀವನದಲ್ಲಿ ಮೊದಲು ಚಿಗುರಿದ ಪ್ರೀತಿಯನ್ನು ಮತ್ತೆ ಹುಡುಕುವ ಕಥೆ ಪ್ರೇಮಿ ಚಿತ್ರದಲ್ಲಿದೆ. ಆತ ಪ್ರೇಮ್ ಕುಮಾರ್, ಸದಾ ಏನೋ ಕಳೆದುಕೊಂಡವನಂತೆ ಚಡಪಡಿಸುತ್ತಿರುತ್ತಾನೆ. ಈತನನ್ನು ಇಷ್ಟಪಡುವ ಶೋಭಿತಾ, ತನ್ನ ಪ್ರೀತಿಯನ್ನು ಪ್ರೇಮ್ ಬಳಿ ಹೇಳಿಕೊಳ್ಳುತ್ತಾಳೆ. ಆದರೆ ಪ್ರೇಮ್ ತನಗೆ ಬಾಲ್ಯದಲ್ಲಿಯೇ ವಿವಾಹವಾಗಿದೆ ಎಂದು ಹೇಳಿ ಶೋಭಿತಾಳ ಪ್ರೀತಿಯನ್ನು ನಿರಾಕರಿಸುತ್ತಾನೆ.

ಬಾಲ್ಯದ ಗೆಳತಿಯನ್ನು ಅರಸಲು ಹಳ್ಳಿಗೆ ಹೋಗುತ್ತಾನೆ. ಊರಿಗೆ ಬಂದು ತನ್ನ ಗೆಳೆಯನ ನೆರವಿನಿಂದ ತಾನು ಬಾಲ್ಯದಲ್ಲಿ ಕೈ ಹಿಡಿದ ಗೆಳತಿಯ ಹುಡುಕಾಟ ಆರಂಭಿಸುತ್ತಾನೆ. ಈ ನಡುವೆಯೇ ಆತನಿಗೆ ಮದುಮತಿ ಪರಿಚಯವಾಗುತ್ತಾಳೆ. ಆಕೆ ಪುಟ್ಟ ಮಗುವಿನೊಂದಿಗೆ ಜೀವನ ಸಾಗಿಸುತ್ತಿರುತ್ತಾಳೆ. ಅಂತು ಬಾಲ್ಯದಲ್ಲಿ ತಾನು ಕೈಹಿಡಿದಿದ್ದು ಮದುಮತಿಯನ್ನೇ ಎಂಬುದು ಪ್ರೇಮ್‌ಗೆ ತಿಳಿಯುತ್ತದೆ. ಆ ವಿಚಾರವನ್ನು ಹೇಳುವಷ್ಟರಲ್ಲಿ ಕಥೆ ಹೊಸ ತಿರುವು ಪಡೆದುಕೊಳ್ಳುತ್ತದೆ. ಆ ಊರಿನಲ್ಲಿದ್ದ ವರದರಾಜ ಎಂಬ ಪುಂಡ ಮದುಮತಿಗೆ ಕಾಟ ಕೊಡುತ್ತಿರುತ್ತಾನೆ. ಪ್ರೇಮ್ ಆತನಿಂದ ಮದುಮತಿಯನ್ನು ಹೇಗೆ ರಕ್ಷಿಸುತ್ತಾನೆ. ತನ್ನ ಬಾಲ್ಯದ ವಿವಾಹದ ವಿಚಾರವನ್ನು ಆಕೆಗೆ ತಿಳಿಸುತ್ತಾನಾ, ಅಂದುಕೊಂಡಂತೆ ಆಕೆಯ ಜತೆಗೆ ಹೊಸ ಜೀವನ ಆರಂಭಿಸುತ್ತಾನಾ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ನಿರ್ದೇಶಕ ಪ್ರದೀಪ್ ವರ್ಮ ಎಲ್ಲರ ಮನಸೆಳೆವ ನವಿರಾದ ಪ್ರೇಮಕಥೆಯನ್ನು ಆಯ್ದುಕೊಂಡು, ಅದಕ್ಕೆ ಸೆಂಟಿಮೆಂಟ್ ಬೆರೆಸಿ ಸಿನಿಪ್ರಿಯರಿಗೆ ರುಚಿಸುವಂತೆ ಸಿನಿಮಾವನ್ನು ತೆರೆಯಲ್ಲಿ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಅದ್ವಿಕ್ ನಾಯಕನಾಗಿ ಇಷ್ಟವಾಗುತ್ತಾರೆ. ಅವರ ಪಾತ್ರಕ್ಕೆ ಇನ್ನೊಂದಷ್ಟು ತಯಾರಿ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಮದುಮತಿಯಾಗಿ ಸಾತ್ವಿಕಾ ಇಷ್ಟವಾಗುತ್ತಾರೆ. ಉಳಿದಂತೆ ಟೀನಾ, ಪ್ರದೀಪ್ ವರ್ಮ ಎಲ್ಲರೂ ತಮ್ಮ ಪಾತ್ರಗಳಿಗೆ ಜೀವತುಂಬಿದ್ದಾರೆ. ಹಿನ್ನೆಲೆ ಸಂಗೀತಕ್ಕೆ ಹೆಚ್ಚಿನ ಒತ್ತು ನೀಡಿದ್ದರೆ ಚೆನ್ನಾಗಿರುತ್ತಿತ್ತು ಎನಿಸುತ್ತದೆ. ಇನ್ನು ಛಾಯಾಗ್ರಹಣಕ್ಕೆ ಫುಲ್ ಮಾರ್ಕ್ಸ್ ಕೊಡಬಹುದು. ಒಟ್ಟಾರೆ ಲವ್ ಸ್ಟೋರಿಯನ್ನು ಇಷ್ಟಪಡುವವರಿಗೆ ಪ್ರೇಮಿ ಹೇಳಿ ಮಾಡಿಸಿದ ಸಿನಿಮಾವಾಗಿದೆ.

ಚಿತ್ರ	: ಪ್ರೇಮಿ
ನಿರ್ದೇಶನ	: ಪ್ರದೀಪ್ ವರ್ಮ
ನಿರ್ಮಾಣ	: ಸಿದ್ದಲಿಂಗಯ್ಯ
ತಾರಾಗಣ	: ಅದ್ವಿಕ್, ಸಾತ್ವಿಕಾ, ಪ್ರದೀಪ್ ವರ್ಮ, ಟೀನಾ ಮುಂತಾದವರು
ರೇಟಿಂಗ್	: ★★★

ಪ್ರಾಮಿಸ್ ಮಾಡಿದ ಡಾಲಿ

ಇತ್ತೀಚೆಗಷ್ಟೇ ಹೆಗ್ಗಣ ಮುದ್ದು ಸಿನಿಮಾ ಘೋಷಣೆ ಮಾಡಿದ್ದ ಡಾಲಿ ಧನಂಜಯ್, ಈಗ ಮತ್ತೊಂದು ಹೊಸ ಸಿನಿಮಾದ ಮೂಲಕ ತೆರೆಯಲ್ಲಿ ರಂಜಿಸಲು ಸಿದ್ಧವಾಗಿದ್ದಾರೆ. ಈ ಹಿಂದೆ ಸಿನಿಮಾದ ಶೀರ್ಷಿಕೆಯನ್ನು ಊಹಿಸಿ ಎಂದಿದ್ದ ಚಿತ್ರತಂಡ ಈಗ ಸಿನಿಮಾದ ಟೈಟಲ್ ರಿವೀಲ್ ಮಾಡಿದೆ. ಮದರ್ ಪ್ರಾಮಿಸ್ ಟೈಟಲ್‌ನಲ್ಲಿ ಚಿತ್ರ ಮೂಡಿಬರುತ್ತಿದೆ. ಡಾಲಿ ಧನಂಜಯ ಹಾಗೂ ಗೆಳೆಯರು ಸೇರಿ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಡಾಲಿ ಗೆಳೆಯ ಪೂರ್ಣ ಮೈಸೂರು ಈ ಸಿನಿಮಾವನ್ನು ನಿರ್ದೇಶನ ಮಾಡಿದ್ದಾರೆ. ಕೆಲ ದಿನಗಳ ಹಿಂದಷ್ಟೆ ಸಿನಿಮಾದ ಪೋಸ್ಟರ್ ಬಿಡುಗಡೆ ಮಾಡಿದ್ದ ಚಿತ್ರತಂಡ ಪೋಸ್ಟರ್‌ನಲ್ಲಿ ಯಾರ ಮುಖವನ್ನೂ ತೋರಿಸಿರಲಿಲ್ಲ, ಬದಲಿಗೆ ಸಿನಿಮಾದಲ್ಲಿ ನಟಿಸಿರುವ ಕಲಾವಿದರೆಲ್ಲ ಕ್ಯಾಮೆರಾಗೆ ಹಿಮ್ಮುಖವಾಗಿ ನಿಂತಿದ್ದರು. ಸಿನಿಮಾದ ಹೆಸರನ್ನು ಸಹ ಬೇರೆ ಬೇರೆ ಭಾಷೆಗಳಲ್ಲಿ ನೀಡಲಾಗಿತ್ತು. ಜತೆಗೆ ಸಿನಿಮಾದ ಹೆಸರು ಕಂಡುಹಿಡಿಯುವಂತೆ ಪ್ರೇಕ್ಷಕರಿಗೆ ಸವಾಲು ನೀಡಿತ್ತು. ಈಗ ಶೀರ್ಷಿಕೆಯನ್ನು ಘೋಷಿಸುವ ಜತೆಗೆ, ಸಿನಿಮಾದಲ್ಲಿ ಅಭಿನಯಿಸಿರುವ ನಟರನ್ನು ರಿವೀಲ್ ಮಾಡಿದೆ. ಡಾಲಿ ಧನಂಜಯ, ನಟ ನಾಗಭೂಷಣ್,

ಹಿರಿಯ ನಟಿ ವಿನಯಾ ಪ್ರಸಾದ್, ಗೀತಾ, ಗುರುದತ್ ಹೀಗೆ ಹಲವರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ಮದರ್ ಪ್ರಾಮಿಸ್ ಚಿತ್ರದಲ್ಲಿ ಎಮೋಷನಲ್, ಕಾಮಿಡಿ ಹಾಗೂ ಥ್ರಿಲ್ಲರ್ ಅಂಶಗಳು ಬೆರೆತಿವೆ. ರಾಹುಲ್ ರಾಯ್ ಛಾಯಾಗ್ರಹಣ, ನವನೀತ್ ಶ್ಯಾಮ್ ಸಂಗೀತ ನಿರ್ದೇಶನ ಈ ಸಿನಿಮಾಗಿದೆ.

ಶೂಟಿಂಗ್ ಮುಗಿಸಿದ ಕ್ಲಾಸ್ ಆಫ್ ಮೈಸೂರು

ಶೀರ್ಷಿಕೆಯಲ್ಲಿಯೇ ಮನಗೆದ್ದಿರುವ ಕ್ಲಾಸ್ ಆಫ್ ಮೈಸೂರು ಚಿತ್ರದ ಮುಹೂರ್ತ ಬಂಡೆ ಮಹಾಕಾಳಿ ಸನ್ನಿಧಿಯಲ್ಲಿ ಅದ್ದೂರಿಯಾಗಿ ನೆರವೇರಿತ್ತು. ಭರದಿಂದ ಚಿತ್ರೀಕರಣ ನಡೆಸಿದ ಚಿತ್ರತಂಡ ಮೊದಲ ಹಂತದ ಚಿತ್ರೀಕರಣವನ್ನು ಮುಕ್ತಾಯಗೊಳಿಸಿದೆ. ಗೌತಮ್ ಬಸವರಾಜು ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುವ ಜತೆಗೆ ಮಾರ್ಕ್ಸ್ ಎಂಟರ್‌ಟೇನ್‌ಮೆಂಟ್ ಬ್ಯಾನರ್‌ನಲ್ಲಿ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ. ಕ್ಲಾಸ್ ಆಫ್ ಮೈಸೂರು ಚಿತ್ರದ ಮೂಲಕ ಪ್ರೇಕ್ಷಕರಿಗೆ ವಿಭಿನ್ನ ಕಥೆಯನ್ನು ನೀಡಲು ನಿರ್ದೇಶಕರು ಸಜ್ಜಾಗಿದ್ದಾರೆ. ಈ ಚಿತ್ರವು ಸಂಸ್ಕೃತಿ ಮತ್ತು ಭಾವನೆಗಳನ್ನು ಒಳಗೊಂಡ ಕಥೆಯನ್ನು ಹೇಳಲಿದೆ. ಸೆಟ್ಟೇರಿದಾಗಿನಿಂದಲೂ ನಿರೀಕ್ಷೆ ಮೂಡಿಸಿರುವ ಕ್ಲಾಸ್ ಆಫ್ ಮೈಸೂರು ಮೊದಲ ಹಂತದಲ್ಲಿ ಗೋವಾ ಮತ್ತು ಗೋಕರ್ಣದ ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಸಿದೆ. ವಿಜಯೇಂದ್ರ ಸೂರ್ಯವಂಶಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಉಳಿದಂತೆ ರಂಗಾಯಣ ರಘು, ದತ್ತಣ್ಣ, ಶರತ್ ಲೋಹಿತಾಶ್ವ, ಮಹಾಂತೇಶ್,



ತಬಲನಾಣಿ, ಬಿರಾದಾರ್ ಮುಂತಾದವರು ಚಿತ್ರದ ತಾರಾಗಣದಲ್ಲಿದ್ದಾರೆ. ಬಿಸಿಲಿನ ತಾಪವನ್ನು ಲೆಕ್ಕಿಸದೆ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದಾರೆ. ಜೋ ಕೋಸ್ಟಾ ಸಂಗೀತ ನಿರ್ದೇಶನ, ಎಸ್.ಕೆ. ರಾವ್ ಛಾಯಾಗ್ರಹಣ, ನಾಗಾರ್ಜುನ ಶರ್ಮ ಸಾಹಿತ್ಯ ಈ ಚಿತ್ರಕ್ಕಿದೆ. ಶೀಘ್ರದಲ್ಲಿಯೇ ಎರಡನೇ ಹಂತದ ಶೂಟಿಂಗ್ ಆರಂಭಿಸಲು ಸಿದ್ಧವಾಗಿರುವ ಚಿತ್ರತಂಡ ಆದಷ್ಟು ಬೇಗ ಚಿತ್ರೀಕರಣ ಮುಗಿಸಿ ಸಿನಿಮಾವನ್ನು ಬಿಡುಗಡೆ ಮಾಡಲು ನಿರ್ಧರಿಸಿದೆ.

ಹಾಡಿನಲ್ಲಿ ಮೋಡಿ ಮಾಡಿದ ಪಿಚ್ಚರ್

ಸಂದೀಪ ಬೆದ್ರ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಪಿಚ್ಚರ್ ಸಿನಿಮಾದ ಹಾಡು ಬಿಡುಗಡೆಯಾಗಿದೆ. ಕನ್ನಡ ಹಾಗೂ ತುಳು ಎರಡು ಭಾಷೆಯಲ್ಲಿ ಹಾಡು ಬಿಡುಗಡೆಯಾಗಿದೆ. ಕನ್ನಡದಲ್ಲಿ ಈ ಹಾಡನ್ನು ಚೇತನ್ ಕುಮಾರ್ ಬರೆದರೆ, ತುಳುವಿನಲ್ಲಿ ಅನೂಪ್ ಭಂಡಾರಿ ಸಾಹಿತ್ಯ ರಚಿಸಿದ್ದಾರೆ. ಸ್ಯಾಮುಯೆಲ್ ಅಭಿ ಸಂಗೀತ ಸಂಯೋಜಿಸಿರುವ ಈ ಗೀತೆ ಮಧುರವಾಗಿ ಮೂಡಿಬಂದಿದೆ. ಪಿಚ್ಚರ್ ಎರಡು ಭಾಗಗಳಲ್ಲಿ ಮೂಡಿಬರಲಿದ್ದು, ಕನ್ನಡ ಹಾಗೂ ತುಳು ಎರಡು ಭಾಷೆಗಳಲ್ಲೂ ನಿರ್ಮಾಣವಾಗುತ್ತಿದೆ.

ನಿತ್ಯಪ್ರಕಾಶ್ ಬಂಟ್ವಾಳ ನಾಯಕನಾಗಿ ನಟಿಸಿದ್ದು, ಅಮೃತಾ ಸುದು ನಾಯಕಿಯಾಗಿ ಅಭಿನಯಿಸಿದ್ದಾರೆ. ದೇವದಾಸ್ ಕಾಪಿಕಾಡ್, ನವೀನ್.ಡಿ.ಪಡೀಲ್, ಅರವಿಂದ್ ಬೋಳಾರ್, ಭೋಜರಾಜ್ ವಾಮಂಜೂರ್, ಸಾಯಿಕೃಷ್ಣ, ವಜ್ರಧೀರ್ ಜೈನ್, ಸದಾಶಿವ ಅಮಿನ್, ಪ್ರಸನ್ನ ಶೆಟ್ಟಿ ಬೈಲೂರ್, ಸಂದೀಪ್ ಶೆಟ್ಟಿ ಮಾಣಿ, ಉಮೇಶ್ ಪೂಜಾರ್, ಜಯಶೀಲ ಮರೋಳಿ, ರೂಪ ವರ್ಕಾಡಿ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಕೌಟುಂಬಿಕ, ಕಾಮಿಡಿ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಮನರಂಜನೆ ಪ್ರಧಾನವಾಗಿದೆ. ಮಂಗಳೂರು, ಬಂಟ್ವಾಳ, ಕಾಶ್ಮೀರ ಮುಂತಾದ ಕಡೆ ಚಿತ್ರೀಕರಣ ನಡೆಸಿರುವ ಪಿಚ್ಚರ್, ಪೋಸ್ಟ್ ಪ್ರೊಡಕ್ಷನ್‌ನಲ್ಲಿ ಬ್ಯುಸಿಯಾಗಿದೆ. ಸಂತೋಷ್ ರೈ ಪಾತಾಜೆ ಹಾಗೂ ಚಂದ್ರಶೇಖರ್ ಛಾಯಾಗ್ರಹಣ, ರಾಜು ಆರ್ಯನ್ ಸಂಕಲನ, ಧನಂಜಯ್, ಶ್ರೀರಾಜು ನೃತ್ಯ ನಿರ್ದೇಶನ, ಥ್ರಿಲ್ಲರ್ ಮಂಜು ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಗೋಲ್ಡನ್ ಮೂವೀಸ್ ಲಾಂಛನದಲ್ಲಿ ಶಿಲ್ಪಾ ಗಣೇಶ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ವಿಶ್ವವಾಣಿ
05.04.2026
ಭಾನುವಾರ

ವಿರಾಮ

ಓಡುವ ಲೋಕಕ್ಕೆ ಓದುವ ನಿಲ್ದಾಣ

ನಮ್ಮ ದೇಶದ ಪ್ರಸಿದ್ಧ ವ್ಯಂಗ್ಯಚಿತ್ರಕಾರರಲ್ಲಿ ಆರ್.ಕೆ.ಲಕ್ಷ್ಮಣ್ (1921-2015) ಒಬ್ಬರು. ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಆರು ದಶಕಗಳ ಕಾಲ ವ್ಯಂಗ್ಯಚಿತ್ರಕಾರರಾಗಿ ಕಾರ್ಯನಿರ್ವಹಿಸಿದ ಅವರು, ದೇಶದ ಅತ್ಯುನ್ನತ ನಾಯಕರನ್ನೂ ಒಳಗೊಂಡಂತೆ, ಜಗತ್ತಿನ ಎಲ್ಲಾ ವಿದ್ಯಮಾನಗಳಿಗೂ ವ್ಯಂಗ್ಯದ ಲೇಪನ ನೀಡಿ, ಚಿತ್ರ ಬರೆಯುತ್ತಿದ್ದರು, ಮಾತ್ರವಲ್ಲ ರಾಜಕೀಯ ನಾಯಕರ ನಡೆಗಳನ್ನು ಪ್ರಶ್ನಿಸುವ ಧೈರ್ಯ ತೋರುತ್ತಿದ್ದರು. ನಮ್ಮ ದೇಶವನ್ನಾಳುತ್ತಿದ್ದ ಪ್ರಮುಖ ನಾಯಕರ ಕುರಿತು ಅವರು ಬರೆಯುತ್ತಿದ್ದ ವ್ಯಂಗ್ಯಚಿತ್ರಗಳಲ್ಲಿ ಅವರು ತೋರುತ್ತಿದ್ದ ಹೊಸತನ, ಟೀಕಿಸುವ ಧೈರ್ಯ ಎಲ್ಲವೂ ಅನನ್ಯ. ಅವರ ಬದುಕು ಮತ್ತು ಕಲಾಕೃತಿಗಳ ಕುರಿತ ಒಂದು ಉತ್ತಮ ಸಂಗ್ರಹಾಲಯವು ಪುಣೆಯಲ್ಲಿದೆ.

» ಸಿ. ಎ. ವಿಲಾಸ ನಾ ಹುದ್ದಾರ

ಸಾಮಾನ್ಯ ಮನುಷ್ಯನಿಗೆ ಒಂದು ವಸ್ತುಸಂಗ್ರಹಾಲಯ! ಯು ಸೆಡ್ ಇಟ್ ಖ್ಯಾತಿಯ ಕಾಮನ್ ಮ್ಯಾನ್

ವ್ಯಂಗ್ಯಚಿತ್ರಗಳೆಂದಾಕ್ಷಣ 'ಸಾಮಾನ್ಯ ಮನುಷ್ಯ' (ಕಾಮನ್ ಮ್ಯಾನ್) ಎಂಬ ಜನಪ್ರಿಯ ವ್ಯಕ್ತಿಯ ಚಿತ್ರವು ಕಣ್ಣ ಮುಂದೆ ಬರುತ್ತದೆ. ಸಾಮಾನ್ಯ ಮನುಷ್ಯನ ಮೂಲಕ ವೈವಿಧ್ಯಮಯ ವ್ಯಂಗ್ಯ ವ್ಯಾಖ್ಯಾನಗಳನ್ನು ಓದಿದ ಜನರು ಒಮ್ಮೆಯಾದರೂ ನಗದೇ ಇರುವುದಿಲ್ಲ; ಜತೆಗೆ, ಸಾಮಾನ್ಯ ಮನುಷ್ಯನ ಮೂಲಕ ವ್ಯಕ್ತಪಡಿಸುತ್ತಿದ್ದ ವಿಚಾರಗಳು ಸಹ ಪ್ರಬುದ್ಧವಾಗಿರುತ್ತಿದ್ದವು. 'ಕಾಮನ್ ಮ್ಯಾನ್'ನ ಜನಕರೆಂದರೆ, ಆರ್.ಕೆ. ಲಕ್ಷ್ಮಣ್. ಅವರು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಪ್ರತಿದಿನವೆಂಬಂತೆ, ಕಾಮನ್ ಮ್ಯಾನ್ ಬಳಸಿ ವ್ಯಂಗ್ಯಚಿತ್ರ ರಚಿಸುತ್ತಿದ್ದವು. ಅವು ಅಪಾರ ಜನಪ್ರಿಯತೆಯನ್ನು ಗಳಿಸಿದ್ದವು. ಆರ್.ಕೆ.ಲಕ್ಷ್ಮಣರ ವ್ಯಂಗ್ಯಚಿತ್ರಗಳ ಸಂಗ್ರಹಾಲಯವನ್ನು ಬಾಲೆವಾಡಿ, ಪುಣೆಯಲ್ಲಿ ಪುಣೆ ಮಹಾನಗರ ಪಾಲಿಕೆಯು ನಿರ್ಮಿಸಿದೆ. ಆರ್. ಕೆ. ಲಕ್ಷ್ಮಣ ಅವರು ತಮ್ಮ ಜೀವಿತಾವಧಿಯಲ್ಲಿ ಸುಮಾರು 35000 ವ್ಯಂಗ್ಯಚಿತ್ರಗಳನ್ನು ರಚಿಸಿದ್ದಾರಂತೆ. ಆಯ್ದ ಕೆಲವು ವ್ಯಂಗ್ಯಚಿತ್ರಗಳನ್ನು ಅವರ ಕುಟುಂಬದವರು, ಈ ಸಂಗ್ರಹಾಲಯಕ್ಕಾಗಿ ಕೊಟ್ಟಿದ್ದಾರೆ.

ನಮ್ಮ ದೇಶದಲ್ಲೇ ವಿಶಿಷ್ಟ ಎನ್ನಬಹುದಾದ ಈ ವ್ಯಂಗ್ಯಚಿತ್ರ ಸಂಗ್ರಹಾಲಯದ ವಿಶಾಲವಾದ ಕಾಪೌಂಡನ್ನು ಪ್ರವೇಶಿಸುತ್ತಿದ್ದಂತೆಯೇ, ಎಡ ಭಾಗದ ಗೋಡೆಯ ಮೇಲೆ ಕಂಡು ಬರುವದು 'ಸಾಮಾನ್ಯ ಮನುಷ್ಯ'ನು ಪೋಲೀಸ್ ಕಾನಸ್ಟೇಬಲ್‌ನ ಹೆಗಲ ಮೇಲೆ ಕೈ ಹಾಕಿಕೊಂಡು ನಿಂತಿರುವ ಚಿತ್ರ.

ವಸ್ತು ಸಂಗ್ರಹಾಲಯದ ಮೊದಲಲ್ಲೇ ಪೋಲೀಸ್‌ರ ಕೆಲಸಕ್ಕೆ ಸಂಬಂಧಿಸಿದಂತೆ ವ್ಯಂಗ್ಯಚಿತ್ರಗಳು ಕಾಣುತ್ತವೆ. ಮುಂಬಯಿ ಪೋಲಿಸ್ ಇಲಾಖೆಯ ಕರ್ತವ್ಯ ಪ್ರಜ್ಞೆಯಿಂದ ಲಕ್ಷ್ಮಣ್ ಅವರು ಆಕರ್ಷಿತರಾಗಿದ್ದರು. ಆದ್ದರಿಂದ ಪೋಲೀಸರ ಕಾರ್ಯವೈಖರಿ ವಿಷಯವಾಗಿ ಸಾಕಷ್ಟು ವ್ಯಂಗ್ಯಚಿತ್ರಗಳನ್ನು ರಚಿಸಿದ್ದು ಕಂಡು ಬರುತ್ತದೆ. ಆ ವ್ಯಂಗ್ಯಚಿತ್ರಗಳು ಅಪರಾಧ, ಸಿ.ಬಿ.ಐ. ವಿಚಾರಣೆ, ಪ್ರತಿಭಟನೆ ಸಮಯದಲ್ಲಿ ಪೋಲೀಸರ ವರ್ತನೆ, ಗುಂಪುಗಳ ಬಡಿದಾಟದ ಸಂದರ್ಭ, ಕಾನೂನು ಮತ್ತು ಸುವ್ಯವಸ್ಥೆ ಮುಂತಾದ ವಿಷಯಗಳ ಮೇಲೆ ಮೂಡಿ ಬಂದಿವೆ.

ಮುಂದಕ್ಕೆ ಹೋದರೆ ಬಲಭಾಗದಲ್ಲಿರುವ ಸಂಗ್ರಹಾಲಯದ ಕಾರ್ಯಾಲಯದಲ್ಲಿ ಟಿಕೇಟಗಳನ್ನು ಪಡೆದುಕೊಳ್ಳಬೇಕು. ಸಂಗ್ರಹಾಲಯದ ಜೊತೆಗೆ ಅಲ್ಲಿರುವ ಎರಡು ಆಡಿಯೋ-ವೀಡಿಯೋ ಪ್ರದರ್ಶನ ನೋಡುವದಿದ್ದರೆ ರೂ.100, ವ್ಯಂಗ್ಯಚಿತ್ರಗಳನ್ನಷ್ಟೇ ವೀಕ್ಷಿಸುವದಿದ್ದರೆ ರೂ. 50 ಕೊಡಬೇಕು.

ಅರ್.ಕೆ.ಲಕ್ಷ್ಮಣ್ ವಿಡಿಯೋ ಶೋ

ಮೊದಲನೇ ಮಹಡಿಯಲ್ಲಿ ಅರ್.ಕೆ.ಲಕ್ಷ್ಮಣ ಅವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ವಿವರಿಸುವ ವಿಡಿಯೋ ಶೋ ಪ್ರದರ್ಶನವಿದೆ. ಅವರ ಬಾಲ್ಯ, ಶಿಕ್ಷಣ ಮತ್ತು ಅವರು ಮುಂಬಯಿಯ ಪ್ರಸಿದ್ಧ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್‌ನಿಂದ ತಿರಸ್ಕೃತರಾದದ್ದು ಎಲ್ಲವನ್ನೂ ಇಲ್ಲಿ ವಿವರಿಸಲಾಗಿದೆ. ಅವರು ವ್ಯಂಗ್ಯಚಿತ್ರಕಾರನಾಗಲು ದೊರೆತ ಪ್ರೇರಣೆ, ಮುಂದೆ ಅವರು ಸುಮರು 60 ವರ್ಷ 'ದ ಟೈಮ್ಸ್ ಆಫ್ ಇಂಡಿಯಾ'ದ ದಿನಪತ್ರಿಕೆಯಲ್ಲಿ 'ಯು ಸೆಡ್ ಇಟ್' ಎಂಬ ಕಾಲಂನಲ್ಲಿ ತಮ್ಮ ಕಾಮನ್ ಮ್ಯಾನ್ ವ್ಯಂಗ್ಯ ಚಿತ್ರದ ಮೂಲಕ ಪ್ರಸಿದ್ಧಿ ಪಡೆದದ್ದು ಶಬ್ದ ಮತ್ತು ದೃಶ್ಯದ ಮೂಲಕ ತೋರಿಸಲಾಗುತ್ತದೆ. ನಮ್ಮ ದೇಶದ ವಿವಿಧತೆಯಲ್ಲಿರುವ ಏಕತೆಯೇ ಅವರಿಗೆ 'ಕಾಮನ್ ಮ್ಯಾನ್' ಸೃಷ್ಟಿಸಲು ಉತ್ತೇಜನ ನೀಡಿತಂತೆ. ಅವರಲ್ಲಿದ್ದ ಸೃಜನಶೀಲತೆ, ಸೂಕ್ಷ್ಮವಾಗಿ ತಮ್ಮ ಸುತ್ತಲೂ

ನಡೆಯುತ್ತಿರುವ ವಿದ್ಯಮಾನಗಳನ್ನು ಗ್ರಹಿಸುವ ಮಾನಸಿಕ ಶಕ್ತಿ ಇವೆಲ್ಲವೂ ಅವರನ್ನು ಉತ್ತಮ ಮತ್ತು ಪ್ರಸಿದ್ಧ ವ್ಯಂಗ್ಯಚಿತ್ರಕಾರರನ್ನಾಗಿಸಿದವು.

ವಿಡಿಯೋ ಶೋ ಮುಗಿದ ಮೇಲೆ ನಮ್ಮ ಬಲಗಡೆ ಇದ್ದ ಎತ್ತರದ ಸ್ಥಳದ ಮೇಲೆ ಮೇಜಿನ ಎದುರಿಗೆ ಕುಳಿತ ಆರ್.ಕೆ. ಲಕ್ಷ್ಮಣರ ಪ್ರತಿಕೃತಿಯ ಮೇಲೆ ಬೆಳಕನ್ನು ಕೇಂದ್ರೀಕರಿಸಿ ಅವರ ದಿನಚರಿಯ ವಿಷಯವಾಗಿ ಆಡಿಯೋ ಮುಖಾಂತರ ಹೇಳಲಗುತ್ತದೆ. ಅವರು ಸರಿಯಾಗಿ 9.00 ಗಂಟೆಗೆ ತಮ್ಮ ಕಾರಿನಲ್ಲಿ ಕಚೇರಿಗೆ ಹೋಗುತ್ತಿದ್ದರು. ಅವರ ಕೋಣೆಯಲ್ಲಿ ಗಡಿಯಾರ ಇರಲಿಲ್ಲ, ಆದರೆ ಅವರ ಜವಾನ ಪ್ರತಿ ಒಂದು ಗಂಟೆಗೆ ಸಮಯವನ್ನು ತಿಳಿಸುತ್ತಿದ್ದನಂತೆ. ಸರಿಯಾಗಿ 1.00 ಗಂಟೆಗೆ ಊಟ ಮಾಡುತ್ತಿದ್ದರು. ಮಧ್ಯಾಹ್ನದ 3.00 ಗಂಟೆಯೊಳಗೆ, ಆ ದಿನದ ವ್ಯಂಗ್ಯಚಿತ್ರವನ್ನು ಸೃಷ್ಟಿಸುತ್ತಿದ್ದರು. ಸರಿಯಾಗಿ 3.00 ಗಂಟೆ ಆಗುತ್ತಿದ್ದಂತೆಯೇ ಅದನ್ನು ಮರುದಿನದ ಪ್ರಕಟಣೆಗೆ ಕೊಡಲು ತೆಗೆದುಕೊಂಡು ಹೋಗುತ್ತಿದ್ದರು. ವ್ಯಂಗ್ಯಚಿತ್ರಕಾರರಿಗೆ ಆ ಪತ್ರಿಕೆಯಲ್ಲಿ ಅಂದು 3.00 ಗಂಟೆ ಡೆಡ್‌ಲೈನ್! ಅವರ ಪ್ರತಿಕೃತಿಯ ಹಿಂದಿನ ಗೋಡೆಯ ಮೇಲೆ ಅವರು, ತಮ್ಮ ಹಳೆಯ ಅಂಬಾಸಿಡರ್ ಕಾರು ನಡೆಸುತ್ತಿರುವ ಭಾವಚಿತ್ರವೂ ಇರುತ್ತದೆ.

ಧ್ವನಿ ಮತ್ತು ದೃಶ್ಯ ಪ್ರದರ್ಶನ

ಕೆಳಗಿನ ಮಹಡಿಯಲ್ಲಿ 'ಮಾಲ್ಗುಡಿ' ಎಂಬ ಕಾಲ್ಪನಿಕ ಊರಿನ ಮತ್ತು ಅದರ ರೇಲ್ವೇ ನಿಲ್ದಾಣ, ಸರಯೂ ನದಿ ಮೊದಲಾದ ಸನ್ನಿವೇಶದ ಪ್ರತಿಕೃತಿ ಇದೆ. ಆಡಿಯೋದ ಮೂಲಕ ನಮಗೆ ಮೊದಲು ಈ ಪ್ರದರ್ಶನದ ವಿವರಗಳನ್ನು ಪ್ರಸ್ತುತಪಡಿಸುತ್ತಾರೆ. ಲಕ್ಷ್ಮಣ ಅವರ ಸಹೋದರ ಆರ್. ಕೆ.ನಾರಾಯಣ (ಪ್ರಸಿದ್ಧ ಲೇಖಕರು) ಅವರು ತಮ್ಮ ಕಾದಂಬರಿಗಳಲ್ಲಿ, ಮಾಲ್ಗುಡಿ ಎಂಬ ಕಾಲ್ಪನಿಕ ಊರನ್ನು ಕಲ್ಪಿಸಿ, ಅದರ ಸುತ್ತಾ ಕಾದಂಬರಿಯ ಹಂದರವನ್ನು ಬೆಳೆಸುತ್ತಿದ್ದರು. ನಾರಾಯಣ್ ಅವರ ಕೋರಿಕೆ ಮೇರೆಗೆ ಮಾಲ್ಗುಡಿ ಎಂಬ ಕಾಲ್ಪನಿಕ ಊರಿನ ಚಿತ್ರವನ್ನು ಆರ್.ಕೆ. ಲಕ್ಷ್ಮಣರು ರಚಿಸಿದ್ದಾರೆ.

ಮಾಲ್ಗುಡಿಯಲ್ಲಿ ಉಗಿಬಂಡಿ

ಪ್ರದರ್ಶನ ಪ್ರಾರಂಭವಾಗುತ್ತಿದ್ದಂತೆಯೆ ಒಂದು ಉಗಿ ಬಂಡಿಯು ಬಂದು ಮಾಲ್ಗುಡಿ ನಿಲ್ದಾಣಕ್ಕೆ ಬಂದು ನಿಲ್ಲುತ್ತದೆ. ಆಡಿಯೋ ಮತ್ತು ಬೆಳಕಿನ ಮೂಲಕ ಆರ್.ಕೆ.ನಾರಾಯಣರು ಬರೆದ 'ಗೈಡ್' ಚಲನಚಿತ್ರದ ಸಂಕ್ಷಿಪ್ತ ಕಥೆಯನ್ನು, ತದನಂತರ 'ಮಾಲ್ಗುಡಿ ಡೇಸ್'ನ 'ಸ್ವಾಮಿ ಮತ್ತು ಅವನ ಸ್ನೇಹಿತ'ರ

ಕಥೆಯನ್ನು ಹೇಳಲಾಗುತ್ತದೆ. ಸಣ್ಣ ಪರದೆಯ ಮೇಲೆ ವಿಡಿಯೋ ಮುಖಾಂತರ ಆರ್.ಕೆ.ಲಕ್ಷ್ಮಣರು ಕಾಮನ್ ಮ್ಯಾನ್ ಸೃಷ್ಟಿ ಮಾಡುತ್ತಿರುವ ದೃಶ್ಯವನ್ನು ತೋರಿಸಲಾಗುತ್ತದೆ. ಅದಕ್ಕೆ ಹಾಸ್ಯದ ಲೇಪನ ಕೊಟ್ಟು ಅವರು ಸೃಷ್ಟಿಸುತ್ತಿದ್ದಂತೆಯೇ ಕಾಮನ್ ಮ್ಯಾನ್ ಕ್ಯಾನವಾಸ್ ಹಿಂದುಗಡೆ ಹೋಗಿ ಬಚ್ಚಿಟ್ಟುಕೊಂಡು, ಅವನ ಸೃಷ್ಟಿಕರ್ತನ ಜೊತೆ ಕಣ್ಣು ಮುಚ್ಚಾಲೆ ಆಡುವ ದೃಶ್ಯ ಕಚಗುಳಿಯನ್ನು ಇಡುತ್ತದೆ. ಈ ಪ್ರದರ್ಶನವು ವೀಕ್ಷಕರಿಗೆ ಒಂದು ಅದ್ಭುತ ಅನುಭವ ನೀಡುತ್ತದೆ.

ಕಾಮನ್ ಮ್ಯಾನ್ ಕೈಯಲ್ಲಿ. .

ಹೊರಗೆ ಬಂದರೆ ಎದುರಿಗಿನ ಗೋಡೆಯ ಮೇಲೆ ಕಾಮನ್ ಮ್ಯಾನ್ ಕೈಯಲ್ಲಿ ಸಾವಿರ ವ್ಯಂಗ್ಯಚಿತ್ರಗಳು ಎಂಬ ಪುಸ್ತಕ ಕೈಯಲ್ಲಿ ಹಿಡಿದುಕೊಂಡು 60 ವರ್ಷಗಳವರೆಗೆ ಪ್ರತಿದಿನ ಮುಂಜಾನೆ ನಮ್ಮನ್ನು ನಗಿಸಿದ್ದಕ್ಕೆ ಧನ್ಯವಾದಗಳನ್ನು ಹೇಳುತ್ತ ಅವರಿಗೆ ವಿದಾಯ ಹೇಳುತ್ತಿರುವ ವ್ಯಂಗ್ಯಚಿತ್ರವಿದೆ. ಮೆಟ್ಟಿಲುಗಳನ್ನು ಹತ್ತಿ ಬರುತ್ತಿದ್ದಾಗ ಅವರ ಕೊನೆಯ ವ್ಯಂಗ್ಯಚಿತ್ರವಾದ ಕಾಮನ್ ಮ್ಯಾನ್ ಆನ್ ಮಾರ್ಸ್ (ಇಸ್ರೋದ ಪರವಾಗಿ ಅವರ ಮಗ ಶ್ರೀನಿವಾಸ ಅವರ ವಿನಂತಿ ಮೇರೆಗೆ ಬರೆದ ಚಿತ್ರ) ಕಾಣಸಿಗುತ್ತದೆ. ಅದರ ಪಕ್ಕಕ್ಕೆ ತಮ್ಮ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಲು 'ಕಾಮನ್ ವೂಮನ್' ಮುಖಾಂತರ ತಮ್ಮ ಮೊಮ್ಮಗಳಾದ ರಿಮಾನಿಕಾ ಇದ್ದಾಳೆ ಎಂಬ ಬರಹವಿದ್ದ ಚಿತ್ರವಿದೆ.

ಮೊದಲಿನ ಮಹಡಿಯಲ್ಲಿ ವ್ಯಂಗ್ಯಚಿತ್ರಗಳ ಸಂಗ್ರವಿದ್ದು ಅವರ ಕುಟುಂಬದ ಸದಸ್ಯರ ಭಾವಚಿತ್ರಗಳು, ಗಾಂಧೀಜಿ, ರಾಜಾಜಿ, ಝುಕೀರ್ ಹುಸೇನ್, ಬಿಲ್ ಕ್ಲಿಂಟನ್ ಮುಂತಾದ ರಾಜಕೀಯ ವ್ಯಂಗ್ಯಚಿತ್ರಗಳು, ರಜನೀಕಾಂತ, ರಾಜೇಶ ಖನ್ನಾ, ಜಾನಿವಾಕರ್, ಅಮಿತಾಬ ಬಚ್ಚನ್ ಮೊದಲಾದ ನಟರ ವ್ಯಂಗ್ಯಚಿತ್ರಗಳು ಕಂಡು ಬರುತ್ತವೆ.

ಗಣೇಶನ ಮೇಲೆ ಪ್ರೀತಿ

ಆರ್.ಕೆ.ಲಕ್ಷ್ಮಣರ ಮತ್ತೊಂದು ಆಸಕ್ತಿಯ ವಿಷಯವೆಂದರೆ ಗಣೇಶ. ನಮ್ಮ ಪರಂಪರೆಯಲ್ಲಿ, ವಿಘ್ನವಿನಾಶಕ ಎಂದೇ ಹೆಸರಾಗಿರುವ ಗಣೇಶನು ಬಹಳಷ್ಟು ಬಾರಿ ಇವರ ಕುಂಚದಿಂದ ರೂಪಿತನಾಗಿದ್ದಾನೆ. ಇವರು ಗಣೇಶನ ವಿವಿಧ ವರ್ಣಗಳ, ಮನಸ್ಥಿತಿಯ, ರೂಪಗಳ ಚಿತ್ರಗಳನ್ನು ಚಿತ್ರಿಸಿದ್ದಾರೆ. ಬಿಡುವಿನ ಸಮಯ ಸಿಕ್ಕಾಗ ಗಣೇಶನ ರೇಖಾಚಿತ್ರ ಬಿಡಿಸುವದು, ತಾಮ್ರದ ಹಾಳೆಯ ಮೇಲೆ ಗಣೇಶನ ಚಿತ್ರವನ್ನು ಕೆತ್ತುವದು, ಅವನ ಮಾದರಿಗಳನ್ನು

ಕಾಗೆಗಳ ಗ್ಯಾಲರಿ

ಆರ್.ಕೆ.ಲಕ್ಷ್ಮಣರಿಗೆ ಕಾಗೆಗಳೆಂದರೆ ಆಕರ್ಷಣೆ. ಅವರ ಚಿತ್ರಗಳಲ್ಲಿ ಹಲವು ಬಾರಿ ಕಾಗೆಗಳು ಬರುತ್ತವೆ. ಒಂದು ರೀತಿಯಲ್ಲಿ, ಕಾಮನ್ ಮ್ಯಾನ್ ರೀತಿಯೇ, ಕಾಗೆಯೂ ಸಹ ಅವರ ನೆಚ್ಚಿನ ಜೀವಿ ಎನ್ನಬಹುದು! ಈ ಸಂಗ್ರಹಾಲಯದಲ್ಲಿ ಕಾಗೆಗಳನ್ನು ದೊಡ್ಡ ಕಿಟಕಿಯ ಸರಳುಗಳ ಮೇಲೆ ಕೂರಿಸಿದಂತಹ ಕಲಾಕೃತಿಯೂ ಇದೆ. ಅವರ ಅಭಿಪ್ರಾಯದಲ್ಲಿ ಅವು ಚಾಣಾಕ್ಷ್ಯ ಮತ್ತು ಕಿಡಿಗೇಡಿಗಳು. ಕಾಗೆಗಳು ಪ್ರತಿ ಮುಂಜಾನೆ ಅವರು ಇಟ್ಟ ಆಹಾರದ ತುಣುಕುಗಳನ್ನು ತಿನ್ನಲು ಬಂದಾಗ,ಇವರು ಅವುಗಳ ರೇಖಾಚಿತ್ರ ಬರೆಯುತ್ತಿದ್ದರು. ಅವುಗಳಲ್ಲಿ ಒಂದೆರಡು ಪ್ರತಿನಿತ್ಯ ಬರುತ್ತಿದ್ದವಂತೆ ಮತ್ತು ಅವುಗಳಿಗೆ ಇವರು ಹೆಸರನ್ನು ಇಟ್ಟಿದ್ದರಂತೆ. ಅವರೇ ಹೇಳಿದಂತೆ ಅವರು ಮೂರು ವರ್ಷದವರಿದ್ದಾಗಿಂದಲೇ ಕಾಗೆಗಳ ರೇಖಾಚಿತ್ರವನ್ನು ಬಿಡಿಸುತ್ತಿದ್ದರಂತೆ. ಅವರ ತಾಯಿಯು ಅದನ್ನು ನೋಡಿ ಇವರಿಗೆ ಅದು 'ಶನಿದೇವರ ವಾಹನ'ವೆಂದು ಹೇಳಿ ಪ್ರೋತ್ಸಾಹಿಸುತ್ತಿದ್ದರಂತೆ. ಅವರ ಒಬ್ಬ ಡಚ್ ಸ್ನೇಹಿತ, ತನಗಾಗಿ ಕಾಗೆಗಳ ಚಿತ್ರಗಳನ್ನು ಇವರಿಗೆ ಬಿಡಿಸಲು ಕೇಳಿಕೊಳ್ಳುತ್ತಿದ್ದನಂತೆ.

ತಯಾರಿಸುವದು, ಕಟ್ಟಿಗೆಯ ಮೇಲೆ ಕಲಾತ್ಮಕವಾಗಿ ಮೂಡಿಸುವದು ಮೊದಲಾದ ಕೆಲಸಗಳನ್ನು ಆಸಕ್ತಿಯಿಂದ ಮಾಡುತ್ತಿದ್ದರು. ಈ ವಿಭಾಗದಲ್ಲಿ ವಿವಿಧ ಗಣೇಶನ ರೂಪಗಳನ್ನು ಕಾಣಬಹುದು. ಅವುಗಳಲ್ಲಿ ಕಾಮನ್ ಮ್ಯಾನ್ ತನ್ನ ತಲೆಯ ಮೇಲೆ ಇಟ್ಟುಕೊಂಡ ಗಣಪತಿಯ ಚಿತ್ರ ನಮ್ಮನ್ನು ಆಕರ್ಷಿಸುತ್ತದೆ.

ವಾಲ್ ಆಫ್ ಫೇಮ್ ವಿಭಾಗದಲ್ಲಿ ಭಾರತದ ಮತ್ತು ಅಂತರಾಷ್ಟ್ರೀಯ ಪ್ರಸಿದ್ಧ ವ್ಯಂಗ್ಯಚಿತ್ರಕಾರರ ಭಾವಚಿತ್ರಗಳಿವೆ. ಪೊಲಿಟಿಕಲ್ ಜರ್ನಿ ವಿಭಾಗದಲ್ಲಿ ಅವರು ರಾಜಕೀಯ ವ್ಯಂಗ್ಯಚಿತ್ರಕಾರ ಆಗುವ ಬಯಕೆಯ ವ್ಯಂಗ್ಯಚಿತ್ರಗಳು, ನಾನಾ ರಾಜಕೀಯ ಸಂಬಂಧಿತ (ಭೂ ಸುಧಾರಣೆ, ರಾಜಕೀಯ ಬದಲಾವಣೆಗಳು, ಜನರ ನಿರೀಕ್ಷೆಗಳು, ತುರ್ತುಪರಿಸ್ಥಿತಿ ಇತ್ಯಾದಿ) ವ್ಯಂಗ್ಯಚಿತ್ರಗಳು ಕಾಣಸಿಗುತ್ತವೆ.

ಸಂಗ್ರಹಾಲಯದ ಎದುರಿನಲ್ಲಿ ಎಲ್ಲರಿಗೂ ಮೊದಲಿಗೆ ಕಾಣುವಂತೆ ಕಾಮನ್ ಮ್ಯಾನ್‌ನ ಪ್ರತಿಕೃತಿಯು ನಿಂತಿದೆ; ಕಾಮನ್ ಮ್ಯಾನ್ ಅಥವಾ ಸಾಮಾನ್ಯ ಮನುಷ್ಯನೊಬ್ಬನು,

ದೇಶದ ರಾಜಕೀಯ ನಾಯಕರುಗಳನ್ನು ನಿರ್ಭೀತಿಯಿಂದ ಪ್ರಶ್ನಿಸುವ, ವ್ಯಂಗ್ಯಕ್ಕೆ ಒಳಪಡಿಸುವ ಸನ್ನಿವೇಶಗಳನ್ನು ತಮ್ಮ ವ್ಯಂಗ್ಯಚಿತ್ರಗಳಲ್ಲಿ ಮೂಡಿಸಿರುವ ಆರ್.ಕೆ.ಲಕ್ಷ್ಮಣ್ ಅವರು, ಇಪ್ಪತ್ತನೆಯ ಶತಮಾನದ ಶ್ರೇಷ್ಠ ಕಲಾವಿದರಲ್ಲಿ ಒಬ್ಬರು; ಅಂತೆಯೇ, ಅವರ ಬದುಕನ್ನು ಬಿಂಬಿಸುವ ಈ ವಸ್ತುಸಂಗ್ರಹಾಲಯವೂ ಅಷ್ಟೇ ಪ್ರಮುಖ.

» ನಾರಾಯಣ ಯಾಜಿ

ಮಕ್ಕಳ ಲೇಖನಿಯಲ್ಲಿ ಅರಳಿದ ಮಹಾನ್ ಸಾಹಿತಿ!

ಕನ್ನಡದ ಪ್ರಮುಖ ಕಾದಂಬರಿಕಾರ, ಪ್ರಯೋಗಶೀಲ ಕಲಾವಿದ, ಜ್ಞಾನಪೀಠ ವಿಜೇತ ಸಾಹಿತಿ ಶಿವರಾಮ ಕಾರಂತರ ಮೂವರು ಮಕ್ಕಳು, ತಮ್ಮ ತಂದೆಯನ್ನು ನೆನಪಿಸಿಕೊಂಡು ಬರೆದ ಕೃತಿಯು ಈಗ ಕನ್ನಡಕ್ಕೆ ಅನುವಾದಗೊಂಡಿದೆ. ಕಾರಂತರ ಬದುಕಿನ ಅಪೂರ್ವ ಒಳನೋಟಗಳನ್ನು ಅವರು ಮಕ್ಕಳು ಕಟ್ಟಿಕೊಟ್ಟಿರುವ ಪರಿಯೇ ಅನನ್ಯ, ವಿಶಿಷ್ಟ.

ವಿಶ್ವೇಶ್ವರ ಭಟ್ಟರು ಯುಗಾದಿಯ ಹೊಸವರ್ಷದ ಕೊಡುಗೆಯಾಗಿ ಕೋಟ ಶಿವರಾಮ ಕಾರಂತರ ಮಕ್ಕಳಾದ ಉಲ್ಲಾಸ ಕಾರಂತ, ಮಾಲವಿಕಾ ಕಪೂರ ಮತ್ತು ಕ್ಷಮಾ ರಾವ್ ಅವರು ಜತೆಯಾಗಿ ರಚಿಸಿದ ''ಗ್ರೋಯಿಂಗ್ ಅಪ್ ಕಾರಂತ್'' ಕೃತಿಯನ್ನು ಕನ್ನಡಕ್ಕೆ ''ಕಾರಂತರ ಸುಳಿಯಲ್ಲಿ'' ಎನ್ನುವ ಹೆಸರಲ್ಲಿ ಅನುವಾದಿಸಿದ್ದಾರೆ. ಜಾಗತಿಕ ಸಾಂಸ್ಕೃತಿಕರಂಗದಲ್ಲಿ ಲಿಯೋನಾರ್ಡ್ ಡ ವಿನ್ಸಿ ಅಥವಾ ರವೀಂದ್ರನಾಥ ಟ್ಯಾಗೋರರಂತವರ ಜೊತೆ ಹೋಲಿಸಬಹುದಾದ ಮಹಾನ್ ವ್ಯಕ್ತಿತ್ವ ಕಾರಂತರದ್ದು. ಮೂಲ ಇಂಗ್ಲಿಷ್ ಕೃತಿಯ ಕುರಿತು ಡಿಸೆಂಬರ್ ತಿಂಗಳಲ್ಲಿ ನಡೆದ ಬೆಂಗಳೂರು ಲಿಟ್-ಫೆಸ್ಟಿನಲ್ಲಿ ಕಾರಂತ ಮೂವರೂ ಮಕ್ಕಳ ಜೊತೆ ವಿಮರ್ಶಕ ಎಸ್. ಆರ್. ವಿಜಯಶಂಕರ ಅವರು ಸಂವಾದ ನಡೆಸಿದ್ದರು. ಅದೇ ವೇದಿಕೆಯಲ್ಲಿ ವಿಶ್ವೇಶ್ವರ ಭಟ್ಟರೂ ಇದ್ದರು. ಉಲ್ಲಾಸ, ಮಾಲವಿಕಾ. ಕ್ಷಮಾರಾವ್ ಅವರು ಕಾರಂತರ ಟವರಿಂಗ್ ಪರ್ಸನಾಲಿಟಿ ಜೊತೆಗೆ ತಾವು ಅದರಿಂದ ಹೇಗೆ ಪ್ರಭಾವಿತರಾಗಿದ್ದೇವೆ ಎಂದು ವಿವರಿಸುವ ಅನೇಕ ಸಂಧರ್ಭಗಳನ್ನು ವಿವರಿಸುವಾಗ ರೋಮಾಂಚಿತನಾಗಿದ್ದೆ. ಕೊನೆಯಲ್ಲಿ ಭಟ್ಟರು ಸಂವಾದದಲ್ಲಿ ಭಾಗವಹಿಸುತ್ತಾ, ಆ ಕೃತಿ ತನ್ನನ್ನು ಹೇಗೆ ಸೆಳೆಯಿತು ಎನ್ನುವುದನ್ನು ವಿವರವಾಗಿ ಹೇಳಿದ್ದರು. ಭಟ್ಟರ ಲೇಖನ ಮತ್ತು ಮಾತಿನಲ್ಲಿ ಸಾಹಿತ್ಯದ ಬನಿ ಮತ್ತು ಎದುಗಿದ್ದವರನ್ನು ಸೆಳೆಯುವ ಮಾಂತ್ರಿಕತೆ ಎರಡೂ ಇದೆ.

''ಗ್ರೋವಿಂಗ್ ಅಪ್ ಕಾರಂತ'' ಅವರನ್ನು ಆವರಿಸಿಕೊಂಡ ಬಗೆಯನ್ನು ವಿವರಿಸುತ್ತಾ ಸಭೆಯ ಗಮನವನ್ನು ಈ ಕೃತಿಯತ್ತ ಸೆಳೆದಿದ್ದರು. ಜೊತೆಗೆ ಈ ಕೃತಿಯನ್ನು ತಾನು ಕನ್ನಡದಲ್ಲಿ ಅನುವಾದಿಸುತ್ತಿದ್ದೇನೆ, ಸಧ್ಯದಲ್ಲಿಯೇ ''ಕಾರಂತರ ಸುಳಿಯಲ್ಲಿ'' ಎನ್ನುವ ತಲೆಬರಹದೊಂದಿಗೆ ಪ್ರಕಟವಾಗುವುದಾಗಿ ತಿಳಿಸಿದ್ದರು. ಲಿಟ್-ಫೆಸ್ಟ್‌ನ ಸಂವಾದದ ಹೆಸರೂ ಸಹ ''ಕಾರಂತರ ಸುಳಿಯಲ್ಲಿ'' ಎಂದಿತ್ತು. ಆ ದಿನದ ಸಂವಾದದ ಸುಳಿಯಲ್ಲಿ ಸಿಕ್ಕ ನಾನು ಅಂದೇ ಈ ಕೃತಿಯನ್ನು ಓದಬೇಕೆಂದುಕೊಂಡಿದ್ದೆ.

ಮೂರು ಮಕ್ಕಳು ಸೇರಿ ಬರೆದ ಕೃತಿ

ಯಾವ ಮಕ್ಕಳಿಗಾದರೂ ತಮ್ಮ ತಂದೆತಾಯಿ ಎಂದರೆ ಹೆಮ್ಮೆಯೇ. ಅದರಲ್ಲಿಯೂ ಕಾರಂತರಂತಹ ದೊಡ್ಡ ವ್ಯಕ್ತಿತ್ವದವರ ಮಕ್ಕಳಿಗೂ ಅವರ ತಂದೆ ತಾಯಿಯರಿಗೂ ಆಂತರಿಕವಾದ ಸಂಬಂಧ ಹೇಗಿರಬಹುದು ಎನ್ನುವ ಕುತೂಹಲ ಇರುವುದು ಸಹಜ. ಅದರಲ್ಲಿಯೂ ಡಾ. ಕೆ. ಶಿವರಾಮ ಕಾರಂತರೆಂದರೆ ಕನ್ನಡಿಗರಿಗೆ ಕೇವಲ ಒಬ್ಬ ಸಾಹಿತಿಯಲ್ಲ; ಅವರೊಬ್ಬ ಸಾಂಸ್ಕೃತಿಕ ಮೇರುಪರ್ವತ. ಅವರೇ ತನ್ನ ಕುರಿತು ಬರೆದ ಆತ್ಮಕತೆಗಳು ''ಹುಚ್ಚುಮನಸ್ಸಿನ ಹತ್ತು ಮುಖಗಳು''



ಕಾರಂತರ ಸುಳಿಯಲ್ಲಿ
ಲೇ: ಉಲ್ಲಾಸ ಕಾರಂತ, ಮಾಲವಿಕಾ ಕಪೂರ, ಕ್ಷಮಾ ರಾವ್
ಕನ್ನಡಕ್ಕೆ : ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ ಬೆಂಗಳೂರು
ಬೆಲೆ ರು.395/

(1948) ಸ್ಮೃತಿ ಪಟಲದಿಂದ (1977-79) ಈಗಾಗಲೇ ಸಾರಸ್ವತಲೋಕಕ್ಕೆ ಪರಿಚಿತ. ಆದರೆ ಈ ಕಲ್ಪವೃಕ್ಷದ ಅಡಿಯಲ್ಲಿದ್ದ ಕುಟುಂಬದವರ ದೃಷ್ಟಿಕೋನ ಹೇಗಿತ್ತು ಎನ್ನುವ ಕುತೂಹಲಕ್ಕೆ ಉತ್ತರವೇ 'ಕಾರಂತರ ಸುಳಿಯಲ್ಲಿ'. ಕಾರಂತರ ಮೂವರು ಮಕ್ಕಳು ತಮ್ಮ ತಂದೆಯೊಂದಿಗಿನ ಒಡನಾಟವನ್ನು ಅತ್ಯಂತ ಪ್ರಾಮಾಣಿಕವಾಗಿ ಇಲ್ಲಿ ದಾಖಲಿಸಿದ್ದಾರೆ.

ಒಟ್ಟೂ ಹತ್ತು ಅಧ್ಯಾಯದಲ್ಲಿ ಹರಡಿಕೊಂಡಿರುವರ ಕಾರಂತರ ಸುಳಿಯಲ್ಲಿ ಮೊದಲ ಎರಡು ಮತ್ತು ಕೊನೆಯ ಅಧ್ಯಾಯವನ್ನು ಮೂವರೂ ಮಕ್ಕಳು ಒಟ್ಟಾಗಿಯೇ ಬರೆದಿದ್ದಾರೆ. ಮೂರು ಮತ್ತು ನಾಲ್ಕು ಕಾರಂತರ ಹಿರಿಯ ಮಗಳು ಮಾಲವಿಕಾ ಕಪೂರ, ಐದು, ಆರು, ಏಳನೇ ಅಧ್ಯಾಯವನ್ನು ಉಲ್ಲಾಸ ಕಾರಂತ ಮತ್ತು ಎಂಟು ಒಂಭತ್ತನೆಯ ಅಧ್ಯಾಯಗಳಲ್ಲಿ ಕ್ಷಮಾ ರಾವ್ ಕಾರಂತರ ಒಳ ವ್ಯಕ್ತಿತ್ವವನ್ನು ಕಾವ್ಯಾತ್ಮಕವಾಗಿ ತೆರೆದಿರಿಸಿದ್ದಾರೆ. ಮೂವರು ಮಕ್ಕಳು ಕಾರಂತರ ಕುರಿತು ಕೊಡುವ ಅಭಿಪ್ರಾಯ ''ತಾತ ಅದೃಷ್ಟವಂತ'' ಎನ್ನುವುದನ್ನು.

ಮಕ್ಕಳೆಲ್ಲ ತಮ್ಮ ಬಾಲ್ಯವನ್ನು ಕಳೆದಿದ್ದು ಪುತ್ತೂರಿನ ಬಾಲವನದಲ್ಲಿ. ಕಾರಂತರ ಅಸಾಂಪ್ರದಾಯಿಕ ವಿದ್ಯಾಭ್ಯಾಸ ಯೋಜನೆಯ ಪ್ರಯೋಗದ ಫಲಾನುಭವಿಗಳು ಅವರ ಮಕ್ಕಳು. ಹತ್ತು ವರ್ಷದ ತನಕ ಅವರ ಯಾವ ಮಕ್ಕಳೂ ಶಾಲೆಗೆ ಹೋಗಿ ಕಲಿಯಲಿಲ್ಲ. ಕಾರಂತರ ಬೆಳವಣಿಗೆಯಲ್ಲಿ ಅವರಿಗಿಂತ ಹಿರಿಯರ ಮಾರ್ಗದರ್ಶನ, ನಂತರ ಸಮಾಜದ ಉನ್ನತ ವ್ಯಕ್ತಿಗಳ, ಸಮಕಾಲೀನರ ನಿರಪೇಕ್ಷ, ನಿಸ್ವಾರ್ಥ ಬೆಂಬಲ ತಾತನಿಗಿದ್ದಿದ್ದನ್ನು ಸ್ಪಷ್ಟವಾಗಿ ಹೇಳುತ್ತಾರೆ.



ಮಾನವಜನ್ಮದ ಯಾರನ್ನೂ ಗುರುಗಳೆಂದು ಒಪ್ಪದ, ನರಸಿಂಹನನ್ನೇ ಗುರುವೆಂದು ಆರಾಧಿಸುವ ಅಪ್ಪಟ ಸಂಪ್ರದಾಯದ ಕೋಟ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಕಾರಂತರ ಏಳು ಸಹೋದರು ಇಬ್ಬರು ಸಹೋದರಿಯರನ್ನೂ ಸೇರಿಸಿ ಒಂಭತ್ತು ಮಕ್ಕಳಲ್ಲಿ ಆಸ್ತಿಕ, ವಾಸ್ತವಿಕ, ನಾಸ್ತಿಕ ಎಲ್ಲಾ ಬಗೆಯ ಪ್ರತಿಭಾವಂತರು ಇದ್ದಾರೆ. ಎಲ್ಲರಲ್ಲಿಯೂ ಇರುವ ಸಾಮಾನ್ಯ ಗುಣವೆಂದರೆ ಶಿಸ್ತು ಮತ್ತು ನೇರ ನುಡಿ. ಇವರ ಅಪ್ಪ ಅಮ್ಮ ಶೇಷ ಕಾರಂತ ಮತ್ತು ಮಹಾಲಕ್ಷ್ಮಿ ತಮ್ಮ ಮಕ್ಕಳಂತೆ ಬೆಳೆಸಿದ ಹೊಳ್ಳ ದಂಪತಿಯ ಮಗನಾದ ಡಾ. ಎಚ್. ವಿ. ಹಂದೆ ರಾಜಗೋಪಾಲಾಚಾರಿಯವರಿಗೆ ಅತ್ಯಂತ ಆತ್ಮೀಯನಾಗಿ ಮದ್ರಾಸಿನಲ್ಲಿ ಪ್ರಸಿದ್ಧ ವೈದ್ಯರಾಗಿ ಮಂತ್ರಿಯಾಗಿ ಪ್ರಸಿದ್ಧರಾದವರು. 2026 ರಲ್ಲಿ ಕೇಂದ್ರ ಸರಕಾರ ಅವರನ್ನು ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಕಾರಂತರ ಕುಟುಂಬದ ನೆರಳು ತಾಗಿದರೂ ಅದೇ ಗುಣ ಅವರಲ್ಲಿ ಬರುತ್ತದೆ ಎಂದು ತೋರುತ್ತದೆ.

ಮೊದಲ ಅಧ್ಯಾಯದಲ್ಲಿ ಕಾರಂತರನ್ನು ಮೂವರೂ ಮಕ್ಕಳು ನೋಡುವ ರೀತಿಗೂ ಅವರವರ ಅಧ್ಯಾಯದಲ್ಲಿ ಅವರು ನೋಡುವ ವಿಧಾನಕ್ಕೂ ವಿಭಿನ್ನತೆಯಿದೆ. ಮಾಲವಿಕಾ ಕಪೂರ ಅವರು ಹಿರಿಯ ಮಗಳಾಗಿ ತಂದೆಯೊಡನೆ ಇಟ್ಟುಕೊಂಡಷ್ಟು ನವಿರತೆಯ ಭಾವನೆ ಇನ್ನಿಬ್ಬರಲ್ಲಿ ಕಂಡುಬರುವುದಿಲ್ಲ. ಅವರಿಗೆ ಎಂಟು ವರ್ಷಗಳ ನಂತರ ಉಲ್ಲಾಸ ಜನಿಸಿರುವುದರಿಂದ ಅಲ್ಲಿಯ ತನಕ ಒಬ್ಬಳೇ ಮಗಳು ಎನ್ನುವ ಭಾವನೆ ಕಾರಂತರಲ್ಲಿ ಇತ್ತು. ಮುಕ್ತವಾಗಿ ಕಾರಂತರೊಡನೆ ಅವರು ಬೆರೆಯುತ್ತಿದ್ದರು. ಕಾರಂತರು ಇವರ ಲೋಕದಲ್ಲಿ ಓದುಗರಿಗೆ ಹತ್ತಿರದಲ್ಲೇ ಎಟಕುತ್ತಾರೆ. ಮಗಳ ಮೇಲೆ ನಂಬಿಕೆ ಆದರೆ ಆಕೆ ಹೆಣ್ಣಾದುದರಿಂದ ತೊಂದರೆಯಾಗಬಾರದು ಎನ್ನುವ ಕಳಕಳಿ ಕಾರಂತರಲ್ಲಿತ್ತು. ಅವರು ಕಾಲೇಜಿನಲ್ಲಿ ಅಗತ್ಯಕ್ಕನುಗುಣವಾಗಿ ಪ್ಯಾಂಟ್ ಹಾಕಿಕೊಳ್ಳುವುದಕ್ಕೆ ಕಾರಂತರಿಗೆ ಇಷ್ಟವಿರಲಿಲ್ಲ ಎನ್ನುವಲ್ಲಿ ಇದು ಗೋಚರವಾಗುತ್ತದೆ. ಮದುವೆಯ ವಿಷಯದಲ್ಲಿ ಅವರು ಡಾ. ರವಿ ಕಪೂರರನ್ನು ಪ್ರೀತಿಸಿದಾಗ ಮಗಳು ಯಾರನ್ನೂ ಬೇಕಾದರೂ ಪ್ರೀತಿಸಲಿ ಎನ್ನುವ ತಾಯಿಯ ಮನಸ್ಥಿತಿ ಮತ್ತು ''ನಿನಗೆ ಕರೆದುಕೊಂಡು ಬರಬೇಕೆನಿಸಿದರೆ ಕರೆದುಕೊಂಡು ಬಾ'' ಎನ್ನುವ ಕಾರಂತರ ಟೆಲಿಗ್ರಾಮ್ ಸಂದೇಶಕ್ಕೂ ಅಂತರವಿದೆ. ವರನ ಕಡೆಯವರು



ಐದು ಬಾದಾಮಿ ಸಾಕು ಎಂದುದಕ್ಕೆ (ಅದರರ್ಥ ಐದು ಬಾಸ್ಕೆಟ್) ಕೇವಲ ಐದು ಬಾದಾಮಿಯನ್ನು ಪಂಜಾಬಿಗೆ ರಜಿಸ್ಟರ್ಡ್ ಅಂಚೆಯಲ್ಲಿ ಕಳುಹಿಸಿದ, ಉಲ್ಲಾಸ ಕಾರಂತರ ಲಗ್ನದ ಆಮಂತ್ರಣವನ್ನು ಕೊಟ್ಟು ಮದುವೆಗೆ ಬರಬೇಡಿ ಎನ್ನುವ (ಇದಕ್ಕೆ ಕಾರಣ ಅವರಿಗೆಲ್ಲಾ ಕೋಟದಲ್ಲಿ ಪ್ರತ್ಯೇಕ ಔತಣದ ವ್ಯವಸ್ಥೆ ಮಾಡಿದ್ದರು) ಕಾರಂತರ ಮುಗ್ಧತೆಯ ಮುಖವೂ ಇಲ್ಲಿದೆ.

ಉಲ್ಲಾಸ ಕಾರಂತರ ವಿಷಯದಲ್ಲಿ ಹೀಗಲ್ಲ. ಅವರಿಗೆ ತಂದೆಯಲ್ಲಿ ಸಲಿಗೆ ಇರಲಿಲ್ಲ. ಎಲ್ಲಾ ಅಪ್ಪಂದಿರಂತೆ ಗಂಡು ಮಕ್ಕಳಿಗೆ ಅಪ್ಪನಲ್ಲಿ ಹೆಣ್ಣುಮಕ್ಕಳಷ್ಟು ಸಲುಗೆ ಇರುವುದಿಲ್ಲ ಎನ್ನುವ ಸಾಮಾನ್ಯ ನಿಯಮ ಲಾಗೂ ಆಗಿದೆ ಅನಿಸುತ್ತದೆ. ಬಹುಶಃ ಹಿರಿಯ ಮಗ ಹರ್ಷನ ಕೆಲವೊಂದಿಷ್ಟು ಹದ ತಪ್ಪಿದ ನಡತೆಯಿಂದಾಗಿ ಉಲ್ಲಾಸ ಕಾರಂತರನ್ನು ಹದ್ದುಬಸ್ತಿನಲ್ಲಿಡಬೇಕೆಂದು ಬಯಸಿತ್ತಿದ್ದರೋ ಏನೋ, ಆದರೆ ಅವರ ಸಿದ್ಧಾಂತ ಅಡ್ಡಬಂದಿರಬಹುದೆನ್ನುವ ತಾಕಲಾಟ ಉಲ್ಲಾಸ ಕಾರಂತರ ಬರಹದಲ್ಲಿ ವ್ಯಕ್ತವಾಗಿವೆ. ಆದರೂ ಉಲ್ಲಾಸ ಕಾರಂತರಿಗೆ ಹುಲಿಯ ಅಧ್ಯಯನಕ್ಕೆ ಪ್ರೇರಣೆಯೇ ಬಾಲ್ಯದಲ್ಲಿ ಕಾರಂತರು ರಚಿಸಿಕೊಟ್ಟ ಚಿತ್ರ ಎಂದು ಅನಿಸುತ್ತದೆ.

ಪ್ರೀತಿಯ ಕಿರಿಯ ಮಗಳು

ಕ್ಷಮಾ ಕಿರಿಯವಳಾದ ಕಾರಣ ಆಕೆಯಲ್ಲಿ ತುಸು ಹೆಚ್ಚೇ ಪ್ರೀತಿ. ಅವರು ಮತ್ತು ಉಲ್ಲಾಸ ಸೇರಿ ಕಾರಂತರು ಚಿತ್ರೀಕರಣ ಮಾಡಿದ ನೆಗೆಟಿವ್ ರೋಲನ್ನು ಇವರಿಬ್ಬರು ಹುಡುಗಾಟದಲ್ಲಿ ಕಾರಂತರ ಟೇಬಲ್ಲಿಗೆ ಸುತ್ತಿಟ್ಟಿದ್ದರಂತೆ. ಕೆಂಡಾಮಂಡಲರಾದ ಕಾರಂತರು ಹೊಡೆಯಲು ನೋಡಿದಾಗ ಲೀಲಾ ಕಾರಂತರು ಊಟಕ್ಕೆ ಕರೆದರು. ಸರಿ ಊಟಮಾಡಿ ಬನ್ನಿ ಎಂದು ಕಳಿಸಿದರು. ಕಾರಂತರು ಹೇಳಿದರೆಂದರೆ ಮುಗಿಯಿತು ಊಟಮಾಡಿದ ಮೇಲೆ ಹೊಡೆತ ತಿನ್ನಲು ಸಿದ್ಧರಾಗಿ ಮೇಲೆ ಬಂದರು. ಆಗ ಅವರು ಕಾರಂತರೇ ಕೊಡಿಸಿದ ಬೆಂಡೋಲೆಯೊಂದನ್ನು ಧರಿಸಿದ್ದರು. ಅದನ್ನು ನೋಡಿ ಬೇಡ ಬೇಡ ಹೊಸ ಬೇಂಡೋಲೆ ಹಾಕ್ಕೊಂಡು ಅತ್ತರೆ ಚಂದಕಾಣೋಲ್ಲ, ಹೋಗು ಎಂದು ಕಳಿಸಿದ ಸಂಗತಿ ಕ್ಷಮಾ ಮತ್ತು ಅವರ ತಾತನ ಸಂಬಂಧದ ಕುರಿತು ವಿವರಿಸುತ್ತದೆ. ಕಾರಂತ ದಂಪತಿಗಳು ತಮ್ಮ ಮಕ್ಕಳನ್ನು ಹೇಗೆ ಬೆಳೆಸಿದರು ಎನ್ನುವುದಕ್ಕೆ ''ನಿಮ್ಮ ನಿಮ್ಮ ಕನಸುಗಳನ್ನು ಪ್ರಾಮಾಣಿಕವಾಗಿ ಬೆನ್ನತ್ತಿ ಹೋಗಿ ಮಾಡಿ. . ಫಲಿತಾಂಶ ಏನಾಗುತ್ತದೆಎನ್ನುವುದಕ್ಕೆ ತಲೆಕೆಡಿಸಿ ಕೊಳ್ಳಬೇಡಿ'' (ಪು.235) ಪ್ರೋತ್ಸಾಹದ ನುಡಿಗಳು ಸಾಕ್ಷಿ.

ಯಕ್ಷಗಾನಕ್ಕೂ ಕಾರಂತರಿಗೂ ಅವಿನಾಭಾವ ಸಂಬಂಧ. ಯಕ್ಷಗಾನದಲ್ಲಿನ ಅನೇಕ ಅಪಸವ್ಯಗಳನ್ನು ಮುಲಾಜಿಲ್ಲದೇ ಟೀಕಿಸಿ ಅದರ ಮೂಲ ನಿರ್ವಚನವನ್ನು ಪುನಃಸ್ಥಾಪಿಸಿದವರು ಕಾರಂತರು. ಅವರ ''ಯಕ್ಷಗಾನ ಬಯಲಾಟ'' ಇಂದಿಗೂ ಈ ಪ್ರದರ್ಶನ ಕಲೆಗೆ ಭಗವದ್ಗೀತೆ. ಯಕ್ಷಗಾನದಲ್ಲಿ ಮಾಡಿದ ಪ್ರಯೋಗ, ಮುಖ್ಯವಾಗಿ ಚಕ್ರವ್ಯೂಹದಲ್ಲಿ ಮರಣಹೊಂದಿದ ಬಾಲಕನನ್ನು ಅರೆತೆರೆದ ತೆರೆಯಲ್ಲಿ ನಾಚಿಕೊಂಡು ಕರೆದುಕೊಂಡು ಹೋಗುವ ಸೈನಿಕರ ಚಲನೆ ಖ್ಯಾತ ಒಡಿಸ್ಸಿ ನೃತ್ಯಗಾತಿಯಾದ ಕ್ಷಮಾರಾವ್ ಪರಿಣಾಮಕಾರಿಯಾಗಿ ವರ್ಣಿಸಿದ್ದಾರೆ.

→ 4

ಪುಸ್ತಕ ವಿಮಾನ

ಸ್ಫೂರ್ತಿ ತುಂಬುವ ಶಿಕ್ಷಕರಿವರು!

» ಶಶಿಧರ ಹಾಲಾಡಿ

ಪಶ್ಚಿಮ ಘಟ್ಟದ ತಪ್ಪಲಿನಲ್ಲಿರುವ ಕೊಲ್ಲೂರು ಕ್ಷೇತ್ರದಿಂದ ಬಹಳ ದೂರವೇನೂ ಅಲ್ಲದ ಒಂದು ಕಾಡಿನ ಕಿಬ್ಬದಿಯಲ್ಲಿ 'ನೆಂಪು' ಎಂಬ ಪುಟಾಣಿ ಹಳ್ಳಿಯಿದೆ. ಹೆಸರೇ ವಿಶೇಷ : ನೆಂಪು! ಆ ಪುಟ್ಟ ಊರಿನಲ್ಲಿ ಹಲವು ಪ್ರತಿಭಾವಂತರು ರೂಪುಗೊಂಡಿರುವುದು ಬಹಳ ವಿಶೇಷ ಎನಿಸುತ್ತದೆ. ಸಾಹಿತ್ಯ, ಬ್ಯಾಂಕಿಂಗ್, ಶಿಕ್ಷಣ ಮತ್ತು ಇತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಹಲವು ಮಹನೀಯರು ಆ ಊರಿನ ಮೂಲದವರು. ಅದೇ ಊರಿನ ನ.ಭ.ನೆಂಪು (1947– 2025) ಅವರು ಮಾಡಿದ ಸಾಧನೆ ಅಪಾರ.

ಸಾಹಿತ್ಯ ಪರಿಚಾರಿಕೆಯೂ ಸೇರಿದಂತೆ, ಹಲವು ಕ್ಷೇತ್ರದಲ್ಲಿ ಸಾಧನೆ ಮಾಡಿರುವ, ಸಮಾಜ ಸೇವೆ ಮಾಡಿರುವ, ಶಿಕ್ಷಕ ವೃತ್ತಿಯ ನ.ಭ.ನೆಂಪು ಅವರು 11 ಪುಸ್ತಕಗಳನ್ನೂ ರಚಿಸಿದ್ದಾರೆ. ಶಿಕ್ಷಕರಾಗಿ ಅವರು ಮಾಡಿದ ಸಾಧನೆ ಬಹುದೊಡ್ಡದು. ಹಲವು ವಿದ್ಯಾರ್ಥಿಗಳಿಗೆ ಸಮರ್ಥ ಮಾರ್ಗದರ್ಶನ ನೀಡಿದ ಹಿರಿಮೆ ಅವರದು. ಅವರ ಈ ಸೇವೆಯನ್ನು ಗುರುತಿಸಲಾಗಿದ್ದು, ರಾಷ್ಟ್ರ ಮಟ್ಟದಲ್ಲಿ(2002), ರಾಜ್ಯ ಮಟ್ಟದಲ್ಲಿ(1999) ಜಿಲ್ಲಾಮಟ್ಟದಲ್ಲಿ (1998) ಅವರು ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಜತೆಗೆ ತಾವು ರಚಿಸಿದ ಮಕ್ಕಳ ಪುಸ್ತಕಗಳಿಗೆ ಮತ್ತು ಇತರ ಕೃತಿಗಳಿಗೆ ಹಲವು ಪ್ರಶಸ್ತಿಗಳನ್ನೂ ಪಡೆದುಕೊಂಡಿದ್ದಾರೆ. ತಮ್ಮ ಜೀವನದುದ್ದಕ್ಕೂ ಗ್ರಾಮೀಣ ಪ್ರದೇಶದ ಶಾಲೆಗಳಲ್ಲೇ ಸೇವೆ ಸಲ್ಲಿಸಿ, 2005ರಂದು ನಿವೃತ್ತರಾದ ನಂತರ, ಕರಾವಳಿ ಜಿಲ್ಲೆಗಳ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತಮ್ಮನ್ನು ತೊಡಗಿಸಿಕೊಂಡು, ಆ ಕ್ಷೇತ್ರದ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ. ಕಳೆದ ವರ್ಷ ನ.ಭ.ನೆಂಪು ಅವರು ನಿಧನರಾಗಿದ್ದು, ಅದಾಗಿ ಒಂದು ವರ್ಷ ತುಂಬುವ ಸಮಯಕ್ಕೆ ಅವರ ಕುರಿತು 'ನಭ ಜೀವನ ಯಾನ' ಎಂಬ ಪುಸ್ತಕ ಪ್ರಕಟಗೊಂಡಿದೆ; ಅದರಲ್ಲಿ ನ.ಭ. ಅವರ ಪರಿಚಿತರು, ಬಂಧುಗಳು, ಹಿರಿಯರು, ಒಡನಾಡಿಗಳು ಬರೆದ ಹಲವು ಬರಹಗಳಿದ್ದು, ಅವುಗಳ ಜತೆ, ನಭ ಅವರು ಬರೆದಿದ್ದ ತಮ್ಮ ಜೀವನದ ಅನುಭವಗಳೂ ಅಡಕಗೊಂಡಿದ್ದು, ಒಂದ ಸ್ಮೃತಿಚಿತ್ರ ಹೇಗೆ ರೂಪುಗೊಳ್ಳಬಹುದು ಎಂಬುದಕ್ಕೆ ಮಾದರಿ ಎನಿಸುವಂತೆ ಈ ಗ್ರಂಥ ರೂಪುಗೊಂಡಿದೆ.

ಸುಮಾರು 350 ಪುಟಗಳ 'ನ.ಭ.ಜೀವನಯಾನ' ಗ್ರಂಥದ ಸಂಪಾದಕತ್ವವನ್ನು ವಹಿಸಿಕೊಂಡು, ಈ ಮೌಲಿಕ ಗ್ರಂಥ ರೂಪುಗೊಳ್ಳುವಲ್ಲಿ ಅಮೂಲ್ಯ ಕೊಡುಗೆ ನೀಡಿದ ಬೆಳಗೋಡು ರಮೇಶ ಭಟ್ ಅವರ 'ಸಂಪಾದಕನ ಬಿನ್ನಹ'ದ ಈ ಸಾಲುಗಳು ಮನನೀಯ : ''... ಹಲವು ಹಿರಿಯ ಸ್ನೇಹಿತರು ಪುನರಪಿ ನೆನಪಿಸಿಕೊಂಡಂತೆ, ನ.ಭ.ನೆಂಪುರವರ ಜೀವನ ಚರಿತ್ರೆಯನ್ನು ಒಂದು 'ಮೋಟಿವೇಶನಲ್ ಸ್ಟೋರಿ'ಯನ್ನಾಗಿಯೂ (ಪ್ರೇರಣಾತ್ಮಕ ಕಥೆ)



ನಭ ಜೀವನಯಾನ
ಸಂ: ಬೆಳಗೋಡು ರಮೇಶ ಭಟ್
ಪ್ರ: ನೆಂಪು ಪ್ರಕಾಶನ
9480402738
ಬೆಲೆ ರು.250/-

ತೆಗೆದುಕೊಳ್ಳಬಹುದು. ಬದುಕಿನಲ್ಲಿ ತರಲೆ ತಾಪತ್ರಯಗಳು ಎದುರಾದಾಗ, ಅವುಗಳನ್ನು ಎದುರಿಸುವ ಬದಲು ಪಲಾಯನ ಮಾಡುವವರು, ತಮ್ಮ ಓದಿಗೆ ತಕ್ಕ ಕೆಲಸ ಸಿಗಲಿಲ್ಲವೆಂದು ಪಳಹಳಿಸುವವರು, ನಿಂತು, ಗಮನಿಸಿ, ತಮ್ಮ ದಾರಿಯನ್ನು ಬದಲಿಸಿಕೊಳ್ಳಬೇಕು ಎನ್ನಿಸುವಂತಹ ಬದುಕು ನ.ಭ.ನೆಂಪುರವರದ್ದು. ಬಾಲ್ಯದಲ್ಲೇ ಋಗ್ವೇದ ಸಂಹಿತೆಯನ್ನು ಓದಿ ಕುಲವೃತ್ತಿ ಪೌರೋಹಿತ್ಯಕ್ಕೆ ಸಿದ್ಧರಾದವರು. ಎಳೆಯ ಹರೆಯದಲ್ಲೇ ತಂದೆಯನ್ನು ಕಳೆದುಕೊಂಡು ಅನಾಥರಾದವರನ್ನು ಕೈಹಿಡಿದು ಎತ್ತಿದ್ದು ಅಕ್ಷರ ಪ್ರೀತಿ. ಎಸ್‌ಎಸ್‌ಎಲ್‌ಸಿಯ ಜೊತೆಗೆ ಹಿಂದಿ ರತ್ನ ಪಾಸಾಗಿ 19ನೆಯ ವಯಸ್ಸಿನಲ್ಲಿ (1967) ಪುತ್ತೂರು ತಾಲೂಕಿನ ಕುಗ್ರಾಮ ನಿಡಳ್ಳಿ ಮುಂಡೂರು-1ರ ಪ್ರೈಮರಿ ಶಾಲೆಯ ಹಿಂದಿ ಶಿಕ್ಷಕರಾಗಿ, ಅಲ್ಲೇ 10-12 ವರ್ಷ ಉಳಿಯಬೇಕಾಗಿ ಬಂದಾಗಲೂ, ತನ್ನ ವಿಧಿಯನ್ನು ಶಪಿಸದೇ

ಕುಗ್ರಾಮವೊಂದರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವೃತ್ತಿ ಆರಂಭಿಸಿದ ನಭ ನೆಂಪು ಅವರು, ಅಲ್ಲಿದ್ದುಕೊಂಡೇ ಅಂಚೆಯ ಮೂಲಕ ಹಲವು ಪದವಿ ಪಡೆದು, ಶಿಕ್ಷಕ ವೃತ್ತಿಯಲ್ಲೇ ಪದೋನ್ನತಿ ಹೊಂದಿ, ಜತೆಯಲ್ಲೇ ಸಾಹಿತ್ಯ ಸಾಂಸ್ಕೃತಿಕ ಸಾಧನೆಯನ್ನೂ ಮಾಡಿದ ಪರಿ ವಿಸ್ಮಯಮೂಡಿಸುವಂತಹದ್ದು.

ಅದೊಂದು ಅವಕಾಶವೆಂದು ಬಗೆದು, 1971ರಲ್ಲಿ ಕನ್ನಡ ಪಂಡಿತ್ ಪದವಿ, ಖಾಸಗಿಯಾಗಿ 1972ರಲ್ಲಿ ಪಿಯೂಸಿ, 1974ರಲ್ಲಿ ಡ್ರಾಯಿಂಗ್ ಹಯರ್ ಗ್ರೇಡ್, 1975ರಲ್ಲಿ ಟಿಸಿಎಚ್, 1976ರಲ್ಲಿ ಬಿಎ, 1978ರಲ್ಲಿ ಕನ್ನಡ ಎಂಎ ಪದವಿಗಳನ್ನು ಅಂಚೆ ತೆರಪಿನ ಶಿಕ್ಷಣದ ಮೂಲಕ ಸಂಪಾದಿಸಿದರು. 1986ರಲ್ಲಿ ಬಿಇಡ್ ಮಾಡಿದರು. ಪ್ರೈಮರಿ ಶಾಲೆಯ ಶಿಕ್ಷಕರಾಗಿ ವೃತ್ತಿಜೀವನ ಆರಂಭಿಸಿದವರು, ಹೈಸ್ಕೂಲು ಅಧ್ಯಾಪಕರಾಗಿ, ವೃತ್ತಿಜೀವನದ ಉತ್ತರಾರ್ಧದಲ್ಲಿ ಕಾರ್ಕಳ ಸರಕಾರಿ ಜೂನಿಯರ್ ಕಾಲೇಜಿನ ಜನಪ್ರಿಯ ಅಧ್ಯಾಪಕರಾಗಿ, ಕವಿಗಳಾಗಿ, ಸಂಘಟಕರಾಗಿ 'ಸ್ವಯಂಕೃಷಿ' ಎಂಬ ಕಲ್ಪನೆಗೇ ರೂಪಕವಾದರು. ಪ್ರಾಪ್ತವಾದ ಒಂದು ಮನುಷ್ಯ ಜನ್ಮವನ್ನು ಎಲ್ಲಾ ಮಿತಿಗಳಿಗೆ ಹೊರತಾಗಿಯೂ ಸಾರ್ಥಕಗೊಳಿಸುವುದು ಹೇಗೆ ಎಂಬುದಕ್ಕೆ ಉಜ್ವಲ ಉದಾಹರಣೆಯಾದರು. 'ಬಡತನದಲ್ಲಿ ಹುಟ್ಟುವುದು ತಪ್ಪಲ್ಲ, ಆದರೆ ಅದರಿಂದಾಗಿಯೇ ಬದುಕಲ್ಲಿ ತಾನು ಏನನ್ನೂ ಸಾಧಿಸಲಾಗಲಿಲ್ಲ ಎಂದು ಹಳಿವಿಸುವುದು ತಪ್ಪು' ಎಂದು, ಬದುಕಿ ತೋರಿಸಿದ ನ.ಭ.ನೆಂಪುರವರು ಇತಿಹಾಸವನ್ನು ಸೃಷ್ಟಿಸಿ, ಇತಿಹಾಸಕ್ಕೆ ಸೇರಿಹೋದರು.

''1967ರಿಂದ 2005ರ ತನಕದ ಕಡಿಮೆಯೆಂದರೂ ಮೂರು ತಲೆಮಾರಿನ ವಿದ್ಯಾರ್ಥಿಗಳಿಗೆ 'ಕನ್ನಡವೂ ಅಭ್ಯಾಸ ಮಾಡಬೇಕಾದ ಒಂದು ಅಭಿಜಾತ ವಾಙಯದ ಭಾಷೆ' ಎನ್ನುವುದನ್ನು ಮನದಟ್ಟು ಮಾಡಿಕೊಟ್ಟ ಕೀರ್ತಿ ಅವರದು. ಆಪ್ತರಾದ ನೀಲಾವರ ಸುರೇಂದ್ರ ಅಡಿಗರಿಂದ ನಾನು ಕೇಳಿ ತಿಳಿದಂತೆ ನ.ಭ.ನೆಂಪುರವರು ಹೈಸ್ಕೂಲು ಅಧ್ಯಾಪಕರಾಗಿದ್ದಾಗಲೂ ಪ್ರಾಥಮಿಕ ತರಗತಿಗಳಲ್ಲಿ ಭಾಷಾ ಬೋಧನಾ ಪ್ರಕ್ರಿಯೆಯ ಬಗ್ಗೆ ಚರ್ಚಿಸುವ ಮತ್ತು ಬೋಧನಾ ವಿಷಯಕ್ಕೆ ಸಂಬಂಧಿಸಿದ ಹೊಸ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುವಲ್ಲಿ ಉತ್ಸುಕರಾಗಿದ್ದರಂತೆ, ಶಿಕ್ಷಕ ಕೇಂದ್ರ ಸಭೆಗಳಲ್ಲಿ ಕ್ರಿಯಾಶೀಲರಾಗಿ ಭಾಗವಹಿಸಿ ಭಾಷಾಬೋಧನೆಯ ಕುರಿತು ಉಪನ್ಯಾಸ, ಪ್ರಾತ್ಯಕ್ಷಿಕೆಗಳಿಂದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತರಬೇತಿ ನೀಡುತ್ತಿದ್ದರಂತೆ. ಹಲವು ಅರ್ಥಗಳಲ್ಲಿ ಒಬ್ಬ ಪರಿಪೂರ್ಣ ಶಿಕ್ಷಕರಾಗಿದ್ದ ಅವರು ಪ್ರಾಥಮಿಕ ತರಗತಿಗಳ ಕನ್ನಡ ಪಠ್ಯ ಪುಸ್ತಕಗಳ ಪರಿಷ್ಕರಣೆಯಲ್ಲಿ ತೋರಿಸಿದಷ್ಟೇ ಕಾಳಜಿಯನ್ನು ಹೈಸ್ಕೂಲು ತರಗತಿಗಳ ಕನ್ನಡ ಪಠ್ಯಗಳ ಪರಿಶೀಲನೆಯಲ್ಲಿಯೂ ತೋರುತ್ತಿದ್ದರಂತೆ. ಆ ತಲೆಮಾರಿನ ಶಿಕ್ಷಣದಲ್ಲಿ ಕನ್ನಡ ಸಾಹಿತ್ಯದ ಕೊಂಗಾಟ ಮತ್ತು ಕೊಂಡಾಟಗಳು ಕಂಡುಬರುತ್ತಿದ್ದುದರ ಬಹುತೇಕ ಶ್ರೇಯಸ್ಸು ಪರಿಷ್ಕರಣ ಸಮಿತಿಯಲ್ಲಿ ಇರುತ್ತಿದ್ದ ನ.ಭ.ನೆಂಪುರಂತಹ ಪಂಡಿತ ಪರಂಪರೆಯ ಅಧ್ಯಾಪಕರಿಗೆ ಸಲ್ಲುತ್ತದೆ ಎಂಬರ್ಥದ ಮಾತುಗಳನ್ನೂ ನಾನು ಕೇಳಿದ್ದೆ.

''ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ, ಸಮಾನ ಚಿಂತಕರು ಉಡುಪಿಯಲ್ಲಿ ಆರಂಭಿಸಿದ್ದ ಮನೆಮನೆಯಲ್ಲಿ ಸಾಹಿತ್ಯ-ಸಂಗೀತ- ಸಂವಾದದ 'ನಡುಮನೆ' ಮತ್ತು ಸುಹಾಸಂ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ನೆಂಪು ನರಸಿಂಹ ಭಟ್ಟರು ಸಾಹಿತ್ಯಕ ಮಾರ್ಗದರ್ಶನವನ್ನು ನೀಡಲಾರಂಭಿಸಿದ ಬಳಿಕ, ಉಡುಪಿಯ ವಿದ್ವಜ್ಜಗತ್ತು ಅವರನ್ನು ಗಂಭೀರವಾಗಿ ಪರಿಗಣಿಸತೊಡಗಿತ್ತು. ಅಲ್ಲಿಯ ತನಕ ಅವರು ಕನ್ನಡ ವಿದ್ವಾನ್ ಮತ್ತು ಕನ್ನಡ ಎಂಎ ಮಾಡಿದ್ದರೂ, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ವಿಜೇತ ಅಧ್ಯಾಪಕರಾಗಿದ್ದರೂ, ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದುದು 'ಮಕ್ಕಳ ಸಂಗಮ'ದ ಮತ್ತು ಮಕ್ಕಳು ಸಾಹಿತ್ಯದ ಕಾರ್ಯಕ್ರಮಗಳಲ್ಲೇ ಎಂಬ ಕಾರಣಕ್ಕೂ ಇರಬಹುದು. ಸುತ್ತಲಿನ ಕವಿಗಳದ ನವ್ಯ ಭರಾಟೆಯಲ್ಲಿ ಧಾವಿಸುತ್ತಿದ್ದಾಗ ಮಿತಭಾಷಿ ನ.ಭ.ನೆಂಪುರವರು ಛಂದೋಬದ್ಧ ಸರಳ ಕವಿತೆಗಳಲ್ಲಿ ಚುಟುಕುಗಳಲ್ಲಿ ಹಾದಿಯೊಂದನ್ನು ರೂಪಿಸುತ್ತಿದ್ದರು. ಕಾರ್ಕಳ ಕನ್ನಡ ಸಂಘ ಮತ್ತು ಕಾಂತಾವರ ಕನ್ನಡ ಸಂಘದ ಕಾರ್ಯಕ್ರಮಗಳಲ್ಲಿ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾಗಲೂ ಅವರದ್ದು ಮೆಲುದನಿಯೇ. ನಾನು ಗಮನಿಸಿದಂತೆ ತಾನು ಇವರೆಲ್ಲರಿಗಿಂತ ಹೆಚ್ಚು ತಿಳಿದವನು, ಹೆಚ್ಚು ಸಾಧಿಸಿದವನು ಎಂಬ ಮನೋವೃತ್ತಿಯನ ಅವರೆಂದೂ ತೋರಿಸುತ್ತಿರಲಿಲ್ಲ. ನಮ್ಮ ಮಾತಿನಲ್ಲಿ ತಪ್ಪುಗಳನ್ನು ಗುರುತಿಸಿದರು ಕಾರ್ಯಕ್ರಮದ ನಡುವೆ ಪ್ರತಿಕ್ರಿಯೆ ನೀಡದೇ, ಗುಟ್ಟಿನಲ್ಲಿ ಎಂಬಂತೆ ನಮಗಷ್ಟೇ ತಿಳಿ ಹೇಳುವ ಅವರ ಸರಳ ಸ್ವಭಾವ ಆ ದಿನಗಳಲ್ಲಿ ನಮಗೆ ತುಂಬಾ ಆಪ್ತವಾಗಿತ್ತು.'' (ಬೆಳಗೋಡು ರಮೇಶ್ ಭಟ್ ಅವರ ಸಂಪಾದಕನ ಬಿನ್ನಹದಿಂದ ಆಯ್ದ ಸಾಲುಗಳು) ಪ್ರಾಥಮಿಕ ಶಾಲಾ ಅಧ್ಯಾಪಕರಾಗಿ, ದಟ್ಟ ಕಾಡಿನ ನಡುವಿನ ಕುಗ್ರಾಮವೊಂದರಲ್ಲಿ ಹತ್ತು ವರ್ಷ ಆರಂಭಿಕ ಸೇವೆ ಸಲ್ಲಿಸುವ ಸಂದರ್ಭವನ್ನು ಸಂತಸದಿಂದ ಸ್ವೀಕರಿಸಿ, ಆ ಹತ್ತು ವರ್ಷಗಳಲ್ಲಿ ಹಲವು ಪದವಿಗಳನ್ನು ಅಂಚೆಯ ಮೂಲಕ ಪಡೆದು, ಭವಿಷ್ಯದ ಪದೋನ್ನತಿಗೆ ದಾರಿ ಮಾಡಿಕೊಂಡು, ಹಿರಿಯ ಶಿಕ್ಷಕರಾಗಿ ರೂಪುಗೊಂಡ ನಭ ನೆಂಪು ಅವರ ಜೀವನವು, ಸಾಧನೆ ಮಾಡಬಯಸುವ ಎಲ್ಲರಿಗೂ ಸ್ಫೂರ್ತಿಕಥನವಾಗಬಲ್ಲದು.

ವಿಶ್ವವಾಣಿ ಅಂಕಿತ ಟಾಪ್ ಟೆನ್

1

ಕಥಾನಾಯಕನ ಕಥೆ - ಡಾ| ರಾಜಕುಮಾರ್ ಆತ್ಮ ಚರಿತ್ರೆ
(ನಾನೇ ಹೇಳಿ ಬರೆಸಿದ ನನ್ನ ಕಥೆ - ರಾಜಕುಮಾರ್)
ನಿರೂಪಣೆ: ಚಿ.ದತ್ತರಾಜ್
ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬೆಲೆ: ರೂ 1200/-

2



ಕಾರಂತ ಸುಳಿಯಲ್ಲಿ
(ಶಿವರಾಮ ಕಾರಂತರನ್ನು ಕುರಿತು ಅವರ ಮಕ್ಕಳು ಬರೆದ ಕಾರಂತರ ಕಥೆ)
ಲೇ: ಉಲ್ಲಾಸಕಾರಂತ, ಮಾಲವಿಕಾ ಕಪೂರ, ಕ್ಷಮಾರಾವ್
ಕನ್ನಡಕ್ಕೆ: ವಿಶ್ವೇಶ್ವರಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ: ರೂ 395/-

3

ಕುಂವೀ ಒಡನಾಡಿದ ಸೂರ್ಯನ ಚೂರುಗಳು
(ಅಪೂರ್ವ ರಾಗಂಗಳ್- ಈ ಕೃತಿಯ ಮೂಲಕ ಬರೆವಣಿಗೆಯ ಬೇರೆಯದೇ ಮಜಲನ್ನು ತಲಪಿದ್ದಾರೆ ಕುಂವೀಯವರು)
ಲೇ: ಕುಂ. ವೀರಭದ್ರಪ್ಪ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ: ರೂ 350/-

4



ದಡ ಸೇರಿಸು ತಂದೆ
(2025ನೇ ಈ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕಥಾ ಸಂಕಲನ)
ಲೇ: ಅಮರೇಶ ನುಗಡೋಣಿ
ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ
ಬೆಲೆ: ರೂ 200/-

5



ಟ್ರೀ ಆಫ್ ಲೈಫ್
(ಉತ್ತರ ಕರ್ನಾಟಕದ ಹಿನ್ನೆಲೆಯ ಡಾ| ಲೋಹಿತ್ ನಾಯ್ಕರ ಅವರ ಹೊಸ ಕಥೆಗಳು)
ಲೇ: ಡಾ| ಲೋಹಿತ್ ನಾಯ್ಕರ
ಪ್ರ: ಮನೋಹರ ಗ್ರಂಥ ಮಾಲಾ, ಧಾರವಾಡ
ಬೆಲೆ: ರೂ 300/-

6



ನವ ಉದಾರವಾದಿ ಭಾರತದಲ್ಲಿ ದಲಿತರು
(ಚಲನಶೀಲರೋ ಅಥವಾ ಮೂಲೆಗುಂಪೋ? ದಕ್ಷಿಣ ಏಷ್ಯಾದ ರಾಜಕಾರಣವನ್ನು ಶೋಧಿಸುತ್ತಾ)
ಸಂ: ಕ್ಲಾರಿಂಡಾ ಸ್ಟಿಲ್
ಅನು: ರೇಖಾಂಬ ಟಿ.ಎಲ್., ಕೃತಿ ಆರ್. ಪುರಪ್ಪೇಮನೆ
ಪ್ರ: ಲಡಾಯಿ ಪ್ರಕಾಶನ, ಗದಗ
ಬೆಲೆ: ರೂ 340/-

7

ವಿದ್ಯಾವಂತ ವೇಶ್ಯೆಯ ಆತ್ಮಕಥೆ
(ಭಿನ್ನರೀತಿಯ ಕಥಾವಸ್ತು, ಮೂಲ ಬಂಗಾಳಿ ಕಥೆ ಈಗ ಕನ್ನಡಕದಲ್ಲಿ)
ಲೇ: ಕುಮಾರಿ| ಶ್ರೀಮತಿ ಮಾನದಾ ದೇವಿ ಪ್ರಣೀತ
ಅನು: ಡಾ| ನಾಗ ಎಚ್.ಹುಬ್ಬಿ
ಪ್ರ: ಛಂದ ಪುಸ್ತಕ, ಬೆಂಗಳೂರು
ಬೆಲೆ: ರೂ 240/-

8



ನಿಗಳ
(ಕಲೆ, ಸಾಹಿತ್ಯ, ತರ್ಕಶಾಸ್ತ್ರ, ಮನಃಶಾಸ್ತ್ರ, ಮೀಮಾಂಸಾ ಸಾಹಿತ್ಯ-ಎಲ್ಲವನ್ನೂ ಒಳಗೊಂಡ ಕಾದಂಬರಿ)
ಲೇ: ಡಾ| ಶಾರದಾ ಚೈತ್ರ
ಪ್ರ: ಸ್ನೇಹ ಬುಕ್ ಹೌಸ್, ಬೆಂಗಳೂರು
ಬೆಲೆ: ರೂ 395/-

9



ಕನ್ನಡದಲ್ಲಿ ಷೇಕ್ಸ್‌ಪಿಯರ್ ಕಥಾನಕ
(ಷೇಕ್ಸ್‌ಪಿಯರನ, ಚಾರಿತ್ರಿಕ, ಹರ್ಷ-ರುದ್ರ ನಾಟಕಗಳು ಮತ್ತು ಸಾನೆಟ್ಟುಗಳ ಪರಿಚಯ)
ಲೇ: ಡಾ| ಕರೀಗೌಡ ಬೀಚನಹಳ್ಳಿ
ಪ್ರ: ಅಜಂತ ಪ್ರಕಾಶನ, ಬೆಂಗಳೂರು
ಬೆಲೆ: ರೂ 120/-

10



ಹೊಸ ಓದುಗರಿಗೆ ಕುವೆಂಪು
(ಕೆ. ವಿ. ನಾರಾಯಣ ಅವರು ಹಲವಾರು ವರ್ಷಗಳಿಂದ ಬರೆದ ಕುವೆಂಪು ಕುರಿತ ಬರಹಗಳು)
ಲೇ: ಕೆ. ವಿ. ನಾರಾಯಣ
ಪ್ರ: ಆಕೃತಿ ಪುಸ್ತಕ, ಬೆಂಗಳೂರು
ಬೆಲೆ: ರೂ 195/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755
ಮೊಬೈಲ್ ನಂ: 9019190502

ಜೀವನ ಪ್ರೀತಿಯ ಕತೆಗಳು

» ನಾಗರಾಜ ಮಗ್ಗದ

ಹುಲಿ ಮನೆ ಆಟ - ಇದು ಶರಣಬಸವ ಕೆ ಗುಡದಿನ್ನಿ ಅವರ ಮೂರನೆಯ ಕಥಾ ಸಂಕಲನ. ವಸ್ತು ಹಾಗೂ ನಿರೂಪಣೆಯ ದೃಷ್ಟಿಯಿಂದ 'ಹುಲಿ ಮನೆ ಆಟ' ಕಥಾ ಸಂಕಲನದಲ್ಲಿರುವ ಒಂಭತ್ತು ಕತೆಗಳು ವಿಭಿನ್ನವಾಗಿವೆ. ಸುಲಲಿತವಾಗಿ ಓದಿಸಿಕೊಂಡು ಹೋಗುವ ಇಲ್ಲಿನ ಕಥೆಗಳಲ್ಲಿನ ಪಾತ್ರಗಳು ಓದುಗರ ನೆನಪಿನಲ್ಲಿ ಉಳಿಯುತ್ತವೆ. ರಾಯಚೂರು ಗ್ರಾಮ್ಯ ಪರಿಸರದ ನುಡಿಗಟ್ಟನ್ನು ಕೇವಲ ಪಾತ್ರಗಳ ಸಂಭಾಷಣೆಯಲ್ಲಷ್ಟೇ ಅಲ್ಲದೆ ಕಥಾ ನಿರೂಪಣೆಯಲ್ಲೂ ಆಪ್ತವಾಗಿ ಚಿತ್ರಿಸಿರುವುದು ಓದುಗರಿಗೆ ಮುದ ನೀಡುವಂತಹದ್ದು.

'ಅಂಗಾಲ ಕಣ್ಣವರು' ಕತೆಯು ಹಳ್ಳಿಗಳಲ್ಲಿ ಸಂಭವಿಸಿದ ಸಾಂಸ್ಕೃತಿಕ ಸಂಗತಿಗಳ ಸ್ಥಿತ್ಯಂತರವನ್ನು ದಾಖಲಿಸುತ್ತದೆ. ಮಾನವೀಯ ಸಂಬಂಧಗಳನ್ನು ಬೆಸೆಯುವ ಭಾಗವಾಗಬೇಕಿದ್ದ ಜಾತ್ರೆಗಳು ವೈಭವೀಕರಣಗೊಂಡು ಶ್ರಮ ಸಂಸ್ಕೃತಿಯ ಕುಟುಂಬಗಳ ಅರ್ಥವ್ಯವಸ್ಥೆಯ ಮೇಲೆ ಎಂತಹ ಘೋರ ಪರಿಣಾಮ ಬೀರುತ್ತದೆ ಎಂಬ ವಾಸ್ತವ ಪ್ರಜ್ಞೆಯ ನೆಲೆಯ ನೋಟ ಈ ಕತೆಗೆ ದಕ್ಕಿದೆ. ಕತೆಯಲ್ಲಿ ಬರುವ ಬೀರಪ್ಪ ಊರ ದೈವದ ಅದ್ದೂರಿ ಜಾತ್ರೆಗೆ ವಂತಿಗೆ ಹಣ ನೀಡಲು ನಿರಾಕರಿಸಿ, ಸಾವಿರ ರೂಪಾಯಿಗಳನ್ನ ತನ್ನ ಹೆಂಡತಿ ಸಾವಿತ್ರಿಯ ಕೈಗೆ ನೀಡುತ್ತಾ ಮನ್ಯಾಗಿಡು ಹುಡ್ಗಗ ಪಾಠಿಚೀಲ, ಪುಸ್ತಗ ತರಾಕ ಬರತಾವ ಎಂದೇಳುವ ಮಾತುಗಳು ಪ್ರತಿಭಟನೆ ಹಾಗೂ ಅರಿವಿನ ವಿಸ್ತರಣೆಯ ಸಂಕೇತವಾಗುತ್ತವೆ. ನನಗೆ ರೆಕ್ಕೆಗಳಿಲ್ಲ.. ಕಥೆಯಲ್ಲಿನ ಸಿದ್ದಪ್ಪ ಮೇಷ್ಟ್ರು ತನ್ನ ಶಾಲೆಗೆ ಕೊಠಡಿಗಳ ಮಂಜೂರಾತಿಗಾಗಿ ಮಾಡುವ ಧರಣಿ ನೋಡುವವರ ಪಾಲಿಗೆ ಹಾಸ್ಯಾಸ್ಪದ ಸಂಗತಿಯಾಗುವುದು ವಿಪರ್ಯಾಸ. ಈ ಕತೆಯ ವಸ್ತು ನಾಡನ್ನಾಳುವ ಸರ್ಕಾರಗಳ ಅಧಿಕಾರಶಾಹಿ ದರ್ಪ, ಆಡಳಿತಶಾಹಿಯ ನಿಷ್ಕ್ರಿಯತೆ ಹಾಗೂ ಅವುಗಳು ತೋರುವ ಧೋರಣೆಗಳಲ್ಲಿ ಗಾಂಧಿಯ ಚಿಂತನೆಗಳಿಗೊದಗಿದ ದುಸ್ಥಿತಿಯ ರೂಪಕವಾಗಿದೆ.

ಹುಲಿ ಮನೆ ಆಟ ಕಥೆಯನ್ನು ಹಳ್ಳಿಯಲ್ಲಿ ಸಂಭವಿಸುವ ಘಟನೆಗಳನ್ನು ಅಸಹಾಯಕನಾಗಿ ಕುರುಡನಂತೆ ನೋಡುವ ಗಡ್ಡ್ಯಾನ ಮೂಲಕ ನಿರೂಪಿಸಿರುವ ತಂತ್ರ ಸಮಕಾಲೀನ ಜಗತ್ತಿನ ಧಾರ್ಮಿಕ ಮೌಢ್ಯ ಮತ್ತು ಶಿಕ್ಷಣವನ್ನು



ಹುಲಿ ಮನೆ ಆಟ
ಕಥಾ ಸಂಕಲನ
ಲೇ: ಶರಣಬಸವ ಕೆ ಗುಡದಿನ್ನಿ
ಪ್ರ: ಟಾಮಿ ಪ್ರಕಾಶನ, ಲಿಂಗಸ್ಗೂರು
ಬೆಲೆ ರು.150/-

ಮುಖಾಮುಖಿಯಾಗಿಸುತ್ತದೆ. ಅಲ್ಲಿನ ಶಿವರಾಜಪ್ಪ ಮೇಷ್ಟ್ರು ಮನಸ್ಸಿನಲ್ಲಿ ಉಳಿಯುತ್ತಾರೆ.

ಮನಸ್ಸಿಗೆ ತಾಗುವ ಕವಿತೆಗಳು

ದೂರದ ಮುಂಬಯಿಯಲ್ಲಿ ನೆಲೆಸಿ, ತಮ್ಮ ಸಾಹಿತ್ಯ ಅಭಿಯಾನವನ್ನು ಮುಂದುವರಿಸಿರುವ ಅನಿತಾ ಪಿ.ತಾಕೊಡೆಯವರು, ಇದೀಗ 'ಮೇಣಕ್ಕಂಟಿದ ಬತ್ತಿ' ಎಂಬ ಕವನ ಸಂಕಲನವನ್ನು ಹೊರತಂದಿದ್ದಾರೆ. ಈ ಕವನ ಸಂಕಲನದ ವಿಶೇಷವೆಂದರೆ, ಇದು ಈಗಾಗಲೇ 'ಗವಿಸಿದ್ಧ ಎನ್. ಬಳ್ಳಾರಿ ಕಾವ್ಯ ಪ್ರಶಸ್ತಿ'ಗೆ ಭಾಜನವಾಗಿದೆ; ಆದ್ದರಿಂದಲೇ, ಇದನ್ನು ಕೈಗೆತ್ತಿಕೊಂಡವರು ಬಹು ನಿರೀಕ್ಷೆಯಿಂದಲೇ ಇಲ್ಲಿನ ಕವನಗಳನ್ನು ಓದಬಹುದು. ವೈವಿಧ್ಯಮಯ ವಸ್ತುಗಳನ್ನು ಆರಿಸಿಕೊಂಡು ಕವನ ರಚಿಸುವ ಅನಿತಾ ಪಿ. ತಾಕೊಡೆಯವರು, ಭಾಷೆಯ ಪ್ರಯೋಗದಲ್ಲಿ ಹಿಡಿತ ಸಾಧಿಸಿದ್ದಾರೆ ಮತ್ತು ಅವರ ಕವನಗಳು ಓದುಗರ ಮನಸ್ಸನ್ನು ತಟ್ಟಬಲ್ಲವು.



ಮೇಣಕ್ಕಂಟಿದ ಬತ್ತಿ
ಲೇ: ಅನಿತಾ ಪಿ. ತಾಕೊಡೆ
ಪ್ರ: ತಾಕೊಡೆ ಎಂಟರ್ ಪ್ರೈಸಸ್ ಮುಂಬಯಿ
ಬೆಲೆ ರು. 150/-

ಈ ಸಂಕಲನದಲ್ಲಿ 59 ಕವನಗಳಿವೆ; ಗದ್ಯಾತ್ಮಕ ಶೈಲಿಯಲ್ಲಿ ಬೆಳೆಯುವ ಇಲ್ಲಿನ ಕವನಗಳು, ಲಯದಲ್ಲಿ ಕಾವ್ಯದ ಶಕ್ತಿಯನ್ನು ಅಡಗಿಸಿಕೊಂಡಿವೆ. ಈ ಕವಯಿತ್ರಿಯಿಂದ ಇನ್ನಷ್ಟು ಅರ್ಥಪೂರ್ಣ ಕವನಗಳನ್ನು ನಿರೀಕ್ಷಿಸಬಹುದು.

ಕಾಡುವ ಕಥೆಗಳ ಗುಚ್ಛ

» ಡಾ ಅರ್ಚನಾ ಆರ್

ಕಾಲ ಎಷ್ಟೇ ಬದಲಾಗುತ್ತಿದೆ, ಮನುಷ್ಯ ಸಮಾಜ ತೀವ್ರವಾಗಿ ಬದಲಾಗುತ್ತಿದೆ ಎಂದು ಎಷ್ಟೇ ಗೊಣಗಿದರೂ ಸಾಹಿತ್ಯ ವಲಯ ಮಾತ್ರ ತನ್ನ ಚಿಂತನಶೀಲ ಪ್ರಕ್ರಿಯೆಯನ್ನು ತನ್ನಷ್ಟಕ್ಕೇ ಮುಂದುವರಿಸಿದೆ ಎಂಬುದಕ್ಕೆ ಹೊಸ ತಲೆಮಾರಿನ ಲೇಖಕರು ಸಾಕ್ಷಿ. ಇತ್ತೀಚೆಗೆ ಬ್ಲಾಗ್‌ಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ, ಕಥೆ, ಕಾವ್ಯ, ಲೇಖನಗಳನ್ನ ಕಂಡಾಗೆಲ್ಲಾ ಎಷ್ಟು ಚಂದದ ಬರಹಗಳು ಅನ್ನಿಸುವುದುಂಟು. ಹಾಗೆ ನಾನು ಓದಿ ಇಷ್ಟಪಟ್ಟಿದ್ದು ನಾಗಶ್ರೀ ಅಜಯ್ ಅವರ ಕವಿತೆಗಳನ್ನ; ಚಂದದ ಪದ ಜೋಡಣೆ, ಭಾವ ತೀವ್ರತೆ ಇರುವ ಕವನಗಳುಎಂದು ಓದಿಕೊಳ್ಳುತ್ತಿದ್ದೆ. ಇತ್ತೀಚೆಗೆ ಅವರ ಮೊದಲ ಕಥಾ ಸಂಕಲನ 'ಕಡೆ ಹಾಯ್ವ ದೋಣಿ' ಬಿಡುಗಡೆಯಾಗಿದೆ.

ಈ ಸಂಕಲನದಲ್ಲಿ ಒಟ್ಟು 12 ಕತೆಗಳಿವೆ. ಒಂದೊಂದು ಭಿನ್ನವಾದ ಕಥಾ ಹಂದರ ವನ್ನು ಒಳಗೊಂಡ ಕಥೆಗಳಾಗಿವೆ. ಪ್ರತಿ ಕಥೆಯು ಒಂದೊಂದು ಭಾವ ಜಗತ್ತಿನ ಅನುಭವ ಮಾಡಿಕೊಡುತ್ತದವೆ. 'ಶಮಿ ಶಮಯತೇ' ಯ ಶಮಿತಾ, 'ಹೆಜ್ಜೆ ಮೂಡದ ಹಾದಿ'ಯ ರಂಜಿತಾ, ಕಾಂಟ್ರಾದ 'ಮಂಜಣ್ಣ', 'ಗತ್ಯಂತರ'ದ ಕಾವ್ಯ, ಕಾಮಾಕ್ಷಿ, 'ಮೀ ಟೂ' ಕತೆಯ ಸ್ಮಿತಾ-ಮನಸ್ವಿ, ಹೀಗೆ ಎಲ್ಲಾ ಪಾತ್ರಗಳು ಓದಿದ ನಂತರವೂ ಕಾಡುವಂತವು.

ನಮ್ಮ ಕಾಲದ ಸಂದಿಗ್ಧಗಳು ಇಲ್ಲಿನ ಕಥೆಯಲ್ಲಿ ಹದವಾಗಿ ಬೆರೆತಿವೆ. ಪ್ರಸ್ತುತ ನಾಗರಿಕ ಜಗತ್ತಿನ ತಲ್ಲಣವನ್ನ ಅನಾವರಣಗೊಳಿಸುತ್ತಾ, ಅನೇಕ ಗೊಂದಲಗಳು, ಸಂಘರ್ಷಗಳು, ವೈವಾಹಿಕ ಬದುಕಿನ ಸಮಸ್ಯೆಗಳ ಕುರಿತು ಗಂಭೀರವಾದ ಪ್ರಶ್ನೆಗಳನ್ನು ಇಲ್ಲಿನ ಕಥೆಗಳು ಎತ್ತುತ್ತವೆ. ಹಾಗೂ ಬದುಕಿನಲ್ಲಿ ಕನಿಷ್ಠ, ಸ್ನೇಹ,



ಕಡೆ ಹಾಯ್ವ ದೋಣಿ
ಕಥಾಸಂಕಲನ
ಲೇ: ನಾಗಶ್ರೀ ಅಜಯ್

ಪ್ರೀತಿಗೂ ಹಂಬಲಿಸುವ ಮಾನವ ಸಹಜ ಅಭಿಪ್ಸೆಗಳನ್ನು ಕಥೆಯ ಬಂಧಕ್ಕೆ ಒಳಪಡಿ ಸಿರುವ ರೀತಿ ನಿಜಕ್ಕೂ ಸೊಗಸಾಗಿದೆ. ಈ ಸಂಕಲನದ ಶೀರ್ಷಿಕೆ, ಮುಖಪುಟ ಎಲ್ಲವೂ ಆಕರ್ಷಕ. ಇಲ್ಲಿ ಕಥೆಗಾರ್ತಿಯ ತಾಳ್ಮೆ, ಕಥೆ ಹೇಳುವ ಶೈಲಿ, ಪರಂಪರೆಯನ್ನು ಮೀರದೆ, ಆಧುನಿಕತೆಯನ್ನು ಮರೆಯದೆ ಹದವಾದ ಬದುಕಿನ ಸಾಧ್ಯತೆ, ಸವಾಲುಗ ಳನ್ನ ಅಭಿವ್ಯಕ್ತಿಸಿರುವುದು ಗಮನಸೆಳೆಯುತ್ತದೆ.

ಮರಾಠಿಯಲ್ಲಿ ಸಿಕ್ಕ ಬೇಂದ್ರೆ ಒಳನೋಟ

» ಪ್ರೊ. ಜಿ. ಎನ್. ಉಪಾಧ್ಯ, ಮುಂಬೈ

ಕವಿ ದ.ರಾ.ಬೇಂದ್ರೆಯವರು 1960ರಲ್ಲಿ ನಾಗಪುರ ಆಕಾಶವಾಣಿಯು ಆಯೋಜಿಸಿದ್ದ ವ್ಯಾಖ್ಯಾನ ಮಾಲೆಯಲ್ಲಿ 'ವಿಠ್ಠಲ ಸಂಪ್ರದಾಯ' ಕುರಿತು ಹಾಗೂ 1963ರಲ್ಲಿ ಪುಣೆಯ ಶಿಕ್ಷಣ ಪ್ರಸಾರ ಮಂಡಳಿಯು ನಡೆಸಿದ ವ್ಯಾಖ್ಯಾನ ಮಾಲೆಯಲ್ಲಿ 'ಸಂತ ಮಹಾಂತಾಚಾ ಪೂರ್ಣ ಶಂಭೂ ವಿಠ್ಠಲ'ನ ಕುರಿತು ಮರಾಠಿಯಲ್ಲಿ ಮಾಡಿದ ವ್ಯಾಖ್ಯಾನಗಳನ್ನು, ಕವಿ ಸಾಹಿತಿ ಆನಂದ ಝುಂಜರವಾಡ ಅವರು ಹುಡುಕಿ ತೆಗೆದು ಅನುವಾದಿಸಿ ಕನ್ನಡ ಓದುಗರಿಗೆ ಉಣಬಡಿಸಿದ್ದಾರೆ.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಬೇಂದ್ರೆ ಅವರ ಮನೆ ಮಾತು ಮರಾಠಿ. ಅವರು ಹುಟ್ಟಿದ್ದು ಧಾರವಾಡದಲ್ಲಿ, ಉನ್ನತ ವ್ಯಾಸಂಗ ಮಾಡಿದ್ದು ದೂರದ ಪುಣೆಯಲ್ಲಿ. 85 ವರ್ಷಗಳ ತಮ್ಮ ಜೀವಿತಾವಧಿಯಲ್ಲಿ ಅವರು ಹದಿನೆಂಟು ವರ್ಷಗಳ ಕಾಲ ಮಹಾರಾಷ್ಟ್ರದಲ್ಲಿ ನೆಲೆಸಿದ್ದರು. ಹನ್ನೆರಡು ವರ್ಷಗಳ ಕಾಲ ಸೊಲ್ಲಾಪುರದಲ್ಲಿ ಅವರು ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದು ಸ್ನೇಹ ಸೇತುವಾಗಿಯೇ. ಬೇಂದ್ರೆ ಅವರು ಉಸಿರು ನಿಲ್ಲಿಸಿದ್ದು ಸಹ ಮಹಾರಾಷ್ಟ್ರದ ಮುಂಬೈಯಲ್ಲೇ. ಬೇಂದ್ರೆ ಕನ್ನಡ ಮತ್ತು ಮರಾಠಿ ಭಾಷೆಗಳ ಕವಿ, ಲೇಖಕ, ವಾಗ್ಮಿಯಾಗಿ ಮಿಂಚಿದವರು. ಸ್ವಾಮಿ ಸಮರ್ಥ, ಗೋಂದಾವಲೇಕರ, ಪ್ರಭಾಕರ ಮಹಾರಾಜ ಮೊದಲಾದವರು ಅವರ ಪರಮ ಶ್ರದ್ಧೆಯ ಕೇಂದ್ರವಾಗಿದ್ದರು. ಪ್ರಸಕ್ತ ಕೃತಿಯಲ್ಲಿ ಬೇಂದ್ರೆ ಅವರು ವಿಠ್ಠಲ ಸಂಪ್ರದಾಯ, ಅಭಂಗ ಮತ್ತು ವಿಠ್ಠಲ, ಅನುಭವಾಮೃತ ಮತ್ತು ಪೂರ್ಣ ಶಂಭೂ, ಜ್ಞಾನೇಶ್ವರರು ಹಾಗೂ ಸಂತ ಮಹಂತರು ಈ ಕುರಿತು ಮಾಡಿದ ಉಪನ್ಯಾಸಗಳ ಸೂಕ್ಷ್ಮ ಸಾಂದ್ರ ಚಿಂತನೆ ದಾಖಲಾಗಿದೆ.

ವಿಠ್ಠಲ ಕರ್ನಾಟಕ ಮಹಾರಾಷ್ಟ್ರಗಳನ್ನು ಬೆಸೆದ

ಅವಿಭಕ್ತ
(ಶ್ರೀ ವಿಠ್ಠಲನ ಚಿಂತನೆಗಳ ವ್ಯಾಖ್ಯಾನಗಳು)
ಮೂಲ ಮರಾಠಿ: ದ.ರಾ.ಬೇಂದ್ರೆ
ಕನ್ನಡಕ್ಕೆ: ಆನಂದ ಝುಂಜರವಾಡ,
ಪ್ರಕೃತಿ ಪ್ರಕಾಶನ,ಬೆಂಗಳೂರು.
ಬೆಲೆ 225/-

ದೇವರು. ಈ ಎರಡೂ ವ್ಯಾಖ್ಯಾನಗಳ ಮೂಲ ವಿಚಾರ ವಿಷಯವು ವಿಠ್ಠಲ ಚಿಂತನೆಯದಾಗಿದೆ. ವಿಠಲ ಅನ್ನೋ ಒಂದು ದೈವಿಕ ಸಂಕೇತದ ಹಲವು ಬಗೆಯ ಪರಿಶೀಲನೆಗಳು ಈ ಎರಡೂ ವ್ಯಾಖ್ಯಾನಗಳ ತುಂಬ ತುಂಬಿಕೊಂಡಿವೆ. ಈ ಉಭಯ ವ್ಯಾಖ್ಯಾನಗಳಲ್ಲಿ ಬೇಂದ್ರೆಯವರು ಯಾವ ಬಗೆಯ ಚಿಂತನ ದಾರಿಯನ್ನು, ಎಷ್ಟೊಂದು ಹೊರಳುಗಳನ್ನು ಎದುರಿಸುತ್ತ ದಾಟಿದ್ದಾರೆ ಅನ್ನೋದನ್ನ, ಅಲ್ಲಿನ ಭಿನ್ನತೆಯನ್ನು ಆನಂದ ಝುಂಜರವಾಡ ಅವರು ವಿಸ್ತೃತವಾಗಿ ಲೋಕ ಸಮ್ಮುಖಗೊಳಿಸಿದ್ದಾರೆ.

ಬೇಂದ್ರೆಯವರು ಈ ಎರಡೂ ವ್ಯಾಖ್ಯಾನಗಳಲ್ಲಿ ವಿಠಲ-ಸಂಸ್ಕೃತಿಯ ತಾತ್ವಿಕ ಅನುಸಂಧಾನವನ್ನು ಮಾಡಿಕೊಂಡು, ಆ ಸಂಸ್ಕೃತಿಯ ಆಧ್ಯಾತ್ಮಿಕ ನೆಲೆ ಬೆಲೆಗಳನ್ನು ಕುರಿತು, ಮಿಥಿಕಲ್ ಲಯಗಳಲ್ಲಿ ಮಾತನಾಡಿದ್ದಾರೆ. ಜ್ಞಾನೇಶ್ವರರ ಜ್ಞಾನೇಶ್ವರಿ, ಅನುಭವಾಮೃತ ಗ್ರಂಥಗಳು, ವಿವಿಧ ಸಂತರ ಅಭಂಗಗಳು, ಭಗವದ್ಗೀತೆ, ವೇದ, ಉಪನಿಷತ್ತು, ಇನ್ನೂ ಹಲವಾರು ಪಠ್ಯಗಳನ್ನು ಬೇಂದ್ರೆ ಪುಂಖಾನು ಪುಂಖವಾಗಿ, ಅಜಸ್ರವಾಗಿ ಬಳಸುತ್ತಾರೆ. ಅವರ ವ್ಯಾಖ್ಯಾನದ ಒಂದು ಮುಖ್ಯ ಗುಣ ಎಂದರೆ, ಅದು ಕಾಂತಾಸಂಮಿತ ಹಾಗೂ ಪ್ರಭುಸಂಮಿತಗಳ ಸಂಯುಕ್ತ ಸವಿಯನ್ನು ಹೊಂದಿರುತ್ತದೆ ಎಂಬುದನ್ನು ಇಲ್ಲಿ ಆನಂದ ಅವರು ಮುನ್ನೆಲೆಗೆ ತಂದು ವಿಶ್ಲೇಷಿಸಿದ್ದಾರೆ.

ಬೇಂದ್ರೆಯವರಿಗೆ ಜ್ಞಾನೇಶ್ವರಿ ಅಮೃತಾನುಭವ ಇತ್ಯಾದಿಗಳ ಜೊತೆಗೆ ಆಳವಾದ ಸಂಬಂಧವಿತ್ತು. ಒಂದೆಡೆ ಅರವಿಂದ ವಿಚಾರಧಾರೆ ಇನ್ನೊಂದೆಡೆ ವಿಠ್ಠಲ ಸಂಪ್ರದಾಯದ ಭಾವೋತ್ಕಟತೆ ಇವುಗಳ ನಡುವಿನ ಹೊಂದಾಣಿಕೆಯನ್ನು ಕೊಂಡುಕೊಳ್ಳುವುದು ಬಹಳ ಜಟಿಲ ಕೆಲಸ ಎಂಬ ಕಾಳಜಿ ಇಂದಲೇ ಈ ಕೃತಿಯನ್ನು ಆನಂದರು ಕನ್ನಡಕ್ಕೆ ತಂದಿದ್ದಾರೆ. ಈ ಕೃತಿಗೆ ಅವರು ಬರೆದಿರುವ ಸುದೀರ್ಘವಾದ ಮುನ್ನುಡಿ ಬೇಂದ್ರೆಯವರ ಮರಾಠಿ ಪ್ರತಿಭೆ ಪಾಂಡಿತ್ಯ ಸಾಮರ್ಥ್ಯವನ್ನು ಅರ್ಥ ಮಾಡಿಕೊಳ್ಳಲು ನಮಗೆ ತೋರು ದಾರಿಯಾಗಿದೆ.

ಬೇಂದ್ರೆ ಬಹು ಶ್ರುತಕವಿ, ಚಿಂತಕರೂ ಆಗಿದ್ದರು. ಅವರ ಉದಾತ್ತ ಚಿಂತನೆಯ ಒಂದು ಮಾದರಿ ಇಲ್ಲಿದೆ 'ಮನುಷ್ಯರ ಪ್ರತಿ ಅಸ್ತಿತ್ವದ ಒಳಗೂ ದೈವತ್ವ ಪ್ರಕಟ ಆಗಲಿ ಅಂತಾನೇ ಸಂತರ ಮೂಲಕ ದೇವರೇ ಅವತಾರ ಮಾಡಿಕೋತ ಬಂದಾನ. ಕೇವಲ ಪಂಢರಪುರದೊಳಗ ಅಲ್ಲ, ಕೇವಲ ಆ ದೇವಸ್ಥಾನದ ಒಳಗಲ್ಲ, ಆ ಕಲ್ಲು ವಿಗ್ರಹದೊಳಗ ಮಾತ್ರ ಅಲ್ಲ, ಎಲ್ಲ ಮನುಷ್ಯರ ಒಳಗಿನ ಪಂಢರಪುರದ ಒಳಗೂ ವಿಠ್ಠಲನ ಸ್ಥಾಪನಾ ಆಗೋತನಕ ಸಂತರ ನಾಮಸಂಕೀರ್ತನೆ ವಿಧಿಯ ಉದ್ಯಾಪನೆಯೂ ಆಗೋದಿಲ್ಲ. ವಿಠ್ಠಲ ಅನ್ನೋ ನಾಮವು ದೈವಿಕ ಸಮತೆಯ, ಅನುಗ್ರಹದ ಸಂದೇಶ, ಆದರ ಈ ಸಂದೇಶ ದೇಶ, ಭಾಷೆಗಳ ಮಿತಿಯನ್ನ ಮೀರಿದ್ದು ಕೂಡ ಆಗೇದ. ಧರ್ಮ ಅನ್ನೋದೇ ಈ ಎರಡೂ ಧ್ರುವಗಳನ್ನ ಜೋಡಿಸೋ ಕೇಂದ್ರ ಆಗೇದ. ದೈವತ್ವ ಇರೋ ಮನುಷ್ಯರು ಅಥವಾ ಮನುಷ್ಯನ ಬಗೆಗೆ ಕಾರುಣ್ಯ ಇರೋ ದೇವರು, ತಮ್ಮ ಬದುಕಿನ ಕ್ರಮದ ವಿಧಾನದ ಮೂಲಕಾನೆ ಆ ದೈವತ್ವವನ್ನ ಪ್ರಕಟ ಪಡಿಸಬೇಕಾಗ್ತದ. ಸ್ವಯಂಪ್ರತಿಷ್ಠೆ, ಯಾವುದೇ ಬಗೆಯ ದೂರತ್ವ, ಇದನ್ನ ಯಾವ ಸಂತರೂ ಒಪ್ಪಿಕೊಳ್ಳೋದೇ ಇಲ್ಲ.

ಬೆನ್ನುನೋವಿಗೆ ಬಂಗಾರದ ಪುಡಿ!

» ಬೆಂ. ಶ್ರೀ. ರವೀಂದ್ರ, ಬೆಂಗಳೂರು



ಹಲವು ವರ್ಷಗಳಿಂದ ಸತಾಯಿಸುತ್ತಿದ್ದ ಬೆನ್ನು ನೋವು ವಾಸಿ ಮಾಡುತ್ತೇನೆ ಎಂದು ಸಹಾಯ ಮಾಡಲು ಬಂದ ಆ ವ್ಯಕ್ತಿ, ಬಂಗಾರದ ಪುಡಿ ತಗೊಳಿ ಎಂದದ್ದೇಕೆ?

ಸೊಂಟ ಅನ್ನೊದು ನನ್ನ ಶರೀರದ ಭಾಗ ಅಂತ ನನಗೆ ಅರಿವಾದದ್ದೆ 2005 ರ ಸುಮಾರಿನಲ್ಲಿ. ಇದ್ದಕ್ಕಿದಂತೆ ಸೊಂಟದ ಮಾಂಸಖಂಡಗಳು ಸೆಟಗೊಂಡು ಬಿಗಿಯಾಗಿ ಸರಾಗ ಚಲನೆಗೆ ಬ್ರೇಕ್ ಹಾಕಿ, 'ಗುರುವೇ ನಿನ್ನ ಬಾಡಿಲಿ ನಾನೂ ಇದ್ದೀನಿ. ಅದೂ ಮುಖ್ಯ ಭಾಗದಲ್ಲಿ. ಕೆಳಗೆ ಕಾಲು, ಮೇಲೆ ಶರೀರ. ಎರಡಕ್ಕೂ ಲಿಂಕು ನಾನು. ಕಾಲು ಓಡೋಕ್ಕೂ ನಾನು ಬೇಕು. ಮೇಲಿನ ಶರೀರದ ಶೋಕಿಗೆ, ಚಿನ್ನಾಟಕ್ಕೆ ನಾನು ಬೇಕೇ ಬೇಕು. ಸೊಂಟ ಗಟ್ಟಿಯಿಲ್ಲದಿದ್ದರೆ ನಿನ್ನಾಟ ಏನೂ ನಡೆಯಲ್ಲ. ಮೊನ್ನೆ ನಿನ್ನ ಬ್ಯಾಂಕಿನ ರಂಬೆ ಏನು ಹೇಳಿದ್ಲು, ಜ್ಞಾಪಕ ಇದ್ಯಾ!

ಏನ್ಸಾರ್ ಯಾಕೊ ಬಗ್ಗಿ ನಡಿತಾ ಇದಿರಿ!. ಸೊಂಟದ ಶಕ್ತಿಬತ್ತಿ ಬತ್ತಿತಾ? ಅಂತ ನಕ್ಕಳಲ್ಲಾ ! ಗೊತ್ತಾಗಲಿಲ್ವಾ' ಅಂತ ಅಣಕಿಸಿದ್ದು! ಪಾಪ, ನಿನ್ನ ಕಥೆ ಏನಾಗಿರಬ್ಯಾಡ. ಏಯ್ ಸುಮ್ನಿರೇ ಅನ್ನೊಕ್ಕೂ ನನ್ನ ಶಕ್ತಿ ಉಡಗಿತ್ತು.

ನನ್ನ ಕೆಲಸವೋ ಬಹಳ ಓಡಾಟದ್ದು. ಓಡಾಡಿ ಬೀಡಾಡಿಗಳನ್ನೂ ಬಿಡದೆ ಮಾತನಾಡಿಸಬೇಕಿತ್ತು. ಇಲ್ಲದಿದ್ದರೆ ಮುಂದಿನ ಚುನಾವಣೆಗೆ ಓಟು ಬೀಳಲ್ಲ! ಸೊಂಟ ಹೇಳಕ್ಕೆ ಶುರು ಮಾಡ್ತು. 'ಗುರುವೇ, ನಾಲಗೆ, ಕಿವಿ ಮತ್ತು ಬುದ್ದಿಗೆ ಎಷ್ಟು ಬೆಲೆ ಇದ್ಯೋ ಅದಕ್ಕಿಂತ ನನ್ನ ಬೆಲೆ ಜಾಸ್ತಿ!'

ನಿನ್ನ ಮಾತು ನಿಜ ಅನ್ಸತ್ತೆ. ಆದರೆ ನಿನ್ನ ಇರವೇ ಇಷ್ಟು ದಿನ ತಿಳಿಲಿಲ್ಲ. ಈಗ್ಯಾಕೆ ತೊಂದರೆ ಕೊಡ್ತಿ? ನಾನೇನು ಮಾಡ್ಲಿ. ನಿನಗೆ ತೊಂದ್ರೆ ಕೊಡ್ಬೇಕು ನನ್ಗೇನು ಇರಲಿಲ್ಲ. ಆದರೆ ನಿನ್ನ ಬೆನ್ನುಮೂಳೆಗಳು ಸವಿಯೊಕ್ಕೆ ಶುರು ಆಗಿದೆ. ನಿನ್ನ ಕಶೇರುಕ ಖಂಡಗಳು ಒಂದಕ್ಕೊಂದು ಒತ್ಕೊತಾಯಿದೆ. ಮಧ್ಯ ನರ ; ಪಾಪ ಸಿಕ್ಕೊಂಡಿದೆ.

ಅಯ್ಯೋ ! ಕಶೇರುಕ ಖಂಡಗಳಾ. ಅದೇನು? ನಾ ಕೇಳೇ ಇರಲಿಲ್ಲ!

ಹ್ಞಾಂ... ಮತ್ತೆ ಎಲ್ಲಾ ಚೆನ್ನಾಗಿದ್ರೆ, ದೇವರ ನೆನಪು ಬರ್ತಾ! ಅಂತು ಸೊಂಟ. ಮುಂದುವರೆಸಿತು, 'ದಾಸರೇನೋ ಹೇಳಿದರು, ಕಣ್ಣು, ನಾಲಗೆ, ಮನವು ತನ್ನದೆಂದೆನಬೇಡ. ಆದರೆ ಸೊಂಟ ನಿನ್ನದು ಅನಬ್ಯಾಡ ಅಂತ ಏನೂ ಹೇಳಿಲ್ವಲ್ಲಾ!. ನನ್ನ ಬಗ್ಗೆನೂ ಗಮ್ನ ಕೊಡು. ಅನ್ಯಾಯ ಮಾಡಬೇಡ. ಜನ ಮಾತಾಡೋದು ಕೇಳಿದಿನಿ ನಾನು. 'ಅವನ್ಯಾಕೋ ತುಂಬಾ ತಲೆಹರಟೆ; ಸೊಂಟ ಮುರಿದ್ರೆ ಸರಿಯಾಗ್ತಾನೆ' ಅಂತ. ತಲೆ ಹರಟೆ ಮಾಡಿದ್ರೆ, ತಲೆಗೆ ಶಿಕ್ಷೆ ಕೊಡಬೇಕು! ಸೊಂಟಕ್ಕೆ ಯಾಕೆ ಶಿಕ್ಷೆ!

ನಂಗೆ ಬೇರೆ ದಾರಿ ಇರಲಿಲ್ಲ. ಸೊಂಟದ ಸಹವಾಸ ತುಂಬಾ ಬೇಕಿತ್ತು. ಸಾರಿ , ಸೊಂಟ ಅಂದೆ.

ಡಾಕ್ಟರ್ ಹತ್ರ ಹೋಗೊದು ಅನಿವಾರ್ಯ. ಡಾಕ್ಟರು ಹೇಳಿದ್ರು. 'ಜಾಸ್ತಿ ತೊಂದರೆ ಇಲ್ಲ. ಸ್ಪಾಸಮ್ ಆಗಿದೆ. ಏಳು ದಿನ ಫಿಸಿಯೋ ಥೆರಪಿ ಮಾಡಿಸ್ಕೊಳಿ. ಸರಿಹೋಗತ್ತೆ'

'ಸ್ಪಾಸಮ್ ಅಂದ್ರೇನು ಸಾರ್?'

ನನ್ನ ಮುಖ ನೋಡಿ, ಡಾಕ್ಟರು ಮನಸ್ಸಿನಲ್ಲಿ 'ತಲೆಹರಟೆ' ಅಂದುಕೊಂಡ್ರು, ಅನ್ನಿಸುತ್ತೆ. ನಗುತ್ತಾ ಹೇಳಿದರು, 'ಸ್ನಾಯು ಸೆಳೆತ. ದೈವ ಸೃಷ್ಟಿ ಎಷ್ಟು ಚೆನ್ನಾಗಿದೆ ನೋಡಿ. ನೀವು ಬೇಜವಾಬ್ದಾರಿಯಿಂದ ಏನೋ ಎತ್ತಕ್ಕೊ, ಬಗ್ಗಿ ಕೆಲಸ ಮಾಡಕ್ಕೊ ಹೋಗಿರ್ತೀರಾ. ಕಶೇರುಕಗಳು ಸವೆದಿರುವುದರಿಂದ ಮೂಳೆ ಮುರಿತವೋ, ಕಶೇರುಕಗಳ ನಡುವಿನ ಬಿಲ್ಲೆ ಜಾರಬಹುದೊ ಆಗತ್ತೆ. ಆಗ ಬುದ್ಧಿವಂತ ಶರೀರ ತಕ್ಷಣ ಆ ನಿರ್ದಿಷ್ಟವಾದ ಸ್ಥಳದ ಮಾಂಸಖಂಡಗಳನ್ನು ಸಂಕುಚಿಸಿ ಗಟ್ಟಿ ಮಾಡತ್ತೆ. ನಿಮಗೆ ದೊಡ್ಡ ತೊಂದರೆ ಆಗೋದು ತಪ್ಪುತ್ತೆ. ನಾಕು ದಿನ ಕಳೆದರೆ ಸಂಕುಚಿತ ಸ್ನಾಯುಗಳು ಸಡಿಲವಾಗತ್ತೆ. ನೀವು ಮಾಮೂಲಿ ಆಗ್ತೀರಿ.' ಅಂದ್ರು.

ನಾನು ಈ ವಿಷಯನ ಅರಗಿಸಿಕೊಳ್ಳತಾ ಇದ್ದಾಗ, ಸೊಂಟ ಚುಳಕ್ ಅಂತು. ಏನ್ ಮರಾಯ

'ನಾನು ನಿನ್ನ ಕಾಪಾಡ್ದೆ ಅಲ್ವಾ! ಬೇಡವೋ ಶಿಸ್ಯಾ, ಸೊಂಟದ ವಿಸ್ಯಾ ಅನ್ನಬ್ಯಾಡ. ಸೊಂಟದ ಆಸುಪಾಸು ಇನ್ನೂ ಡೆಂಜರು. ಬಾಸು, ಉಸಾರು' ಅಂದಿದ್ದು ಕೇಳಿಸ್ತು.

ಆಗೀಗ, ನಾನು ಸೊಂಟದ ಸ್ನಾಯು ಎಳೆತಕ್ಕೆ ಡಾಕ್ಟರ್ ಬಳಿ ಹೋಗುವುದು, ಮಧ್ಯೆ ಮಧ್ಯೆ... ವಾಕಿಂಗು, ಯೋಗ.. ವ್ಯಾಯಾಮ ಪ್ರಾಣಾಯಾಮ ಅಲ್ಲದೆ ಯೋಗ ವಿಜ್ಞಾನ ಕೇಂದ್ರದಲ್ಲಿ 15 ದಿನಗಳ ಶಿಬಿರವೂ ಆಯಿತು. ಬೆನ್ನು ನೋವು ವಾಸಿ ಆಗದಿದ್ದರೂ ಅಂಕೆಯೊಳಗಿತ್ತು.

2008 ಇರಬಹುದು. ಒಂದು ದಿನ ಅವಸರವಾಗಿ ಯಾವುದೋ ತರಬೇತಿ ಶಿಬಿರಕ್ಕೆ ಹೊರಟಿದ್ದೆ. ಹೊತ್ತಾಯ್ತು. ಸ್ನಾನ ಮಾಡಿ, ಕೈ ಮುಗಿದು, ಅಲ್ಲಿಗೇ ತಿಂಡಿಗೆ ಹೋಗೋಣ ಅಂತಿದ್ದೆ. ನನ್ನ ಒಬ್ಬ ಗೆಳೆಯರೂ ಮನೆಗೆ ಆಗಲೇ ಬಂದಿದ್ದರು. ಸ್ನಾನ ಮಾಡಿ, ಮೈ ಒರೆಸಿಕೊಳ್ತಾ, ಬಲಗಾಲನ್ನು ಅಲ್ಲಿಯೇ ಕಟ್ಟೆ ಮೇಲಿಟ್ಟು ಒರೆಸಿಕೊಳ್ಳಲು ಬಗ್ಗಿದೆ. ಹ್ಞಾ.... ನಾನು ಯಾವುದು ಬೇಡ ಅಂತಾ ಇದ್ನೋ ಅದೇ ಆಯ್ತು. ಕಾಲು ಇಳಿಸೋದೆ ಕಷ್ಟವಾಯಿತು. ಹಂಗೂ.. ಹಿಂಗೂ.. ಹೊರಗೆ ಬಂದು ಕಾರ್ಯಕ್ರಮ ರದ್ದು ಮಾಡಿ, ಮಂಚದಲ್ಲಿ ಮೈ ಚೆಲ್ಲಿದೆ. ನಿಲ್ಲೋಕೆ ಆಗ್ತಾಯಿಲ್ಲ. ತಿರುಗೊಕ್ಕೂ ಆಗ್ತಾಯಿಲ್ಲ.... ಏನ ಮಾಡೋದು. ಪುನಃ.. ಮೂಳೆತಜ್ಞರ ಹತ್ತಿರ ಹೊರಟೆ. ಡಾಕ್ಟರು, ಒಂದೇ ಮಾತು ಹೇಳಿದರು 'ಸ್ಪೈನಲ್ ಟ್ರಾಕ್ಷನ್ ಮಾಡಬೇಕು!' ಟ್ರಾಕ್ಷನ್ ಎಂದರೇನು? ಮೂಳೆ ಎಳೆದು ಕಾಲಿಗೆ ತೂಕ ಹಾಕಿ, ಕಶೇರುಕಗಳ ನಡುವೆ ಸ್ಥಳಾವಕಾಶ ಕಲ್ಪಿಸಲು ಮಾಡುವ ಸರ್ಕಸ್,' ಸೊಂಟದ ದನಿ ನೋವಿನಲ್ಲೂ ಕೇಳಿಸಿತು. 'ಗುರುವೇ, ಯಾಕೆ ಜಾಗರೂಕನಾಗಿರಲಿಲ್ಲ, ಅನುಭವಿಸು'. ಅಂತೂ ಟ್ರಾಕ್ಷನ್ ಹಾಕಿದರು; ಒಂದು ಹದಕ್ಕೆ ಬಂತು.

2010 ಇರಬೇಕು. ಕಾರಿಗೆ ಪೆಟ್ರೋಲ್ ಹಾಕಿಸಲು ಬಸವನ ಗುಡಿಯ ಬಂಕ್ ಬಳಿ ಗಾಡಿ ನಿಲ್ಲಿಸಿದೆ. ಬಾಗಿಲು ತೆರೆದು ಹೊರಬರುತ್ತಿದ್ದೆ. ಮಧ್ಯ ವಯಸ್ಸಿನ ಒಬ್ಬ ವ್ಯಕ್ತಿ ಓಡಿ ಬಂದ. 'ಸಾರ್, ನಿಮಗೆ ಬೆನ್ನು ನೋವಿಯಿದ್ಯಾ? ಹುಷಾರು' ಅಂದ. ಅರೇ! ಇವನಿಗೆ ಹೇಗೆ ತಿಳಿತು ಅಂತ ಆಶ್ಚರ್ಯ ಆಯ್ತು.

'ನಿಮ್ಗೆ ಹೇಗೆ ತಿಳಿತು?'

'ಸಾರ್, ಕಾರಿನ ಡೋರ್ ತೆಗೆದು ಇಳಿದ ಸ್ಟೈಲ್ ನಲ್ಲಿಯೇ ಅರ್ಥ ಆಗ್ಬಿಡ್ತು. ನಾನಿಲ್ಲೇ ಕೆಲ್ಸ ಮಾಡೋದು ನನ್ನ ಹೆಸರು ರಾಮು' ಅಂದ.

ಪೆಟ್ರೋಲ್ ಹಾಕಿಸ್ಕೊಂಡು, ಗಾಳಿ ಹತ್ರ ಬಂದು ಕಾಯ್ತಾ ಇದ್ದೆ. ಆ ಮನುಷ್ಯ ಅಲ್ಲಿಗೆ ಬಂದ.

'ಸಾರ್, ಎಷ್ಟು ವರ್ಷದಿಂದ ನಿಮಗೆ ಸೊಂಟ ನೋವು?'

'ಐದೊ ಅರೋ ಆಗಿರ್ಬೇಕು'

'ಏನು ಟ್ರೀಟ್‌ಮೆಂಟ್ ತಗೊಂಡ್ರಿ?'

ನಿಜ ಹೇಳಬೇಕು ಅಂದ್ರೆ, ನನ್ಗೆ ಅವತ್ತು ಬೆನ್ನು ನೋವು ಇರಲಿಲ್ಲ. ಆದರೆ ಅವನು ಸೂಕ್ಷ್ಮವಾಗಿ ಗಮನಿಸಿ, ವಿಚಾರಿಸುತ್ತಿದ್ದುದರಿಂದ ಪ್ರಭಾವಿತನಾಗಿದ್ದೆ.

'ಸಾರ್, ನಮ್ಮ ತಂದೆಗೆ ನಿಮಗಿಂತ ಜಾಸ್ತಿ ವಯಸ್ಸು. 80 ರ ಹತ್ರ ಇರಬೋದು. ಗಟ್ಟಿಮುಟ್ಟಾಗಿದಾರೆ. ಇವಾಗ್ಲೂ ಹೊಲದಲ್ಲಿ ಕೂಲಿ ಮಾಡ್ತಾರೆ. ಆರು ತಿಂಗಳ ಹಿಂದೆ ಅವ್ರಿಗೆ ತುಂಬಾ ಸೊಂಟ ನೋವು ಬಂತು. ಏಳೋಕೆ ಆಗ್ತಾ ಇರಲಿಲ್ಲ. ಭಾಳಾ ಬೇಜಾರ್ನಲ್ಲಿ ಇದ್ರು. ನಮ್ಮೂರಲ್ಲಿ ಒಬ್ರು ಶಾಮಾಚಾರ್ ಅಂತ ನಾಟಿ ವೈದ್ಯರು ಇದಾರೆ. ಅವರು ನಾನು ಎಣ್ಣೆ ಕೊಡ್ತಿನಿ. ಒಂದು ವಾರ ಚೆನ್ನಾಗಿ ತಿಕ್ಕಿ, ಬಿಸಿಲಲ್ಲಿ ಸ್ವಲ್ಪ ಹೊತ್ತು ಮೈ ಕಾಯಿಸಿಕೊಂಡು, ಬಿಸಿ ಮಾಡಿ, ನೀರಲ್ಲಿ ಸ್ನಾನ ಮಾಡಿ, ಎರಡು ಗಂಟೆ ರೆಸ್ಟ ತಂಗೊಂಡ್ರೆ, ಆಯ್ತು ಅಂದ್ರು,

ನಮ್ಮ ತಂದೆಗೆ ಒಂದುವಾರಕ್ಕೇ ವಾಸಿ ಆಯ್ತು. ಈಗ ಮತ್ತೆ ಕೂಲಿಗೆ ಹೋಗ್ತಾಯಿದಾರೆ. ನೀವೂ ಟ್ರೈ ಮಾಡಿ ಸಾರ್'

ನನ್ಗೆ ಬೇಡ ಅನ್ನಿಸ್ತು.

'ಬೇಡ, ನಮಸ್ಕಾರ' ಅಂತ ಹೊರಟೆ. ಆದ್ರೆ, ರಾಮು, 'ಸಾರ್, ತಪ್ಪು ತಿಳಿಬೇಡಿ. ನಾನು ದುಡ್ಡಿಗೊಸ್ಕರ ನಿಮಗೆ ಮೋಸ ಮಾಡ್ತಿಲ್ಲ. ಆ ನಾಟಿ ವೈದ್ಯ ಶಾಮಾಚಾರ್ ಅವರೂ ನನಗೂ ಎಣ್ಣೆ ಮಾಡೋದು ಹೇಳಿ ಕೊಟ್ಟಿದ್ದಾರೆ. ಆದರೆ ಒಂದು ಷರತ್ತು ಹಾಕಿದಾರೆ. ಯಾವ ಕಾರಣಕ್ಕೂ ಒಂದು ಪೈಸೆ ಕೂಡಾ ತಗೋಕೂಡದು. ಭಗವಂತನ ಹೆಸರಲ್ಲಿ ಸೇವೆ ಮಾಡಬೇಕು ಅಂದ್ರೆ ನೋವು ವಾಸಿಯಾಗೋದು ಅಂತ. ಸಾರ್, ಶಾಮಾಚಾರ್ ಅವರ ಗುರುಗಳು, ಇಲ್ಲೇ ಕೋರಮಂಗಲದಲ್ಲಿ ಇದಾರೆ. ಅರಮನೆ ವೈದ್ಯರಂತೆ. ಈಗಿರೋರು ಅಲ್ಲ. ಅವರ ತಂದೆಯವರು. ಅವರ ಕಾಲದಿಂದ ಬಂದಿರೋ ವೈದ್ಯ ಸಾರ್ ಇದು. ನಾವು ತಯಾರಿಸೋ ಎಣ್ಣೆಗೆ ಅವರು ಒಂದಿಷ್ಟು ಪುಡಿಗಳನ್ನು, ಅಂಜನಗಳನ್ನು ಹಾಕ್ತಾರೆ. ಅವರೂ ಸರ್ವೀಸ್ಗೆ ದುಡ್ಡು ತಗೊಳಲ್ಲ.'

ನಾನು, ಒಂದರೆಕ್ಷಣ ಸುಮ್ಮನಾದೆ. ರಾಮು ಹೇಳಿದ.

'ಸಾರ್ ನಿಮ್ಮ ನಂಬರ್ ಕೊಡಿ. ನಾನೇ ಫ್ರೀ ಆದಾಗ ಫೋನ್ ಮಾಡ್ತಿನಿ. ನಿಮ್ಮ ಮನೆಗೆ ಬರ್ತಿನಿ'

ನಾನು ಯಾಂತ್ರಿಕವಾಗಿ ನನ್ನ ಮೊಬೈಲ್ ನಂಬರ್ ಹೇಳ್ದೆ.

ಕೆಲವು ದಿನ ಕಳೀತು. ನಾನು ರಾಮು ವಿಷ್ಯ, ನನ್ನ ಸೊಂಟದ ವಿಷಯಗಳನ್ನು ಮರೆತು ಬಿಟ್ಟಿದ್ದೆ. ಒಂದು ದಿನ ಫೋನ್ ರಿಂಗಣಿಸಿತು.

'ನಾನು ಸಾರ್, ರಾಮು. ಅದೇ ಅವತ್ತು ಬಸವನಗುಡಿ ಪೆಟ್ರೋಲ್ ಬಂಕ್ ಹತ್ರ ಸಿಕ್ಕಿದ್ದನಲ್ಲ. ಅದೇ ಸಾರ್ ಸೊಂಟದ ಎಣ್ಣೆ'

ಜ್ಞಾಪಕ ಬಂತು. 'ಹೇಳಿ ರಾಮು, ಏನು ವಿಷ್ಯ'

'ಅದೇ ಸಾರ್, ನಾನು ನಮ್ಮ ಗುರುಗಳು ನಾಟಿ ವೈದ್ಯ ಶಾಮಾಚಾರ್ ಅವರ ಹತ್ರ ಮಾತಾಡ್ದೆ. ಅವರು, ಅವರ ಗುರುಗಳ ಹತ್ರನೂ ಮಾತಾಡಿದ್ರಂತೆ. ಪಾಪ, ಸಾರ್ ಅವರು ಒಳ್ಳೆಯವರು. ಅವರಿಗೆ ಸಹಾಯ ಮಾಡು. ಎಣ್ಣೆ ತಯಾರಿಸಿ, ತಕ್ಕೊಂಬಾ ಕೋರಮಂಗಲಕ್ಕೆ. ನಾನು ಎಲ್ಲಾ ಪುಡಿ; ಅಂಜನಗಳನ್ನು ಬೆರೆಸಿ ಕೊಡ್ತಿನಿ. ದುಡ್ಡು ಕೇಳ್ ಬ್ಯಾಡ ಅಂದಿದಾರೆ. ಇವತ್ತು ಬರ್ಲಾ' ಅಂದ.

'ಬೇಡ, ಭಾನುವಾರ ಬನ್ನಿ' ಎಂದೆ.

ಭಾನುವಾರ, 10 ಗಂಟೆಗೆ ರಾಮು ಮನೆಗೆ ಬಂದ. ಕೈನಲ್ಲಿ, ಒಂದು ಚೀಲ.' ಸಾರ್, ಸ್ಟವ್ ಎಲ್ಲಿ? ಎರಡು ಲೀಟರ್ ಕೊಬ್ಬರಿ ಎಣ್ಣೆ ಬೇಕು.' ಎಣ್ಣೆ ಕುದಿ ಶುರುವಾದಾಗ, ಅದಕ್ಕೆ ಬ್ಯಾಗಿನಿಂದ ಏನೋ ಪುಡಿ ಹಾಕಿದ. ವಾಸನೆಯಿಂದ ಗೊತ್ತಾಯಿತು. 'ಕರ್ಪೂರಾನಾ?

'ಹೌದು, ಸರ್'

ಆಮೇಲೆ, ಬ್ಯಾಗಿನಿಂದ ಗುಲಾಬಿ ಪಕಳೆಗಳನ್ನು ತೆಗೆದು ಕುದಿ ಎಣ್ಣೆಗೆ ಹಾಕಿದ. 15 ನಿಮಿಷ ಕುದಿಸಿ, ಎಣ್ಣೆಯನ್ನು ಸೋಸಿ, ಸಾರ್, ನಡೀರಿ. ಕೋರಮಂಗಲಕ್ಕೆ ಹೋಗೋಣ ಅಂದ. ನಾನು ಕಾರು ಕೀ ತೆಗೆದುಕೊಂಡು ಹೊರಟೆ.

ಪಕ್ಕದಲ್ಲಿದ್ದ ನನ್ನ ಅಣ್ಣ ನಾನೂ ಬರುವೆ ಅಂತ ಹೊರಟ. ರಸ್ತೆ ಉದ್ದಕ್ಕೂ ಎಣ್ಣೆಯದೆ ಮಾತು. ಅದರ ಮಹಿಮೆಯನ್ನು, ಅವರ ಗುರು ಶಾಮಾಚಾರ್, ಅರಮನೆ ವೈದ್ಯರ ಇತಿಹಾಸ.... ಹೀಗೆ ನಡೆಯಿತು. ಕೊನೆಗೆ, ಕೋರಮಂಗಲದಲ್ಲಿ ಒಂದು ಅಂಗಡಿಗೆ ಹೋದೆವು.

ಅಂಗಡಿಯಾತ ರಾಮುವನ್ನು ಚೆನ್ನಾಗಿ ಬಲ್ಲವನಂತೆ ಕಂಡು ಬಂದ. ಅಲ್ಲಿಯೂ ಶಾಮಾಚಾರ್, ಅರಮನೆ ವೈದ್ಯರ ಬಗ್ಗೆ ಮಾತುಕತೆ ನಡೆಯಿತು. ಅಂಗಡಿಯಾತ ಹೇಳಿದ 'ಇವತ್ತು ಗುರುಗಳು ಇಲ್ಲ. ಇದ್ದಕ್ಕಿದಂತೆ ಹೊಸಮಂಗಲಕ್ಕೆ ಹೋದರು. ಅಲ್ಲಿ ಯಾರಿಗೋ ಹುಷಾರಿಲ್ಲವಂತೆ. ಆದರೆ ನನಗೆ ಎಲ್ಲಾ ಹೇಳಿದಾರೆ. ಯಾವ ಯಾವ ಪುಡಿ ಎಣ್ಣೆಗೆ ಬೆರಸಬೇಕೆಂದು ತಿಳಿಸಿದಾರೆ. ಪಾಪ, ನಿಮಗೆ ತುಂಬಾ ಬೆನ್ನು ನೋವಂತೆ.'

ಅವರ ಕಾಳಜಿ ನನಗೆ ಬಹಳ ಖುಷಿಯಾಯಿತು. ಅಂಗಡಿಯಾತ ಮುಂದುವರೆಸಿದ 'ಸರ್, ನಿಮಗೆ ಕನ್ಸಲ್ಟೇಷನ್ ಚಾರ್ಜಸ್ ಇಲ್ಲ. ಈ ಪುಡಿಗಳನ್ನ ಸ್ಪೆಷಲ್ ಆಗಿ ಮಾಡಿದ್ದೇವೆ. ತುಂಬಾ ಎಫೆಕ್ಟೀವ್. ಬರೀ ಕಾಸ್ಟ್ ಅಷ್ಟೆ ಕೊಡಿ ಸಾಕು'

'ಸರಿ'

ಅವನು.. ಒಂದೊಂದೆ ಪುಡಿಯನ್ನು ಎಣ್ಣೆಯಲ್ಲಿ ಹಾಕತೊಡಗಿದ. ಅವುಗಳ ವಿಶೇಷ ಗುಣಗಳನ್ನು ವರ್ಣಿಸಿ, ಬೆಲೆ ಹೇಳಿ ಹಾಕುತ್ತಿದ್ದ. ಮಧ್ಯೆ ಮಧ್ಯೆ ರಾಮು.. ಸಾರ್ ಈ ಪುಡಿ ಒಳ್ಳೆಯದು. ಆ ಪುಡಿ ಒಳ್ಳೆಯದು. ಬೆಲೆ ಕೇಳ್ಕೊಳಿ ಅಂತ ಇದ್ದ.

ಒಂದು ಹಂತಕ್ಕೆ ನಿಲ್ಲಿಸಿ, ಅಂಗಡಿಯಾತ ಹೇಳಿದ 'ಗುರುಗಳು ಹೇಳಿದ ಎಲ್ಲಾ ಪುಡಿ ಹಾಕಿದ್ದಾಯ್ತು. ಇನ್ನೂ ಒಂದು ಇದೆ. ಅದಕ್ಕೆ ಚಿನ್ನದ ಪುಡಿ ಸೇರ್ಸಿರ್ತೀವಿ. ಸ್ವಲ್ಪ ಬೆಲೆ ಹೆಚ್ಚು'

ನಮ್ಮಣ್ಣ ಕೇಳಿದ 'ಇಲ್ಲಿವರೆಗೆ ಎಷ್ಟಾಯ್ತು?'

'ಸಾರ್, ನಿಮಗೆ ಕನ್ಸೆಷನ್ ಕೊಟ್ಟಿದೀವಿ. ಶಾಮಾಚಾರ್ ಕಡೆಯವರು ಅಲ್ವಾ. 33500/- ಆಗಿದೆ. ಉಪಯೋಗಿಸಿ. ಜೀವನದಲ್ಲಿ ಯಾವತ್ತೂ ಬೆನ್ನು ನೋವು ಬರಲ್ಲ. ಚಿನ್ನದ ಪುಡಿ ಹಾಕಲಾ?'

ನನ್ನಣ್ಣನಿಗೆ ಸಿಟ್ಟು ಬಂದಿತ್ತು.

'ಏಳು ರವಿ ಹೋಗೋಣ. ಎಲ್ಲಾ ಮೋಸ.' ಅಷ್ಟು ಹೊತ್ತಿಗೆ ರಾಮು ನಮ್ಮ ಎಣ್ಣೆ ಪಾತ್ರೆ ಹಿಡ್ಕೊಂಡು ಹೊರಗೆ ಹೊರಟಿದ್ದ. ಅಣ್ಣ ಕೂಗಿದ 'ಏಯ್ ರಾಮು ಪಾತ್ರೆ ಕೊಡಿಲ್ಲಿ' ಎದ್ದು ಹೋಗಿ ಎಣ್ಣೆ ಪಾತ್ರೆ ಕಿತ್ಕೊಂಡ. ಅಂಗಡಿಯಾತ'ಸಾರ್, ಚಿನ್ನದ ಪುಡಿ ಬೇಡ ಅಂದ್ರೆ, ಬೇಡ. ಇಲ್ಲಿವರೆಗೆ ಕೊಟ್ಟ ಪುಡಿಯ ಕಾಸು ಕೊಡಿ' ಅಂದ.

ನಾನು ಮರುಮಾತಾಡದೆ. 33,500/- ನಗದು ಕೊಟ್ಟೆ. ರಾಮು ಅಲ್ಲಿ ನಿಲ್ಲಲೇ ಇಲ್ಲ. 'ಸಾರ್ ನನಗೆ ಒಂದು ಸ್ವಲ್ಪ ಕೆಲಸ ಇದೆ. ಆಮೇಲೆ ಫೋನ್ ಮಾಡ್ತಿನಿ' ಅಂದವನೆ ಸರಸರ ಜನಜಂಗುಳಿಯಲ್ಲಿ ಮಾಯವಾದ.

ನನಗೆ ಮೂರ್ಖನಾದ ಅನುಭವ ಆಗತೊಡಗಿತು. ಅಣ್ಣ 'ಏನು, ರವಿ, ನಿನಗೆ ಸ್ವಲ್ಪನೂ ಬುದ್ಧಿ ಬೇಡವೇ?' ಅನ್ನುತ್ತಿದ್ದ.

ರು.33500/- ಕೊಟ್ಟ ಹೊಟ್ಟೆಕಿಚ್ಚಿಗೆ ಆ ಸೀದ ಎಣ್ಣೆಯನ್ನು ನಾನು ಬೆನ್ನಿಗೆ ಚೆನ್ನಾಗಿ ಹಚ್ಚಿದೆ. ಎರಡು ಲೀಟರ್ ಖಾಲಿಯಾಗೇಕಲ್ಲ! ದಿನವೂ ಸ್ನಾನಕ್ಕೆ ಮುಂಚೆ ಅದೇ ಕೆಲಸ! 15 ವರ್ಷ ಕಳೆದರೂ ಬೆನ್ನುನೋವು ಮಾಯವಾಗಿಲ್ಲ. ಬಸವನಗುಡಿಯ ಪೆಟ್ರೋಲ್ ಬಂಕಿನಲ್ಲಿ ಆ ನಂತರ ರಾಮು ಕಾಣಿಸಲೇ ಇಲ್ಲ!

ಬಿಸಿಲು... ಬೇಸಗೆ

ಕವಿ ಕಣ

» ಡಿ.ಎನ್.ಅಕ್ಕಿ, ಇಂಡಿ

ಏನು ಬಿಸಿಲು ಎಂಥ ಸೆಕೆ ಬಸಿಯುತ್ತಿದೆ ಬೆವರು ।
ಹೊಸಜೋಡಿಗೆ ಹೊಸಲೆಕ್ಕಕೆ ವೈಶಾಖ ಬರೆಯುತ್ತಿದೆ ಹೆಸರು॥
ಎರೆಬಿಡಿಯಲಿ ಗಿಡಕಂಟಿಯಲಿ ಜೇನಿಟ್ಟಿವೆ ಸವಿಗೆ
ಪಂಚಮದಲಿ ಹಾಡುತ್ತಿದೆ ಮಾಮರದಲಿ ಕೋಗಿಲೆ ॥
ಅವಕಾಳಿ ಮಳೆಮಿಂಚು ಗದ್ದರಿಸುವ ಮುಗಿಲು ।
ಖಡಿಲೆಂದು ಬಯಲಿಗೆ ಇರಿಯುತ್ತಿದೆ ಸಿಡಿಲು ॥
ಹಿಮದ್ದರಳು ಬಡಿಯುತ್ತಿವೆ ಸಿಡಿಗುಂಡಿನ ತೆರದಿ
ಮರದಡಿಯ ಆಸರೆಗೆ ಎರಗುತ್ತಿದೆ ಅಶನಿ ॥
ಸಿಂಗಾರದಿ ಗುಡಿಗೋಪುರ ಸಜ್ಜಾಗಿವೆ ಜಾತರೆಗೆ
ಭಕ್ತಿಭಾವದಿ ತೇರೆಳೆಯುತ್ತಿದೆ ಸಂಭ್ರಮದಲಿ ಜನತೆ ॥
ಮಾಗಿಯುಳುಮೆ ಬಾಸಿಂಗ ಹಿಗ್ಗಿನ ನಿಬ್ಬಣದ ಸಾಲು ।
ಕೊಡುಕೊಳ್ಳುವ ಒಕ್ಕಲು ಮಕ್ಕಳ ಹಸನಾಗಲಿ ಬದುಕು ॥

ನಮ್ಮ ಹೊಲಗಳಲ್ಲಿದೆ ಉತ್ತಮ ಎಣ್ಣೆ!

ಕ್ಷ ಕಿರಣ

» ಡಾ ಶಶಿಕಿರಣ್ ಉಮಾಕಾಂತ್

ಕಳೆದ ವಾರ ತುಪ್ಪ ತಿನ್ನಿ ಎಂದೆ ನಿಜ; ಆದರೆ, ಎಲ್ಲದಕ್ಕೂ ಬಳಸುವಷ್ಟು ಅಗ್ಗವಲ್ಲ ನಮ್ಮ ತುಪ್ಪ. ಕೆಲವರಿಗೆ ತೆಂಗಿನ ಎಣ್ಣೆಯ ಪರಿಮಳ ಇಷ್ಟವಾಗುವುದಿಲ್ಲ. ಹಾಗಾದರೆ ಅವೆರಡನ್ನು ಬಿಟ್ಟು ಅತ್ಯುತ್ತಮ ಆಯ್ಕೆ ಯಾವುದು? ಇದರಲ್ಲಿ ಮಧ್ಯಮ ಮಾರ್ಗವಿದೆಯೇ? ಹೌದು, ಅದೇ ನಮ್ಮ ಶೇಂಗಾ ಎಣ್ಣೆ (ಕಡಲೆಕಾಯಿ ಎಣ್ಣೆ). ಇದರಲ್ಲಿ ಮುಫಾ (ಎಂಯುಎಫ್‌ಎ) ಎಂಬ ಆರೋಗ್ಯ ರಕ್ಷಕ ಇದೆ! ಸೂರ್ಯಕಾಂತಿ ಅಥವಾ ಕಾರ್ನ್ ಎಣ್ಣೆಗಳಲ್ಲಿ ಉರಿಯೂತ ಉಂಟುಮಾಡುವ ಪಿಯುಎಫ್‌ಎ ಅಂಶವಿದ್ದರೆ, ಶೇಂಗಾ ಎಣ್ಣೆಯಲ್ಲಿ ಎಂಯುಎಫ್‌ಎ ಹೆಚ್ಚಿರುತ್ತದೆ. ದುಬಾರಿ ಬೆಲೆಯ ಆಲಿವ್ ಎಣ್ಣೆಯನ್ನು ಆರೋಗ್ಯಕರ ಎನ್ನಲು ಇದೇ ಮುಫಾ ಕಾರಣ. ಅದೇ ಉತ್ತಮ ಅಂಶ ನಮ್ಮ ಶೇಂಗಾ ಎಣ್ಣೆಯಲ್ಲೂ ಇದೆ. ಇದು ನಮ್ಮ ದೈನಂದಿನ ಅಡುಗೆಗೆ ಅತ್ಯುತ್ತಮ; ಇದು ಅತಿ ಹೆಚ್ಚು ಉಷ್ಣತೆಯನ್ನು ತಡೆದುಕೊಳ್ಳುವ ಸಾಮರ್ಥ್ಯ ಇರುವ ಎಣ್ಣೆ, ಹಾಗಾಗಿ ನಮ್ಮ ಒಗ್ಗರಣೆಗಳಿಗೂ ಸೂಕ್ತ. ಇದು ಹೃದಯಕ್ಕೆ ರಕ್ಷಣೆ ನೀಡುತ್ತದೆ. ರುಚಿಯೂ ಹಿತಕರ.

ರಿಫೈನ್ಡ್ ಮತ್ತು ಫಿಲ್ಟರ್ಡ್ ವ್ಯತ್ಯಾಸ

ಇಲ್ಲಿಯೇ ಬಹುತೇಕರು ಎಡವುತ್ತಾರೆ. ಅಂಗಡಿಗೆ ಹೋಗಿ ರಿಫೈನ್ಡ್ ಶೇಂಗಾ ಎಣ್ಣೆ ಕೊಳ್ಳುತ್ತಾರೆ. ಅದು ಬಣ್ಣ ಮತ್ತು ಪರಿಮಳ ಇಲ್ಲದ ನಿರ್ಜೀವ ಎಣ್ಣೆ. ರಾಸಾಯನಿಕ ಪ್ರಕ್ರಿಯೆ ನಡೆಸಿ ಅದರ ನೈಸರ್ಗಿಕ ಗುಣಗಳನ್ನು ಕಳೆಯಲಾಗಿರುತ್ತದೆ. ದಯವಿಟ್ಟು ಇದನ್ನು ದೂರವಿಡಿ! ನೀವು ಕೊಳ್ಳಬೇಕಾದ್ದು ಫಿಲ್ಟರ್ಡ್ ಅಥವಾ ಕೋಲ್ಡ್ ಪ್ರೆಸ್ಡ್ ಶೇಂಗಾ ಎಣ್ಣೆ. ಇದು ಬಂಗಾರದ ಹಳದಿ ಬಣ್ಣದಲ್ಲಿರಲಿ. ಶೇಂಗಾ ಬೀಜದ ನೈಸರ್ಗಿಕ ಪರಿಮಳವಿರಲಿ. ಸ್ವಲ್ಪ ದಪ್ಪಗಿರಲಿ (ಥಿಕ್). ಆ ದಪ್ಪಗಿರುವುದೇ ಪೋಷಕಾಂಶ. ಅದನ್ನು ಫಿಲ್ಟರ್ ಮಾಡಿ ತೆಗೆಯಬರದು.

ರೈಸ್ ಬ್ರಾನ್ ಆಯಿಲ್ (ಅಕ್ಕಿ ತೌಡಿನ ಎಣ್ಣೆ)

ಒಳ್ಳೆಯ ಶೇಂಗಾ ಎಣ್ಣೆ ಸಿಗದಿದ್ದರೆ, ಅಕ್ಕಿ ತೌಡಿನ ಎಣ್ಣೆ ಒಂದು ಪರ್ಯಾಯ ಆಯ್ಕೆ. ಇದು ಅತಿ ಹೆಚ್ಚು ಉಷ್ಣತೆಯನ್ನು ತಡೆದುಕೊಳ್ಳುವ ಸಾಮರ್ಥ್ಯ ಇರುವ ಎಣ್ಣೆಯಾದ್ದರಿಂದ ಕರಿಯಲು ಸೂಕ್ತ. ಇದರಲ್ಲಿರುವ 'ಒರಿಜಾನಾಲ್' ಹೃದಯಕ್ಕೆ ಒಳ್ಳೆಯದು. ಆದರೆ ಮಾರುಕಟ್ಟೆಯಲ್ಲಿ ಸಿಗುವ ರೈಸ್ ಬ್ರಾನ್ ಎಣ್ಣೆಯನ್ನು ಬಹುತೇಕ ರಾಸಾಯನಿಕಗಳನ್ನು ಬಳಸಿ ಮಾಡಲಾಗುತ್ತದೆ. ಹಾಗಾಗಿ ಇದು ತುಪ್ಪ ಅಥವಾ ಗಾಣದ ಎಣ್ಣೆಯಷ್ಟು ಉತ್ತಮವಲ್ಲ, ಆದರೆ ರಿಫೈನ್ಡ್ ಸೂರ್ಯಕಾಂತಿ ಎಣ್ಣೆಗಿಂತ ಎಷ್ಟೋ ಉತ್ತಮ.

ತಪ್ಪು ಕಲ್ಪನೆಗಳು ಮತ್ತು ವಾಸ್ತವ

ತಪ್ಪು ಕಲ್ಪನೆ: ಶೇಂಗಾ ಎಣ್ಣೆ ಕೂಡ ಇತರ ಕಾಳುಗಳ ಎಣ್ಣೆಯಂತೆಯೇ.

ವಾಸ್ತವ: ಇಲ್ಲ. ಇದರ ರಾಸಾಯನಿಕ ರಚನೆ ಬೇರೆ. ಸೋಯಾ ಅಥವಾ ಸೂರ್ಯಕಾಂತಿ ಎಣ್ಣೆಗೆ ಹೋಲಿಸಿದರೆ, ಇದನ್ನು ಕಾಯಿಸಿದಾಗ ಉತ್ಪತ್ತಿಯಾಗುವ ವಿಷಕಾರಿ ಅಂಶಗಳು ಕಡಿಮೆ.

ತಪ್ಪು ಕಲ್ಪನೆ: ಭಾರತೀಯ ಅಡುಗೆಗೆ ಆಲಿವ್ ಆಯಿಲ್ ಶ್ರೇಷ್ಠ

ವಾಸ್ತವ: ಇಲ್ಲ. ಆಲಿವ್ ಎಣ್ಣೆ ಸಲಾಡ್‌ಗಳ ಮೇಲೆ ಹಸಿಯಾಗಿ ಹಾಕಲು ಮಾತ್ರ ಒಳ್ಳೆಯದು. ಭಾರತೀಯ ಶೈಲಿಯಲ್ಲಿ ಕರಿಯಲು ಅಥವಾ ಒಗ್ಗರಣೆ ಹಾಕಲು ಶೇಂಗಾ ಎಣ್ಣೆಯೇ ಅದಕ್ಕಿಂತ ಶ್ರೇಷ್ಠ. ಏಕೆಂದರೆ ಆಲಿವ್ ಎಣ್ಣೆ ಹೆಚ್ಚು ಬಿಸಿಯನ್ನು ತಡೆದುಕೊಳ್ಳಲಾರದು.

ಅಂಗಡಿಯಿಂದ ತಂದ ಶೇಂಗಾ ಎಣ್ಣೆಯ ಬಾಟಲ್ ತೆರೆದು ಪರಿಮಳ ನೋಡಿ. ಅದಕ್ಕೆ ಯಾವುದೇ ಪರಿಮಳ ಇಲ್ಲದಿದ್ದರೆ, ಅದರಿಂದ ನಿಮ್ಮ ದೇಹಕ್ಕೆ ಯಾವುದೇ ಲಾಭವಿಲ್ಲ. ಪ್ಯಾಕೆಟ್ ಮೇಲೆ ಗಾಣದ ಎಣ್ಣೆ ಎಂದಿದ್ದರೆ ಖರೀದಿಸಿ. ನೈಸರ್ಗಿಕ ಶೇಂಗಾ ಎಣ್ಣೆ ಹೆಚ್ಚು ದಿನ ಇಟ್ಟರೆ ಹಾಳಾಗಬಹುದು. ಹಾಗಾಗಿ 1-2 ಲೀಟರ್ ಮಾತ್ರ ತನ್ನಿ, ಬಿಸಿಲಿಗೆ ಇಡಬೇಡಿ. ಆರೋಗ್ಯವಾಗಿರಲು ನಾವು ವಿದೇಶದಿಂದ ದುಬಾರಿ ಎಣ್ಣೆಗಳನ್ನು (ಉದಾ: ಆಲಿವ್ ಆಯಿಲ್) ಆಮದು ಮಾಡಿಕೊಳ್ಳುವ ಅಗತ್ಯವಿಲ್ಲ. ಶೇಂಗಾ ಎಣ್ಣೆ ಸಮತೋಲಿತವಾಗಿದೆ, ಸುಸ್ಥಿರವಾಗಿದೆ ಮತ್ತು ನಮ್ಮದೇ ಮಣ್ಣಿನ ಬೆಳೆ. ರಾಸಾಯನಿಕಗಳನ್ನಲ್ಲ, ಎಣ್ಣೆಯನ್ನು ಕೊಳ್ಳಿ. ತಿಳಿ ಬಣ್ಣಕ್ಕಿಂತ ಹಳದಿ ಬಣ್ಣದ ಎಣ್ಣೆ ಉತ್ತಮ.

ಮಣ್ಣಿನ ಬೆಲೆಯ ಹೂದಾನಿ

» ಪೋಲೇನಹಳ್ಳಿ ರಮೇಶ್

ಅಂದು ಆ ನನ್ನ ರಸ್ತೆ ಬದಿ ಅಂಗಡಿಯಲ್ಲಿ ಯಥಾ ಪ್ರಕಾರ ಮಣ್ಣಿನ ಬೊಂಬೆಗಳನ್ನ ಮಾರುತ್ತಿದ್ದೆ. ಆ ಹುಡುಗಿ ನಡೆದು ಬಂದಳು. ಮುಂದಿನ ಸಾಲಿನಲ್ಲಿ ಇಟ್ಟಿದ್ದ ಆ ಹೂದಾನಿಯನ್ನು ನೋಡುತ್ತಾ ನಿಂತಳು. ಅವಳ ಕಣ್ಣುಗ್ಗಳಲ್ಲಿ ಏನೋ ಆನಂದ ಕಂಡಿತು. ಅದನ್ನು ತದೇಕಚಿತ್ತ ನೋಡಿ ಈ ಬದಿ ತಿರುಗಿ ಆ ಬದಿ ತಿರುಗಿ ನೋಡಿ, ಕೊನೆಗೆ ಮೆಲ್ಲನೆ ಕೈಗೆತ್ತಿಕೊಂಡು ಅದನ್ನು ಸವರುತ್ತ ಸಂತೋಷಿಸಿದಳು. 'ಇದಕ್ಕೆ ಎಷ್ಟಾಗುತ್ತದೆ?' ಎಂದಳು. ನಾನು ಅವಳ ಕಣ್ಣಿನ ಹೊಳಪನ್ನು ಗಮನಿಸಿದ್ದವನಾಗಿ ಯೋಚಿಸಿ, '100 ರೂಪಾಯಿ ಕೊಡಿ ಸಾಕು' ಎಂದೆ.

ಇದೇ ಹೂದಾನಿ ಇತರೆ ಅಂಗಡಿಗಳಲ್ಲಿ 120-130 ರೂಪಾಯಿಗೆ ಮಾರುತ್ತಿದ್ದಾರೆ ಎಂಬ ವಿಷಯ ನನಗೂ ತಿಳಿದಿತ್ತು. ಆದರೆ ಈ ಹೂದಾನಿ ಅವಳಿಗೆ ಇಷ್ಟವಾಗಿದೆ ಎಂದು ಅರಿತು ನಾನು ಕಡಿಮೆ ಬೆಲೆ ಹೇಳಿದೆ. ಅದೇಕೋ ಅವಳು ಮತ್ತೆ ಅದನ್ನು ನನ್ನ ಕೈಯಲ್ಲಿಟ್ಟು ಜೋಲು ಮುಖ ಹಾಕಿ ಹೊರಟೇಬಿಟ್ಟಳು. ಅವಳು ಏಕೆ ಹಾಗೆ ಮಾಡಿದಳು ನನಗೆ ಅರ್ಥವಾಗಲಿಲ್ಲ.

ಅವಳು ಮತ್ತೆ ಸುತ್ತಿ ಬಂದು ಅದೇ ಹೂದಾನಿಯನ್ನ ನೋಡುತ್ತಾ ನಿಂತಳು. 'ಬೆಲೆ ಕಡಿಮೆ ಇಲ್ಲವೇ?' ಎಂದಳು. ನಾನು 'ನಿಮಗಾಗಿ 90 ರುಪಾಯಿಗೆ ಕೊಡುತ್ತೇನೆ' ಎಂದೆ. ಅವಳು ಮರು ಮಾತನಾಡಲಿಲ್ಲ. ಹೊರಟೆಹೋದಳು. ನನಗೂ ನಿರಾಸೆಯಾಯಿತು. ನಾನು ಚಿಕ್ಕಂದಿನಲ್ಲಿ ಅಮ್ಮನ ಜೊತೆ ಬೊಂಬೆ ಅಂಗಡಿಗೆ ಹೋಗಿದ್ದ ನೆನಪಾಯಿತು. ನನಗಿಷ್ಟವಾದ ಬೊಂಬೆಯನ್ನು ಕೈಗೆತ್ತಿಕೊಂಡು ಅಮ್ಮನ ಕಡೆ ನೋಡಿ ನಕ್ಕಿದ್ದೆ. ಅಮ್ಮ 'ನಿನಗೆ ಇಷ್ಟವಾಯಿತಾ?' ಎಂದಿದ್ದಳು. ನಾನು ಅವಳ ಕೈ ಹಿಡಿದು ಜಗ್ಗಿದ್ದೆ. 'ಸರಿ ಇರು' ಎಂದು ಹೇಳಿ ಅದರ ಬೆಲೆ ಕೇಳಿದಳು. ಅಂಗಡಿಯವನು 11 ರುಪಾಯಿ ಎಂದ. ಅಮ್ಮ ತನ್ನ ಪರ್ಸನ್ನು ತೆಗೆದು ಜಿಪ್ ತೆಗೆದು, ತಡಕಾಡಿ ಅದರಲ್ಲಿ ಕೇವಲ ಒಂಬತ್ತು ರೂಪಾಯಿ ಇರುವುದು ಕಂಡು, 'ಕಡಿಮೆ ಇಲ್ಲವೇ?' ಎಂದು ಮೆಲ್ಲನೆ ಕೇಳಿದ್ದಳು. ಅವನು ನಿರ್ಭಾವುಕನಾಗಿ 'ಇಲ್ಲ' ಎಂದಿದ್ದ.

ಅಂದು ನನಗೆ ಅಳು ಬಂದಿತ್ತು. ತಲೆತಗ್ಗಿಸಿ ನಡೆದಿದ್ದೆ. ಅಮ್ಮನ ಕಣ್ಣು ಒದ್ದೆಯಾಗಿತ್ತು. ಹೀಗೆಯೇ ಮುಂದೊಮ್ಮೆ ಮತ್ತೊಂದು ಅಂಗಡಿಯಲ್ಲಿ ಕ್ರಿಕೆಟ್ ಬ್ಯಾಟ್ ನೋಡಿದ್ದೆ. ಅದನ್ನು ಕೊಳ್ಳುವ ಆಸೆ ನನ್ನಲ್ಲಿ. ಆಗಾಗ ಆ ಅಂಗಡಿಗೆ ಹೋಗಿ ಬ್ಯಾಟನ್ನ ಕೈಗೆತ್ತಿಕೊಳ್ಳುವುದು, ಅದರ ತೂಕ ನೋಡುವುದು ಹಿಡಿ ಹಿಡಿದು ಧೋನಿಯ ತರಹ ಬೀಸುವುದು, ಸರಿ ಇದೆ ಎಂದು ಖಾತರಿ ಮಾಡಿಕೊಳ್ಳುವುದು ನಡೆದೇ ಇತ್ತು. ಎಲ್ಲ ಮಾಡಿದ ನಂತರ ಅದರ ಬೆಲೆ ಪ್ರತಿ ಬಾರಿ ಕೇಳುವುದು, 'ನಮ್ಮ ತಂದೆಯ ಜೊತೆ ಬರುತ್ತೇನೆ' ಎಂದು ಹೇಳಿ ಹಿಂದಿರುವುದು ನನ್ನ ಅಭ್ಯಾಸವಾಯಿತು.

ಕೊನೆಗೊಂದು ದಿನ ಹಠ ಮಾಡಿ ತಂದೆಯನ್ನ ಕರೆದುಕೊಂಡು ಆ ಬ್ಯಾಟ್ ಕೊಡಿಸಿ ಎಂದೆ. ಅಪ್ಪ ನನ್ನ ಜೊತೆ ಬಂದರು. ನನಗೆ ಒಳಗೊಳಗೇ ಖುಷಿಯಾಗಿತ್ತು. ಅಪ್ಪ ಅದನ್ನು ಕೈಗೆತ್ತಿಕೊಂಡು 'ಬೆಲೆ ಎಷ್ಟು?' ಎಂದರು. ಅವನು ಬೆಲೆ ಹೇಳಿದ್ದ. ಅಪ್ಪ ನನ್ನನ್ನು ಪಕ್ಕ ಕರೆದು ಹೇಳಿದರು, 'ಮುಂದಿನ ವಾರ ಕೆಲಸದ ಮೇಲೆ ಮುಂಬೈಗೆ ಹೋಗುತ್ತಿದ್ದೇನೆ. ಅಲ್ಲಿ ಇನ್ನೂ ಒಳ್ಳೆ ಗುಣಮಟ್ಟದ ಬ್ಯಾಟುಗಳು ದೊರೆಯುತ್ತದೆ. ನಿನಗೆ ತಂದುಕೊಡುತ್ತೇನೆ. ಒಂದು ತಿಂಗಳು ತಡ' ಎಂದರು.

ನನಗೆ ಮತ್ತೆ ಅಳು ಬಂದಿತ್ತು. ಏಕೋ ಇವೆಲ್ಲ ಈಗ ನೆನಪಾಗುತ್ತಿವೆ. ಬಹುಶಃ ಈ ಹುಡುಗಿಯ ಕಥೆಯು ಅದೇ ಇರಬಹುದು. ಈ ಬೆಲೆ ಅವಳಿಗೆ ಎಟುಕದೆ ಹೋಗಿರಬೇಕು. ಅವಳ ಕನಸುಗಳನ್ನು ಅವಳ ಕಣ್ಣುಗ್ಗಳು ಹೇಳುತ್ತಿವೆ. ಕನಸುಗಳು ನನಸಾಗದ ನೋವು ಆ ಕಣ್ಣುಗ್ಗಳಲ್ಲಿ ಕಂಡಿದೆ. ನಾನು ಪಟ್ಟ ನೋವು ಈ ಹುಡುಗಿಯೂ ಏಕೆ ಪಡಬೇಕು. ನನ್ನ ಬಗ್ಗೆ ನನಗೆ ಬೇಸರ ಬಂದಿತು. ನಾನು ಬದುಕಿನಿಂದ ಕಲಿತದ್ದು ಏನೂ ಇಲ್ಲವೇ? ನನ್ನ ಚಿಕ್ಕಂದಿನ ಕನಸುಗಳು ಗಾಯಗಳಾಗಿ ಹಾಗೆಯೇ ಮಾಯದೆ ಉಳಿದಿವೆ. ಇಂದು ಮತ್ತೊಂದು ಹುಡುಗಿಯ ಕನಸನ್ನ ನನಸಾಗುಸುವುದರ ಮೂಲಕ ನನ್ನ ಗಾಯದ ಆ ಕಲೆಗಳನ್ನ ಅಳಿಸಬಹುದೇ? ಆ ಹುಡುಗಿ ಮತ್ತೆ ಬರಬಾರದೇ? ಎಂದು ಆಶಿಸಿದೆ.

ಅದೇ ಸಮಯದಲ್ಲಿ ಹುಡುಗಿ ಮತ್ತೆ ನನ್ನ ಅಂಗಡಿಯ ಕಡೆ ಬರುತ್ತಿದ್ದಳು. ಬಂದವಳು ಅದೇ ಹೂದಾನಿ ಕೈಗೆತ್ತಿಕೊಂಡಳು. ಸರಿ ಈ ಬಾರಿ ಅವಳಿಗೆ ಇದನ್ನು ಕೊಟ್ಟುಬಿಡುತ್ತೇನೆ. ಬಿಟ್ಟಿ ಕೊಟ್ಟರೆ ಅವಳಿಗೆ ನೋವಾಗಬಹುದು. ಅವಳ ಸ್ವಾಭಿಮಾನಕ್ಕೆ ಧಕ್ಕೆ ಬರಬಹುದು. ಇರಲಿ ಇದಕ್ಕೆ ಆಗಿರುವ ಖರ್ಚು ಮಣ್ಣಿಗೆ 12 ರೂಪಾಯಿ. ಕುಸರಿ ಕೆಲಸಕ್ಕೆ ತಂದ ವಸ್ತುಗಳ ಬೆಲೆ ಮತ್ತೊಂದು ನಾಲ್ಕು ರೂಪಾಯಿ. ಹಚ್ಚಿದ ಬಣ್ಣಕ್ಕೆ ಒಂದೂವರೆ ರೂಪಾಯಿ. ಎಲ್ಲ ಸೇರಿ ಹದಿನೇಳೂವರೆ. ಸರಿ, ನಾನು 15 ದಿವಸ ಕಷ್ಟ ಬಿದ್ದು ಮಾಡಿ, ಒಣಗಿಸಿ, ಬೇಯಿಸಿ, ಬಣ್ಣ ಹಚ್ಚಿ, ಮನೆಯಿಂದ ಈ ಬಾಡಿಗೆ ಅಂಗಡಿಗೆ ತಂದು ಅದನ್ನು ಇಲ್ಲಿ ಜೋಪಾನ ಇಟ್ಟುಕೊಂಡು ಕಾಪಾಡಿದ್ದೇನೆ. ನನಗೆ ಲಾಭವು ಬೇಡ. ನನ್ನ ಕೆಲಸದ ಪಗಾರವು ಬೇಡ. ಅವಳಿಗೆ ಆ ಮಣ್ಣಿನ ಬೆಲೆಗೆ ಕೊಟ್ಟು ಬಿಡುತ್ತೇನೆ. ಹಾಗೆಂದು ಯೋಚಿಸಿ ಅವಳಿಗೆ ಹೇಳಿದೆ 'ನೀವು ಹದಿನೇಳೂವರೆ ಕೊಡಿ ಸಾಕು' ಎಂದೆ.

ಅವಳ ಕಣ್ಣಲ್ಲಿ ಆನಂದ ಜಿನುಗಬಹುದೆಂದು ಎಣಿಸಿದ್ದೆ. ಆದರೆ ನೋವು, ಕೋಪ ಕಂಡಿತ್ತು. 'ಹದಿನೇಳೂವರೆ ರುಪಾಯಿ ಬೆಲೆಯ ವಸ್ತುವನ್ನ ನನಗೆ ನೂರು ರುಪಾಯಿ ಕೊಡು ಎಂದು ಕೇಳಿ ಇಷ್ಟು ಹೊತ್ತು ಮೋಸ ಮಾಡಲು ಹೊರಟಿದ್ದೆ ನೀನು. ನಿನಗೆ ಕನಿಕರವೇ ಇಲ್ಲವೇ?' ಎಂದವಳು, ನನ್ನ ಕೈಯಲ್ಲಿ ಹೂದಾನಿ ಇಟ್ಟು ಸರಸರನೆ ಹೊರಟು ಹೋದಳು. **(ಕವಿಯೊಬ್ಬರು ಊಟದ ನಡುವೆ ಪ್ರಾಸ್ತಾವಿಕವಾಗಿ ಹೇಳಿದ ಸಂಗತಿಯ ಆಧಾರಿತ ಕತೆ)**

ಮದುವೆಗಾಗಿ ಹುಡುಗನನ್ನು ಆಯ್ಕೆ ಮಾಡುವುದು ಹೇಗೆ?

Ask the Editor

● ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಶ್ರೀದೇವಿ, (ಇಮೇಲ್ ಮೂಲಕ)

● **ಸಂಪಾದಕರೇ, ನನ್ನ ಮದುವೆಗೆ ಅಪ್ಪ-ಅಮ್ಮ ಹುಡುಗನನ್ನು ನೋಡುತ್ತಿದ್ದಾರೆ. ಹಲವಾರು ಪ್ರೊಫೈಲ್‌ಗಳು ಬಂದಿವೆ. ಕೆಲವರನ್ನು ಭೇಟಿಯಾಗಿದ್ದೇನೆ. ಒಬ್ಬ ತುಂಬಾ ಸುಂದರವಾಗಿದ್ದಾನೆ, ಇನ್ನೊಬ್ಬ ಬಹಳ ಬುದ್ಧಿವಂತ, ಮತ್ತೊಬ್ಬನು ತುಂಬಾ ಶ್ರೀಮಂತ. ಇಷ್ಟು ವಿಧದ ಗುಣಗಳಿರುವ ಹುಡುಗರನ್ನು ನೋಡಿದ ಮೇಲೆ ನನಗೆ ತುಂಬಾ ಗೊಂದಲವಾಗಿದೆ. ಇವರಲ್ಲಿ ಯಾರನ್ನು ಆಯ್ಕೆ ಮಾಡಬೇಕು, ಸರಿಯಾದ ನಿರ್ಧಾರವನ್ನು ಹೇಗೆ ತೆಗೆದುಕೊಳ್ಳಬೇಕು ಎಂದು ಅರ್ಥವಾಗುತ್ತಿಲ್ಲ.**

– ಶ್ರೀದೇವಿ ಅವರೇ, ಮದುವೆ ಎಂಬುದು ಜೀವನದ ಅತ್ಯಂತ ಪ್ರಮುಖ ನಿರ್ಧಾರಗಳಲ್ಲಿ ಒಂದು. ಆದ್ದರಿಂದ ನಿಮಗೆ ಗೊಂದಲವಾಗುತ್ತಿರುವುದು ಸಹಜವೇ. ಸುಂದರ, ಬುದ್ಧಿವಂತ ಮತ್ತು ಶ್ರೀಮಂತ – ಈ ಮೂವರೂ ಅವರದ್ದೇ ಆದ ರೀತಿಯಲ್ಲಿ ಆಕರ್ಷಕವಾಗಿ ಕಾಣುತ್ತಾರೆ. ಆದರೆ ದೀರ್ಘಕಾಲದ ಜೀವನಕ್ಕೆ ಕೇವಲ ಒಂದು ಗುಣ ಸಾಲುವುದಿಲ್ಲ.

ಸರಿಯಾದ ನಿರ್ಧಾರ ತೆಗೆದುಕೊಳ್ಳಲು ಕೆಲವು ಅಂಶಗಳನ್ನು ಗಮನಿಸಬೇಕು. ಮೊದಲನೆಯದು, ನಿಮ್ಮ ಆದ್ಯತೆಗಳು ಯಾವುವು ಎಂಬುದು. ಒಮ್ಮೆ ಶಾಂತವಾಗಿ ಕುಳಿತು ಯೋಚಿಸಿ, ನಿಮಗೆ ಜೀವನದಲ್ಲಿ ನಿಜವಾಗಿಯೂ ಮುಖ್ಯವಾದುದು ಯಾವುದು? ದೈಹಿಕ ಸೌಂದರ್ಯ ಕಾಲಾನಂತರದಲ್ಲಿ ಬದಲಾಗಬಹುದು. ಅವನ ಸ್ವಭಾವವೂ ಅಷ್ಟೇ ಸುಂದರವಾಗಿದೆಯೇ, ಖಾತ್ರಿ ಮಾಡಿಕೊಳ್ಳಿ. ಅವನ ಬುದ್ಧಿವಂತಿಕೆ ನಿಮಗೆ ಗೌರವ ತರುತ್ತದೆಯೇ ಅಥವಾ ಅದು ಅಹಂಕಾರವಾಗಿ ಬದಲಾಗಿದೆಯೇ? ನಿಮ್ಮಿಬ್ಬರ ಆಲೋಚನಾ ಲಹರಿ (Intellectual Compatibility) ಹೊಂದಾಣಿಕೆಯಾಗುತ್ತದೆಯೇ? ಹಣ ಸೌಕರ್ಯಗಳನ್ನು ನೀಡಬಲ್ಲದು, ಆದರೆ ನೆಮ್ಮದಿಯನ್ನಲ್ಲ. ಅವನ ಹಣದ ಬಗ್ಗೆ ಇರುವ ದೃಷ್ಟಿಕೋನ ಮತ್ತು ನಿಮ್ಮ ಖರ್ಚು-ವೆಚ್ಚದ ಅಭ್ಯಾಸಗಳು ಹೊಂದುತ್ತವೆಯೇ, ಗಮನಿಸಿ.

ಎರಡನೆಯದು, ಗುಣ ಮತ್ತು ಸಂಸ್ಕಾರ (Character & Values). ಎಲ್ಲ ಗುಣಗಳಿಗಿಂತ 'ಗುಣ' ಬಹಳ ಮುಖ್ಯ. ಈ ಪ್ರಶ್ನೆಗಳನ್ನು ನಿಮ್ಮನ್ನು ನೀವೇ ಕೇಳಿಕೊಳ್ಳಿ. ಯಾರು ನಿಮ್ಮನ್ನು ಒಬ್ಬ ವ್ಯಕ್ತಿಯಾಗಿ ಗೌರವಿಸುತ್ತಾರೆ? ಯಾರ ಜತೆ ಮಾತನಾಡುವಾಗ ನಿಮಗೆ ಹೆಚ್ಚು ಕಂಫರ್ಟ್ ಎನಿಸುತ್ತದೆ? ಸಂಕಷ್ಟದ ಸಮಯದಲ್ಲಿ ಯಾರು ನಿಮ್ಮ ಜತೆ ಗಟ್ಟಿಯಾಗಿ ನಿಲ್ಲಬಲ್ಲರು?

ಮೂರನೆಯದು, ಭವಿಷ್ಯದ ಗುರಿಗಳು. ಮದುವೆಯ ನಂತರದ ಜೀವನದ ಬಗ್ಗೆ ನಿಮ್ಮ ಕನಸುಗಳೇನು? ನೀವು ಕೆಲಸ ಮುಂದುವರಿಸಲು ಬಯಸುತ್ತೀರಾ? ನಿಮ್ಮ ಜೀವನಶೈಲಿ ಹೇಗಿರಬೇಕು? ಈ ಮೂವರಲ್ಲಿ ಯಾರ ಜೀವನಶೈಲಿ ಮತ್ತು ಗುರಿಗಳು ನಿಮ್ಮದಕ್ಕೆ ಹತ್ತಿರವಾಗಿವೆ ಎಂದು ಗಮನಿಸಿ.

ನಾಲ್ಕನೆಯದು, 'ಪರಿಪೂರ್ಣ' ವ್ಯಕ್ತಿಗಿಂತ 'ಸರಿಯಾದ' ವ್ಯಕ್ತಿ ಮುಖ್ಯ. ಜಗತ್ತಿನಲ್ಲಿ ಯಾರೂ ನೂರಕ್ಕೆ ನೂರು ಪರಿಪೂರ್ಣರಲ್ಲ. ನಿಮಗೆ ಸುಂದರವಾಗಿದ್ದವನು ಬುದ್ಧಿವಂತನೂ ಆಗಿರಬಹುದು ಅಥವಾ ಶ್ರೀಮಂತನಾಗಿದ್ದವನು ಬಹಳ ಒಳ್ಳೆಯವನೂ ಇರಬಹುದು. ಕೇವಲ ಒಂದು ಲೇಬಲ್ ಹಚ್ಚಿ ಅವರನ್ನು ನೋಡಬೇಡಿ. ಅವರ ಒಟ್ಟಾರೆ ವ್ಯಕ್ತಿತ್ವವನ್ನು ಗಮನಿಸಿ.

ನೀವು ಈಗಾಗಲೇ ಭೇಟಿಯಾಗಿರುವವರ ಜತೆ ಇನ್ನೊಮ್ಮೆ ಮಾತನಾಡಿ. ಕೇವಲ ಔಪಚಾರಿಕ ವಿಷಯಗಳಿಗಿಂತ, ಜೀವನದ ಮೌಲ್ಯಗಳ ಬಗ್ಗೆ ಚರ್ಚಿಸಿ. ಯಾರ ಜತೆ ನಿಮಗೆ 'ಹೌದು, ಇವರ ಜತೆ ನಾನು ಜೀವನ ಪೂರ್ತಿ ಇರಬಲ್ಲೆ' ಎಂಬ ಆಂತರಿಕ ಧ್ವನಿ (Gut feeling) ಕೇಳಿಸುತ್ತದೆಯೋ, ಅವರೇ ನಿಮಗೆ ಸೂಕ್ತ ವ್ಯಕ್ತಿ. ಗೊಂದಲ ಮಾಡಿಕೊಳ್ಳಬೇಡಿ, ಸಮಯ ತೆಗೆದುಕೊಳ್ಳಿ. ನಿಮ್ಮ ಮನಸ್ಸಿಗೆ ಯಾವುದು ಸರಿ ಎನಿಸುತ್ತದೆಯೋ ಅದೇ ಅಂತಿಮ ನಿರ್ಧಾರವಾಗಲಿ. Choose a husband with your ears, not your eyes ಎಂಬ ಮಾತಿದೆ. ಹುಡುಗನನ್ನು ಕಣ್ಣಿನಿಂದ (ಸೌಂದರ್ಯ) ನೋಡಿ ಆರಿಸಬೇಡಿ, ಕಿವಿಯಿಂದ (ಅವನ ಮಾತು, ಸಂಸ್ಕಾರ) ಕೇಳಿ ಆರಿಸಿ.

ಇಂಟರ್ನೆಟ್ ಬಂದ ನಂತರ ಹುಡುಗ ಅಥವಾ ಹುಡುಗಿಯನ್ನು ಹೇಗೆ ಆರಿಸಬೇಕು ಎಂಬ ಬಗ್ಗೆ ಒಂದು ಸೂತ್ರವಿದೆ – Before you marry a person, you should first make them use a computer with slow Internet to see who they really are. (ನೀವು ಒಬ್ಬರನ್ನು ಮದುವೆಯಾಗುವ ಮೊದಲು, ಅವರಿಗೆ ಸ್ಲೋ ಇಂಟರ್ನೆಟ್ ಇರುವ ಕಂಪ್ಯೂಟರ್ ಕೊಡಿ. ಆಗ ಅವರ ನಿಜವಾದ ತಾಳ್ಮೆ ಮತ್ತು ವ್ಯಕ್ತಿತ್ವ ಏನೆಂದು ತಿಳಿಯುತ್ತದೆ!) ಜಗತ್ತಿನಲ್ಲಿ ಪರಿಪೂರ್ಣ ಗಂಡ ಅಥವಾ ಹೆಂಡತಿ ಎಂಬುದು ಇಲ್ಲವೇ ಇಲ್ಲ. Best pair ಅಂದ್ರೆ ಚಪ್ಪಲಿ, ಶೂಗಳು ಮಾತ್ರ. Marriage is like a deck of cards. In the beginning, all you need is two hearts and a diamond. By the end, you're looking for a club and a spade (ಮದುವೆ ಇಸ್ಪೀಟು ಆಟದಂತೆ. ಶುರುವಿನಲ್ಲಿ ಎರಡು ಹೃದಯ (Hearts) ಮತ್ತು ಒಂದು ಡೈಮಂಡ್ ಇದ್ದರೆ ಸಾಕು. ಆದರೆ ಕೊನೆಯಲ್ಲಿ ಗದೆ ಮತ್ತು ಸಲಿಕೆ ಹಿಡಿದು ಹೊಡೆದಾಡಬೇಕಾಗುತ್ತದೆ!) ಎಂಬ ಮಾತನ್ನು ಕೇಳಿರಬಹುದು.

ಗೊಂದಲ ಬೇಡ, ಸುಂದರವಾಗಿರುವವನು ಫೋಟೋಗೆ ಚೆಂದ, ಶ್ರೀಮಂತನಾಗಿರುವವನು ಶಾಪಿಂಗ್‌ಗೆ ಚೆಂದ, ಆದರೆ ಬುದ್ಧಿವಂತನಾಗಿರುವವನು ನಿಮ್ಮ ಲೈಫ್‌ಗೆ ಚೆಂದ. ಈ ಮೂರೂ ಗುಣಗಳು ಸ್ವಲ್ಪ ಸ್ವಲ್ಪ ಇರುವವರನ್ನು ಹುಡುಕಲು ಸಾಧ್ಯವೇ ನೋಡಿ. ನಿಮ್ಮ ಈ ಹೊಸ ಜೀವನದ ಹಾದಿಗೆ ಶುಭವಾಗಲಿ!

ಭವ್ಯಾ, (ಇಮೇಲ್ ಮೂಲಕ)

● **ಸಂಪಾದಕರೇ, ನಾನು ಉತ್ತರ ಭಾರತದ ವ್ಯಕ್ತಿಯನ್ನು ಮದುವೆಯಾಗಿದ್ದೇನೆ. ಅವನ ಮನೆಗೆ ಹೋದಾಗೆಲ್ಲ ನನಗೆ ಏಕಾಂಗಿತನ ಕಾಡುತ್ತದೆ. ಅವರ ಮನಸ್ಸಿನಲ್ಲಿ, ಅವನು ತನ್ನ ಸಮುದಾಯದಲ್ಲೇ ಸಿರಿವಂತ ಹುಡುಗಿಯನ್ನು ಮದುವೆಯಾಗಬಹುದಿತ್ತು ಎಂಬ ಭಾವನೆ ಇದ್ದಂತೆ ಅನಿಸುತ್ತದೆ. ಅವರು ಅದನ್ನು ಸ್ಪಷ್ಟವಾಗಿ ಹೇಳುವುದಿಲ್ಲ, ಆದರೆ ಅವರ ವರ್ತನೆಯಲ್ಲಿ ಇದು ಸ್ಪಷ್ಟವಾಗಿ ಗೊತ್ತಾಗುತ್ತೆ. ಇದರಿಂದ ನನಗೆ ತುಂಬಾ ದುಃಖವಾಗುತ್ತಿದೆ. ಈಗ ಹಿಂತಿರುಗಿ ಹೋಗಿ ಈ ಸಮಸ್ಯೆಯನ್ನು ಸರಿಪಡಿಸಲು ಸಾಧ್ಯವಿಲ್ಲ. ಈ ಪರಿಸ್ಥಿತಿಯಲ್ಲಿ ನಾನು ಏನು ಮಾಡಬೇಕು? ನನ್ನ ಮನಸ್ಸನ್ನು ಹೇಗೆ ಬಲಪಡಿಸಿಕೊಳ್ಳಬೇಕು?**

– ಭವ್ಯಾ ಅವರೇ, ನಿಮ್ಮ ನೋವು ಮತ್ತು ಒಂಟಿತನವನ್ನು ಅರ್ಥ ಮಾಡಿಕೊಳ್ಳಬಲ್ಲೆ. ಭಾಷೆ, ಸಂಸ್ಕೃತಿ ಮತ್ತು ಪ್ರಾಂತಗಳು ಬೇರೆಯಾದಾಗ ಇಂಥ ಯೋಚನೆ, Silent treatment ಅಥವಾ ಪರೋಕ್ಷ ಮಾತುಗಳು ಮನಸ್ಸಿಗೆ ದೊಡ್ಡ ಗಾಯ ಮಾಡುತ್ತವೆ. ವಿಶೇಷವಾಗಿ, 'ನಮಗಿಂತ ಶ್ರೀಮಂತರು ಸಿಗುತ್ತಿದ್ದರು' ಎಂಬ ಅಹಂಕಾರದ ಮಾತುಗಳು ನಿಮ್ಮ ವ್ಯಕ್ತಿತ್ವಕ್ಕೆ ಮಾಡುವ ಅಪಮಾನದಂತೆ ಭಾಸವಾಗುವುದು ಸಹಜ.

ಆದರೆ ನೆನಪಿಡಿ, ನೀವು ಆ ಮನೆಗೆ ಹೋಗಿರುವುದು ಅವರ ಶ್ರೀಮಂತಿಕೆಯನ್ನು ಹೆಚ್ಚಿಸಲಿಕ್ಕಲ್ಲ, ಬದಲಾಗಿ ನಿಮ್ಮ ಪತಿಯ ಜೀವನದ ಭಾಗವಾಗಲು. ಈ ಪರಿಸ್ಥಿತಿಯನ್ನು ಎದುರಿಸಲು ಮತ್ತು ನಿಮ್ಮ ಮನಸ್ಸನ್ನು ಬಲಪಡಿಸಿಕೊಳ್ಳಲು ಕೆಲವು ಮಾರ್ಗಗಳಿವೆ. ಮೊದಲನೆಯದಾಗಿ, ಪತಿಯೊಂದಿಗೆ ಮುಕ್ತವಾಗಿ ಮಾತನಾಡಿ. ನಿಮ್ಮ ಪತಿ ಈ ವಿಷಯದಲ್ಲಿ ನಿಮ್ಮ ಅತಿದೊಡ್ಡ ಬೆಂಬಲವಾಗಬೇಕು. ಅವರಿಗೆ ನಿಮ್ಮ ಮನಸ್ಸಿನ ವ್ಯಥೆಯನ್ನು ವಿವರಿಸಿ. 'ನಾನು ಅಲ್ಲಿಗೆ ಬಂದಾಗ ನನಗೆ ಒಂಟಿತನ ಕಾಡುತ್ತಿದೆ, ಅವರ ವರ್ತನೆ ನನ್ನ ಮೇಲೆ ಈ ರೀತಿ ಪರಿಣಾಮ ಬೀರುತ್ತಿದೆ' ಎಂದು ಶಾಂತವಾಗಿ ಹೇಳಿ. ಅವರು ತಮ್ಮ ಮನೆಯವರನ್ನು ಬದಲಿಸದಿದ್ದರೂ, ಕನಿಷ್ಠ ಪಕ್ಷ ನೀವು ಅಲ್ಲಿರುವಾಗ ನಿಮಗೆ ಹೆಚ್ಚಿನ ಬೆಂಬಲ ಮತ್ತು ಭದ್ರತೆ ನೀಡಬಲ್ಲರು.

ಎರಡನೆಯದು, ನಿಮ್ಮ ಮೌಲ್ಯವನ್ನು ಹಣದೊಂದಿಗೆ ಅಳೆಯಬೇಡಿ. ಅವರು ನಿಮ್ಮನ್ನು 'ಆಸ್ತಿ' ಅಥವಾ 'ಶ್ರೀಮಂತಿಕೆ'ಯ ದೃಷ್ಟಿಯಿಂದ ನೋಡುತ್ತಿರಬಹುದು, ಆದರೆ ಅದು ಅವರ ದೃಷ್ಟಿಕೋನದ ದ ನ್ಯೂನತೆ. ಅವರ ಸಂಕುಚಿತ ಮನೋಭಾವಕ್ಕೆ ನಿಮ್ಮ ಸಂತೋಷವನ್ನು ಬಲಿ ಕೊಡಬೇಡಿ. 'ನಿಮ್ಮ ಬೆಲೆ ಅವರಿಗೆ ತಿಳಿಯುತ್ತಿಲ್ಲ ಎಂದರೆ, ತಪ್ಪು ನಿಮ್ಮದಲ್ಲ, ಅದನ್ನು ಅಳೆಯಲು ಬಾರದ ಅವರದ್ದು.'

ಮೂರನೆಯದು, ಅವರ ಸಂಸ್ಕೃತಿಯನ್ನು ಕಲಿಯಿರಿ, ಆದರೆ ನಿಮ್ಮನ್ನು ಕಳೆದುಕೊಳ್ಳಬೇಡಿ. ಉತ್ತರ ಭಾರತದ ಕುಟುಂಬಗಳಲ್ಲಿ ಸಂವಹನ ಬಹಳ ಮುಖ್ಯ. ಅವರ ಭಾಷೆಯನ್ನು (ಹಿಂದಿ) ಕಲಿಯಲು ಪ್ರಯತ್ನಿಸಿ. ನೀವು ಅವರೊಂದಿಗೆ ಅವರದ್ದೇ ಭಾಷೆಯಲ್ಲಿ ವ್ಯವಹರಿಸಲು ಶುರು ಮಾಡಿದಾಗ, ಅವರಿಗೆ ನಿಮ್ಮನ್ನು ಕಡೆಗಣಿಸುವುದು ಕಷ್ಟವಾಗುತ್ತದೆ. ಆದರೆ, ಅವರನ್ನು ಮೆಚ್ಚಿಸುವ ಅತಿಯಾಗಿ ಪ್ರಯತ್ನ ಮಾಡಬೇಡಿ.

ನಾಲ್ಕನೆಯದು, ಭೇಟಿಯ ಅವಧಿಯನ್ನು ಸೀಮಿತಗೊಳಿಸಿ. ಒಂದು ವೇಳೆ ಅವರ ಮನೆಗೆ ಹೋದಾಗೆಲ್ಲ ನಿಮಗೆ ವಿಪರೀತ ಮಾನಸಿಕ ಕಿರಿಕಿರಿ ಆಗುತ್ತಿದ್ದರೆ, ಅಲ್ಲಿ ಉಳಿದುಕೊಳ್ಳುವ ದಿನಗಳನ್ನು ಕಡಿಮೆ ಮಾಡಿ. ಅನಿವಾರ್ಯವಿದ್ದಾಗ ಮಾತ್ರ ಹೋಗಿ, ಪ್ರೀತಿ-ಗೌರವದಿಂದ ನಡೆದುಕೊಳ್ಳಿ ಮತ್ತು ನಿಮ್ಮ ಕೆಲಸ ಮುಗಿಸಿ ನಿಮ್ಮ ಸ್ವಂತ ಮನೆಗೆ (ನಿಮ್ಮ ಪತಿಯ ಜತೆಗಿನ ಮನೆಗೆ) ಮರಳಿ. ಅಂತರವಿದ್ದರೆ ಗೌರವ ಹೆಚ್ಚಾಗುವ ಸಾಧ್ಯತೆ ಇರುತ್ತದೆ.

ಐದನೆಯದಾಗಿ, ನಿಮ್ಮದೇ ಆದ ಒಂದು ಪ್ರಪಂಚವನ್ನು ಬೆಳೆಸಿಕೊಳ್ಳಿ. ನಿಮ್ಮ ವೃತ್ತಿ, ಹವ್ಯಾಸಗಳು ಮತ್ತು ಸ್ನೇಹಿತರ ಕಡೆಗೆ ಗಮನ ಹರಿಸಿ. ನೀವು ನಿಮ್ಮ ಜೀವನದಲ್ಲಿ ಯಶಸ್ವಿಯಾಗುತ್ತಾ ಹೋದಂತೆ, ಅವರ ಈ ಚಿಕ್ಕ ಆಲೋಚನೆಗಳು ನಿಮಗೆ ಕ್ಷುಲ್ಲಕವಾಗಿ ಕಾಣತೊಡಗುತ್ತವೆ. ಮನಸ್ಸನ್ನು ಬಲಪಡಿಸಿಕೊಳ್ಳಲು ಧ್ಯಾನ ಅಥವಾ ಯೋಗದ ಸಹಾಯ ಪಡೆಯಿರಿ.

ನೀವು ಒಬ್ಬರೇ ಎಂದು ಕೊಳ್ಳಬೇಡಿ. ನಿಮ್ಮ ಅಸ್ತಿತ್ವವೇ ಒಂದು ಶಕ್ತಿ. ದಲೈ ಲಾಮಾ ಹೇಳಿದ ಒಂದು ಮಾತು ನೆನಪಾಗುತ್ತಿದೆ – If you think you are too small to make a difference, try sleeping with a mosquito. ಅವರು ನಿಮ್ಮನ್ನು ಶ್ರೀಮಂತಿಕೆಯ ತಕ್ಕಡಿಯಲ್ಲಿ ತೂಗುತ್ತಿರಬಹುದು, ಆದರೆ ನೆನಪಿರಲಿ: ಬಂಗಾರವನ್ನು ತೂಗುವವರು ಬಂಗಾರವನ್ನೇ ನೋಡುತ್ತಾರೆಯೇ ಹೊರತು, ಅದನ್ನು ತೂಗುವ ಕಬ್ಬಿಣದ ಗುಂಡನ್ನಲ್ಲ!

ನೀವು ನಿಮ್ಮ ಪತಿಯೊಂದಿಗೆ ಈ ಬಗ್ಗೆ ಮಾತನಾಡಿದ್ದೀರಾ? ಅವರ ಪ್ರತಿಕ್ರಿಯೆ ಹೇಗಿರುತ್ತದೆ? ಒಮ್ಮೆ ಈ ಬಗ್ಗೆ ಯೋಚಿಸಿ ನೋಡಿ. ನಿಮ್ಮ ಆತ್ಮವಿಶ್ವಾಸವೇ ಅವರಿಗೆ ನೀಡುವ ದೊಡ್ಡ ಉತ್ತರ. ಇಂಥ ಸನ್ನಿವೇಶಗಳನ್ನು ಎದುರಿಸಲು ನೀವು ಸಮರ್ಥರಿದ್ದೀರಿ. ಧೈರ್ಯವಾಗಿರಿ.

ಸತ್ಯಶ್ರೀ, ಬೆಂಗಳೂರು

● **ಭಟ್ರೇ, ನಾನು ಉದ್ಯೋಗಸ್ಥ ಮಹಿಳೆ. ನನ್ನ ಮನೆಯಲ್ಲಿ ಮನೆ ಕೆಲಸಕ್ಕೆ ಸಹಾಯ ಮಾಡುವ ಕೆಲಸದವರು ಇದ್ದಾರೆ. ಆದರೆ ನನ್ನ ಅತ್ತೆ ನಮ್ಮ ಮನೆಗೆ ವಾಸಕ್ಕೆ ಬಂದಾಗಲೆಲ್ಲ ಕೆಲಸದವರು ಕೆಲಸ ಬಿಟ್ಟು ಹೋಗುತ್ತಾರೆ, ಅದರ ಪರಿಣಾಮಗಳನ್ನು ನಾನು ಎದುರಿಸಬೇಕಾಗುತ್ತದೆ. ಈ ಪರಿಸ್ಥಿತಿಯನ್ನು ನಾನು ಹೇಗೆ ನಿಭಾಯಿಸಬೇಕು? ಅತ್ತೆಯ ಜತೆಗೆ ಮತ್ತು ಕೆಲಸದವರ ಜತೆ ಸಮತೋಲನವನ್ನು ಹೇಗೆ ಕಾಪಾಡಿಕೊಳ್ಳಬೇಕು?**

– ಸತ್ಯಶ್ರೀ ಅವರೇ, ಇದು ಅನೇಕ ಉದ್ಯೋಗಸ್ಥ ಮಹಿಳೆಯರು ಎದುರಿಸುವ ಒಂದು ಕ್ಲಿಷ್ಟಕರವಾದ ಸಮಸ್ಯೆ. ಮನೆಕೆಲಸದವರು ಕೆಲಸ ಬಿಡುತ್ತಿದ್ದಾರೆ ಎಂದರೆ ಅಲ್ಲಿ ಕೇವಲ ಕೆಲಸದ ಹೊರೆ ಮಾತ್ರವಲ್ಲ, 'ಸಂವಹನ' ಅಥವಾ 'ಗೌರವ'ದ ಕೊರತೆಯೂ ಇರಬಹುದು. ಅತ್ತೆಯವರನ್ನು ವಿರೋಧಿಸದೇ ಮತ್ತು ಕೆಲಸದವರನ್ನು ಉಳಿಸಿಕೊಳ್ಳುವಂತೆ ಈ ಪರಿಸ್ಥಿತಿಯನ್ನು ನಿಭಾಯಿಸಲು ಕೆಲವು ಪ್ರಾಯೋಗಿಕ ಮಾರ್ಗಗಳನ್ನು ಹೇಳುತ್ತೇನೆ. ಕೆಲಸದವರು ಯಾಕೆ ಬಿಡುತ್ತಿದ್ದಾರೆ ಎಂಬ ಮೂಲ ಕಾರಣವನ್ನು ತಿಳಿದುಕೊಳ್ಳಿ. ಅತ್ತೆಯವರು ಬಂದಾಗ ಅವರಿಗೆ ಕೆಲಸ ಜಾಸ್ತಿ ಆಗುತ್ತಿದೆಯೇ ಅಥವಾ ಅತ್ತೆಯವರ ಕಟು ಮಾತುಗಳು ಅವರಿಗೆ ನೋವು ನೀಡುತ್ತಿವೆಯೇ?

ಅತ್ತೆ ಬಂದಾಗ ಅತಿಥಿಗಳು ಹೆಚ್ಚಾಗುವುದು ಅಥವಾ ಅಡುಗೆಯ ಕೆಲಸ ಜಾಸ್ತಿ ಆಗುವುದು ಸಹಜ. ಅಂಥ ಸಮಯದಲ್ಲಿ ಕೆಲಸದವರಿಗೆ ಸ್ವಲ್ಪ ಹೆಚ್ಚಿನ ಹಣ ನೀಡುವುದಾಗಿ ಮೊದಲೇ ತಿಳಿಸಿ. 'ಅತ್ತೆ ಇರುವಷ್ಟು ದಿನ ನಿನಗೆ ಹೆಚ್ಚುವರಿ ಸಂಬಳ ಕೊಡುತ್ತೇನೆ' ಎಂದರೆ ಅವರು ಸ್ವಲ್ಪ ಸಹಿಸಿಕೊಳ್ಳುತ್ತಾರೆ. ನಿಮ್ಮ ಕೆಲಸದವರಿಗೆ ಸ್ಪಷ್ಟವಾಗಿ ಹೇಳಿ 'ಮನೆಯಲ್ಲಿ ಯಾರು ಏನೇ ಹೇಳಿದರೂ, ಕೆಲಸದ ವಿಷಯದಲ್ಲಿ ನೀನು ನನ್ನ ಮಾತು ಮಾತ್ರ ಕೇಳಬೇಕು.' ಇದು ಅವರಿಗೆ ಮಾನಸಿಕ ಧೈರ್ಯ ನೀಡುತ್ತದೆ.

ಅತ್ತೆ ತಮ್ಮ ಹಳೆಯ ಕಾಲದ ಪದ್ಧತಿಯಂತೆ ಅಥವಾ ಅಧಿಕಾರದಿಂದ ಕೆಲಸದವರನ್ನು ನಡೆಸಿಕೊಳ್ಳುತ್ತಿರಬಹುದು. ಅವರನ್ನು ನೇರವಾಗಿ ವಿರೋಧಿಸುವ ಬದಲು ಬೇರೆ ಟ್ರಿಕ್ ಮಾಡಿ. ಅತ್ತೆಗೆ 'ಮನೆ ಕೆಲಸದವರನ್ನು ನೀವು ಚೆನ್ನಾಗಿ ಹ್ಯಾಂಡಲ್ ಮಾಡಬಲ್ಲಿರಿ' ಎಂದು ಹೊಗಳುತ್ತಲೇ, 'ನೋಡಿ ಅತ್ತೆ, ಈಗ ಕೆಲಸದವರು ಸಿಗುವುದು ತುಂಬಾ ಕಷ್ಟ. ಅವರು ಹೋದರೆ ನಾನು ಆಫೀಸ್‌ಗೆ ರಜೆ ಹಾಕಿ ಮನೆಯಲ್ಲೇ ಇರಬೇಕಾಗುತ್ತದೆ. ಅದು ನನಗೆ ತುಂಬಾ ನಷ್ಟ' ಎಂದು ಪರಿಸ್ಥಿತಿಯ ಗಂಭೀರತೆಯನ್ನು ಅವರಿಗೆ ಅರ್ಥ ಮಾಡಿಸಿ. ಅತ್ತೆ ಬಂದಾಗ ಕೆಲಸದವರಿಗೆ ಅವರೇನಾದರೂ ಕೆಲಸ ಹೇಳಬೇಕಿದ್ದರೆ, ಅದು ನಿಮ್ಮ ಮೂಲಕವೇ ಹೋಗುವಂತೆ ನೋಡಿಕೊಳ್ಳಿ. 'ಅತ್ತೆ, ಅವರಿಗೆ ಏನಾದರೂ ಹೇಳಬೇಕಿದ್ದರೆ, ನೀವು ನನಗೆ ಹೇಳಿ, ನಾನು ಅವರಿಗೆ ತಿಳಿಸುತ್ತೇನೆ' ಎಂದು ಹೇಳಿ.

ಇದು ನಿಮ್ಮ ಅತ್ತೆಯ ಸ್ವಭಾವಕ್ಕೆ ಸಂಬಂಧಿಸಿದ್ದಾದ್ದರಿಂದ, ನಿಮ್ಮ ಪತಿ ಈ ವಿಷಯದಲ್ಲಿ ಮಧ್ಯಪ್ರವೇಶಿಸುವುದು ಸೂಕ್ತ. ಅವರು ತಮ್ಮ ತಾಯಿಗೆ 'ನಾವು ಕೆಲಸಕ್ಕೆ ಹೋಗುವವರು, ಕೆಲಸದವರು ಹೋದರೆ ನಮಗೆ ಬಹಳ ತೊಂದರೆಯಾಗುತ್ತದೆ, ದಯವಿಟ್ಟು ಅವರ ಜತೆ ಸ್ವಲ್ಪ ಹೊಂದಾಣಿಕೆಯಿಂದ ಇರಿ' ಎಂದು ಹೇಳಿದರೆ ಅದು ಹೆಚ್ಚು ಪರಿಣಾಮಕಾರಿ. ಅತ್ತೆಯ ಬಗ್ಗೆ ನಾನು ಒಂದು ಮಾತನ್ನು ಕೇಳಿದ್ದೆ – A mother-in-law is like a daily newspaper. You want to know what's happening, but you don't want to live with the headlines every day!

ರಾಗಿಣಿ, (ಇಮೇಲ್ ಮೂಲಕ)

● **ಸಂಪಾದಕರೇ, ನನಗೆ ವೆಸ್ಟರ್ನ್ ಉಡುಪು ತುಂಬಾ ಇಷ್ಟ. ಆದರೆ ನನ್ನ ಗಂಡನಿಗೆ ಅದು ಇಷ್ಟವಾಗುವುದಿಲ್ಲ. ಈ ವಿಷಯದಿಂದ ನಮ್ಮ ಮನೆಯಲ್ಲಿ ಆಗಾಗ ಜಗಳಗಳು ನಡೆಯುತ್ತವೆ. ವೆಸ್ಟರ್ನ್ ಉಡುಪುಗಳು ಎಂದರೆ ಅಶ್ಲೀಲವಲ್ಲ. ಜೀನ್ಸ್ ಮತ್ತು ಟ್ರೌಸರ್‌ಗಳು ದೇಹವನ್ನು ಗೌರವಪೂರ್ಣವಾಗಿ ಮುಚ್ಚುವ ಉಡುಪುಗಳೇ. ಜಗಳವಿಲ್ಲದೇ ಈ ಸಮಸ್ಯೆಯನ್ನು ಹೇಗೆ ಪರಿಹರಿಸಬಹುದು?**

– ರಾಗಿಣಿ ಅವರೇ, ನಿಮ್ಮ ಈ 'ಜೀನ್ಸ್ ಜಗಳ' ಅಥವಾ 'ಫ್ಯಾಷನ್ ಫೈಟ್' ಅನೇಕ ಮನೆಗಳಲ್ಲಿ ನಡೆಯುವ ಸಣ್ಣ ಮಟ್ಟದ 'ಮಹಾಭಾರತ'ವೇ ಸರಿ! ನೀವು ಹೇಳುವುದು ನೂರಕ್ಕೆ ನೂರರಷ್ಟು ನಿಜ. ಜೀನ್ಸ್ ಅಥವಾ ಟ್ರೌಸರ್‌ಗಳು ಅಶ್ಲೀಲವಲ್ಲ, ಅವು ಇಂದಿನ ವೇಗದ ಜೀವನಕ್ಕೆ ಅತ್ಯಂತ ಆರಾಮದಾಯಕ ಮತ್ತು ಗೌರವಯುತ ಉಡುಪುಗಳೇ. ಈ 'ವಾರ್ಡ್‌ರೋಬ್ ವಾರ್' ಅನ್ನು ಜಗಳವಿಲ್ಲದೇ ಸ್ವಲ್ಪ ಚಾಣಾಕ್ಷತನ ಮತ್ತು ತಮಾಷೆಯಿಂದ ಗೆಲ್ಲಬಹುದು.

ನೇರವಾಗಿ ಜೀನ್ಸ್-ಟೀಶರ್ಟ್ ಹಾಕುವ ಬದಲು, ಸ್ವಲ್ಪ 'ಡಿಪ್ಲೊಮ್ಯಾಟಿಕ್' ಆಗಿ ಯೋಚಿಸಿ. ಜೀನ್ಸ್ ಮೇಲೆ ಒಂದು ಉದ್ದನೆಯ ಕುರ್ತಾ ಹಾಕಿ. ಇದು ಗಂಡನಿಗೆ 'ಸಂಪ್ರದಾಯ'ದಂತೆ ಕಾಣುತ್ತದೆ, ನಿಮಗೆ 'ಕಂಫರ್ಟ್' ನೀಡುತ್ತದೆ. 'ರೀ, ಇದು ಅರ್ಧ ಸಾಂಪ್ರದಾಯಿಕ, ಅರ್ಧ ಮಾಡರ್ನ್. ಅಂದರೆ ನಾನು ನಿನ್ನ ಮಾತು ಕೇಳುತ್ತಿದ್ದೇನೆ ಮತ್ತು ನನ್ನ ಮನಸ್ಸಿನ ಮಾತನ್ನೂ ಕೇಳುತ್ತಿದ್ದೇನೆ' ಎಂದು ನಕ್ಕು ಹೇಳಿ.

ಗಂಡಂದಿರಿಗೆ ಅತಿ ಹೆಚ್ಚು ಭಯವಾಗುವುದು ಅವರ ಜೇಬಿಗೆ ಕತ್ತರಿ ಬಿದ್ದಾಗ! 'ನೋಡಿ, ಸೀರೆ ಉಟ್ಟರೆ ಅದಕ್ಕೆ ಮ್ಯಾಚಿಂಗ್ ಬ್ಲೌಸ್ ಹೊಲಿಸಬೇಕು, ಫಾಲ್ ಹಾಕಿಸಬೇಕು, ಡ್ರೈ ಕ್ಲೀನಿಂಗ್ ಕೊಡಬೇಕು. ಆದರೆ ಈ ಜೀನ್ಸ್ ಇದೆಯಲ್ಲ, ಒಮ್ಮೆ ತಗೊಂಡರೆ ಐದು ವರ್ಷ ಬರುತ್ತೆ, ಐರನ್ ಮಾಡೋ ಅವಶ್ಯಕತೆಯೂ ಇಲ್ಲ. ನಿನ್ನ ದುಡ್ಡು ಎಷ್ಟು ಉಳಿಯುತ್ತೆ ನೋಡು' ಎಂದು ಹೇಳಿ. ದುಡ್ಡು ಉಳಿಯುತ್ತದೆ ಅಂದ ತಕ್ಷಣ ಅವರ ಮನಸ್ಸು ಬದಲಾಗಬಹುದು.

ಅವರು ಇಷ್ಟಪಡುವ ಅಥವಾ ಗೌರವಿಸುವ ಯಾರಾದರೂ ಪ್ರಸಿದ್ಧ ವ್ಯಕ್ತಿಗಳು ಟ್ರೌಸರ್ಸ್ ಹಾಕಿದ ಫೋಟೋ ತೋರಿಸಿ. 'ನೋಡು, ಇವರು ಎಷ್ಟು ಗೌರವಯುತವಾಗಿ ಕಾಣುತ್ತಿದ್ದಾರೆ ಅಲ್ವಾ?' ಎಂದು ಕೇಳಿ. ಮೆಲ್ಲಗೆ ಅವರ ದೃಷ್ಟಿಕೋನ ಬದಲಿಸಿ. ಇಂಗ್ಲಿಷಿನಲ್ಲಿ ಒಂದು ಮಾತಿದೆ – Behind every successful woman is a basket of dirty laundry and a husband complaining about her jeans (ಪ್ರತಿಯೊಬ್ಬ ಯಶಸ್ವಿ ಮಹಿಳೆಯ ಹಿಂದೆ ಒಂದು ಬುಟ್ಟಿ ತುಂಬಿದ ಒಗೆಯದ ಬಟ್ಟೆಗಳು ಮತ್ತು ಅವಳ ಜೀನ್ಸ್ ಬಗ್ಗೆ ದೂರು ನೀಡುವ ಗಂಡ ಇರುತ್ತಾನೆ!) ಎಂಬುದು ಗೊತ್ತಿರಲಿ. ಯಾವುದೇ ಹೊಸ ಬದಲಾವಣೆಯನ್ನು ಒಮ್ಮೆಗೆ ಸ್ವೀಕರಿಸುವುದು ಕಷ್ಟ. ನೀವು ಮೆಲ್ಲ ಮೆಲ್ಲಗೆ ನಿಮ್ಮ ಉಡುಪಿನ ಶೈಲಿಯನ್ನು ಪರಿಚಯಿಸಿ.

ಕೆ.ರಾಧಾ, ಮೈಸೂರು

● **ಭಟ್ರೇ, ನನಗೆ ಈಗ ಐವತ್ತು ವರ್ಷ, ನನ್ನ ಗಂಡನಿಗೆ ಅರವತ್ತು. ನಾವು ಸಾಮಾನ್ಯವಾಗಿ ಬೆಳಗ್ಗೆ ಒಟ್ಟಿಗೆ ವಾಕಿಂಗ್ ಹೋಗುತ್ತೇವೆ. ಆದರೆ ಇತ್ತೀಚೆಗೆ ನನ್ನ ಗಂಡ ಪ್ರತಿದಿನ ಚೆನ್ನಾಗಿ ಸಜ್ಜಾಗಿ, ಒಳ್ಳೆಯ ಬಟ್ಟೆ ಹಾಕಿಕೊಂಡು ಹೋಗುತ್ತಿರುವುದು ಗಮನಿಸುತ್ತಿದ್ದೇನೆ. ಹಿಂದೆ ಅವರು ಸಾಮಾನ್ಯವಾಗಿ ಮನೆಯ ಟಿ-ಶರ್ಟ್‌ನಲ್ಲೇ ಹೋಗುತ್ತಿದ್ದರು. ಕೆಲವೊಮ್ಮೆ ಮನೆಯ ಕೆಲಸಗಳ ಕಾರಣದಿಂದ ನಾನು ಅವರ ಜತೆ ಹೋಗಲು ಸಾಧ್ಯವಾಗುವುದಿಲ್ಲ. ಅವರ ಈ ಬದಲಾವಣೆಯ ಹಿಂದೆ ಯಾವುದಾದರೂ ವಿಶೇಷ ಕಾರಣ ಇದೆಯೇ ಎಂದು ನನಗೆ ಸಂದೇಹ ಬರುತ್ತಿದೆ. ಅವರು ಅಲ್ಲಿ ಯಾರನ್ನಾದರೂ ಪರಿಚಯ ಮಾಡಿಕೊಂಡಿರಬಹುದೇ ಎಂಬ ಅನುಮಾನವೂ ಬರುತ್ತದೆ. ಅವರ ಮನಸ್ಸಿಗೆ ನೋವಾಗದಂತೆ ಈ ವಿಷಯದ ಬಗ್ಗೆ ತಿಳಿದುಕೊಳ್ಳುವುದು ಹೇಗೆ?**

– ರಾಧಾ ಅವರೇ, ಅರವತ್ತರಲ್ಲಿ ಅರಳು ಮರಳು ಎನ್ನುತ್ತಾರೆ, ಆದರೆ ನಿಮ್ಮ ಪತಿಗೆ 'ಅರವತ್ತರಲ್ಲಿ ಅರಸನಾಗುವ' ಹಂಬಲ ಬಂದಂತಿದೆ. ಅವರು ರೆಡಿಯಾದಾಗ ಕೋಪ ಮಾಡಿಕೊಳ್ಳಬೇಡಿ. ಬದಲಾಗಿ, 'ಏನು, ಇವತ್ತು ಯಾವುದೋ ಮದುವೆ ಫಂಕ್ಷನ್‌ಗೆ ಹೋಗೋ ಹಾಗೆ ರೆಡಿಯಾಗಿದ್ದೀರಾ? ವಾಕಿಂಗ್ ಟ್ರ್ಯಾಕ್ ಮೇಲೆ ಏನಾದ್ರೂ ಫೋಟೋ ಶೂಟ್ ಇದೆಯಾ?' ಎಂದು ಕಿಚಾಯಿಸಿ. 'ನಾನು ಬರದೇ ಇದ್ದಾಗ ನೀವು ಇಷ್ಟೊಂದು ಅಂದವಾಗಿ ಕಾಣಿಸ್ತೀರಾ ಅಂದ್ರೆ, ಅಲ್ಲಿ ಯಾರೋ ನಿಮ್ಮನ್ನ ನೋಡಿ 'ಯಾರು ಈ ಹ್ಯಾಂಡ್ಸಮ್ ಯಂಗ್ ಮ್ಯಾನ್?' ಅಂತ ಕೇಳ್ತಿರಬೇಕು ಅಲ್ವಾ?' ಎಂದು ಕಣ್ಣು ಮಿಟುಕಿಸಿ ಕೇಳಿ. ಒಂದು ದಿನ ಅವರು ಹೊರಡುವಾಗ, 'ನಿಮ್ಮ ಈ ಹೊಸ ಸ್ಟೈಲ್ ತುಂಬಾ ಚೆನ್ನಾಗಿದೆ, ಒಂದು ಸೆಲ್ಫಿ ತೆಗೆದು ಫೇಸ್‌ಬುಕ್ ಅಥವಾ ವಾಟ್ಸಾಪ್ ಸ್ಟೇಟಸ್ ಹಾಕೋಣ, ನಿಮ್ಮ ಹಳೆಯ ಫ್ರೆಂಡ್ಸ್ ನೋಡಿ ಹೊಟ್ಟೆ ಉರ್ಕೊಳ್ಳಲಿ' ಅನ್ನಿ. ಅವರ ಮುಖದ ರಿಯಾಕ್ಷನ್ ಎಲ್ಲವನ್ನೂ ಹೇಳುತ್ತದೆ.

'ನಾನು ಜತೆಗಿಲ್ಲದಿದ್ದರೂ ನೀವು ಇಷ್ಟು ನೀಟಾಗಿ ಇರೋದು ನೋಡಿ ಖುಷಿಯಾಗುತ್ತದೆ. ಆದರೆ ಸಡನ್ ಆಗಿ ಈ ಬದಲಾವಣೆ ಯಾಕೆ? ವಾಕಿಂಗ್ ಗ್ರೂಪ್‌ನಲ್ಲಿ ಯಾರಾದರೂ ಹೊಸಬರ ಪರಿಚಯ ಆಯ್ತಾ?' ಎಂದು ಪ್ರೀತಿಯಿಂದಲೇ ವಿಚಾರಿಸಿ.

ಅಲ್ಲಾರಿ, ಅರವತ್ತರ ಪ್ರಾಯದ ನಿಮ್ಮ ಯಜಮಾನರ ಬಲೆಯೊಳಗೆ ಯಾವ ಸುಂದರ ಮೀನು ಬೀಳಬಹುದು ಎಂಬುದು ನಿಮಗೆ ಗೊತ್ತಾಗುವುದಿಲ್ಲವಾ? ನಾನು ಯಾವತ್ತೋ ಓದಿದ, Behind every well-dressed man at the park, there is a wife at home wondering, 'Whom is he trying to impress today? ಎಂಬ ಮಾತು ನಿಜ ಅಂತಾಯ್ತು.

ಮಕ್ಕಳ ಲೇಖನಿಯಲ್ಲಿ ಅರಳಿದ ಮಹಾನ್ ಸಾಹಿತಿ!

ಮೊದಲ ಪುಟದಿಂದ...

ಇಂದು ಬಡಗುತಿಟ್ಟಿನ ಸ್ತ್ರೀವೇಷದ ಶಿರೋ ಭೂಷಣ ಕಾರಂತರ ಸೃಷ್ಟಿ, ಕಲಾವಿದ ಕಾರಂತರು ಕ್ಷಮಾರಾವ್ ಅವರ ಲೇಖನಿಯಲ್ಲಿ ಮನಮುಟ್ಟುವಂತೆ ಮೂಡಿಬಂದಿದೆ. ಹಿರಿಯ ಮಗ ಹರ್ಷನ ಗುಣಸ್ವಭಾವ ಉಲ್ಲಾಸ ಕಾರಂತರ ಮೂಲಕ ಕಾಣಿಸಿದರೂ ಅಲ್ಲಿ ಅಣ್ಣನ ಮೇಲಿನ ಆಕ್ಷೇಪಣೆಯಿಲ್ಲ.

ಅಪ್ಪನಿಗೆ ಆಕಾಶ ಎನ್ನುತ್ತಾರೆ. ಎಷ್ಟು ದೂರಸಾಗಿದರೂ ಸಿಗುವುದಿಲ್ಲ; ಆದರೆ ಸದಾ ಜೊತೆಯಲ್ಲಿರುತ್ತಾನೆ. ಮಕ್ಕಳನ್ನು ಆಗಾಗ ಪ್ರವಸಕ್ಕೆ ಕರೆದೊಯ್ಯುವ, ಅವರಲ್ಲಿ ಸ್ವತಂತ್ರವ್ಯಕ್ತಿತ್ವವನ್ನು ರೂಪಿಸಿದ ಕಾರಂತರು ಮೂವರೂ ಮಕ್ಕಳಿಗೂ ಎಟುಕಿಯೂ ಎಟುಕದಂತಿದ್ದಾರೆ.

ಶಿವರಾಮ ಕಾರಂತರ ಕಾಳಜಿ, ಸ್ವಾತಂತ್ರ್ಯ ಪೂರ್ವದಲ್ಲೇ ಅವರು ಸಮಾಜದಲ್ಲಿ ಸ್ವತಃ ಆಚರಣೆಗೆ ಅಂದ ಸುಧಾರಣೆಗಳು, ಸುಮಾರು ನಲವತ್ತು ದಶಕಗಳ ನಂತರ ಹುಟ್ಟೂರಿಗೆ ಬಂದು ನೆಲಸಬೇಕು ಅಂದುಕೊಂಡಾಗ ಅವರ ಇರುವತನಕ ಅವರಿಗೆ ಘನತೆಯಿಂದ ಉಳಿಯಲು ಹೊಸ ಮನೆಯನ್ನೇ ಬಿಟ್ಟುಕೊಟ್ಟ ರಾಮಕೃಷ್ಣ ಐತಾಳರು ಎಲ್ಲಾ ಸಂಗತಿ ಇಲ್ಲಿ ಪ್ರಾಮುಖ್ಯ ಪಡೆಯುತ್ತದೆ. ಅವರ ಮಕ್ಕಳಷ್ಟೇ ಅವರನ್ನು ಕಕ್ಕುಲತೆಯಿಂದ ನೋಡಿಕೊಂಡ ಅವರ ದಾಯಾದಿ ಸೂರ್ಯನಾರಾಯಣ ಕಾರಂತ ಅವರ ಅಕಾಲಿಕ ಸಾವು ಕಾರಂತರ ಬದುಕಿನಲ್ಲಿ ಆದ ಬಹುದೊಡ್ಡ ಆಘಾತವಾಗಿದೆ. ಅವರ ಹಿರಿಯ ಮಗ ಹರ್ಷ 1961 ರಲ್ಲಿ ಕ್ಯಾನ್ಸರಿನಿಂದ ದೂರದ ಮುಂಬೈಯಲ್ಲಿ ತೀರಿಕೊಂಡಾಗ ಕಾರಂತರ ಹೃದಯ ಘಾಸಿಗೊಂಡಿತ್ತು. ಕಾರಂತರಿಗೆ ತಾನೋರ್ವ ಸೆಲ್ಫ್-ಮೇಡ್ ಮನುಷ್ಯ ಎನ್ನುವ ಭ್ರಮೆಯನ್ನು ಕಳಚಿ ಹೋದ ಬಿಂದು ಹರ್ಷನ ಸಾವು. ಮಾಲವಿಕಾ ಕಪೂರ ಬರಹ ಮನಮಿಡಿಯುತ್ತದೆ.

ಲೀಲಾ ಕಾರಂತರ ಘನ ವ್ಯಕ್ತಿತ್ವ

ಆಕಾಶವನ್ನು ನೋಡಬೇಕಾದರೆ ಅದಕ್ಕೆ ಭೂಮಿಯ ನೆಲೆ ಬೇಕು. ಕಾರಂತರ ಹಾಗೂ ಅವರ ಮಕ್ಕಳ ಬದುಕಿನಲ್ಲಿ ಭದ್ರವಾದ ನೆಲೆಯನ್ನು ಒದಗಿಸಿಕೊಟ್ಟಿದ್ದು ಅವರ ಹೆಂಡತಿ ಲೀಲಾ ಕಾರಂತರು. ಎರಡನೇ ಅಧ್ಯಾಯ ಬಾಲವನದ ಅಮ್ಮ ಈ ಕೃತಿಯ ಅಂತಃಶಕ್ತಿ ಮತ್ತು ಪ್ರೇರಣೆ. ಕಾರಂತರ ಸುಳಿಯನ್ನು ಮೀರಿ ನಮ್ಮನ್ನು ಆವರಿಸಿಕೊಳ್ಳುವುದು ಲೀಲಾ ಕಾರಂತರ ಬದುಕು. ಈ ಕೃತಿಯ ಕುರಿತು ಮುನ್ನುಡಿ ಬರೆದ ಚಿರಂಜೀವಿ ಸಿಂಘ್, ಬಿ. ಎ. ವಿವೇಕ ರೈ ಅವರೆಲ್ಲರೂ ಲೀಲಾ ಕಾರಂತರ ಕುರಿತು ಬರೆಯುವಾಗ ಭಾವುಕರಾಗಿದ್ದಾರೆ. ಕಾರಂತರನ್ನು ತಾವೇ ಮನಸಾರೆ ಪ್ರೀತಿಸಿ, ಬಯಸಿ ಮದುವೆಯಾದವರು ತಮ್ಮ ತವರುಮನೆಯ ಅಗರ್ಭ ಶ್ರೀಮಂತ ಮನೆತನದಿಂದ ಹೇಳಿಕೊಳ್ಳಲು ಯಾವ ಉದ್ಯೋಗವೂ ಇಲ್ಲದ, ಕಾಲೇಜಿನ ಮೆಟ್ಟಿಲನ್ನೂ ಹತ್ತದ ನೃತ್ಯ ಮಾಸ್ತರರನ್ನು ಮದುವೆಯಾಗಿ ಬಾಲವನಕ್ಕೆ ಬಂದು ತವರುಮನೆ ಗಂಡನ ಮನೆ ಎರಡನ್ನೂ ಸಂಭಾಳಿಸಿದವರು. ಅವರ ಘನವ್ಯಕ್ತಿತ್ವದ ಎದುರು ಕಡಲತೀರದ ಭಾರ್ಗವ ಕುಬ್ಜರಾಗಿ ಕಾಣಿಸುತ್ತಾರೆ.

ಕಾರಂತರು ಪ್ರವಾಸಪ್ರಿಯರು, ಯುರೋಪು ಅಮೆರಿಕಗಳಿಗೆಲ್ಲಾ ಹೋಗುವಾಗ ಸಾಲ ಮಾಡಿಯೇ ಹೋದವರು. ಬಾಲವಿಜ್ಞಾನ, ಇನ್ನಿತರ ಕೃತಿಗಳ ಪ್ರಕಟಣೆಗಾಗಿ ಸಹ ಸಾಲಮಾಡಿದವರು. ಮನೆಯ ಮುಂದೆ ಲಾರಿಗಳಲ್ಲಿ ಕಾಗದದ ರೀಮುಗಳು ಬಂದಾಗ ಅವರಮನಸ್ಸು ತಳಮಳಗೊಳ್ಳುತ್ತಿತ್ತಂತೆ. ಗಂಡನ ಆದರ್ಶಬದುಕಿಗೆ ಮುಕ್ಕಾಗದಂತೆ ಜೊತೆಯಾದವರು. ಇಲ್ಲಿ ಎರಡು ಸಂಗತಿಗಳನ್ನು ಗಮನಿಸಬಹುದು. ಮೊದಲನೆಯದು ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬದ ಕಾರಂತರು; ಎರಡನೆಯದು ದಕ್ಷಿಣ ಕನ್ನಡದಲ್ಲಿ ಪ್ರಭಾವಶಾಲಿಯಾದ ಬಂಟರ ಮನೆತನದ ಲೀಲಾ ಆಳ್ವರು.

ಅಪರೂಪದ ಅಂತರ್ಜಾತಿ ವಿವಾಹ!

1936ರ ಕಾಲ ಘಟನೆ ಇದು. ಬ್ರಾಹ್ಮಣರಲ್ಲೇ ಒಳಪಂಗಡಗಳ ನಡುವೆ ಸಂಬಂಧ ನಿಷಿದ್ಧವಾದ ಕಾಲದಲ್ಲಿ ತನ್ನ ಮನೆತನದ ಎಲ್ಲರನ್ನೂ ಒಪ್ಪಿಸಿ ಕಾರಂತರ ಕೈಹಿಡಿದದ್ದು ಸಾಮಾನ್ಯ ಸಂಗತಿಯಲ್ಲ. ಅವರ ತಂದೆ ಕಾಮು ಆಳ್ವ ಓದಿದ್ದು ಕಡಿಮೆಯಿರಬಹುದು. ಆದರೆ ತನ್ನ ಮಗಳು ಮೆಚ್ಚಿದವನನ್ನು ಧಾರೆಯೆರೆದು ಕೊಡುವ ಪ್ರಗತಿಶೀಲತೆ ಅವರಲ್ಲಿತ್ತು. ಲೀಲಾ ಕಾರಂತರು ಮಲತಾಯಿಯ ಕಾಟದಿಂದ ನೊಂದ ತನ್ನ ತಂಗಿಯರಿಗೂ ಬಾಳನ್ನು ಕಲ್ಪಿಸಿದವರು. ಅವರೊಳಗೂ ಸಹ ಓರ್ವ ಸಾಹಿತಿ ಇದ್ದ ಎನ್ನುವುದನ್ನು ಅವರು ಹರಿನಾರಾಯಣ್ ಅಪ್ಟೆಯವರ ಪ್ರಸಿದ್ಧ ಮರಾಠಿ ಕೃತಿ ಪನ್ ಲಕ್ಷತ್ ಕೋನ್ ಘೆತೋ? ಕನ್ನಡಕ್ಕೆ 'ಯಾರು ಲಕ್ಷಿಸುವರು?' ಎಂದು ಅನುವಾದ ಮಾಡಿದ್ದರು ಎಂದು ತಿಳಿದುಬರುತ್ತದೆ. ಮಾಲವಿಕಾ ಅವರು ಹುಟ್ಟುವಾಗ ಲೀಲಾ ಅವರಿಗೆ 19 ವರ್ಷ. ಆಗಲೇ ಅವರು ಸಿಗ್ಮಂಡ್ ಫ್ರಾಯ್ಡ್‌ನ ಮನಃಶಾಸ್ತ್ರದ ಕೃತಿಗಳನ್ನು ಓದಿದ್ದರು. ಅಂತಹ ಅವರೇ ಮಾನಸಿಕ ಒತ್ತಡವನ್ನು ತಾಳಲಾರದೇ ಡಿಪ್ರೆಷನ್ನಿಗೆ ಹೋಗಿದ್ದನ್ನು ನೋಡುವಾಗ ಬೇಸರವಾಗುತ್ತದೆ.

ಕಾರಂತರು ತಮ್ಮ ಹೆಂಡತಿಯನ್ನು ಚೆನ್ನಾಗಿಯೇ ನೋಡಿಕೊಂಡಿದ್ದರು. ಕಾರಂತರಂತಹ ಮಹಾನ್ ವ್ಯಕ್ತಿಗಳ ಆದರ್ಶ ರೂಪುಗೊಳ್ಳುವಲ್ಲಿ ತನ್ನನ್ನು ತಾನು ತೇದುಕೊಳ್ಳಬೇಕಾದಾಗ ಅಪಾರಮಾನಸಿಕ ಒತ್ತಡವನ್ನು ಅನುಭವಿಸಬೇಕಾಗುತ್ತದೆ. ಬಹುಶಃ ಇದುವೇ ಅವರಿಗೆ ಡಿಪ್ರೆಷನ್ ಬರುಲು ಕಾರಣವಾಯಿತೆನಿಸುತ್ತದೆ. ಮಗ ಹರ್ಷನ ಮರಣ ಅದನ್ನು ಇನ್ನಷ್ಟು ಹೆಚ್ಚುಮಾಡಿತು. ಪ್ರೀತಿಯಿಂದ ಆರಂಭವಾದ ಬದುಕು, ಸೃಜನಶೀಲತೆಯ ಒತ್ತಡದಲ್ಲಿ ಹೇಗೆ ರೂಪಾಂತರಗೊಳ್ಳುತ್ತದೆ ಎಂಬುದನ್ನು ಈ ಕೃತಿಯುದ್ದಕ್ಕೂ ಮಕ್ಕಳಿಂದ ವ್ಯಕ್ತವಾಗುತ್ತಲೇ ಹೋಗಿದೆ. ಇನ್ನೊಂದು ಮಹತ್ವದ ವಿಷಯ ಕಾರಂತರ ಬದುಕಿನ ಕೊನೆಗಾಲದಲ್ಲಿ ಬಂದು ಸೇರಿದ 'ಮ' ಎನ್ನುವ ಮಹಿಳೆಯ ಕುರಿತು. ಮಕ್ಕಳಿಗೆ ಅಪ್ಪನ ಮೇಲೆ ಅಪಾರವಾದ ಗೌರವಿದೆ. ಆದರೆ ಯಾವುದು ಆಗಬಾರದಿತ್ತೋ ಅದಾದುದಕ್ಕೆ, ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಾಗದೇ ಇದ್ದುದಕ್ಕೆ ವಿಷಾದವೂ ಇದೆ.

ಚುನಾವಣೆಯಲ್ಲಿ ಕಾರಂತರು

ಮಣಿಪಾಲದ ಮೆಡಿಕಲ್ ಕಾಲೇಜಿಗೆ ಮಾನ್ಯತೆ, ಚಿಣ್ಣಪ್ಪ ಎನ್ನುವ ಪ್ರಾಮಾಣಿಕ ಅಧಿಕಾರಿಗೆ ಆದ ತೊಂದರೆ ತಪ್ಪಿಸಿದ್ದು ಜೊತೆಗೆ ಉತ್ತರಕನ್ನಡದಿಂದ ಲೋಕಸಭೆಗೆ ಚುನಾವಣೆಗೆ ನಿಂತು, ಅದರ ಪರಿಣಾಮವಾಗಿ ಅನಂತನಾಗ್ ಸೋತಿದ್ದು ಇವೆಲ್ಲವೂ ಕಾರಂತರ ಮನಸ್ಸಿನ ವಿವಿಧ ಮುಖಗಳು. ಆಧುನಿಕತೆ ಪ್ರಗತಿಯನ್ನು ಮೆಚ್ಚುತ್ತಲೇ ಅವರ ಕೆಲ ಹೋರಾಟಗಳನ್ನು ಮಕ್ಕಳು ಪ್ರಶ್ನಿಸುವಾಗ ಅವರಲ್ಲಿಯೂ ಕಾರಂತರೇ ಕಾಣಿಸುತ್ತಾರೆ.

ಇಲ್ಲಿ ಮುಖ್ಯವಾಗಿ ಕಾರಂತರ ಮಕ್ಕಳಷ್ಟೇ ಇದನ್ನು ಅನುವಾದಿಸಿದ ವಿಶ್ವೇಶ್ವರ ಭಟ್ಟರನ್ನು ನೆನೆಸಿಕೊಳ್ಳಬೇಕು. ಅನುವಾದನ ಕಾರ್ಯ ಯಾವತ್ತಿಗೂ ಸವಾಲಿನದೇ. ಮೂಲ ಲೇಖಕರ ಜಾಡಿನಲ್ಲಿ ಸ್ವಲ್ಪವೂ ಆಚೇಯೀಚೆ ಹೆಜ್ಜೆಯಿಡದೇ ಸಾಗಬೇಕು. ಯಾವ ಭಾಷೆಗೆ ಅನುವಾದ ಮಾಡುತ್ತಾರೋ ಆ ಭಾಷೆಯ ಓದುಗರಿಗೆ ತಲುಪಬೇಕು. ಇಲ್ಲಿ ಅನುವಾದಕನಿಗೆ ಮೂಲದ ವಿಷಯಗಳ ಮೇಲೆ ಎಷ್ಟುಹಿಡಿತ ಇದೆ ಎನ್ನುವಲ್ಲಿ ಆ ಕೃತಿಯ ಯಶಸ್ಸು ಇದೆ. ಭಟ್ಟರಿಗೆ ಈ ಕೆಲಸ ಸವಾಲಿನದೆನಿಸಲೇ ಇಲ್ಲ. ಇದಕ್ಕೆ ಕಾರಣ ಕಾರಂತರು ಅವರ ಮನಸ್ಸಿನಲ್ಲಿ ಯಾವತ್ತಿಗೋ ಬೇರು ಬಿಟ್ಟಿದ್ದರು. ಮೂಲ ಕೃತಿಯ ಹೆಸರು 'ಗ್ರೋಯಿಂಗ್ ಅಪ್ ಕಾರಂತ್' ಇದು ಮಕ್ಕಳ ಅನುಭವಟಿ ಅದರ ಅರ್ಥ 'ಕಾರಂತರ ನೆರಳಿನಲ್ಲಿ ಬೆಳೆದ ಬದುಕು ಕಾರಂತರೊಂದಿಗೆ ಬೆಳೆದ ಜೀವನಾನುಭವ, ಕಾರಂತರ ಪ್ರಭಾವದಲ್ಲಿ ಬೆಳೆದ ಬಾಲ್ಯ' ಎನ್ನುವುದಾಗಿ ಅರ್ಥೈಸಿಕೊಳ್ಳಬಹುದು. ಆದರೆ ಅವರ ಕುಟುಂಬದ ಹೊರಗಿನವರಿಗೆ ಕಾರಂತರೆನ್ನುವ ಪ್ರವಾಹದಲ್ಲಿ ಈಜುವ ಹುಮ್ಮಸ್ಸು. ಹಾಗಾಗಿ ಇವುಗಳನ್ನು ಆಧರಿಸಿಯೇ ಭಟ್ಟರು ಈ ಕೃತಿಗೆ ''ಕಾರಂತರ ಸುಳಿಯಲ್ಲಿ'' ಎನ್ನುವ ಅರ್ಥಪೂರ್ಣ ಹೆಸರನ್ನು ನೀಡಿದ್ದಾರೆ.

ಮುಟ್ಟಿದರೆ ಕಪ್ಪಾಗಿಸುವ ಮಸಿವಾಳ!

» ಜಿ. ನಾಗೇಂದ್ರ ಕಾವೂರು

ಪ್ರಕೃತಿಯಲ್ಲಿ ಕೆಲ ಮರಗಳು ಕೇವಲ ನೆರಳು ನೀಡುವುದಕ್ಕಷ್ಟೇ ಅಲ್ಲ, ತಮ್ಮ ವೈಶಿಷ್ಟ್ಯಪೂರ್ಣ ಗುಣಗಳಿಂದ ಮಾನವನಲ್ಲಿ ಆಶ್ಚರ್ಯವನ್ನು ಮೂಡಿಸುತ್ತವೆ. ಮುಳ್ಳುಗಳಿಂದ ಆವರಿಸಿದ ಕಾಂಡಗಳಿರುವ ಮರಗಳು, ತೊಗಟೆ ಕೆತ್ತಿದರೆ ಹಾಲು ಸ್ರವಿಸುವ ಮರಗಳು, ಎಲೆ ಮುದುಡಿಸುವ ಮುಟ್ಟಿದರೆ ಮುನಿ, ಎಲೆಯಲ್ಲೇ ಬೇರುಗಳನ್ನು ಸೃಷ್ಟಿಸುವ ಗಿಡ, ಮರಕ್ಕೆ ಮರವೇ ಹೂವಿನಿಂದ ಕಂಗೊಳಿಸುವುದು ಇಂತಹ ಹಲವು ವಿದ್ಯಮಾನಗಳು ಸಸ್ಯಲೋಕದಲ್ಲಿವೆ.

ಸಂಡೂರು ಭಾಗದ ಗುಡ್ಡ ಮತ್ತು ಕಾಡುಗಳಲ್ಲಿ ಒಂದು ಪ್ರಭೇದದ ಮರವಿದೆ; ಇದರ ಹೆಸರು 'ಮಸಿವಾಳ'! ಮನುಷ್ಯರು ಮುಟ್ಟಿದರೆ, ಅವರ ಕೈ ಕಪ್ಪಾಗಿಸುವ ಗುಣದಿಂದಲೇ ಈ ಮರ ಜನರಲ್ಲಿ ಕುತೂಹಲ ಮೂಡಿಸುತ್ತದೆ. ಕಪ್ಪು ತೊಗಟೆಯ ವಿಚಿತ್ರ ಸ್ವಭಾವ ಸುಮಾರು 15 ಅಡಿ ಎತ್ತರದವರೆಗೆ ಬೆಳೆಯುವ ಮಸಿವಾಳ ಮರದ ತೊಗಟೆ ಕಪ್ಪು ಬಣ್ಣದ್ದಾಗಿದ್ದು ಕಾರ್ಕ್‌ನಂತೆ ದಪ್ಪವಾಗಿರುತ್ತದೆ. ಅನೇಕ ಬಿರುಕುಗಳನ್ನು ಹೊಂದಿರುವ ಈ ತೊಗಟೆ ಸ್ಪರ್ಶಕ್ಕೆ ಬೆಣ್ಣೆಯಂತೆ ಮೃದುವಾಗಿರುತ್ತದೆ. ಕೈಯಿಂದ ಮುಟ್ಟಿದ ಕ್ಷಣದಲ್ಲೇ ಕಾಡಿಗೆಯಂತಹ ಕಪ್ಪು ಪುಡಿ ಕೈಗೆ ಅಂಟಿಕೊಳ್ಳುತ್ತದೆ. ಇದೇ ಕಾರಣಕ್ಕೆ ಇದನ್ನು ಇಂಗ್ಲಿಷ್‌ನಲ್ಲಿ ''ಈಸ್ಟ್ ಇಂಡಿಯನ್ ಸ್ಟೇನ್ ವುಡ್'' ಎಂದು ಕರೆಯಲಾಗುತ್ತದೆ. ಸಂಡೂರು ಜನರು ಮಸಿವಾಳ ಎಂದು ಸೂಕ್ತವಾಗಿ ಕರೆದಿದ್ದಾರೆ. ಹಳೆಯ ಕಾಲದಲ್ಲಿ ಬೇಟೆಗೆ ತೆರಳುವ ಜನರು ಮಸಿವಾಳದ ಮಸಿಯನ್ನು ಮುಖಕ್ಕೆ ಬಳಿದುಕೊಳ್ಳುತ್ತಿದ್ದರೆಂದು ಹಿರಿಯರು ಹೇಳುತ್ತಾರೆ. ಇದರಿಂದ ಕಾಡು ಪ್ರಾಣಿಗಳು ಮನುಷ್ಯರನ್ನು ಗುರುತಿಸಲು ಕಷ್ಟಪಟ್ಟು ದಾಳಿ ಮಾಡುವ ಸಾಧ್ಯತೆ ಕಡಿಮೆಯಾಗುತ್ತದೆ ಮತ್ತು ಬೇಟೆಯೂ ಬೇಗನೆ ಸಿಗುತ್ತದೆ ಎಂಬ ನಂಬಿಕೆ. ಹೀಗಾಗಿ ಈ ಮರ ಕಾಡುಜೀವನದ ಭಾಗವೇ ಆಗಿದೆ.

ಗುಡ್ಡಗಳ ಇಳಿಜಾರಿನಲ್ಲಿ ಬೆಳೆಯುವ ಮಸಿವಾಳ ಮರದ ದಾರುವು ಬಲಿಷ್ಠವಾಗಿರುವುದರಿಂದ ಪೀಠೋಪಕರಣ, ಕ್ಯಾಬಿನೆಟ್, ಫ್ಲೋರಿಂಗ್, ಬಾಕ್ಸ್ ಮತ್ತು ಕ್ರೇಟ್ಸ್ ತಯಾರಿಕೆಗೆ ಬಳಸಲಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಇದನ್ನು ದೀರ್ಘಕಾಲ ಬಾಳಿಕೆ ಬರುವ ಮರವೆಂದು ಪರಿಗಣಿಸುತ್ತಾರೆ. ಜನಪದ ವೈದ್ಯಕೀಯದಲ್ಲಿ ಮಸಿವಾಳ ಮರಕ್ಕೆ ವಿಶೇಷ ಸ್ಥಾನವಿದೆ. ಇದರ ಎಲೆಗಳನ್ನು ಗಾಯಗಳನ್ನು ಗುಣಪಡಿಸಲು ಹಾಗೂ ಸಂಧಿವಾತ ಚಿಕಿತ್ಸೆಗೆ ಬಳಸಲಾಗುತ್ತದೆ. ಬೇರಿನ ತೊಗಟೆಯನ್ನು ನಪುಂಸಕತ್ವ ನಿವಾರಣೆಗೆ ಉಪಯೋಗಿಸುವ ಪದ್ಧತಿಯು ನಾಟಿವೈದ್ಯದಲ್ಲಿದೆ. ಸಂಡೂರಿನ ''ತಿಮ್ಮಪ್ಪನ ಗುಡ್ಡ'' ಪ್ರದೇಶದಲ್ಲಿ ಕಾಣಿಸಿಕೊಂಡ ಈ ಮಸಿವಾಳ ಮರ ಪ್ರಕೃತಿಯ ಅದ್ಭುತ ಮತ್ತು ವೈವಿಧ್ಯತೆಯ ಜೀವಂತ ಉದಾಹರಣೆ. ನಮ್ಮ ಸುತ್ತಲೂ ಇರುವ ಕಾಡುಗಳಲ್ಲಿ ಇನ್ನೂ ಇಂತಹ ಅನೇಕ ರಹಸ್ಯಗಳು ಅಡಗಿವೆ ಎಂಬುದನ್ನು ಇದು ತೋರಿಸಿಕೊಟ್ಟಿದೆ.



ವಿಪರ್ಯಾಸ

ಅನುಕಂಪದ ನೌಕರಿಗೆ
ಅಲೆದಾಡುತ್ತಾ
ಸವೆಯುವುದು ಮೆಟ್ಟು
ಅನುಕಂಪದ ಆಧಾರದಿ
ಸುಲಭವಾಗಿ ದೊರಕುವುದು
ಅಭ್ಯರ್ಥಿಗೆ ಟಿಕೆಟ್ಟು!

» ಮಹಾಂತೇಶ ಮಾಗನೂರ